"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

23ನೇ ಮಾರ್ಚ್ 2021
ಮಂಗಳವಾರ

## ವಿಷಯಾನುಕ್ರಮಣಿಕೆ

**1.ಸಂತಾಪ ಸೂಚನೆ**

**ಮಾಜಿ ಸಚಿವರು ಹಾಗೂ ವಿಧಾನಸಭೆ ಸದಸ್ಯರಾಗಿದ್ದ ಶ್ರೀ ಬಿ.ಡಿ.ಬಸವರಾಜು ಅವರ ನಿಧನದ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**2.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1898 – ಸಿ.ಆರ್.ಜೆಡ್. ಮತ್ತು ನಾನ್ ಸಿ.ಆರ್.ಜೆಡ್. ವ್ಯಾಪ್ತಿಯ ಮರಳುಗಾರಿಕೆ ಬಗ್ಗೆ.**

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)

**1937 – ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆ ಬಗ್ಗೆ.**

- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಎನ್.ನಾಗರಾಜು (ಎಂ.ಟಿ.ಬಿ)(ಪೌರಾಡಳಿತ ಮತ್ತು ಸಕ್ಕರೆ ಸಚಿವರು)

**1918 – ರಾಜ್ಯದಲ್ಲಿ ಸ್ಥಾಪನೆಯಾಗಿರುವ ವಿಶೇಷ ಆರ್ಥಿಕ ವಲಯ (SEZ)ಗಳ ಬಗ್ಗೆ.**

- ಶ್ರೀ ಪಿ.ಆರ್.ರಮೇಶ್
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)

**1966 – "ವಿದೇಶಿ ಬಂಡವಾಳ ಹೂಡಿಕೆ" ಬಗ್ಗೆ.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)

**1943 – ಬೀದರ್ ಜಿಲ್ಲೆಯಲ್ಲಿನ ಅಕ್ರಮ ಗಣಿಗಾರಿಕೆ ಬಗ್ಗೆ.**

- ಶ್ರೀ ಅರವಿಂದ ಕುಮಾರ್ ಅರಳಿ(ಶ್ರೀ ವಿಜಯ ಸಿಂಗ್‌ರವರ ಪರವಾಗಿ)
- ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1969 – ರಾಜ್ಯದಲ್ಲಿ ತ್ಯಾಜ್ಯ ಸಂಸ್ಕರಣೆ ನಿಯಮ ಪಾಲನೆಯಾಗದಿರುವ ಬಗ್ಗೆ.**
- ಶ್ರೀ ಹೆಚ್.ಎಂ.ರಮೇಶ ಗೌಡ
- ಶ್ರೀ ಎನ್.ನಾಗರಾಜು (ಎಂ.ಟಿ.ಬಿ)(ಪೌರಾಡಳಿತ ಮತ್ತು ಸಕ್ಕರೆ ಸಚಿವರು)

**(ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಲಾಯಿತು)**

**1923 – ರಾಜ್ಯದ ಸಣ್ಣ ಕೈಗಾರಿಕೆ ಮತ್ತು ಘಟಕಗಳ ವಿಧಗಳ ಬಗ್ಗೆ.**
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಸಿ.ಸಿ.ಪಾಟೀಲ್(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು)

**1931 – ಪೌರಾಡಳಿತ ಇಲಾಖೆಗೆ ಸಂಬಂಧಿಸಿದ ಬಗ್ಗೆ.**
- ಶ್ರೀ ಶಶೀಲ್ ಜಿ.ನಮೋಶಿ (ಶ್ರೀ ಸುನೀಲ್ ವಲ್ಯಾಪುರ್‌ರವರ ಪರವಾಗಿ)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ನಗರಾಭಿವೃದ್ಧಿ ಸಚಿವರ ಪರವಾಗಿ)

**1952 – ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕಾರ್ಖಾನೆಗಳ ಬಗ್ಗೆ.**
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)

ತಡೆಹಿಡಿಯಲಾದ ಪ್ರಶ್ನೆ

ಸಂಖ್ಯೆ **1417 – ಪೌರಾಡಳಿತ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಬಗ್ಗೆ.**
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಎನ್.ನಾಗರಾಜು (ಎಂ.ಟಿ.ಬಿ)(ಪೌರಾಡಳಿತ ಮತ್ತು ಸಕ್ಕರೆ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಸ್ಥಳೀಯ ಯೋಜನಾ ಪ್ರದೇಶಗಳಿಂದ ಹೊರಗಿರುವ ಭೂ ಪರಿವರ್ತಿತ ಜಮೀನುಗಳಿಗೆ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.**
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ವಿಶೇಷ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಹಾಗೂ ನೌಕರರ ವೇತನಕ್ಕೆ ಶೀಘ್ರ ಅನುದಾನ ನೀಡುವ ಬಗ್ಗೆ.**
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗೌಡಗೇರಾ ಗ್ರಾಮದ ಸುಸಜ್ಜಿತ ಶಾಲಾ ಕಟ್ಟಡದ ಬಗ್ಗೆ.**

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಮರಾಠ ಜನಾಂಗವನ್ನು ಕ್ಯಾಟಗರಿ 3(ಬಿ) ಯಿಂದ 2(ಎ) ಗೆ ಸೇರಿಸುವ ಬಗ್ಗೆ**

– ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಗ್ರಾಮದಲ್ಲಿ ತ್ರಿವರ್ಣ ಧ್ವಜದ ಬಟ್ಟೆಯನ್ನು ನೇಯ್ಗೆ ಮಾಡುವವರಿಗೆ ಪ್ರೋತ್ಸಾಹ ಧನ ಮಂಜೂರಾತಿ ಕೋರಿರುವ ಬಗ್ಗೆ.**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಬಸವ ಸಂಸ್ಕೃತಿ ಉತ್ಸವ ಆಚರಿಸುವ ಬಗ್ಗೆ.**

– ಶ್ರೀ ಅರುಣ ಶಹಾಪುರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಗಿರಿಜನರ ಜೀವನೋಪಾಯಕ್ಕೆ ಸಾಗುವಳಿ ಮಾಡಲು ಭೂಮಿ ಮಂಜೂರು ಮಾಡಿದ್ದು, ಕೇರಳ ರಾಜ್ಯದ ಮಧ್ಯವರ್ತಿಗಳಿಂದ ಗುತ್ತಿಗೆ ನೀಡುತ್ತಿರುವ ಬಗ್ಗೆ.**

– ಶ್ರೀ ಎಸ್.ನಾಗರಾಜು(ಸಂದೇಶ್ ನಾಗರಾಜ್)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಎ) ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಛೇರಿ ಮತ್ತು ಠಾಣೆಗಳಲ್ಲಿ ಸ್ಥಳೀಯವಾಗಿ ನೇಮಕ ಮಾಡಿಕೊಂಡಿರುವ ಕಸಗುಡಿಸುವವರನ್ನು ಗ್ರೂಪ್ 'ಡಿ' ನೌಕರರನ್ನಾಗಿ ಖಾಯಂ ಮಾಡುವ ಬಗ್ಗೆ.**

– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಗದಗ ನಗರದಲ್ಲಿರುವ ಪಶು ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಇನ್ನೂ ಮಾನ್ಯತೆ ಸಿಗದೇ ಇರುವ ಬಗ್ಗೆ.**

– ಶ್ರೀ ಎಸ್.ವ್ಹಿ. ಸಂಕನೂರ
– ಶ್ರೀ ಪ್ರಭು ಎಸ್.ಚವ್ಹಾಣ್(ಪಶು ಸಂಗೋಪನಾ ಸಚಿವರು)
– ಶ್ರೀ ಸಿ.ಸಿ.ಪಾಟೀಲ್(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು)

"ತಿದ್ದುಪಡಿಯಾಗದ ನ್ಯಾಯಾಲಯಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಐ) ಜನ ಸಮುದಾಯದಿಂದ ಜನ ಸಮುದಾಯದ ಶಿಕ್ಷಣ ನೀತಿ ರೂಪಿಸುವ ಬಗ್ಗೆ.**
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸರ್ಕಾರದಿಂದ ಲಿಖಿತ ಉತ್ತರಗಳ ಮಂಡನೆ**

**ಅ) ಗ್ರಾಮ ಪಂಚಾಯತ್ ಗ್ರಂಥಾಲಯದ ಮೇಲ್ವಿಚಾರಕರನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಕನಿಷ್ಠ ವೇತನ ನೀಡಿ ಸೇವಾ ಭದ್ರತೆ ಒದಗಿಸುವ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ 37 ಲಕ್ಷ ನಷ್ಟ ಮಾಡಿರುವ ಬಗ್ಗೆ ಲೆಕ್ಕ ಪರಿಶೋಧಕರು ವರದಿ ಮಾಡಿರುವ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಇ) ರಾಜ್ಯದ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ಕೋವಿಡ್ ಲಸಿಕೆ ಹಾಕುವ ಬಗ್ಗೆ.**
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**5. ವರದಿಯನ್ನೊಪ್ಪಿಸುವುದು**

**6. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ಅಂಗನವಾಡಿಯ ಕೆಲವೊಂದು ಕೇಂದ್ರಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್‌ನ್ನು ನಿರ್ಮಿಸಿ ಮಕ್ಕಳಿಗೆ ಶುದ್ಧೀಕರಿಸಿದ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸದೇ ಇರುವ ಕಾರಣದಿಂದಾಗಿ ಅಂಗನವಾಡಿ ಕಲಿಕೆಯಲ್ಲಿ ತೊಡಗಿರುವ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಬಗ್ಗೆ.**
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
- ಶ್ರೀ ಆಯನೂರು ಮಂಜುನಾಥ್
- ಶ್ರೀ ಅರುಣ ಶಹಾಪುರ
- ಶ್ರೀ ಬಸವರಾಜ ಪಾಟೀಲ್ ಇಟಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ವಿತ್ತೀಯ ಕಾರ್ಯಕಲಾಪಗಳು**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಬಸವರಾಜ ಪಾಟೀಲ್ ಇಟಗಿ

**8. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ: 81ರ ಸರ್ವೇ ನಂ. 199ರಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುತ್ತಿರುವ ಬಗ್ಗೆ.**

– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**9. ವಿತ್ತೀಯ ಕಾರ್ಯಕಲಾಪಗಳು**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಎಸ್.ರುದ್ರೇಗೌಡ
– ಶ್ರೀ ಪ್ರಕಾಶ್ ಕೆ.ರಾಥೋಡ್

**10. ಪ್ರಕಟಣೆ**

**11. ಸದನದಲ್ಲಿ ಹಾಜರಿರಬೇಕಾದ ಸಚಿವರ ಅನುಪಸ್ಥಿತಿ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಗೋವಿಂದರಾಜು

**12. ವಿತ್ತೀಯ ಕಾರ್ಯಕಲಾಪಗಳು**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಪಿ.ಆರ್.ರಮೇಶ್
– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**13. ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟ ಗಮನ ಸೆಳೆಯುವ ಸೂಚನೆಗೆ ಮುಖ್ಯಮಂತ್ರಿಗಳಿಂದಲೇ ಉತ್ತರ ಕೊಡಿಸಬೇಕೆಂದು ಒತ್ತಾಯ.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ)

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ನಸೀರ್ ಅಹ್ಮದ್

**14. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ಅ) ಕೊಡಗು ಜಿಲ್ಲೆಯಲ್ಲಿ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರಿಗೆ ನಿವೇಶನ ಮಂಜೂರಾತಿ ಮಾಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ.**

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪೌರಾಡಳಿತ ಮತ್ತು ಸಕ್ಕರೆ ಸಚಿವರ ಪರವಾಗಿ)
- ಶ್ರೀ ಎಸ್.ಎಲ್.ಭೋಜೇಗೌಡ

**ಆ) ರಾಜ್ಯದಲ್ಲಿರುವ ಖಾಸಗಿ ಬ್ಯಾಂಕುಗಳು ನಾಗರಿಕರಿಗೆ ಸಾಲ ಮರುಪಾವತಿ ಮಾಡಲು ಅನಗತ್ಯ ಕಿರುಕುಳ ನೀಡುತ್ತಿರುವ ಬಗ್ಗೆ.**

- ಶ್ರೀ ಹೆಚ್.ಎಂ.ರಮೇಶ್‌ಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**15. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ**

**ಡೀಸಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಗಳು ಹೆಚ್ಚಾಗಿರುವುದರಿಂದ ದಿನನಿತ್ಯ ಬಳಕೆಯ ವಸ್ತುಗಳು ದುಬಾರಿಯಾಗಿರುವ ಬಗ್ಗೆ.**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ನಸೀರ್ ಅಹ್ಮದ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

~~~

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~

**(564)23–03–2021(10–00)ಬಿಎಸ್‌ಡಿ–ವಿಕೆ**

**ಕರ್ನಾಟಕ ವಿಧಾನ ಪರಿಷತ್ತು**

ಮಂಗಳವಾರ, 23ನೇ ಮಾರ್ಚ್ 2021

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ *10 ಗಂಟೆ 7* ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 1.ಸಂತಾಪ ಸೂಚನೆ

**ವಿಷಯ:- ಮಾಜಿ ಸಚಿವರು ಹಾಗೂ ವಿಧಾನಸಭೆ ಸದಸ್ಯರಾಗಿದ್ದ ಶ್ರೀ ಬಿ.ಡಿ.ಬಸವರಾಜು ಅವರ ನಿಧನದ ಬಗ್ಗೆ.**

\- - -

**ಸಭಾಪತಿಯವರು:-** ಮಾಜಿ ಸಚಿವರು ಹಾಗೂ ವಿಧಾನ ಸಭೆ ಸದಸ್ಯರಾಗಿದ್ದ ಹಿರಿಯ ಮುತ್ಸದ್ಧಿ ಬಿ.ಡಿ. ಬಸವರಾಜು ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

ಮಾಜಿ ಸಚಿವರು ಹಾಗೂ ವಿಧಾನ ಸಭೆ ಸದಸ್ಯರಾಗಿದ್ದ ಬಿ.ಡಿ.ಬಸವರಾಜು ಅವರು ದಿನಾಂಕ 22-03-2021ರಂದು ನಿಧನ ಹೊಂದಿರುತ್ತಾರೆ.

1938 ಆಗಸ್ಟ್ 11ರಂದು ಜನಿಸಿದ್ದ ಶ್ರೀಯುತರು ಬಿ.ಎ., ಪದವಿಯನ್ನು ಹೊಂದಿದ್ದರು, ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಹಾಸನ ಜಿಲ್ಲಾ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. 1985ರಲ್ಲಿ ಸಕಲೇಶಪುರ ಕ್ಷೇತ್ರದಿಂದ 8ನೇ ವಿಧಾನ ಸಭೆಗೆ ಆಯ್ಕೆಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಯುತರು ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ ಸಕಲೇಶಪುರದಲ್ಲಿ ಬಿ.ಇಡಿ., ಹಾಗೂ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಪ್ರಮುಖ ಪಾತ್ರ ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕೀಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಹಳ ಅನುಭವಿ, ಮುತ್ಸದ್ಧಿ, ಹಿರಿಯ ರಾಜಕಾರಣಿ, ಆದರ್ಶ ರಾಜಕಾರಣವನ್ನು ಬದುಕಿನುದ್ದಕ್ಕೂ ಮಾಡಿದಂತಹ ಬಿ.ಡಿ. ಬಸರಾಜು ಅವರು ನಿಧನರಾಗಿದ್ದು, ಈ ರಾಜ್ಯಕ್ಕೆ ಮತ್ತು ಸಾರ್ವಜನಿಕ ಜೀವನಕ್ಕೆ ನಷ್ಟ ಎಂದು ಭಾವಿಸಲಾಗಿದೆ. Bachelor of Arts ಪದವಿಯನ್ನು ಹೊಂದಿ, ವೃತ್ತಿಯಲ್ಲಿ ಕೃಷಿಕರಾಗಿದ್ದು, ಕೃಷಿಯಲ್ಲಿ ಹಲವಾರು ಅಧ್ಯಯನ ಮತ್ತು ಅನುಭವವನ್ನು ಪಡೆದು, ಕೃಷಿ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ಸಹಕಾರಿ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿ, ಹಾಸನ ಜಿಲ್ಲಾ ಜಿಲ್ಲಾ ಕೇಂದ್ರ Bank ನ ಅಧ್ಯಕ್ಷರಾಗಿ ಸುದೀರ್ಘವಾದ ಸೇವೆ ಸಲ್ಲಿಸಿದವರಾಗಿದ್ದಾರೆ. ಸಕಲೇಶಪುರದಲ್ಲಿ 8ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಜನಾದರಣೀಯರಾಗಿ, ಸಾಮಾನ್ಯ ಬಡವರ ಪರವಾಗಿ, ಧ್ವನಿ ಇಲ್ಲದವರ ಪರವಾಗಿ ದನಿಯಾಗಿ ಕೆಲಸ ಮಾಡಿರುವ ಇತಿಹಾಸಗಳು ಅವರ ಬದುಕಿನುದ್ದಕ್ಕೂ ಇದೆ. ಬಸವರಾಜು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ ಸಕಲೇಶಪುರದಲ್ಲಿ college ಗಳನ್ನು ಮಾಡಿ, ಉನ್ನತ ಶಿಕ್ಷಣಕ್ಕೆ ಕ್ರಾಂತಿ ಕೊಟ್ಟಿದ್ದು ಸೇರಿದಂತೆ, ಕ್ರಾಂತಿಕಾರಕ ಕೆಲಸಗಳನ್ನು ಮಾಡಿದ್ದು, ಸೇರಿದಂತೆ ಇಡೀ ರಾಜ್ಯಕ್ಕೆ ಅವರು ಕೊಟ್ಟಿರುವ ಕೊಡುಗೆಗಳನ್ನು ನಾವೆಲ್ಲರೂ ನೆನೆಪು ಮಾಡಿಕೊಳ್ಳಬೇಕು. ಅತ್ಯಂತ ಹಿರಿಯ ರಾಜಕಾರಣಿಯಾಗಿ, ಆದರ್ಶ ರಾಜಕಾರಣದ ಕಲ್ಪನೆಯೊಂದಿಗೆ ಸಮಾಜಕ್ಕೆ ಬದುಕನ್ನು ಸಮರ್ಪಣೆ ಮಾಡಿದಂತಹ ಬಿ.ಡಿ. ಬಸವರಾಜು ರವರ ನಿಧನ ಈ ರಾಜ್ಯದ ಸಾರ್ವಜನಿಕ ಜೀವನಕ್ಕೆ ಮತ್ತು ರಾಜ್ಯಕ್ಕೆ ಬಹುದೊಡ್ಡ ನಷ್ಟ ಎಂದು ನಾನು ಭಾವಿಸಿದ್ದೇನೆ. ತಾವು ತಂದಿರುವ ಸಂತಾಪ ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸಿ, ಬಸವರಾಜು ಅವರ ನಿಧನದ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಮತ್ತು ಸಮಾಜಕ್ಕೆ ಸಿಗಲಿ, ಅವರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ಕರುಣಿಸಲಿ ಎಂದು ತಮ್ಮ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ಅವರಿಗೆ ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಡಿ. ಬಸವರಾಜು ರವರ ನಿಧನದಿಂದ ಈ ನಾಡಿನ ಸಾರ್ವಜನಿಕ ಬದುಕು ಬರಡಾಗಿದೆ ಎಂದು ಹೇಳಬಹುದು. ಬಸವರಾಜು ರವರು 8ನೇ ವಿಧಾನ ಸಭೆಗೆ ಸಕಲೇಶಪುರ ವಿಧಾನ ಸಭಾ ಮತ ಕ್ಷೇತ್ರದಿಂದ ಆಯ್ಕೆಯಾಗಿದ್ದು ಮಾತ್ರವಲ್ಲದೇ ಸಚಿವರಾಗಿ ಅದರಲ್ಲೂ ವಿಶೇಷವಾಗಿ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದವರು. ಅವರು ಮಹಾನ್ ಶಿಕ್ಷಣ ಪ್ರೇಮಿಗಳಾಗಿದ್ದು, ಶಿಕ್ಷಣ ಸಚಿವರಾಗಿದ್ದಾಗ B.Ed ಹಾಗೂ ಪ್ರಥಮ ದರ್ಜೆ college ತೆರೆಯಲು ಸಾಕಷ್ಟು ಶ್ರಮ ವಹಿಸಿದ್ದರು ಎಂಬ ಮಾತನ್ನು ಹೇಳಲು ಇಚ್ಛಿಸುತ್ತೇನೆ. **(ಮುಂದು)**

**(565)/23.03.2021/10.40/ಹೆಚ್‌ವಿ:ವಿಕೆ**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಸನ್ಮಾನ್ಯ ಸಭಾಪತಿಯವರೆ, ಇದೆಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬರು ಆದರ್ಶ ಕೃಷಿಕರಾಗಿದ್ದರು. ಪ್ರಗತಿಪರ ರೈತರಾಗಿ ಕೃಷಿ ಕ್ಷೇತ್ರದಲ್ಲಿಯೂ ಸಹ ಅಗಾಧವಾದ ಸೇವೆಯನ್ನು ಸಲ್ಲಿಸಿದ್ದಾರೆ. ಮಾನ್ಯ ಬಸವರಾಜ್‌ರವರು ಈ ನಾಡಿನ ಅತ್ಯಂತ ಹಿರಿಯ ಸಹಕಾರಿಗಳಾಗಿದ್ದರು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅವರು ಹಾಸನ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ಆಗಿರುವ 'ಹಾಸನ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್'ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಬಹುಮುಖ ಪ್ರತಿಮೆಯನ್ನು ಹೊಂದಿದಂತಹ ಶ್ರೀ ಬಿ.ಡಿ.ಬಸವರಾಜ್‌ರವ ನಿಧನದಿಂದ ಈ ನಾಡು ಒಬ್ಬ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾವು ತಂದಿರುವಂತಹ ಸಂತಾಪ ಸೂಚನೆಗೆ ಸಂಪೂರ್ಣವಾಗಿ ನನ್ನ ಬೆಂಬಲವನ್ನು ಸೂಚಿಸುತ್ತಾ, ಭಗವಂತ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಮತ್ತು ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದಯಪಾಲಿಸಲಿ ಎಂದು ಪ್ರಾರ್ಥಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಉಪಸ್ಥಿತರಿದ್ದ ಎಲ್ಲರೂ ಎದ್ದು ನಿಂತು, ಮೃತರ ಗೌರವಾರ್ಥ ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಿನ್ನೆಯ ದಿನ ನಿಯಮ 59ರಡಿಯಲ್ಲಿ ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ, ತಾವು ಅದನ್ನು ನಿಯಮ 68ಕ್ಕೆ ಪರಿವರ್ತಿಸಿ, ಸದನದಲ್ಲಿ ಚರ್ಚಿಸಲು ಅವಕಾಶ ನೀಡುವುದಾಗಿ ಹೇಳಿದ್ದೀರಿ ಆದರೆ, ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಆ ವಿಚಾರವೇ ಇಲ್ಲ.

**ಸಭಾಪತಿಯವರುಃ-** ತಾವು ಈಗಾಗಲೇ ನಿಯಮ 68ರಡಿಯಲ್ಲಿ ಡೀಸಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಗಳು ಹೆಚ್ಚಾಗಿರುವುದರಿಂದ ದಿನನಿತ್ಯ ಬಳಕೆಯ ವಸ್ತುಗಳು ದುಬಾರಿಯಾಗಿರುವ ಕಾರಣ ಸಾಮಾನ್ಯ ಜನರ ಪರಿಸ್ಥಿತಿ ಚಿಂತಾಜನಕವಾಗಿರುವ ಕುರಿತು ನೋಟಿಸ್ ನೀಡಿದ್ದೀರಿ, ಆ ವಿಚಾರದ ಮೇಲೆ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಅದು ಮುಗಿದ ಮೇಲೆ ಇದನ್ನು ತೆಗೆದುಕೊಳ್ಳಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**2. ಪ್ರಶ್ನೋತ್ತರಗಳು**

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾಗುವ ಉತ್ತರಗಳು

**ಸಭಾಪತಿಯವರುಃ–** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:256(1940) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಮಾನೆ ಶ್ರೀನಿವಾಸ್‌ರವರು ಸದನದಲ್ಲಿ ಉಪಸ್ಥಿತರಿಲ್ಲ. ಮುಂದಿನ ಪ್ರಶ್ನೆ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರದು.

**ಪ್ರಶ್ನೆ ಸಂಖ್ಯೆಃ 1898**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. CRZ ಮತ್ತು Non CRZ ಮರಳಿನ ಬಳಕೆಯಿಂದ ಆಗಿರುವಂತಹ ತೊಂದರೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ‘ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ CRZ ಮರಳಿನಿಂದ ನಿರ್ಮಿಸಲಾದ ರಸ್ತೆಗಳು, ಬಿಲ್ಡಿಂಗ್, ಸೇತುವೆ, ಕಿಂಡಿ, ಅಣೆಕಟ್ಟುಗಳ ಬಾಳಿಕೆ ಮತ್ತು ಗುಣಮಟ್ಟದ ಬಗ್ಗೆ ಸರ್ಕಾರವು ತಜ್ಞರವರದಿಯನ್ನು ಪಡೆದಿದೆಯೇ?’ ಎನ್ನುವ ನನ್ನ ಪ್ರಶ್ನೆಗೆ ‘CRZ ಮರಳಿನಿಂದ ನಿರ್ಮಿಸಲಾದ ರಸ್ತೆಗಳು, ಬಿಲ್ಡಿಂಗ್, ಸೇತುವೆ, ಕಿಂಡಿ, ಅಣೆಕಟ್ಟುಗಳ ಬಾಳಿಕೆ ಮತ್ತು ಗುಣಮಟ್ಟದ ವಿಶ್ಲೇಷಣಾ ವರದಿ ಪಡೆದಿರುವುದಿಲ್ಲ’ ಎನ್ನುವ ಉತ್ತರವನ್ನು ನೀಡಿದ್ದಾರೆ. ಅವರು ಆ ವರದಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಕಳೆದ 20–30 ವರ್ಷಗಳ ಹಿಂದೆ ಸರ್ಕಾರದಿಂದ ನಿರ್ಮಿಸಲ್ಪಡುವ ಕಟ್ಟಡಗಳಿಗೆ, ಸೇತುವೆಗಳಿಗೆ, ಅಣೆಕಟ್ಟೆಗಳಿಗೆ ಈ ಸಿಮೆಂಟ್ ಅನ್ನು ಬಳಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಲೋಕೋಪಯೋಗಿ ಇಲಾಖೆಯವರು ಮಾಡಿದ್ದರು. ಆದರೆ, ಈಗ ಅದೇ ಮರಳನ್ನು ಬಳಕೆ ಮಾಡುವುದಕ್ಕೆ ಅವಕಾಶವನ್ನು ನೀಡಲಾಗಿದೆ. ಇದು ಎಷ್ಟರ ಮಟ್ಟಿಗೆ ಸರಿಯಿದೆ? ಇದರ ಬಳಕೆಯಿಂದ ಏನಾದರೂ ತೊಂದರೆಯಾಗುತ್ತದೆಯೇ ಇಲ್ಲವೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಉಳಿದ ಪ್ರಶ್ನೆಗಳಿಗೆ ಸರ್ಕಾರ ಕೊಟ್ಟಿರುವ ಉತ್ತರವನ್ನು ಓದುವುದಕ್ಕೆ ನನಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಅವುಗಳಿಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳನ್ನು ನಾನು ಕೇಳುವುದಿಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಸನ್ಮಾನ್ಯ ಸಭಾಪತಿಯವರೇ, ನದಿ ನೀರು ಸಮುದ್ರಕ್ಕೆ ಹೋಗಿ ಸೇರುತ್ತದೆ. 5 ಪಿ.ಪಿ.ಎಂ.,ವರೆಗೆ ಬರುವಂತಹ ಉಪ್ಪು ಮಿಶ್ರಿತ ಮರಳನ್ನು ಹೊರತುಪಡಿಸಿ ಉಳಿದ ಮರಳನ್ನು ನಾವು ಕಟ್ಟಡಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತೇವೆ. 5 ಪಿ.ಪಿ.ಎಂ.,ವರೆಗೆ ಬರುವಂತಹ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉಪ್ಪು ಮಿಶ್ರಿತ ಮರಳನ್ನು ಕಟ್ಟಡ ಕಟ್ಟುವುದಕ್ಕೆ ಬಳಕೆ ಮಾಡಿದರೆ, ಕಟ್ಟಡದ ಬಲ ಕಡಿಮೆಯಾಗುತ್ತದೆ. ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗುತ್ತಿದೆ. ಕಳೆದ 10 ವರ್ಷಗಳಿಗೆ ಹೋಲಿಕೆ ಮಾಡಿ ನೋಡಿದರೆ, ಈ ವರ್ಷದಲ್ಲಿ ಉಪ್ಪಿನ ಪ್ರಮಾಣದಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ. ಇದಕ್ಕೊಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಸೂರತ್ಕಲ್‌ನಲ್ಲಿರುವ National Institute of Technology ಅವರು ತಾಂತ್ರಿಕ ಅಂಶಗಳನ್ನೊಳಗೊಂಡ ವರದಿಯನ್ನು ಕೊಡುತ್ತಾರೆ. ಇದರ ಜೊತೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 7 ಜನರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಇದರಲ್ಲಿ ನಮ್ಮ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯವರು ಇದ್ದಾರೆ. ಇವರು ಕಟ್ಟಡ ಕಟ್ಟುವುದಕ್ಕೆ ಯಾವ ಮರಳು ಸೂಕ್ತ, ಯಾವುದು ಸೂಕ್ತವಲ್ಲ ಎನ್ನುವುದನ್ನು ತಿಳಿಸುವುದರ ಜೊತೆಗೆ ಆ ಉಪ್ಪಿನ ಪ್ರಮಾಣ ಎಲ್ಲಿಯವರೆಗೆ ಬಂದಿದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ನಮಗೆ ಒಂದು ವರದಿಯನ್ನು ಕೊಡುತ್ತಾರೆ. ಆ ವರದಿಯ ಆಧಾರದ ಮೇಲೆ ಮರಳು ದಿಬ್ಬಗಳನ್ನು ನಾವು ಹರಾಜಿನಲ್ಲಿ ಕೊಡುತ್ತಿದ್ದೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ರಾಜ್ಯದ ಮತ್ತು ರಾಷ್ಟ್ರದ ಹಿತಾಸಕ್ತಿಯಿಂದ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಸಮರ್ಥನೆ ಮಾಡಿಕೊಂಡು ಮಾತನಾಡಬಹುದು. ಆದರೆ, ನನ್ನ ಕಳಕಳಿ ಏನೆಂದರೆ, 20-30 ವರ್ಷಗಳ ಹಿಂದೆ ಬಳಕೆ ಮಾಡದೇ ಇರುವ ಮರಳನ್ನು 'ಈಗ ಬೇಡಿಕೆ ಇದೆ ಅದಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎನ್ನುವ ವಾದ ಸರಿಯಾದುದ್ದಲ್ಲ. ಮಾನ್ಯ ಸಚಿವರು ಹೇಳಿದಂತೆ ಯಾವುದೂ ನಡೆಯುತ್ತಿಲ್ಲ. ಸರ್ಕಾರ ಮರಳು ದಿಬ್ಬವನ್ನು ಗುರುತಿಸುವುದು, ಆ ಮರಳು ದಿಬ್ಬದಿಂದ ಮರಳನ್ನು ತೆಗೆಯುವುದು ಅದನ್ನು ಮಾರುಕಟ್ಟೆಗೆ ಅಥವಾ ಗುತ್ತಿಗೆದಾರರ ಮೂಲಕ ಮಾರಾಟ ಮಾಡುವುದು ಸರಿಯಲ್ಲ. ಈ ಮರಳನ್ನು ಸರ್ಕಾರಿ ಕಟ್ಟಡಗಳನ್ನು ನಿರ್ಮಿಸುವಂತಹ ಗುತ್ತಿಗೆದಾರರು ಬಳಕೆ ಮಾಡುವುದು ಪ್ರಚಲಿತವಾಗಿ ನಡೆದುಕೊಂಡು ಬರುತ್ತಿರುವ ವಿಧಾನವಾಗಿದೆ. ಖಾಸಗಿಯವರು ನೀರು ಹಾಕಿ ಉಪ್ಪನ್ನು ಹೊರತೆಗೆದು ಬಳಕೆ ಮಾಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೆ. ಸರ್ಕಾರಿ ಸ್ವಾಮ್ಯದ ಯಾವುದೇ ಕಟ್ಟಡಗಳಿಗೆ ಈ ಮರಳನ್ನು ಬಳಕೆ ಮಾಡುತ್ತಿಲ್ಲ. ಇನ್ನು ಮುಂದೆಯೂ ಅದನ್ನು ಬಳಕೆ ಮಾಡುವುದಕ್ಕೆ ಅವಕಾಶವನ್ನು ಕೊಡದೇ ಇರುವುದು ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಅವರು ಕೊಟ್ಟಿರುವಂತಹ ಉತ್ತರ ಸರ್ಕಾರದ ಉತ್ತರವಾಗುತ್ತದೆ. ಆದ್ದರಿಂದ ಸಾರಾಸಗಟಾಗಿ ಆ ಮರಳನ್ನು ಬಳಕೆ ಮಾಡಿ ಮುಂದಿನ ಅನಾಹುತಕ್ಕೆ ದಾರಿ ಮಾಡಿಕೊಡಬಾರದೆನ್ನುವುದು ನನ್ನ ಸಲಹೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:-** ಸನ್ಮಾನ್ಯ ಸಭಾಪತಿಯವರೇ, ಮರಳಿನ ಗುಣಮಟ್ಟವನ್ನು ಲೋಕೋಪಯೋಗಿ ಇಲಾಖೆಯಿಂದ ಅಥವಾ National Accreditation Board for Testing and Calibration Laboratories (NABL) ಎಂದು ಇದೆ. ಅವರಿಂದ ಪರಿಶೀಲನೆ ಮಾಡಿಸಿ, ಯಾವುದೇ ರೀತಿಯಲ್ಲಿಯೂ ತೊಂದರೆಗಳು ಎದುರಾಗದಿರುವಂತೆ ಕ್ರಮವನ್ನು ವಹಿಸಲಾಗಿದೆ. ಈಗ ಎಷ್ಟು ಪ್ರಮಾಣದಲ್ಲಿ ಪರೀಕ್ಷೆಗಳನ್ನು ನಡೆಸಲಾಗಿದೆ ಎನ್ನುವುದರ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಪಡೆದುಕೊಂಡು ತಮಗೆ ತಿಳಿಸಲಾಗುತ್ತದೆ. ಉಪ್ಪಿನ ಪ್ರಮಾಣ ಹೆಚ್ಚಿರುವ ಮರಳಿನ ದಿಬ್ಬಗಳನ್ನು ಹರಾಜಿನಲ್ಲಿ ಕೊಟ್ಟಿರುವ ಪ್ರಕರಣಗಳು ಕಂಡು ಬಂದರೇ, ತಕ್ಷಣವೇ ಅವುಗಳಿಗೆ ತಡೆ ನೀಡುವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1937**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ್‌ಕುಮಾರ್ ಅರಳಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅಧಿಕಾರಿಗಳು ನೀಡಿರುವಂತಹ ಈ ಉತ್ತರ ಸತ್ಯಕ್ಕೆ ದೂರವಾಗಿದೆ. 'ಬೀದರ್ ಜಿಲ್ಲೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿವೆ; ಅವುಗಳ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು; ಹಾಗೂ ಕಾರ್ಖಾನೆಗಳ ಸರಾಸರಿ ಉತ್ಪಾದನೆ ಎಷ್ಟು?' ಎನ್ನುವ ಪ್ರಶ್ನೆಯನ್ನು ಕೇಳಿದ್ದೆ, ಈ ಕಾರ್ಖಾನೆಗಳ ವಾರ್ಷಿಕ ಸರಾಸರಿ ಉತ್ಪಾದನಾ ಇಳುವರಿ ಶೇಕಡಾ 6 ರಿಂದ 9 ಆಗಿರುತ್ತದೆ. ಕಳೆದ 10 ವರ್ಷಗಳಿಂದ ಈ ಕಾರ್ಖಾನೆಗಳ ವಾರ್ಷಿಕ ಸರಾಸರಿ ಉತ್ಪಾದನಾ ಇಳುವರಿ ಶೇಕಡಾ 10ಕ್ಕಿಂತ ಕಡಿಮೆ ಇರುತ್ತಿರಲಿಲ್ಲ. ಈಗ ಏಕೆ ಕಡಿಮೆಯಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, 'ಈಗಾಗಲೇ ಬೀದರ್ ಸಕ್ಕರೆ ಸಹಕಾರ ಕಾರ್ಖಾನೆಯನ್ನು ಮುಚ್ಚಲಾಗಿದೆ' ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಈ ಕಾಖಾನೆಯನ್ನು ಮುಚ್ಚಲು ಕಾರಣಗಳನ್ನು ಸಹ ಮಾನ್ಯ ಸಚಿವರು ನೀಡಿದ್ದಾರೆ. 'ಕಾರ್ಖಾನೆಯು ಸುಮಾರು 50 ವರ್ಷಗಳಷ್ಟು ಹಳೆಯದಾಗಿರುವ ಯಂತ್ರೋಪಕರಣಗಳನ್ನು ಉಪಯೋಗಿಸಲಾಗುತ್ತಿದೆ, ನಿರೀಕ್ಷಿತ ಪ್ರಮಾಣದಲ್ಲಿ ಕಬ್ಬಿನ ಲಭ್ಯತೆ ಇಲ್ಲದಿರುವುದು ಮತ್ತು ಹಾಲಿ ಕಾರ್ಖಾನೆಯಲ್ಲಿ ತಾಂತ್ರಿಕ ಪರಿಣಿತಿ ಹೊಂದಿರುವ ಸಿಬ್ಬಂದಿಗಳ ಕೊರತೆ ಇದೆ' ಎನ್ನುವ ಕಾರಣಗಳನ್ನು ನೀಡಿದ್ದಾರೆ. ಸುಮಾರು 40 ವರ್ಷಗಳಿಂದ ಈ ಕಾರ್ಖಾನೆ ನಡೆಯುತ್ತಿದೆ. ನಮ್ಮ ಜಿಲ್ಲೆಯಲ್ಲಿ ಇದೊಂದು ಅತ್ಯುತ್ತಮ ಕಾರ್ಖಾನೆಯಾಗಿತ್ತು. ರಾಜಕಾರಣದ ಹಿನ್ನೆಲೆಯಲ್ಲಿ ಮತ್ತು ಇದನ್ನು ಮುಚ್ಚಬೇಕು ಎನ್ನುವ ಹುನ್ನಾರದ ಕಾರಣದಿಂದಾಗಿ ಈ ಕಾರ್ಖಾನೆಯನ್ನು ಸ್ಥಗಿತಗೊಳಿಸಲಾಗಿದೆ. ಮಾನ್ಯ ಸಚಿವರು ಖುದ್ದಾಗಿ ಆ ಕಾರ್ಖಾನೆಗೆ ಭೇಟಿ ನೀಡಿದರೆ, ಈ ಕಾರ್ಖಾನೆಯನ್ನು ಸ್ಥಗಿತಗೊಳಿಸುವುದಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ನಿಜಾಂಶ ತಿಳಿಯುತ್ತದೆ. ಯಾರೋ ಕೇಳಿದ ಮಾತುಗಳನ್ನು ಮಾನ್ಯ ಸಚಿವರು ಒಪ್ಪಿಕೊಳ್ಳುವುದು ಬೇಡವೆನ್ನುವುದು ನನ್ನ ಮನವಿಯಾಗಿದೆ. ನಾಡಿನ ಜನತೆಗೆ ತಪ್ಪು ಸಂದೇಶವನ್ನು ನೀಡಬಾರದು. ಈ ಕಾರ್ಖಾನೆ ಸ್ಥಗಿತಗೊಂಡಿರುವುದರಿಂದ ಬೀದರ್ ಜಿಲ್ಲೆಯ ಜನರು ಬಹಳ ತೊಂದರೆಗೊಳಗಾಗಿದ್ದಾರೆ.

**(ಮುಂದು)**

**(566) 23.3.2021 10.50 ಪಿಕೆ:ಬಿಎನ್ಎಸ್**

**ಶ್ರೀ ಅರವಿಂದ ಕುಮಾರ್ ಅರಳಿ (ಮುಂದು):-**

ನಾನು, ಕಬ್ಬಿಗೆ ಎಷ್ಟು ಬೆಲೆ ನಿಗದಿ ಮಾಡಿದ್ದೀರಿ ಎಂದು ಕೇಳಿದ್ದೇನೆ. ಈಗಾಗಲೇ ಎಫ್ಆರ್‌ಪಿ 1950.00 ರೂಪಾಯಿಗಳಂತೆ ಕೊಡುತ್ತಿದ್ದಾರೆ. ಹಿಂದೆ ಮಾನ್ಯ ಪ್ರಭು ಚವ್ಹಾಣ್‌ರವರು ಉಸ್ತುವಾರಿ ಸಚಿವರಾಗಿದ್ದು ಜಿಲ್ಲಾಧಿಕಾರಿಗಳ ಜೊತೆ ಸಭೆ ಮಾಡಿ ಪ್ರತಿ ಟನ್‌ಗೆ 2400 ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಈಗ ರೈತರಿಗೆ ಪ್ರತಿ ಟನ್‌ಗೆ 1950 ರೂ.ಗಳನ್ನು ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆ ಆಗುತ್ತಿದೆ. ಈ ನಿಟ್ಟಿನಲ್ಲಿ ಮಾನ್ಯ ಸಚಿವರು ಏನು ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

**ಶ್ರೀ ಎನ್.ನಾಗರಾಜು.ಎಂ.ಟಿ.ಬಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ಬೀದರ್ ಜಿಲ್ಲೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿವೆ; ಅವುಗಳ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು; ಹಾಗೂ ಕಾರ್ಖಾನೆಗಳ ಸರಾಸರಿ ಉತ್ಪಾದನೆ ಎಷ್ಟು ಎಂದು ಕೇಳಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 6 ಸಕ್ಕರೆ ಕಾರ್ಖಾನೆಗಳಿದ್ದು, ಈ ಪೈಕಿ 4 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. 2 ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿವೆ. ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ 14 ದಿನಗಳ ಒಳಗಾಗಿ ಕಬ್ಬು ಬಿಲ್ ಪಾವತಿಸದಿದ್ದಲ್ಲಿ ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3(8)ರ ಅವಕಾಶಗಳಂತೆ ಸಾಲಿಯಾನ ಶೆ.15ರ ಬಡ್ಡಿಯೊಂದಿಗೆ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಏಕೆ ಕ್ರಮ ಕೈಗೊಳ್ಳಬಾರದು ಎಂದು ಸೂಚಿಸುವ ಶಾಸನಬದ್ಧ ನೋಟಿಸ್‌ಗಳನ್ನು ದಿನಾಂಕ 2.2.2021ರಂದು ಜಾರಿಗೊಳಿಸಲಾಗಿದೆ. ಪ್ರಸ್ತುತ 2020-2021ನೇ ಹಂಗಾಮು ಚಾಲ್ತಿಯಲ್ಲಿರುವುದರಿಂದ ಕಾರ್ಖಾನೆಗಳು ಕಬ್ಬಿನ ಬಿಲ್ಲು ಮೊತ್ತವನ್ನು ಪಾವತಿಸಲು ಅವಕಾಶವಿರುವುದನ್ನು ಗಮನಿಸಬಹುದಾಗಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಇನ್‌ಚಾರ್ಜ್ ಮಿನಿಸ್ಟರ್‌ರವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರೈತರಿಗೆ 2400.00ರೂ.ಗಳನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ಈಗ 1950.00 ರೂ.ಗಳನ್ನು ಕೊಡುತ್ತಿದ್ದಾರೆ. ಅಲ್ಲದೇ ಈ ಹಣವನ್ನು ಪೂರ್ತಿಯಾಗಿ ಕೊಡದೇ ಕಂತುಗಳಲ್ಲಿ ಪಾವತಿ ಮಾಡುತ್ತಿದ್ದಾರೆ. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಏಕೆ ಮುಚ್ಚಲಾಯಿತು ಎಂದು ಮಾನ್ಯ ಸಚಿವರು ತಿಳಿಸಬೇಕು. ಈ ಕಾರ್ಖಾನೆ ಬಗ್ಗೆ ಕೇಳಿ ಬರುತ್ತಿದ್ದ ಗಾಳಿ ಮಾತುಗಳ ಹಿನ್ನೆಲೆಯಲ್ಲಿ ಬಂದ್ ಮಾಡಲಾಯಿತೇ? ಮಹಾತ್ಮ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆಗೆ NCDC (National Cooperative Development Corporation) 2800 ಕೋಟಿ ರೂ.ಗಳನ್ನು ಕೊಟ್ಟಿತ್ತು. ಆ ಸಾಲವನ್ನು ಶೇರ್ ಎಂದು ಕನ್‌ವರ್ಟ್ ಮಾಡಿ ಬಡ್ಡಿಸಹಿತ ಸರ್ಕಾರವೇ ಹಣವನ್ನು

ತುಂಬಿತು. ಹೀಗಿರುವಾಗಿ ಕಡಿಮೆ ಸಾಲ ಹೊಂದಿರುವಂತಹ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಏಕೆ ಬಂದ್ ಮಾಡಿದಿರಿ?

**ಶ್ರೀ ಎನ್.ನಾಗರಾಜು.(ಎಂ.ಟಿ.ಬಿ) :-** ಮಾನ್ಯ ಸಭಾಪತಿಯವರೇ, ಅದು ಸುಮಾರು 40-50 ವರ್ಷಗಳ ಹಳೆಯ ಕಾರ್ಖಾನೆಯಾಗಿದೆ. ಈಗಾಗಲೇ ಅದರ ಮೆಷನರಿಗಳೆಲ್ಲಾ ದುರಸ್ತಿಗೆ ಬಂದಿವೆ. ಅದರ ಮೇಲೆ ಒಟ್ಟು ಸಾಲ 274.87 ಕೋಟಿ ರೂ.ಗಳಿರುತ್ತವೆ. ಈಗ ಸ್ಥಗಿತಗೊಂಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ಕೊಡುವುದರ ಮೂಲಕ ಪುನಪ್ರಾರಂಭಿಸುವ ಚಿಂತನೆಯನ್ನು ಸರ್ಕಾರ ಮಾಡುತ್ತಿದೆ. ಈ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಂದ ವರದಿ ಕೋರಲಾಗಿದ್ದು, ವರದಿ ಬಂದ ನಂತರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಪುನಪ್ರಾರಂಭಿಸುವ ಚಿಂತನೆ ಮಾಡುತ್ತಿದ್ದೇವೆ.

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಈ ಕಾರ್ಖಾನೆಯ ಮೇಲೆ 274.87 ರೂ. ಕೋಟಿ ಸಾಲ ಇದೆ. ಆದರೆ 576.58 ಕೋಟಿ ಸಾಲ ಇದ್ದಂತಹ ಕಾರ್ಖಾನೆಗಳು ರನ್ ಆಗುತ್ತಿವೆ. ಇಂಥದ್ದರಲ್ಲಿ ಈ ಕಾರ್ಖಾನೆ ಏಕೆ ಬಂದ್ ಆಗುತ್ತಿದೆ? ಸರ್ಕಾರ ಏಕೆ ಇದನ್ನು ಪುನಶ್ಚೇತನಗೊಳಿಸುವುದಕ್ಕೆ ಆಗುವುದಿಲ್ಲ? ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆಯು ಸಹಕಾರಿ ಸಕ್ಕರೆ ಕಾರ್ಖಾನೆಯಾಗಿದೆ. ಈ ಕಾರ್ಖಾನೆಗೆ NCDC ಯಿಂದ 2800 ಕೋಟಿ ರೂ.ಗಳನ್ನು ಸರ್ಕಾರ ಕೊಟ್ಟಿತು. ಸರ್ಕಾರವೇ ಸಾಲ ಮತ್ತು ಬಡ್ಡಿಯನ್ನು ಕಟ್ಟಿ ಶೇರ್ ಆಗಿ ಕನ್ವರ್ಟ್ ಮಾಡಿ ತೆಗೆದುಕೊಂಡರು. ಹೀಗಿರುವಾಗ ಈ ಕಾರ್ಖಾನೆಗೆ ಸಂಬಂಧಪಟ್ಟಂತೆ ಏಕೆ ದುಡ್ಡು ಕಟ್ಟಲು ಸಾಧ್ಯವಾಗುತ್ತಿಲ್ಲ? ಇದನ್ನು ಏಕೆ ನೀವು ಗುತ್ತಿಗೆಗೆ ಕೊಡಬೇಕು ಎಂದಿದ್ದೀರಿ?

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ).:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಉಪಪ್ರಶ್ನೆಗಳನ್ನು ಕೇಳಿದ್ದಾರೋ ಆ ಕುರಿತು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಶ್ರೀ ಅರವಿಂದ ಕುಮಾರ ಅರಳಿ:-** ಸರ್ಕಾರ ಖುದ್ದು ಇದನ್ನು ಪರಿಶೀಲಿಸಬೇಕು. ಮಾನ್ಯ ಸಚಿವರು ಅಲ್ಲಿಗೆ ಭೇಟಿ ಕೊಟ್ಟು ನಂತರ ತೀರ್ಮಾನ ತೆಗೆದುಕೊಳ್ಳಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎನ್.ನಾಗರಾಜು ಎಂ.ಟಿ.ಬಿ.:-** ಹಾಗೆಯೇ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ ನೀವು ಸದನಕ್ಕೆ ಬರುವುದಕ್ಕೆ ಮುಂಚೆ ಅಧಿಕಾರಿಗಳ ಜೊತೆ ಮೀಟಿಂಗ್ ಮಾಡಿಕೊಂಡು ಬರಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ :1918**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ರಫ್ತು ಮಾಡುವುದಕ್ಕೆ ಒತ್ತು ಕೊಡಲು ಮತ್ತು international standard ನಲ್ಲಿ ನಮ್ಮ ಕೈಗಾರಿಕೆಗಳು ಬೆಳೆಯಬೇಕು ಎಂದು Special Economic Zone (SEZ) ಎಂದು ಮಾಡಿದ್ದಾರೆ. ಮಾನ್ಯ ಸಚಿವರು 36 ವಿಶೇಷ ಆರ್ಥಿಕ ವಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದ್ದಾರೆ. ಆದರೆ, ಆಪರೇಷನ್‌ನಲ್ಲಿರುವುದನ್ನು ಮಾತ್ರ ಹೇಳಿದ್ದೀರಿ; ಅಪ್ರೂವಲ್ ಕೊಟ್ಟಿರುವುದು ಸುಮಾರು 25ಕ್ಕಿಂತ ಜಾಸ್ತಿ ಇದೆ. ಸುಮಾರು 2-3 ವರ್ಷಗಳಿಂದ ಅದು ಅಪ್ರೂವಲ್ ಅಗಿ ಇರುವಂಥದ್ದಾಗಿದೆ. ಅದರೆ operation ಹೇಗಾಗಿದೆ, ಏನಾಗಿದೆ ಎನ್ನುವುದು ಗೊತ್ತಿಲ್ಲ. ಮಾನ್ಯ ಸಚಿವರು 'ರಾಜ್ಯದ ನಿಯಮಗಳನ್ನು ಸಹ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು. SEZ ಏನಿದೆ, ಅದರ ಕಚೇರಿ ಕೇರಳದಲ್ಲಿದೆ. ಅಲ್ಲಿ ಒಬ್ಬರು ಕಮಿಷನರ್ ಕೂಡ ಇದ್ದಾರೆ. ಅವರು ಬೆಂಗಳೂರಿಗೆ ಬಂದು ಮಾನಿಟರ್ ಮಾಡುವ ವ್ಯವಸ್ಥೆ ಇದೆಯೇ? ಇದ್ದರೆ ಅದು ಯಾವುದು ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ, SEZ Act ನಲ್ಲಿ SEZ ಗಳನ್ನು ಮಾನಿಟರ್ ಮಾಡುವುದು ಬಹಳ ಮುಖ್ಯವಾದುದು. ಎಸ್‌ಇಜೆಡ್‌ಗಳನ್ನು ಮಾನಿಟರ್ ಮಾಡುವುದು, it is obligatory. ತಾವು ಉತ್ತರದಲ್ಲಿ ಒಟ್ಟು 495 ಘಟಕಗಳು ಕಾಯನಿರ್ವಹಿಸುತ್ತಿವೆ ಎಂದು ಹೇಳುತ್ತಿದ್ದೀರಿ. ಅದರಲ್ಲಿ 3,74,728 ಜನರಿಗೆ ಉದ್ಯೋಗಾವಕಾಶ ನೀಡಿದೆ ಎಂದು ಹೇಳುತ್ತಿದ್ದೀರಿ. ಆದರೆ ಇವತ್ತು ಅಕ್ಷರಮಟ್ಟಿಗೆ ಆ ಘಟಕಗಳು ಇದೆಯೇ ಎನ್ನುವುದು ನಿಮಗೆ ಗೊತ್ತಾಗಬೇಕಾದರೆ physical ಆಗಿ ಹೋಗಿ ನೋಡಬೇಕಾಗುತ್ತದೆ. ನೀವು ಅಲ್ಲಿಗೆ ಹೋಗುವುದಕ್ಕೆ ಆಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಮ್ಮ ಕಮಿಷನರ್ ಆದರೂ ಇಲ್ಲಿಗೆ ಬರುತ್ತಾರೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ಇದನ್ನು routine ಆಗಿ ಚೆಕ್ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. 25 SEZ ಘಟಕಗಳು ಬೆಂಗಳೂರಿನಲ್ಲೇ ಇವೆ, ಮಿಕ್ಕಿದ್ದು ಸುಮಾರು 11 ಘಟಕಗಳು ಬೆಂಗಳೂರಿನಿಂದ ಆಚೆ ಇವೆ. ನನ್ನ ಉಪ ಪ್ರಶ್ನೆಗೆ ಉತ್ತರವಾಗಿ, 'ತೊಂದರೆ ಉಂಟಾಗಿರುವುದು ತಿಳಿದಿರುತ್ತದೆ' ಎಂದು ಹೇಳಿದ್ದೀರಿ. There is some problem. But, how to solve that problem? ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಮಾನ್ಯ ಸಭಾಪತಿಯವರೇ, ಕೊಚ್ಚಿನ್‌ನಲ್ಲಿರುವಂತಹ ಕಮಿಷನರ್‌ರವರು ಕೊಟ್ಟಿರುವ ಮಾಹಿತಿಯ ಆಧಾರದ ಮೇಲೆ ಇಲ್ಲಿ ನಮಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಕೊಟ್ಟಿದ್ದಾರೆ. ಸರ್ಕಾರದ SEZ ಗಳ ಮೇಲೆ ನಿಮಗೆ ಯಾವುದೇ ನಿಯಂತ್ರಣ ಇಲ್ಲ. ನಿಮ್ಮ SEZ ನಲ್ಲಿ ಬಯೋಟೆಕ್ನಾಲಜಿ ಪಾರ್ಕ್ ಒಂದು ಮಾತ್ರ ಬರುತ್ತದೆ. ನೀವು ದಯವಿಟ್ಟು ಪರಿಸರ ನಿಯಂತ್ರಣ ಮಂಡಳಿಯ ಜೊತೆ ಒಂದು inspection ಮಾಡಿ. ಅದರ ಸುತ್ತಮುತ್ತ ಇರುವಂತಹ ಕೆರೆಗಳು ಮತ್ತು ಅಲ್ಲಿನ ಪರಿಸರ ಎಷ್ಟರಮಟ್ಟಿಗೆ ಹಾಳಾಗಿದೆ ಎನ್ನುವುದು ಗೊತ್ತಾಗುತ್ತದೆ. SEZ ಗಳು ಉತ್ತಮವಾದ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಬರುತ್ತವೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ರಾಜ್ಯದ SEZ ನಲ್ಲಿ ಇರುವಂತಹ ಕೈಗಾರಿಕೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರೇನು ವಿಶೇಷವಾದ ಮಾಹಿತಿಗಳನ್ನು ಕೇಳಿದ್ದರೋ ಆ ಎಲ್ಲಾ ಮಾಹಿತಿಗಳನ್ನು ಕೊಡುವಂತಹ ಕೆಲಸ ಮಾಡಿದ್ದೇವೆ. Special Economic Zones 2005 ಇದು ಭಾರತ ಸರ್ಕಾರದ ಕಾನೂನುರೀತ್ಯ ಸೃಷ್ಟಿಯಾಗುತ್ತದೆ. ನಾನು ಉತ್ತರದಲ್ಲಿ ತಿಳಿಸಿರುವ ಹಾಗೆ, ಕೇಂದ್ರ ಸರ್ಕಾರ 63 SEZ ಗಳಿಗೆ formal approval ಕೊಟ್ಟಿದ್ದಾರೆ. ಅವುಗಳಲ್ಲಿ 52 SEZ ಗಳಿಗೆ ಸಂಬಂಧಪಟ್ಟಂತೆ ಭಾರತ ಸರ್ಕಾರದ Gazette of India ನಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆ ಹೊರಡಿಸಿದಂತಹ SEZ ಗಳಲ್ಲಿ 36 SEZ ಗಳು ನಮ್ಮ ರಾಜ್ಯದಲ್ಲಿ ಕಾರ್ಯಾರಂಭ ಮಾಡಿವೆ. ಅದರ ವಿವರಗಳನ್ನೂ ಕೂಡ ನಾನು ಕೊಟ್ಟಿದ್ದೇನೆ. ಈ SEZ ಗಳಲ್ಲಿ ಒಟ್ಟು 495 ರಫ್ತು ಘಟಕಗಳು ಕಾರ್ಯನಿರ್ವಹಿಸುತ್ತಿವೆ.

**(ಮುಂದು)**

**(567) 23-03-2021/11.00 ಡಿಎಸ್-ಬಿಎನ್ಎಸ್**

**ಶ್ರೀ ಜಗದೀಶ್ ಶೆಟ್ಟರ್(ಮುಂದು):-**

ಅವುಗಳಿಂದ ಒಟ್ಟು 3,74,728 ಜನರಿಗೆ ಉದ್ಯೋಗಾವಕಾಶ ನೀಡಲಾಗಿರುತ್ತದೆ. 2019-20ನೇ ಸಾಲಿನಲ್ಲಿ 1,19,680 ಕೋಟಿ ರಫ್ತಾಗಿರುತ್ತದೆ. 2020-21ನೇ ಸಾಲಿನಲ್ಲಿ 1,01,103 ಕೋಟಿ ರಫ್ತಾಗಿರುತ್ತದೆ. ಇದರ ಕಾರ್ಯನಿರ್ವಹಣೆ ಯಾರು ಮಾಡುತ್ತಾರೆಂದು ಮಾನ್ಯ ಸದಸ್ಯರು ಬಹಳ ನಿರ್ದಿಷ್ಟವಾಗಿ ಕೇಳಿದ್ದಾರೆ. ನಮ್ಮ ಕರ್ನಾಟಕ, ಆಂಧ್ರ, 2-3 ರಾಜ್ಯಗಳಿಗೆ ಸೀಮಿತವಾಗಿ ಕೊಚ್ಚಿನ್‌ನಲ್ಲಿ ಒಬ್ಬ ಆಯುಕ್ತರು ಇದ್ದಾರೆ. ಅವರು ನೇರವಾಗಿ ಇದನ್ನೆಲ್ಲಾ ನಿಯಂತ್ರಣ ಮಾಡುತ್ತಾರೆ. Day to day affairs ನೋಡುವಂಥದ್ದು.

ಕರ್ನಾಟಕದಲ್ಲಿ ಹೆಚ್ಚು SEZ (Special Economic Zone) ಇರುವುದರಿಂದ ವೈಟ್‌ಫೀಲ್ಡ್‌ನಲ್ಲಿ ಉಪ ಕಚೇರಿ ಇದೆ. ಅದಕ್ಕೊಬ್ಬರು ಜಾಯಿಂಟ್ ಡೆವಲಪ್‌ಮೆಂಟ್ ಕಮೀಷನರ್ ಇಲ್ಲಿ ಇದ್ದಾರೆ. ಅವರ ಅಡಿಯಲ್ಲಿ ಕರ್ನಾಟಕವನ್ನು ನೋಡಿಕೊಳ್ಳುತ್ತಾರೆ. ಹೀಗಾಗಿ ನಾವು ಒಂದು ಬೇಡಿಕೆ ಇಟ್ಟಿದ್ದೇವೆ. ಏನು ಕೊಚ್ಚಿನ್‌ನಲ್ಲಿ ಆಯುಕ್ತರ ಕಚೇರಿ ಇದೆ ಅದು ಬೆಂಗಳೂರಿಗೆ ಬರಬೇಕು ಎನ್ನುವಂಥದ್ದನ್ನು ನಾವು insist ಮಾಡಿದ್ದೇವೆ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಸಲ ಒತ್ತಾಯ ಮಾಡಿದ್ದೇವೆಂದು, ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ Biotechnology Park ಬಗ್ಗೆ Pollution Control Board ರವರನ್ನು ಕರೆದುಕೊಂಡು ಒಂದು ಸಲ ಭೇಟಿ ಕೊಡಿ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರ ಸಲಹೆಯನ್ನು ನಾನು ತೆಗೆದುಕೊಳ್ಳುತ್ತೇನೆ. ಆ ರೀತಿ ಇವತ್ತು ಅದರಿಂದ ಏನಾದರೂ ಪರಿಸರಕ್ಕೆ ತೊಂದರೆಯಾಗುವಂಥದ್ದು ಇದ್ದರೆ, definitely, we will take action. ನಾನು Pollution Control Board ನ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಭೇಟಿ ಕೊಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಒಟ್ಟು 3,74,728 ಜನರಿಗೆ ಉದ್ಯೋಗಾವಕಾಶ ನೀಡಲಾಗಿರುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಅದರಲ್ಲಿ ಕನ್ನಡಿಗರು ಎಷ್ಟು ಜನರಿದ್ದಾರೆಂದು ಮಾಹಿತಿ ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ. ಒಟ್ಟು 495 ಘಟಕಗಳಲ್ಲಿ ಎಷ್ಟು ನಿಷ್ಕ್ರಿಯೆ ಆಗಿದೆ ಅಥವಾ ಎಷ್ಟು ಮುಚ್ಚಿದ್ದಾರೆ ಎನ್ನುವುದು ಅವರು ಹೇಳಿದರೆ ಮಾತ್ರ ಗೊತ್ತಾಗುತ್ತದೆ. ಇದರಲ್ಲಿ ಯಾವುದೇ ರೀತಿಯ ನಿಯಂತ್ರಣ ಇರುವುದಿಲ್ಲ. ಹಾಗಾಗಿ ಇವತ್ತು ಎಸ್.ಇ.ಜೆಡ್.ಗಳನ್ನು ಮಾಡಿರುವಂತಹದ್ದು ಆಯಾಯ ಪ್ರದೇಶಗಳಲ್ಲಿ ನಮ್ಮ ಜನಗಳಿಗೆ ಉದ್ಯೋಗ ಸಿಗುವುದು ಬಹಳ ಅವಶ್ಯಕವಾಗಿದೆ. ಇಲ್ಲಿನ make in India products ಹೋಗುವಂಥದ್ದು. ಇವತ್ತು ನಮ್ಮ ದೇಶದಿಂದ ರಫ್ತು ಆಗುವುದಕ್ಕಿಂತ ಆಮದು ಆಗುವುದು ಜಾಸ್ತಿ. 500 ಬಿಲಿಯನ್ ಡಾಲರ್ಸ್‌ಗೆ ನಾವು products ನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಅಂದಾಜು 300 ಮಿಲಿಯನ್ ಡಾಲರ್ಸ್‌ನಷ್ಟು ರಫ್ತು ಮಾಡುತ್ತಿದ್ದೇವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಎಸ್.ಇ.ಜೆಡ್.ಗಳನ್ನು ಮಾಡಿರುವ ಉದ್ದೇಶ ಜಾಸ್ತಿ ರಫ್ತು ಮಾಡುವಂಥದ್ದಾಗಬೇಕು. Make in India products ಗೆ ಜಾಸ್ತಿ ಒತ್ತು ಕೊಡಬೇಕು. ಇದು ಬಹಳ ಹಿಂದಿನಿಂದ ಬಂದಿರುವಂಥದ್ದು.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ನಾವು ಹೆಚ್ಚು ಒತ್ತು ಕೊಡಬೇಕಾಗಿದೆ. ಇದರ ಜೊತೆಗೆ ನಮ್ಮ ಸ್ಥಳೀಯವಾಗಿ ಇರತಕ್ಕಂಥ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಬೇಕು. 3,74,728 ಜನರಲ್ಲಿ ಕನ್ನಡಿಗರು ಎಷ್ಟು ಜನರಿದ್ದಾರೆ? ನನಗೆ ತಿಳಿದ ಹಾಗೆ ಎಸ್.ಇ.ಜೆಡ್., ಗಳಲ್ಲಿ ಕೇರಳದವರು, ಇನ್ನಿತರ ರಾಜ್ಯದವರೇ ಜಾಸ್ತಿ ಜನರು ಇದ್ದಾರೆ. ಎಸ್.ಇ.ಜೆಡ್.,ನಲ್ಲಿ ಕನ್ನಡೇತರ ಜನರೇ ಹೆಚ್ಚಿಗೆ ಇರುವಂಥದ್ದು. ಇವತ್ತು ಬೆಂಗಳೂರಿನಲ್ಲಿ ಯಾರು ಜೀವನ ಮಾಡುತ್ತಿದ್ದಾರೆಂದರೆ ಅವರೆಲ್ಲರೂ ಸಂಪೂರ್ಣವಾಗಿ ಹೊರಗಿನವರೇ ಆಗಿದ್ದಾರೆ. ಬೆಂಗಳೂರಿನ ಯಾವುದೇ ಜಾಗಕ್ಕೆ ಹೋಗಿ ಹೊರಗಿನವರೇ ಇರುತ್ತಾರೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆಯೇ?

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ರಫ್ತು ಇನ್ನು ಹೆಚ್ಚಿಗೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಗಮನಹರಿಸುತ್ತೇವೆ. ಈಗಾಗಲೇ ನಾನು ಅಂಕಿ-ಸಂಖ್ಯೆ ಹೇಳಿದ ಪ್ರಕಾರ ರಫ್ತು ಹೆಚ್ಚಿಗೆ ಆಗುತ್ತಿದೆ. ಇನ್ನು ಹೆಚ್ಚು ರಫ್ತು ಮಾಡುವುದಕ್ಕೆ ಆ ಕೈಗಾರಿಕೆಗಳಿಗೆ instructions ಕೊಡುತ್ತೇವೆ. ಇಲ್ಲಿ ಸ್ಥಳೀಯರಿಗೆ ಉದ್ಯೋಗ ಕೊಡಬೇಕು ಎನ್ನುವ ಪ್ರಶ್ನೆಯನ್ನು ಕೇಳಿದರು. ಇದರ ಬಗ್ಗೆ ನಿರ್ದಿಷ್ಟವಾಗಿ ಪ್ರಶ್ನೆ ಕೇಳದಿರುವುದರಿಂದ ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿಲ್ಲ. ಆ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇವೆ.

**ಪ್ರಶ್ನೆ ಸಂಖ್ಯೆ: 1922**

**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿಯಾಗಿದ್ದರು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1966**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸವಿಸ್ತಾರವಾಗಿ ಒದಗಿಸಿದ್ದಾರೆ. ಈಗ ಕೊಟ್ಟಿರುವಂತಹ ಉತ್ತರದಲ್ಲಿ ಇದುವರೆವಿಗೂ ಸುಮಾರು 3,875 MNC (Multi National Company) ಗಳು ರಾಜ್ಯದಲ್ಲಿ ಅಕ್ಟೋಬರ್–2019 ರಿಂದ ಡಿಸೆಂಬರ್–2020 ರವರೆಗೆ ಬಂಡವಾಳ ಹೂಡಿಕೆಯಾಗಿದೆ. Foreign Direct Investment (FDI) ನಲ್ಲಿ ಕ್ಲಿಯರ್ ಮಾಡಿದ್ದಾರೆ. ಆದರೆ ಇದುವರೆವಿಗೂ 67 ಯೋಜನೆಗಳು ಪ್ರಾರಂಭಗೊಂಡಿವೆ. ಅದರಲ್ಲೂ ಕೂಡ ಕೆಲವೆಲ್ಲಾ ನಿಂತು ಹೋಗಿದೆ. ಕೆಲವೆಲ್ಲಾ implementation ಆಗುತ್ತಿವೆ. ನನ್ನ ಮೂಲ ಪ್ರಶ್ನೆ ಏನೆಂದರೆ, ಈ ಕೊರೋನಾ ವಿಶ್ವವ್ಯಾಪಿಯಾಗಿ ಹರಡಬೇಕಾದರೆ ಅದಕ್ಕೆ ಚೀನಾ ದೇಶವೇ ಪ್ರಮುಖ ಕಾರಣವಾಗಿದೆ. ಅಲ್ಲಿಂದ ಎಲ್ಲಾ Multi National Company ಗಳು ಬೇರೆ ಕಡೆ ಹೋಗುತ್ತಿವೆ. ಈ ದೃಷ್ಟಿಯಲ್ಲಿ ಭಾರತ ಸರ್ಕಾರ ಈ ಕಂಪನಿಗಳನ್ನು ಓಲೈಸಬೇಕೆಂದು, preferred destination in India for investment ಎಂದು ಯೋಜನೆಯನ್ನು ತಂದಿದೆ. ಇದರಲ್ಲಿ ಸುಮಾರು 42,000 ಕೋಟಿ ರೂಪಾಯಿಗಳ incentive scheme ಮಾಡಿತ್ತು. ಈ ಯೋಜನೆ ಪ್ರಕಾರ ಕನಿಷ್ಠ 200 ಎಕರೆ industrial cluster ನಲ್ಲಿ factories ಸ್ಥಾಪನೆ ಮಾಡುವುದಕ್ಕೆ ಅಗತ್ಯ ಇರುವಂತಹ ಶೆಡ್ ನಿರ್ಮಾಣ, plug and play facilities ಅಂದರೆ, electronic items manufacturing ಇರಬಹುದು, digital India ಇರಬಹುದು, ಇದಕ್ಕೆ ಸಂಬಂಧಪಟ್ಟಂಥೆ ಈ ವಲಯಗಳಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿತ್ತು. ಕೇಂದ್ರ ಸರ್ಕಾರ ಕೊಟ್ಟಿರುವಂತಹ ಸವಲತ್ತುಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಆರ್ಥಿಕ ನೆರವನ್ನು ಪಡೆದುಕೊಂಡಿದ್ದಾರೆ? ಅಮೆರಿಕನ್ ಕಂಪನಿಗಳು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಏನಾದರೂ ಉನ್ನತ ಮಟ್ಟದಲ್ಲಿ Committee ಮಾಡಿದ್ದಾರೆಯೇ? ಏಕೆಂದರೆ ಗುಜರಾತ್, ಹರಿಯಾಣ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ತಮಿಳುನಾಡು ಸಾಕಷ್ಟು ರೀತಿಯಲ್ಲಿ FDI ಅನ್ನು ತೆಗೆದುಕೊಳ್ಳುವುದಕ್ಕೆ ಬಹಳ ಪ್ರಯತ್ನ ಪಟ್ಟಿದ್ದಾರೆ. ಇವೆಲ್ಲವೂ ಕೂಡ Government of India ಮೇಲೆ ವಿದೇಶಿ ಬಂಡವಾಳ ಹೂಡಿಕೆ ಬರಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಇಲ್ಲಿ ಎರಡು ದಾರಿ ಇದೆ. ಒಂದು automatic route, ಇದಕ್ಕೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮತಿ ಅಗತ್ಯವಿಲ್ಲ. ಭಾರತ ಸರ್ಕಾರದ ಅನುಮತಿಯ ಅಗತ್ಯವಿಲ್ಲ. ಷೇರು

ಬಂಡಾವಳ ಹೂಡಿಕೆ ಇರಬಹುದು, ಬೇರೆ ರೀತಿಯಲ್ಲಿ ಮಾಡತಕ್ಕಂಥದ್ದು ಇರಬಹುದು. ಮತ್ತೊಂದು Government of India route ಇದೆ. ಇದರಲ್ಲಿ Finance Ministry and Foreign Investment Promotion Body ಅಗತ್ಯತೆ ಇದೆ. It depends on volume. ಆದ್ದರಿಂದ ನಾನು ಕೇಳುವುದೇನೆಂದರೆ, ಎಷ್ಟು ಕಂಪನಿಗಳು ಬಂದಿವೆ, ಎಷ್ಟು ಬಂಡವಾಳ ಹೂಡಿದ್ದಾರೆ, ಅದರಲ್ಲಿ Davos ಗೆ ಹೋಗಿ ಬಂದಿದ್ದಾರೆ. ಹುಬ್ಬಳ್ಳಿಯಲ್ಲಿ ಬಂಡವಾಳ ಹೂಡಿಕೆ ಸಮಾವೇಶವನ್ನು ಮಾಡಿದ್ದಾರೆ. ಇಲ್ಲಿ ಸಾಕಷ್ಟು ರೀತಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆ ಆಗಿಲ್ಲ, ವಿದೇಶಿ ಬಂಡವಾಳ ಹೂಡಿಕೆ ಮಾಡುವುದರಲ್ಲಿ ಎಲ್ಲೋ ಸರ್ಕಾರ ವಿಫಲವಾಗಿದೆ ಎಂದು ಹೇಳಬಯಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಬಹಳ ಪ್ರಮುಖವಾದ ಪ್ರಶ್ನೆ ಕೇಳಿದ್ದಾರೆ. ಇದರಲ್ಲಿ ಎಫ್.ಡಿ.ಐ. ಬಗ್ಗೆ, ಮತ್ತು ಕರ್ನಾಟಕ ಯಾವಾಗಲೂ ಕೈಗಾರಿಕೆಯಲ್ಲಿ, industrial friendly State. ಬೇರೆ ರಾಜ್ಯಗಳಲ್ಲಿ ಪ್ರಮುಖ ರಾಜ್ಯಗಳಿವೆ, ಅದರಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ಯಾವಾಗಲೂ ಒಂದಕ್ಕೊಂದು ಕಾಂಪಿಟೇಶನ್ ಇದ್ದೇ ಇರುತ್ತದೆ. ಇವತ್ತು ಈ ಎಫ್.ಡಿ.ಐ.,ನಲ್ಲಿ, ಕಳೆದ 2-3 ವರ್ಷಗಳ ಅಂಕಿ-ಸಂಖ್ಯೆಯನ್ನು ಕೊಡುತ್ತೇನೆ. 2017-18 ರಲ್ಲಿ ವಿದೇಶಿ ಬಂಡವಾಳ ಹೂಡಿಕೆ 55,334 ಕೋಟಿ ರೂಪಾಯಿಗಳು. ಇಡೀ ರಾಷ್ಟ್ರದಲ್ಲಿ ನಾವು 3ನೇ ಸ್ಥಾನದಲ್ಲಿದ್ದೇವೆ. 2018-19ನೇ ಸಾಲಿನಲ್ಲಿ 46,963 ಕೋಟಿ ರೂಪಾಯಿಗಳು. ಆಗಲೂ ನಾವು 3ನೇ ಸ್ಥಾನದಲ್ಲಿದ್ದೇವೆ. 2019-20ನೇ ಸಾಲಿನಲ್ಲಿ 63,177 ಕೋಟಿ ರೂಪಾಯಿಗಳು. ಆಗ 2ನೇ ಸ್ಥಾನದಲ್ಲಿದ್ದೇವೆ. 2020-21ನೇ ಸಾಲಿನಲ್ಲಿ ಅಂದರೆ, ಏಪ್ರಿಲ್‌ನಿಂದ ಡಿಸೆಂಬರ್ 2020 ರವರೆಗೆ ಹೇಳುತ್ತಿದ್ದೇನೆ. 47,413 ಕೋಟಿ ರೂಪಾಯಿಗಳು. 3ನೇ ಸ್ಥಾನದಲ್ಲಿದ್ದೇವೆ. ಅಂದರೆ, ಇವೆಲ್ಲಾ ನಾವು ಹೋಲಿಕೆ ಮಾಡಿದಾಗ 2ನೇ ಅಥವಾ 3ನೇ ಸ್ಥಾನವನ್ನು ನಿರ್ವಹಣೆ ಮಾಡಿಕೊಂಡು ಹೋಗುತ್ತಿರುವುದು ನಡೆಯುತ್ತಿದೆ. ಕೊರೋನಾ ಸಂದರ್ಭದಲ್ಲಿ ಯಾವ ಪರಿಸ್ಥಿತಿಯಾಗಿತ್ತು ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಕೊರೋನಾ ಸಂದರ್ಭದಲ್ಲೂ ಬಂಡವಾಳ ಹೂಡಿಕೆ ಪ್ರಪೋಸಲ್ಸ್ ನಮಗೆ ಹೆಚ್ಚಿನ ಪ್ರಮಾಣದಲ್ಲಿ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಅದರ ಎಫೆಕ್ಟ್ ಬಹಳ ಆಗಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಬಹಳ ಮುಖ್ಯವಾಗಿ ಹೇಳುವುದೇನೆಂದರೆ, ಮಾರಿಷಸ್, ಸಿಂಗಾಪುರ್, United States of America, ಜಪಾನ್, United Kingdom, ಜರ್ಮನಿ, ಕೆನಾಡ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

UAE, ಈ ದೇಶಗಳಿಂದ ವಿದೇಶಿ ಬಂಡವಾಳ ನಮಗೆ ಹೆಚ್ಚಿಗೆ ಬರುತ್ತಿರುವುದನ್ನು ನಾವು ನೋಡುತ್ತಿದ್ದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

**(ಮುಂದು)**

## (568) 23-03-2021/11-10/bkp-gr

**ಶ್ರೀಜಗದೀಶ್ ಶೆಟ್ಟರ್(ಮುಂದು):-**

ಅದರ ಹಿನ್ನೆಲೆಯಲ್ಲಿ ಅದರ ಎಫೆಕ್ಟ್ ಬಹಳ ಆಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ಇದರ ಜೊತೆಗೆ ಇವತ್ತು ಏನು ಚೈನಾ ದೇಶದ ವಿಚಾರವಾಗಿ ಪ್ರಸ್ತಾಪ ಮಾಡಿದ್ದೀರಿ. ಚೈನಾ ದೇಶದಲ್ಲಿರುವ ಮಲ್ಟಿ ಬಂಡವಾಳ ಅಲ್ಲಿಂದ ಹೊರಗಡೆ ಬರಬೇಕು ನ್ಯಾಷನಲ್ ಕಂಪನಿಯ ವಿಚಾರವಾಗಿ ಪ್ರಯತ್ನ ಮಾಡುವಾಗ ಅದಕ್ಕೆ ನಮ್ಮ ರಾಜ್ಯದ ವತಿಯಿಂದ ವಿಶೇಷವಾದ ಪ್ರಯತ್ನವನ್ನು ಮಾಡಿದ್ದೇವೆ, ನಮ್ಮ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಿ ಇವತ್ತು ಆ ರೀತಿಯಾದಂತಹ ಕಂಪನಿಗಳ ವಿಚಾರವಾಗಿ ಯಾರ್‍ಯಾರ ಜೊತೆಯಲ್ಲಿ ಸಂಪರ್ಕ ಮಾಡಬೇಕೋ ಅವರೆಲ್ಲರ ಜೊತೆ ಸಂಪರ್ಕ ಮಾಡುವಂತಹ ಕೆಲಸವನ್ನು ನಿರಂತರವಾಗಿ ಇವತ್ತಿವರೆಗೂ ಮಾಡುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಕಾರಾತ್ಮಕವಾದಂತಹ ಪ್ರತಿಕ್ರಿಯೆ ಇದೆ. ಮತ್ತೆ ವಿದೇಶಿ ಬಂಡವಾಳದ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಕಳೆದ ವರ್ಷದ ಕೇಂದ್ರ ಸರ್ಕಾರದ ಡಾಟಾ ಪ್ರಕಾರವೇ ಇತ್ತೀಚೆಗೆ 'ಟೈಮ್ಸ್ ಆಫ್ ಇಂಡಿಯಾ' ದಲ್ಲಿ ಬಂದಿತ್ತು. ಒಟ್ಟು ಇಡೀ ರಾಷ್ಟ್ರದಲ್ಲಿ ಕಳೆದ ಒಂದು ವರ್ಷದಲ್ಲಿ 4 ಲಕ್ಷ ಕೋಟಿಯಷ್ಟು ಬಂಡವಾಳ ಹೂಡಿಕೆಯ ಪ್ರಸ್ತಾವನೆ ಬಂದಾಗ ಅದರಲ್ಲಿ ನಮ್ಮ ರಾಜ್ಯದ್ದು ಪ್ರಸ್ತಾವನೆ 1.60 ಸಾವಿರ ಕೋಟಿ ರೂಪಾಯಿಗಳು. ಅಂದರೆ ಪ್ರಸ್ತಾವನೆಯನ್ನು ಸ್ವೀಕಾರ ಮಾಡುವುದರಲ್ಲಿ ನಾವು ನಂಬರ್ 1 ನೇ ಸ್ಥಾನದಲ್ಲಿದ್ದೇವೆ. ಇದು ಹೆಮ್ಮೆಯ ಸಂಗತಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಅದಕ್ಕಾಗಿ ರಾಜ್ಯ ಸರ್ಕಾರ ಎಲ್ಲಾ ರೀತಿಯಿಂದ ಪ್ರಯತ್ನ ಮಾಡುವುದರ ಮೂಲಕ ಇನ್ನು ಹೆಚ್ಚಿನ ಬಂಡವಾಳ ತರಲಿಕ್ಕೆ ಮತ್ತು ಇನ್ನು ಹೆಚ್ಚಿನ ಉದ್ಯೋಗಾವಕಾಶ ಕೊಡಲಿಕ್ಕೆ ಎಲ್ಲಾ ರೀತಿಯಿಂದ ರಾಜ್ಯ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಒಂದೇ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಬಯಸುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ರವರು ಹೇಳಿದ ಹಾಗೆ

"ತಿದ್ದುಪಡಿಯಾಗದ ಪ್ರತಿ/ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

S.E.Z., ನ Zonal Office ಕೊಚ್ಚಿನ್‌ನಲ್ಲಿದೆ. ಅದನ್ನು ಅವರು ಬಿಟ್ಟು ಕೊಡುವುದಿಲ್ಲ. ದಯಮಾಡಿ, ನಮ್ಮಲ್ಲಿ 34-35 S.E.Z., ನ Zones ಗಳಿವೆ. ಇಲ್ಲಿಯೇ ಒಂದನ್ನು ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಬೇರೆ ರಾಜ್ಯದವರು ನಮ್ಮ ರಾಜ್ಯಕ್ಕೆ ಕೊಡುವುದಕ್ಕೆ ಒಪ್ಪುವುದಿಲ್ಲ. ತಾವು ಇತ್ತೀಚೆಗೆ ಅಮೇಜಾನ್ ಕಂಪನಿಯೊಂದಿಗೆ ಇ-ಕಾಮರ್ಸ್ ಬಗ್ಗೆ ಒಂದು ಎಂ.ಓ.ಯು., ಮಾಡಿಕೊಂಡಿದ್ದೀರಿ. ಟ್ರೈನಿಂಗ್ ಮತ್ತು ಮತ್ತೊಂದರ ಬಗ್ಗೆ ಮಾಡಿಕೊಂಡಿದ್ದೀರಿ. ಇದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಮತ್ತು ಎಷ್ಟರಮಟ್ಟಿಗೆ ನಿರುದ್ಯೋಗಿಗಳಿಗೆ ಮತ್ತು ಗ್ರಾಮಾಂತರ ಪ್ರದೇಶದಿಂದ ರೈತರ ಮಕ್ಕಳು ಇಲ್ಲಿಗೆ ಬಂದು ಬೇರೆ ಬೇರೆ ಕಡೆ ಕೆಲಸ ಮಾಡುತ್ತಾರೆ, retail outlet ಗಳಲ್ಲಿ ಕೆಲಸ ಮಾಡುತ್ತಾರೆ, ಅವರುಗಳಿಗೆ ಎಷ್ಟು ಅನುಕೂಲವಾಗಿದೆ ಎನ್ನುವುದರ ಬಗ್ಗೆ ತಮಗೆ ಮಾಹಿತಿ ಕೊಡಲಿಕ್ಕೆ ಸಾಧ್ಯವೇ?

**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಸಭಾಪತಿಯವರೇ, ಈಗ S.E.Z., ನ ಕೊಚ್ಚೀನ್ ಆಫೀಸ್ ಅನ್ನು ಇಲ್ಲಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಕಾರವಾಗಿ ಇನ್ನು ಹೆಚ್ಚಿನ ಒತ್ತಡ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಮತ್ತೆ ಅಮೇಜಾನ್ ಕಂಪನಿ ಜೊತೆಗೆ ಎಂ.ಓ.ಯು., ಅನ್ನು ಇತ್ತೀಚೆಗೆ ಅಂದರೆ ಕಳೆದ ತಿಂಗಳು ಆಗಿದೆ. ಹಾಗಾಗಿ ಅದರ ರಿಸಲ್ಟ್ ಬರಬೇಕಾದರೆ 3-4 ತಿಂಗಳಾದರೂ ಬೇಕು. ಇದಕ್ಕೆ ಸರ್ಕಾರದ ಜವಾಬ್ದಾರಿ ಏನಿಲ್ಲ. ನಮ್ಮ ಕೈಗಾರಿಕೆ ಇಲಾಖೆ ಇದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದೆ. ಅಮೇಜಾನ್ ಕಂಪನಿಯವರಿಗೆ ನಾವು ಎಲ್ಲಾ ಸಹಕಾರವನ್ನು ಕೊಡುತ್ತೇವೆ. ಅವರು ತಮ್ಮದೇ ಆದಂತಹ ಬೆಲೆಯೊಂದಿಗೆ ಸ್ಕಿಲ್ ಮತ್ತು ಟ್ರೈನಿಂಗ್ ಕೊಡುವಂತಹದ್ದಕ್ಕೆಲ್ಲಾ ಅವರು ಭಾಗಿಯಾಗುತ್ತಾರೆ. ಆ ನಿಟ್ಟನಲ್ಲಿ ಎಂ.ಓ.ಯು., ಆಗಿದೆ. ಮತ್ತೆ ಅದರ ರಿಸಲ್ಟ್ ಇನ್ನು 4-5 ತಿಂಗಳಲ್ಲಿ ಬರುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಕಡೆಗಳಲ್ಲಿ ಉಚ್ಚನ್ಯಾಯಾಲಯದ ಬೆಂಚ್‌ಗಳನ್ನು ಕೊಡುತ್ತಿದ್ದಾರೆ. ಈ ದಿಸೆಯಲ್ಲಿ Zonal Officea ಅನ್ನು ನಮ್ಮ ರಾಜ್ಯಕ್ಕೆ ತರುವುದರ ಬಗ್ಗೆ ಪ್ರಯತ್ನಿಸಬೇಕು.

**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಸಭಾಪತಿಯವರೇ, ಸರಿ, ಆ ಒಂದು ಪ್ರಯತ್ನವನ್ನು ನಾವು ಮಾಡುತ್ತೇವೆ.

•ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ:1943**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದಕುಮಾರ್ ಅರಳಿ(ಶ್ರೀ ವಿಜಯ ಸಿಂಗ್ ರವರ ಪರವಾಗಿ):** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ತೆಲಂಗಾಣ ಮತ್ತು ಮಹಾರಾಷ್ಟ್ರದ ಗಡಿಯಲ್ಲಿ ಬರತಕ್ಕಂತಹ ಬೀದರ್‌ನಲ್ಲಿ ಅನಧಿಕೃತ ಗಣಿಗಾರಿಕೆ ನಡೆದಿದೆ. ಈ ಹಿನ್ನೆಲೆಯಲ್ಲಿ ಕೆಲವು ದಿನ್ನಗಳ ಹಿಂದೆ ಗಡಿಯಲ್ಲಿ 16 ಕ್ವಿಂಟಾಲ್ ಜಿಲೆಟಿನ್ ಜಪ್ತಿಯಾಗಿತ್ತು. ಆದರೆ, ಈ ಬಗ್ಗೆ ಇಲ್ಲಿಯವರೆಗೆ ಯಾವುದೇ ಕ್ರಮವಾಗಿಲ್ಲ. ಏತಕ್ಕೆ ಕ್ರಮವಾಗಿಲ್ಲವೆಂದು ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ. ಅಕ್ರಮವಾಗಿ ನಡೆಯುತ್ತಿರುವ ಈ ಗಣಿಗಾರಿಕೆಗೆ ಕಡಿವಾಣ ಹಾಕಲು ತಾವು ಏನೇನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಮುರುಗೇಶ್ ಆರ್, ನಿರಾಣಿ:** ಮಾನ್ಯ ಸಭಾಪತಿಯವರೇ 16 ಕ್ವಿಂಟಲ್ ಜಿಲೆಟಿನ್ ಸಿಕ್ಕಿರುವುದು ನಿಜ. ಈಗಾಗಲೇ ಅದನ್ನು ವಶಪಡಿಸಿಕೊಳ್ಳಲಾಗಿದೆ, ಈ ಸಂಬಂಧ ಯಾರು ತಪ್ಪಿತಸ್ಥರಿದ್ದಾರೆ, ಅವರ ಮೇಲೆ ಎಫ್.ಐ.ಆರ್., ಹಾಕಲಾಗಿದೆ. ಎಫ್.ಐ.ಆರ್., ಸಂಖ್ಯೆ ಮತ್ತು ಅದರ ರಿಪೋರ್ಟ್ ಅನ್ನು ತಮಗೆ ಕೊಡಲಾಗಿದೆ. ತನಿಖೆ ನಡೆಯುತ್ತಿದೆ. ತನಿಖೆಯ ವರದಿಯನ್ನು ನೋಡಿಕೊಂಡು ಸಂಬಂಧಪಟ್ಟವರ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಸಹಿತ ಈ ರೀತಿ ಜಿಲೆಟಿನ್ ಅನ್ನು ಅಕ್ರಮವಾಗಿ ಸ್ಟೋರ್ ಮಾಡಿರುವುದಕ್ಕೆ ಮತ್ತು ಈ ರೀತಿಯ ಘಟನೆಗಳಾಗಬಾರದು ಎನ್ನುವುದಕ್ಕೂ ಸೂಚನೆಯನ್ನು ಕೊಟ್ಟಿದ್ದೇವೆ. ಅನಧಿಕೃತವಾಗಿ ಯಾರು ಇದನ್ನು ಸ್ಟೋರ್ ಮಾಡಿದ್ದಾರೆ. ಅದನ್ನು ಪೊಲೀಸ್ ಇಲಾಖೆಗೆ ಆಗಲಿ, ನಮ್ಮ ಇಲಾಖೆಗೆ ಆಗಲಿ ಅಥವಾ ಕಂದಾಯ ಇಲಾಖೆಗೆ ಆಗಲಿ ಒಪ್ಪಿಸಬೇಕೆಂದು ಸೂಚಿಸಲಾಗಿದ್ದು, ಸಾಕಷ್ಟು ಕಡೆಗಳಲ್ಲಿ ಸ್ವತಃ ತಾವೇ ಅದನ್ನು ತಂದು ಒಪ್ಪಿಸಿದ್ದಾರೆ. ಹೀಗಾಗಿ ಇಂತಹ ಘಟನೆಗಳು ಮುಂದೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆ, ಮತ್ತೆ, ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ಎಲ್ಲಾ ವಾಹನಗಳನ್ನು ಚೆಕ್ ಮಾಡುವಂತಹ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಮತ್ತೆ, ಆಂದ್ರಪ್ರದೇಶದಿಂದ, ತಮಿಳುನಾಡಿನಿಂದ ಮತ್ತು ಬೇರೆ ಬೇರೆ ಕಡೆಯಿಂದ ಸರಬರಾಜು ಮಾಡುತ್ತಿದ್ದರು. ಅವರ ಕಡೆಯ ಲಿಸ್ಟ್‌ಗಳನ್ನು ತೆಗೆದುಕೊಂಡು ಅವರ ಮೇಲೆಯು ಎಫ್.ಐ.ಆರ್., ಗಳನ್ನು ಮಾಡಿದ್ದೇವೆ. ಸಾಗಾಣಿಕೆ ಮಾಡುವ ಹಂತದಲ್ಲಿಯೂ ಎಫ್.ಐ.ಆರ್., ಆಗಿದೆ. ಈ ರೀತಿಯ ಘಟನೆಗಳು ಮುಂದೆ ಆಗದಂತೆ ನಾವು ಕ್ರಮ ಕೈಗೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರವಿಂದಕುಮಾರ್ ಅರಳಿ ;** ಮಾನ್ಯ ಸಭಾಪತಿಯವರೆ, 16 ಕ್ವಿಂಟಲ್ ಜಿಲೆಟಿನ್ ಏನು ಸಿಕ್ಕಿದೆ, ಅದನ್ನು ತರಿಸಿರುವ ಮಾಲೀಕರು ಯಾರು, ಅವರ ಮೇಲೆ ಕೇಸ್ ಮಾಡಬೇಕಲ್ಲವೇ. ಅದನ್ನು ಬಿಟ್ಟು, ಡ್ರೈವರ್ ಮೇಲೆ ಆಥವಾ ಅಲ್ಲಿ ಕೆಲಸ ಮಾಡುವವರ ಮೇಲೆ ಕೇಸ್ ಮಾಡಿದರೆ ಹೇಗೆ? ಆದ್ದರಿಂದ ಮಾಲೀಕರ ಮೇಲೆಯೂ ಸಹ ಕ್ರಮ ಕೈಗೊಳ್ಳಬೇಕು. ಮತ್ತೆ, ಅಕ್ರಮವಾಗಿ quarry –ಗಳು ನಡೆಯುತ್ತವೆ. ಅಲ್ಲಿ ರೈಡ್ ಆಗುತ್ತದೆ. ರೈಡ್ ಆದಾಗ ಬರೀ ಅಲ್ಲಿನ ಲೇಬರ್‌ಗಳ ಮೇಲೆ ಕೇಸ್ ಹಾಕುತ್ತಾರೆ. ಲೇಬರ್‌ಗಳು ಅಲ್ಲಿಗೆ ದುಡಿಯಲಿಕ್ಕೆಂದು ಬಂದಿರುತ್ತಾರೆ. ಹೀಗಾಗಿ ಅವರದ್ದೇನೂ ತಪ್ಪು ಇರುವುದಿಲ್ಲ. ಮಾಲೀಕರ ಮೇಲೆ ಏತಕ್ಕೆ ಕೇಸ್ ಹಾಕುವುದಿಲ್ಲ ಮತ್ತು ಏತಕ್ಕೆ ಕ್ರಮ ಕೈಗೊಳ್ಳುವುದಿಲ್ಲ? ನಿಮ್ಮ ಉದ್ದೇಶ ಏನು?

**ಶ್ರೀ ಮುರುಗೇಶ್ ಆರ್, ನಿರಾಣಿ:** ಮಾನ್ಯ ಸಭಾಪತಿಯವರೇ ಈ ಸಂಬಂಧ ಎಫ್.ಐ.ಆರ್., ಮಾಡಲಾಗಿದೆ. ತನಿಖೆಯಾದಮೇಲೆ ಯಾರು ತಪ್ಪಿತಸ್ಥರು ಇರುತ್ತಾರೆ, ಅವರು ಮಾಲೀಕರಾಗಿರಬಹುದು, ಅದನ್ನು ಯಾರಿಗಾದರೂ ನಡೆಸಲಿಕ್ಕೆ ಕೊಟ್ಟಿರುತ್ತಾರೋ, ಲೀಸ್‌ಗೆ ಕೊಟ್ಟಿರುತ್ತಾರೋ ಇದೆಲ್ಲದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1969**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಚ್.ಎಂ.ರಮೇಶ ಗೌಡ:** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ 100ಕ್ಕೆ 90ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅದರಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಉತ್ತರದಲ್ಲಿ ಮೊದಲನೆಯ ಪ್ರಶ್ನೆಗೆ 98% ರಷ್ಟು ಎಂದು ನೀವು ಏನು ಹೇಳಿದ್ದೀರಿ. ಜನರು ಕೊಟ್ಟಿರುವಂತಹ 98%ನಲ್ಲಿ ಸರ್ಕಾರದ performance 101% ರಷ್ಟಿರಬೇಕು. ನಮಗೆಲ್ಲಾ ಗೊತ್ತಿದೆ. ಆದರೆ, ನಾವು ಇಲ್ಲಿ ಮಾಡಿರುವಂತಹದ್ದು, ಸಂಸ್ಕರಣೆ ಕೇವಲ ಶೇಕಡಾ 53ರಷ್ಟು ಎಂದು ತಾವೇ ಹೇಳುತ್ತೀರಿ. ಕೇವಲ 53% ಮಾತ್ರ. ನಮಗೆ ಕೊಟ್ಟಿರುವಂತಹದ್ದು 98% ಇದ್ದರೆ ನೀವು ಮಾಡುತ್ತಿರುವಂತಹದ್ದು 101% ತ್ಯಾಜ್ಯ ಮತ್ತು ಸಂಸ್ಕರಣೆಯಲ್ಲಿ ಮುಖ್ಯವಾಗಿ ಇವತ್ತು ಬೆಳಗ್ಗೆ ಎದ್ದರೆ ಬೆಂಗಳೂರು ನಗರ ಇರಬಹುದು ಅಥವಾ ಇಡೀ ರಾಜ್ಯದಲ್ಲಿರಬಹುದು, ಪಾಲಿಕೆಗಳಲ್ಲಿರಬಹುದು ಅಥವಾ ಸ್ಥಳೀಯ ಸಂಸ್ಥೆಗಳಲ್ಲಿರಬಹುದು ಅಥವಾ ಪ್ರತಿಯೊಂದಕ್ಕೂ ಸಹಿತ ಇದು ಬಹಳ ಅತ್ಯವಶ್ಯಕವಾಗಿದೆ. ಅಂತಹದ್ದರಲ್ಲಿ ತಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅದೇ ರೀತಿ ಕೇಂದ್ರ ಸರ್ಕಾರದಿಂದ ಇದಕ್ಕೆ 90%ನಷ್ಟು ಹಣವನ್ನು ಕೊಡುತ್ತಾರೆ. ನಮಗೆ ಎಷ್ಟು ಹಣ ಈಗಾಗಲೇ ಕೇಂದ್ರದಿಂದ ಬಂದಿದೆ?

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವಂತಹ ಪ್ರಶ್ನೆ ಏನೆಂದರೆ, ರಾಜ್ಯದ ಯಾವುದೇ ಸ್ಥಳೀಯ ಸಂಸ್ಥೆಗಳಲ್ಲೂ ತ್ಯಾಜ್ಯ ಸಂಸ್ಕರಣೆಯ ನಿಯಮ ಪಾಲನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎನ್ನುವ ಪ್ರಶ್ನೆ ಇದೆ.

**ಸಭಾಪತಿಯವರು:** ನೀವು ಪ್ರಶ್ನೆ ಹೇಳುತ್ತಿದ್ದೀರಿ. ನೀವು ಉತ್ತರ ಕೊಡಿ.

**ಶ್ರೀ ಎಚ್.ಎಂ.ರಮೇಶ ಗೌಡ:** ನಾನು ಪ್ರಶ್ನೆ ಕೇಳಿದ್ದೇನೆ. ನೀವು ಉತ್ತರ ಕೊಡಿ. ಉತ್ತರ ಬೇರೆ ಕೇಳಿಲ್ಲ ನಾನು. ಈಗ ತಾವು ಏನು ಹೇಳಿದ್ದೀರಿ. 98% ಎಂದು ಹೇಳಿದ್ದೀರಿ. ಇಲ್ಲಿ 53% ಎಂದು ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಆಮೇಲೆ ಅಷ್ಟೇ ಅಲ್ಲ. ಬೆಂಗಳೂರು ನಗರದಲ್ಲಿ ಈಗಾಗಲೇ ಮನೆ ಮನೆಗೂ ಒಂದು ಬ್ಯಾಗ್ ಅನ್ನು ಕೊಡುತ್ತೇನೆಂದು ಹೇಳಿದ್ದೀರಿ. ಇದುವರೆಗೂ ಯಾವುದಾದರೂ ಒಂದು ಮನೆಗೆ ಕೊಟ್ಟಿದ್ದೀರಾ? ಅದು ಕೇವಲ ದುಡ್ಡು ಒಡೆಯುವ ಸ್ಕೀಂ ಆಗಿದೆ. ನಿಮ್ಮ ಅಧಿಕಾರಿಗಳು ಯಾರು? ಸರ್ಕಾರ ಏನು ಮಾಡುತ್ತಿದೆ? ನೀವು ಕ್ರಮ ತೆಗೆದುಕೊಳ್ಳಬೇಕಲ್ಲವೇ? ಇವತ್ತಿನವರೆಗೂ ಯಾರ ಮೇಲಾದರೂ ಕ್ರಮ ತೆಗೆದುಕೊಂಡಿದ್ದೀರಾ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ನಾಗರಾಜ (ಎಂ.ಟಿ.ಬಿ.):** ಮಾನ್ಯ ಸಭಾಪತಿಯವರೇ, ಈಗ ಶೇಕಡಾವಾರು 98ರಷ್ಟು ತ್ಯಾಜ್ಯ ವಿಂಗಡಣೆ. ಮನೆ ಮನೆಗಳಿಂದ ತ್ಯಾಜ್ಯ ಸಂಗ್ರಹಣೆಯಲ್ಲಿ 98ರಷ್ಟು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಯಲ್ಲಿ ಶೇ.71ರಷ್ಟು ಹಾಗೂ ತ್ಯಾಜ್ಯ ಸಂಸ್ಕರಣೆಯಲ್ಲಿ ಶೇ.53ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ. ಅದರನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಬೇರ್ಪಡಿಸುವಿಕೆ ಮತ್ತು ತ್ಯಾಜ್ಯ ಸಂಸ್ಕರಣೆಯ ಪೂರ್ಣ ಅನುಷ್ಠಾನದಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಮುಂದು)

**(569) 23.03.2021 11.20 ಎಸ್‌ವಿ-ಜಿಆರ್**

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಉತ್ತರವನ್ನು ಏಕೆ ಓದುತ್ತಿರುವಿರಿ? ನಿಮ್ಮ ವಿವರಣೆಯೇನಾದರೂ ಇದ್ದಲ್ಲಿ ಅದನ್ನು ನೀಡಿ. ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರವನ್ನು ಒದಗಿಸಲಾಗಿದ್ದು, ಅವರು ನಿಮ್ಮ ಉತ್ತರವನ್ನು ಓದಿಕೊಂಡಿರುತ್ತಾರೆ. ಸರ್ಕಾರದ ಉತ್ತರ ಏನೆಂಬುದನ್ನು ನೀವು ಹೇಳಿ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಬ್ರೇಕ್ ಅಪ್ ಮಾಡಿ ವಿವರವಾಗಿ ಉತ್ತರವನ್ನು ನೀಡಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕೆಲವು ಬಾರಿ ತಾವೂ ಸಹ ಸರ್ಕಾರದ ಮೇಲೆ ಚಾಟಿ ಬೀಸಬೇಕಾಗುತ್ತದೆ. ಅದು ತಮ್ಮ ಜವಾಬ್ದಾರಿಯೂ ಆಗಿದೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಲೇ ಇಲ್ಲ. ಈಗ ನಾನು ಎತ್ತಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿರುವುದಿಲ್ಲ. ನನಗೇನೂ ಅವರು ವಿಶೇಷವಾಗಿ ಉತ್ತರ ಕೊಡಬೇಕಾಗಿಲ್ಲ. ರಾಜ್ಯದ ಜನ ನೋಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ರಮೇಶ್ ಗೌಡ ಅವರೇ, ಇದನ್ನು held over ಮಾಡುತ್ತೇನೆ. ಮಾನ್ಯ ಸಚಿವರೇ, ಸರಿಯಾದ ಉತ್ತರವನ್ನು ತೆಗೆದುಕೊಂಡು ಬಂದು ಮಧ್ಯಾಹ್ನದ ಮೇಲೆ ಹೇಳುವಿರೋ ಅಥವಾ ನಾಳೆ ಹೇಳುತ್ತೀರೋ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿಯೇನಾದರೂ ಬೇಕಿದ್ದಲ್ಲಿ ಮಧ್ಯಾಹ್ನದ ವೇಳೆಗೆ ತರಿಸಿಕೊಡುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಚಿವರೇ, ನಾನು ಹೆಚ್ಚಿಗೆಯೇನೂ ಕೇಳಲಿಲ್ಲ. ಘನತ್ಯಾಜ್ಯವನ್ನು ಬೇರ್ಪಡಿಸಿ ನಮ್ಮ ಮನೆಯಿಂದ, ನಿಮ್ಮ ಮನೆಯಿಂದ ಕೊಡುತ್ತೇವೆ. ನಾವು ಬೆಂಗಳೂರು ನಗರದಲ್ಲಿದ್ದೇವೆ...

**ಸಭಾಪತಿಯವರು:–** ಮಾನ್ಯ ರಮೇಶ್ ಗೌಡ ಅವರೇ, ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಸಾವಕಾಶವಾಗಿ ಉತ್ತರವನ್ನು ಹೇಳಿ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ಶೇ.45% ಹಸಿಕಸ... ಅದು ಬೆಂಗಳೂರು ಮಹಾನಗರ ಪಾಲಿಕೆಯಾಗಲೀ ಅಥವಾ ನಗರಸಭೆಯಾಗಲೀ ಶೇ.55% ಹಸಿಕಸ ಮತ್ತು ಶೇ.45% ಒಣಕಸವನ್ನು ತೆಗೆಯಲಿಕ್ಕೆ ವಿಂಗಡಣೆ ಮಾಡಿ ಸಾಗಾಣಿಕೆ ಮಾಡುತ್ತಿದ್ದೇವೆ. ಸಾಗಾಣಿಕೆ ಮಾಡಿ ಅದರಿಂದ ಗೊಬ್ಬರವನ್ನು ತಯಾರಿಸಲಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಚಿವರೇ, ಎಲ್ಲಿಗೆ ಸಾಗಿಸುತ್ತಿದ್ದಾರೆ? ಅದರಲ್ಲಿ ನಿಮ್ಮ performance ಶೇ.53 ಎಂದು ನೀವೇ ಹೇಳಿದ್ದೀರಿ. ಘನತ್ಯಾಜ್ಯದಲ್ಲಿ ಸರ್ಕಾರದ performance ಶೇ.101 ಇರಬೇಕು. ಶೇ.53ಕ್ಕೆ ಬಂದಿದೆ. ರಾಜ್ಯದ ಜನ ಏನಾಗುತ್ತಾರೆ? ನೀವು ಬೆಂಗಳೂರಿನಲ್ಲಿಯೇ ವಾಸ ಮಾಡುತ್ತಿದ್ದು, ಬೆಂಗಳೂರಿನ ಜನರ ಗತಿಯೇನು? ಜನ ಸಾಯುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ರಮೇಶ್ ಗೌಡ ಅವರೇ, ಕುಳಿತುಕೊಳ್ಳಿ. ನಿಮಗೆ ಮಾನ್ಯ ಸಚಿವರ ಉತ್ತರ ಸಮಾಧಾನಕರವಿಲ್ಲ ಎನ್ನುವುದಾದರೆ ಬರೆದುಕೊಡಿ. ಅರ್ಧಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸುತ್ತೇನೆ.

**(ಅರ್ಧಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಲಾಯಿತು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1923**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಸಣ್ಣ ಕೈಗಾರಿಕೆಯೆಂದು ಯಾವುದಕ್ಕೆ ಹೇಳಲಾಗುತ್ತದೆ ಅಥವಾ ಎಂ.ಎಸ್.ಎಂ.ಇ., categorisation ಹೇಗೆ ಮಾಡಲಾಗುತ್ತದೆ ಎಂದು ಕೇಳಿರುವುದಕ್ಕೆ ರೂ.10 ಕೋಟಿಗಿಂತಲೂ ಕಡಿಮೆ investment ಮಾಡಿದ್ದಲ್ಲಿ ಮತ್ತು ರೂ.50 ಕೋಟಿಗಳ turnover ಇದ್ದಂತಹ ಕೈಗಾರಿಕೆಗಳಿಗೆ ಎಂ.ಎಸ್.ಎಂ.ಇ., ಎಂದು ಕರೆಯಲಾಗುತ್ತದೆ ಎಂದು ಉತ್ತರಿಸಿದ್ದಾರೆ. ನನ್ನ specific question ಏನೆಂದರೆ ಸಾಮಾನ್ಯ ವರ್ಗದ ಕೈಗಾರಿಕೆಗಳಲ್ಲಿ ವಿಕಲಚೇತನ, ಎಸ್.ಸಿ./ಎಸ್.ಟಿ. ಅಥವಾ ಮಹಿಳೆಯರಿಗಾಗಲೀ ಬೇರೆ ಬೇರೆ ಸವಲತ್ತುಗಳನ್ನು ಏನು ನೀಡಲಾಗುತ್ತಿದೆ. ಸಾಮಾನ್ಯ ವರ್ಗದವರಿಗೆ ಆ ಪ್ರಮಾಣದ ಸವಲತ್ತನ್ನು ಕೊಡುತ್ತಿರುವುದು ಕಂಡು ಬರುತ್ತಿಲ್ಲ. Machineries ಗಳನ್ನು ಖರೀದಿಸಲು ಸಬ್ಸಿಡಿಯನ್ನು ನೀಡಲಾಗುತ್ತದೆಂದು ಹೇಳಿದೆ. ಮೊದಲಿಗೆ ಒಬ್ಬ ವ್ಯಕ್ತಿಯು ಬಹಳ ಕಷ್ಟ ಪಟ್ಟು ಆ ಕೈಗಾರಿಕೆಯಲ್ಲಿ ಹಣ ಹೂಡಿಕೆ ಮಾಡಿರುತ್ತಾನೆ. ಆ ಸಬ್ಸಿಡಿಯನ್ನು ಪಡೆದುಕೊಳ್ಳುವುದಕ್ಕೆ ಅವನಿಗೆ ಸಾಕಾಗುತ್ತದೆ. ಈ ಮಧ್ಯೆ ಅವನಿಗೆ turnover ಅಥವಾ ಬೇರೆ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಯಾವ ರೀತಿಯ ಪ್ರೋತ್ಸಾಹವನ್ನು ನೀಡಲಾಗುತ್ತದೆ ಅಥವಾ ಯಾವ ರೀತಿಯಿಂದ ಅವರಿಗೆ ಸಹಾಯ ಮಾಡುವಂತಹ ಯೋಜನೆಗಳು ಸರ್ಕಾರದ ಬಳಿ ಇವೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸವಿಸ್ತಾರವಾದ ಉತ್ತರವನ್ನು ಒದಗಿಸಿದ್ದೇನೆ. ವಿಶೇಷ ವರ್ಗದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ವಿಕಲ ಚೇತನರು, ಮಾಜಿ ಸೈನಿಕರು ಮತ್ತು ಮಹಿಳಾ ಉದ್ದಿಮೆದಾರರಿಗೆ ಕನಿಷ್ಠ ರೂ.10 ಲಕ್ಷದವರೆಗೆ ಮತ್ತು ಗರಿಷ್ಠ ರೂ.105 ಲಕ್ಷದವರೆಗೆ ಕೊಡಲಾಗುತ್ತಿದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ಶೇ.75ರ ರಿಯಾಯಿತಿ ದರದಲ್ಲಿ 2 ಎಕರೆಗೆ ಮೀರದಂತೆ ಕೈಗಾರಿಕಾ ನಿವೇಶನಗಳನ್ನು, ಶೇ.90 ರಿಯಾಯಿತಿ ದರದಲ್ಲಿ ಕೈಗಾರಿಕಾ ಶೆಡ್‌ಗಳನ್ನು ಕೊಡುತ್ತಿದ್ದೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಚಿವರೇ, ಸಬ್ಸಿಡಿಯನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಸಮಯವನ್ನು ಕೊಡಲಾಗುತ್ತದೆ? ಬೇಗನೆ ಕೊಡಲಾಗುತ್ತದೆಯೇ ಅಥವಾ ವಿಳಂಬವಾಗುತ್ತದೆಯೇ? ಏಕೆಂದರೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವನಿಗೆ ಸಾಕಾಗುತ್ತದೆ. ಅದರ ಬಗ್ಗೆ ತಮ್ಮ ಅನಿಸಿಕೆಯೇನು?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, 2020-21ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕಳೆದ ಮೂರು ನಾಲ್ಕು ವರ್ಷಗಳಿಂದ ಸಬ್ಸಿಡಿ ಬಾಕಿ ಇದ್ದಂತಹ ಕೃಷಿ ಆಧಾರಿತ ಸಂಸ್ಕರಣಾ ಘಟಕಗಳ ಸಲುವಾಗಿ ರೂ.147 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದ 525 ಘಟಕಗಳಿಗೆ ಉಪಯೋಗವಾಗುತ್ತದೆ. 2020-21ನೇ ಸಾಲಿನ ಆಯವ್ಯಯದಲ್ಲಿ ರೂ.75 ಕೋಟಿಗಳನ್ನು ಖಾದಿ ಮತ್ತು ಗ್ರಾಮೋದ್ಯೋಗದ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆ. ಇದರಿಂದ 17,500 ಖಾದಿ ಗ್ರಾಮೋದ್ಯೋಗ ಘಟಕಗಳಿಗೆ ಅನುಕೂಲವಾಗುತ್ತದೆ. ನಂತರ ಮಾನ್ಯ ಬೃಹತ್ ಕೈಗಾರಿಕಾ ಸಚಿವರು ಇಲ್ಲಿದ್ದಾರೆ. ವಿಶೇಷವಾಗಿ ಸಣ್ಣ ಕೈಗಾರಿಕೆಗಳಿಗೆ ರೂ.120 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಹೀಗಾಗಿ ಇಲ್ಲಿಯವರೆಗೆ pendency ಇದ್ದುದೆಲ್ಲಾ ಈ ಆಯವ್ಯಯ ಅನುಮೋದನೆಯಿಂದ clear ಆಗುವುದು ಎಂದು ನಾನು ಭಾವಿಸಿದ್ದೇನೆ. ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿನ ಮಾಹಿತಿಯೇನಾದರೂ ವಿಶೇಷವಾಗಿ ಬೇಕಾಗಿದ್ದಲ್ಲಿ ಒದಗಿಸಿಕೊಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ಆತ್ಮ ನಿರ್ಭರ್ ಭಾರತ್ ಅಭಿಯಾನದಡಿಯಲ್ಲಿ ಸುಮಾರು ರೂ.2 ಲಕ್ಷ ಕೋಟಿಯಷ್ಟು ಹಣ ಲಭ್ಯವಿದೆ. ಅದನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಸಂಖ್ಯೆ 1925 ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರದ್ದು. ಅವರು ಗೈರು ಹಾಜರಾಗಿದ್ದಾರೆ.

ಮುಂದಿನ ಪ್ರಶ್ನೆ ಸಂಖ್ಯೆ 2168 ಮಾನ್ಯ ಎಸ್.ರುದ್ರೇಗೌಡ ಅವರದ್ದು. ಮಾನ್ಯ ಸಚಿವರೇ, ಈ ಪ್ರಶ್ನೆಗೆ ತಾವು 15 ದಿನಗಳ ಕಾಲಾವಕಾಶವನ್ನು ಕೇಳಿದ್ದೀರಿ. 15 ದಿನಗಳು ಎಂದರೆ ಸದನ ಇರುವುದಿಲ್ಲ. ಹಾಗಾಗಿ ಮುಂದಿನ ವಾರದಲ್ಲಿ ಉತ್ತರವನ್ನು ಒದಗಿಸಿ.

"ತಿದ್ದುಪಡಿಯಾಗದ ಪ್ರತಿ/ಮಾಧ್ಯಮಗಳಿಗೆ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1931**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ.ನಮೋಶಿ (ಶ್ರೀ ಸುನಿಲ್ ವಲ್ಯಾಪುರ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ಕಲಬುರಗಿಯಂತಹ ನಗರದಲ್ಲಿ ಸುಮಾರು 8-9 ಲಕ್ಷ ಜನಸಂಖ್ಯೆಯಿದೆ ಎಂದು ನನ್ನ ಅಂದಾಜು. ಅಲ್ಲಿ ಅಧಿಕೃತವಾದಂತಹ ಫಲಕಗಳು, ಜಾಹೀರಾತುಗಳು ಮತ್ತು hoardings ಗಳು ಎಷ್ಟು ಇವೆ ಎಂದು ಕೇಳಿರುವ ಪ್ರಶ್ನೆಗೆ ಕೇವಲ 111 ಎಂದು ಉತ್ತರಿಸಿದ್ದಾರೆ. ನನಗೆ ಬಹಳ ದುಃಖ ಎನ್ನಿಸುತ್ತದೆ. ಇದರಲ್ಲಿ ಯಾವುದೇ ಪರಿಶ್ರಮ ವಹಿಸಿರುವುದಿಲ್ಲ. Illegal hoardings ಎಷ್ಟು ಎಂದು ಕೇಳಿರುವ ಪ್ರಶ್ನೆಗೆ ಕೇವಲ 27 ಎಂದು ಹೇಳಿರುತ್ತಾರೆ. ಇದನ್ನು ನೋಡಿದರೆ ಸರಿಯಾದ homework ಪ್ರಯತ್ನ ನಗರ ಪಾಲಿಕೆಯಿಂದ ಆಗುತ್ತಿಲ್ಲ. Illegal hoardings ಬೇಕಾದಷ್ಟು ಇರುತ್ತವೆ. ಅದಕ್ಕೆ ತೆರಿಗೆಯನ್ನು ಸಂಗ್ರಹ ಮಾಡುವುದಿಲ್ಲ. ಅವರ ವಿಳಾಸ, ದೂರವಾಣಿ ಸಂಖ್ಯೆ ಇಲ್ಲ ಎಂದು ಉತ್ತರಿಸುತ್ತಾರೆಂದರೆ ನಗರ ಪಾಲಿಕೆಯವರು ಮಲಗಿಕೊಂಡಿದ್ದಾರೆ ಎಂದು ನನಗನ್ನಿಸುತ್ತದೆ. ಈ ವಿಚಾರದಲ್ಲಿ ಅವರೇನೂ ಮಾಡುತ್ತಿಲ್ಲ.

ಹುಬ್ಬಳ್ಳಿ-ಧಾರವಾಡ ಅಥವಾ ಬೆಳಗಾವಿಗೆ ಸಮಾನವಾಗಿರುವ ಪಟ್ಟಣಗಳಲ್ಲಿ ಒಂದಾಗಿರುವ ಕಲಬುರಗಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ illegal hoardings ಗಳು ಇದ್ದು, ತೆರಿಗೆ ಸಂಗ್ರಹ ಆಗುತ್ತದೆ. ಕೋವಿಡ್ ಇರುವುದನ್ನು ನಾನೂ ಒಪ್ಪುತ್ತೇನೆ. 2018-19ರಲ್ಲಿ ರೂ.45 ಲಕ್ಷ, 2019-20ರಲ್ಲಿ ರೂ.29.54 ಲಕ್ಷ, 2020-21ರಲ್ಲಿ ರೂ.14.14 ಲಕ್ಷ ಎಂದು ತಿಳಿಸಿದ್ದಾರೆ. ಇದು ಏನು ತೋರಿಸುತ್ತದೆಯೆಂದರೆ ನಗರ ಪಾಲಿಕೆ ಮಲಗಿಕೊಂಡುಬಿಟ್ಟಿದೆ. ಅನಧಿಕೃತವಾಗಿ hoardings ಹಾಕುವವರ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ರೀತಿಯಲ್ಲಿ 111 ಜಾಹೀರಾತು ಫಲಕಗಳನ್ನು ನಗರದಲ್ಲಿ ಅಳವಡಿಸಲಾಗಿದೆ. ಅನಧಿಕೃತವಾಗಿ 27 ಫಲಕಗಳು ಇವೆಯೆಂದು ಹೇಳಿದೆ. ಅನಧಿಕೃತವಾದ ಫಲಕಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಕೇಳಿರುವುದಕ್ಕೆ ಅವುಗಳನ್ನು ತೆರವುಗೊಳಿಸಲಾಗಿದೆ ಮತ್ತು ಕ್ರಮ ಕೈಗೊಳ್ಳುವುದಕ್ಕೆ ಸರಿಯಾದ ಮಾಹಿತಿಯಿಲ್ಲ ಎನ್ನುವ ಉತ್ತರವನ್ನು ನೀಡಲಾಗಿದೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡರೆ ಹೆಚ್ಚು ತೆರಿಗೆ ಶುಲ್ಕವನ್ನು ವಿಧಿಸಬಹುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ನಗರಾಭಿವೃದ್ಧಿ ಸಚಿವರು ಏಪ್ರಿಲ್ ತಿಂಗಳಿನಲ್ಲಿ ಅಲ್ಲಿಗೆ ಭೇಟಿ ಕೊಡುತ್ತಿದ್ದಾರೆ. ಆ ಸಂದರ್ಭದಲ್ಲಿ ಮಹಾನಗರ ಪಾಲಿಕೆಗೆ ಭೇಟಿ ಕೊಟ್ಟು ಜಾಹೀರಾತು ಸೇರಿದಂತೆ ಸಮಗ್ರವಾದ ವಿಚಾರಗಳನ್ನು ಅಧ್ಯಯನ ಮಾಡಲಾಗುತ್ತದೆ. ಆ ಸಮಯದಲ್ಲಿ ಈ ಸಮಸ್ಯೆಗೂ ಪರಿಹಾರವನ್ನು ಕಂಡು ಹಿಡಿಯಲಾಗುವುದು. ಯಾವ ಕಾರಣಕ್ಕಾಗಿಯೂ ಅನಧಿಕೃತ ಫಲಕಗಳನ್ನು ಹಾಕುವುದನ್ನು ಸಹಿಸಲಾಗುವುದಿಲ್ಲ. ಹಾಕಿರುವಂತಹ ಫಲಕಗಳಿಗೆ ಕಟ್ಟುನಿಟ್ಟಾಗಿ ಶುಲ್ಕವನ್ನು ವಸೂಲಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಎಂ.ನಾರಾಯಣಸ್ವಾಮಿ ಅವರದ್ದು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿ ತಮಗೆ ಒಂದು ಮಾತನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಬೇಡ. ತಾವು ಪ್ರಶ್ನೆಯನ್ನಷ್ಟೇ ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರತಿದಿನ ಪ್ರಶ್ನೆ ಕೇಳುತ್ತಾರೆ. ಅದರಲ್ಲಿ starred question ಬರುವುದು ಅಪರೂಪ. Starred question ಆದರೂ ಎಷ್ಟೊಂದು ಜನ ಸದಸ್ಯರಿಗೆ ಇಂದು ಉತ್ತರವೇ ಬಂದಿರುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದೇ ಹೋಗುತ್ತದೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮ ಪ್ರಶ್ನೆಗೆ ಉತ್ತರ ಬಂದಿದೆಯಲ್ಲವೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿದೆ. ಆದರೆ ನಮ್ಮ ಇತರ ಮಾನ್ಯ ಸದಸ್ಯರಿಗೂ ಉತ್ತರ ಬರಬೇಕಲ್ಲವೆ?

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮದನ್ನಷ್ಟೇ ನೀವು ನೋಡಿಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯವನ್ನಷ್ಟೇ ನಾನು ನೋಡಿಕೊಳ್ಳಬೇಕೆಂದು ಹೇಳುತ್ತೀರಿ. ಮುಖ್ಯ ಸಚೇತಕನಾಗಿ ನಾನು ಎಲ್ಲರ ಹಿತವನ್ನೂ ಕಾಯಬೇಕಲ್ಲವೆ?

**ಸಭಾಪತಿಯವರು:-** ಹೌದು. ಬೇರೆಯವರ ವಿಷಯವನ್ನು ನಾವು ನೋಡಿಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(570) 23–03–2021 (11–30) ಕೆಜಿ–ಎಂಡಿ**

## ಪ್ರಶ್ನೆ ಸಂಖ್ಯೆ 1952
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮುಖ್ಯ ಪ್ರಶ್ನೆ ಮತ್ತು ಐದು ಉಪ ಪ್ರಶ್ನೆಗಳು ಇವೆ. ಎಲ್ಲವನ್ನು ಒಟ್ಟಿಗೆ ಕೇಳುತ್ತೇನೆ. ನಂತರ ಮಾನ್ಯ ಸಚಿವರು ಉತ್ತರ ಕೊಡಲಿ. ಮೊದಲನೇ ಪ್ರಶ್ನೆ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ಎಂಬುದಾಗಿ ಕೇಳಿದ್ದೆ. ಮಾನ್ಯ ಸಚಿವರು ಬೆಂಗಳೂರು ನಗರ ಪ್ರದೇಶದಲ್ಲಿ ಮಧ್ಯಮ ಕೈಗಾರಿಕೆಗಳು 1703 ಮತ್ತು ಬೃಹತ್ ಕೈಗಾರಿಕೆಗಳು 368, ಒಟ್ಟು 2071. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಧ್ಯಮ ಕೈಗಾರಿಕೆಗಳು 265 ಮತ್ತು ಬೃಹತ್ ಕೈಗಾರಿಕೆಗಳು 27, ಒಟ್ಟು 292 ಎಂದು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ನನ್ನ ಮುಖ್ಯವಾದ ಪ್ರಶ್ನೆ ಸದರಿ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಮೀಸಲಿಟ್ಟಿರುವ ಉದ್ಯೋಗಾವಕಾಶಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆ. ಮಾನ್ಯ ಸಚಿವರು ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 2071 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿದ್ದು, ಒಟ್ಟು 4,86,123 ಜನರಿಗೆ ಉದ್ಯೋಗ ನೀಡಿಕೆಯಾಗಿರುತ್ತದೆ. ಇದರಲ್ಲಿ 3,69,453 ಸ್ಥಳೀಯರು ಕಾರ್ಯನಿರ್ವಹಿಸುತ್ತಿದ್ದಾರೆಂದು ಉತ್ತರ ನೀಡಿದ್ದಾರೆ. ಬಾಕಿ ಇರುವ 1,17,000 ಕಾರ್ಮಿಕರು ಯಾರು, ಅವರು ಯಾವ ಹುದ್ದೆಯಲ್ಲಿದ್ದಾರೆ ಎಂಬುದನ್ನು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಮೂರನೇ ಪ್ರಶ್ನೆ ಕಾರ್ಖಾನೆವಾರು ಯಾವ ಯಾವ ಹುದ್ದೆಗಳಿವೆ, ಅವುಗಳಲ್ಲಿ ಸ್ಥಳೀಯರು ಯಾವ ಯಾವ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು 'ಕಾರ್ಖಾನೆಗಳಲ್ಲಿ ಎ.ಬಿ.ಸಿ ಮತ್ತು ಡಿ ವರ್ಗದ ಹುದ್ದೆಗಳಿರುತ್ತವೆ. ಕಂಪನಿಗಳು ತನ್ನ ಉದ್ದೇಶಿತ ಚಟುವಟಿಕೆಗೆ ಅಗತ್ಯವಿರುವ ತಂತ್ರಜ್ಞಾನ ಹಾಗೂ ವಿದ್ಯಾರ್ಹತೆಯನ್ನಾಧರಿಸಿ ನೇಮಕಾತಿಯನ್ನು ಮಾಡಿಕೊಳ್ಳುತ್ತಾರೆ. ಕೈಗಾರಿಕಾ ನೀತಿ 2020–25ರನ್ವಯ ರಿಯಾಯಿತಿ ಹಾಗೂ ಸೌಲಭ್ಯಗಳನ್ನು ಪಡೆಯುವ ಕೈಗಾರಿಕೆಗಳು, 'ಡಿ' ವರ್ಗದ ಹುದ್ದೆಗಳಲ್ಲಿ ಶೇಕಡಾ 100 ರಷ್ಟು ಸ್ಥಳೀಯರಿಗೆ ನೀಡಬೇಕಾಗಿದ್ದು, ಒಟ್ಟಾರೆಯಾಗಿ ಕನಿಷ್ಠ ಶೇಕಡಾ 70 ರಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಬೇಕಾಗಿದೆ' ಎಂದು ಉತ್ತರ ನೀಡಿದ್ದಾರೆ. ನಾವು ಇದನ್ನು practical ಆಗಿ ಯೋಚನೆ ಮಾಡೋಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ, ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಹಾಗಾಗಿ, ಅವರಿಗೆ ಹೇಳಬೇಕೆಂದಲ; ಇದನ್ನು ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇವೆ. ಉದಾಹರಣೆಗೆ ಕೋಲಾರ ಜಿಲ್ಲೆಯ ನಾರಸಾಪುರದ ಕೈಗಾರಿಕಾ ಪ್ರದೇಶ, ಬಿಡದಿಯ ಕೈಗಾರಿಕಾ ಪ್ರದೇಶಗಳಿದ್ದು, Toyota Company ಯನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ನಾರಸಾಪುರದಲ್ಲಿ ಬೇಕಾದಷ್ಟು ಕೈಗಾರಿಕೆಗಳಿವೆ. ರೈತರು ಅವರ ಜಮೀನುಗಳಲ್ಲಿ ತಲಾತಲಾಂತರದಿಂದ ಏನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರೋ, ಆ ಜಮೀನುಗಳನ್ನು KIADB (Karnataka Industrial Area Development Board) acquisition ಮಾಡಿಕೊಂಡ ಮೇಲೆ, ಅಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸಲು ಉದ್ಯಮಿಗಳಿಗೆ ಆಹ್ವಾನಕೊಟ್ಟು ಬೇರೆ ಬೇರೆಯವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಸ್ಥಳೀಯರಿಗೆ ಉದ್ಯೋಗ ಕೊಡಬೇಕು ಎನ್ನುವ ಷರತ್ತನ್ನು ಹಾಕಿದ್ದಾರೆ. ಆದರೆ, ರಾಜಾರೋಷವಾಗಿ ರಾಜರಂತೆ ಬಾಳುತ್ತಿದ್ದ ರೈತರು ಜಮೀನನ್ನು  ಕಳೆದುಕೊಂಡ ಮೇಲೆ, ಅದೇ ಕಾರ್ಖಾನೆಗಳಲ್ಲಿ ಕೂಲಿ ಕೆಲಸ ಮಾಡುವುದಕ್ಕೆ, toilet ಗಳನ್ನು ಸ್ವಚ್ಚ ಮಾಡುವುದಕ್ಕೆ. ಮಾಲಿಯಾಗಿ ಆ ಕಾರ್ಖಾನೆಯಲ್ಲಿರುವಂತಹ ಗಿಡಗಳಿಗೆ ನೀರು ಹಾಕುವುದಕ್ಕೆ ಇಂತಹ ಉದ್ಯೋಗಗಳಿಗೆ ಹೋಗುತ್ತಿದ್ದಾರೆ. ಜಮೀನುಗಳಿಗೆ ಮಾಲೀಕರಾಗಿದ್ದ ರೈತರು ಜೀವನೋಪಾಯಕ್ಕಾಗಿ ಆ ಮಟ್ಟಕ್ಕೆ ಇಳಿದಿದ್ದಾರೆ. ಆ ಕೈಗಾರಿಕೆಯಲ್ಲಿರುವ ಉನ್ನತ ಹುದ್ದೆಗಳು ಸ್ಥಳೀಯರಿಗೆ ಸಿಗುತ್ತಿಲ್ಲ. ರೈತರ ಮಕ್ಕಳು Engineering Course, Diploma Course ಮಾಡಿರುವಂತಹವರು ಇದ್ದಾರೆ. Technically qualified, ITI Course ಮಾಡಿರುವಂತಹವರು ಬೇಕಾದಷ್ಟು ಜನರು ಇದ್ದರೂ ಸಹ, ಉತ್ತಮವಾದಂತಹ ಹುದ್ದೆಗಳನ್ನು ನಮ್ಮ ಸ್ಥಳೀಯರಿಗೆ ನೀಡುತ್ತಿಲ್ಲ. ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿರುವಂತಹ ಮಾಲೀಕರು ಯಾವ್ಯಾವ ರಾಜ್ಯಗಳಿಂದ ಬಂದಿದ್ದಾರೆಯೋ, ಅವರ ರಾಜ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಕೂಲಿ ಕೆಲಸ ಮಾಡಲು ಸ್ಥಳೀಯರು ಬೇಕಾಗುತ್ತದೆ, ಆದರೆ, ಉನ್ನತ ಹುದ್ದೆಗಳನ್ನು ಅವರು ತಾವೇ ಅನುಭವಿಸಬೇಕೆಂದು ಬಯಸುತ್ತಾರೆ. ಯಾವ ಹುದ್ದೆಗೆ ವೇತನ ಹೆಚ್ಚಿಗೆ ಇದೆಯೋ ಅದರ benefit ಅವರ ಕಡೆಯವರಿಗೆ ಹೋಗುವಂತೆ ಮಾಡಿ ಕಡಿಮೆ ವೇತನ ಬರುವಂತಹ ಕೆಳಹಂತದ ಹುದ್ದೆಗಳನ್ನು ಸ್ಥಳೀಯರಿಗೆ ನೀಡುತ್ತಿದ್ದಾರೆ. ಏಕೆಂದರೆ, ರೈತರ ಗಂಡು ಮಕ್ಕಳಾಗಲಿ ಅಥವಾ ಹೆಣ್ಣು ಮಕ್ಕಳಾಗಲಿ, ಅವರು ಅಷ್ಟು ಸುಂದರವಾಗಿ ಕಾಣುವುದಿಲ್ಲ. ರೈತರ ಮಕ್ಕಳು Engineer or technical qualified ಇದ್ದರೂ ಸಹ Management ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ.

ಬೇರೆ ಬೇರೆಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಹ ನಿರ್ದೇಶನಗಳನ್ನು ನಾವು ನಮ್ಮ ಕಣ್ಣ ಮುಂದೆಯೇ ನೋಡಿದ್ದೇವೆ.

ಮಾನ್ಯ ಸಭಾಪತಿಯವರೇ, ಕನ್ನಡ ಪರ ಸಂಘಟನೆಗಳು ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕೊಡಬೇಕೆಂದು ಕೈಗಾರಿಕೆಗಳ ಮುಂದೆ ಹೋರಾಟವನ್ನು ಮಾಡಿವೆ. ಮಾನ್ಯ ಸಚಿವರು ಕೈಗಾರಿಕಾ ನೀತಿ 2020–25ರನ್ವಯ ರಿಯಾಯಿತಿ ಹಾಗೂ ಸೌಲಭ್ಯಗಳನ್ನು ಪಡೆಯುವ ಕೈಗಾರಿಕೆಗಳು 'ಡಿ' ವರ್ಗದ ಹುದ್ದೆಗಳಲ್ಲಿ ಶೇಕಡಾ 100 ಕ್ಕೆ 100 ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ಕೊಡಬೇಕೆಂದು ಹೇಳಿದ್ದಾರೆ. ಇದರಲ್ಲಿಯೂ ಸಹ ತಾರತಮ್ಯವಾಗಿದೆ. ಬಿಹಾರ್, ಯು.ಪಿ., ನೇಪಾಳದಿಂದ ಬಂದವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನಮಗೆ 100ಕ್ಕೆ 100ರಷ್ಟು 'ಡಿ' ವರ್ಗದ ಹುದ್ದೆಗಳಲ್ಲಿಯೂ ಕೆಲಸ ಸಿಕ್ಕಿಲ್ಲ. KIADB ಯಿಂದ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ರಾಜ್ಯ ಸರ್ಕಾರ ಜಮೀನುಗಳನ್ನು ಕಡಿಮೆ ಬೆಲೆಗೆ ಕೊಡುವುದರಿಂದ ಹಿಡಿದು ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಮತ್ತು infrastructure ಗಳನ್ನು ಕೊಟ್ಟರೂ ಸಹ ಇಂತಹ ತಾರತಮ್ಯಗಳನ್ನು ಮಾಡಿ ಎಲ್ಲಾ benefit ಗಳನ್ನು ತೆಗೆದುಕೊಂಡು ನಮಗೆ ಅನ್ಯಾಯ ಮಾಡುತ್ತಿರುವುದನ್ನು ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ತಾವೇ ಹೇಳಿ ಸ್ವಾಮಿ? ಮಾನ್ಯ ಸಚಿವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರಾಗಿದ್ದು, ಬಹಳ ಪ್ರಮಾಣಿಕರಾಗಿದ್ದಾರೆ. ಅಲ್ಲದೇ, ಈ ಹಿಂದೆ ಅವರು ಮುಖ್ಯಮಂತ್ರಿಗಳಾಗಿ ಈ ರಾಜ್ಯವನ್ನು ಮುನ್ನಡೆಸಿದ್ದಾರೆ. ಕನ್ನಡಿಗರಿಗೆ ಮತ್ತು ಸ್ಥಳೀಯರಿಗೆ ಆಗುತ್ತಿರುವಂತಹ ಅನ್ಯಾಯವನ್ನು ಸರಿಪಡಿಸಬೇಕು. ಈ ಕಾನೂನಿಗೆ ಅನುಗುಣವಾಗಿ ಯಾರು ನಡೆದುಕೊಳ್ಳುತ್ತಿಲ್ಲವೋ, ಅಂತಹವರ ಕೈಗಾರಿಕೆಗಳನ್ನು ಯಾವುದೇ ಮುಲಾಜಿಲ್ಲದೇ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರ ವಶಕ್ಕೆ ತೆಗೆದುಕೊಳ್ಳುವುದು ಬೇಡ. ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಿ ಎಂದು ಹೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು. ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಿ.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ನಾರಾಯಣಸ್ವಾಮಿಯವರು ಬಹಳ ಮುಖ್ಯವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಹೊಸದಾಗಿ ಕೈಗಾರಿಕಾ ನೀತಿಯನ್ನು ನಿರೂಪಣೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವಂತಹ ಸಂದರ್ಭದಲ್ಲಿ ಸ್ಥಳೀಯರಿಗೆ ಆದ್ಯತೆ ಕೊಡಬೇಕು ಎನ್ನುವಂತಹ ದೃಷ್ಟಿಕೋನದಿಂದಲೇ ಸ್ಥಳೀಯರಿಗೆ ಉದ್ಯೋಗ ಕೊಡಬೇಕು ಎನ್ನುವುದನ್ನು ಕೈಗಾರಿಕಾ ನೀತಿಯಲ್ಲಿ ನಾವು adopt ಮಾಡಿದ್ದೇವೆ. ಯಾರು land looser ಇದ್ದಾರೆ, ಅವರ ಕುಟುಂಬಕ್ಕೆ ಒಂದು ಉದ್ಯೋಗ ಕೊಡಬೇಕು ಎನ್ನುವುದನ್ನು ಸಹ ನಮ್ಮ ಕೈಗಾರಿಕಾ ನೀತಿಯಲ್ಲಿ ನಾವು adopt ಮಾಡಿಕೊಂಡಿದ್ದೇವೆ. ಅದೇ ರೀತಿ 'ಡಿ' ವರ್ಗದ ಹುದ್ದೆಗಳಲ್ಲಿ ಶೇಕಡಾ 100ಕ್ಕೆ 100ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ಕೊಡಬೇಕೆಂದಿದೆ. ಉಳಿದ ವರ್ಗಗಳಲ್ಲಿ 70% ಹುದ್ದೆಗಳನ್ನು ಕೊಡಬೇಕೆಂದು, overall 70% ಹುದ್ದೆಗಳನ್ನು ಸ್ಥಳೀಯರಿಗೆ ಕೊಡಬೇಕು ಎನ್ನುವುದು ಕೈಗಾರಿಕಾ ನೀತಿಯಲ್ಲಿ ಇದೆ. ನಂತರ ಇದನ್ನು ಯಾವ ರೀತಿ implement ಮಾಡುತ್ತೀರಿ ಎನ್ನುವಂತಹ ಪ್ರಶ್ನೆ ಬರುತ್ತದೆ. ಈಗ ಮಾನ್ಯ ಸದಸ್ಯರು ಹೇಳಿದಂತೆ, ಕೈಗಾರಿಕೋದ್ಯಮಿಗಳು ಸರ್ಕಾರದಿಂದ ಹಲವಾರು ಸೌಲಭ್ಯಗಳನ್ನು, incentive, tax free benefit ಮತ್ತು ಇತರೆ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ. ಹೀಗಾಗಿ, ಅವರು ಇದನ್ನು implement ಮಾಡಿದ್ದಾರೆಯೇ ಅಥವಾ ಸ್ಥಳೀಯರಿಗೆ ಉದ್ಯೋಗ ಕೊಟ್ಟಿದ್ದಾರೋ, ಇಲ್ಲವೋ ಎನ್ನುವಂತಹ ಪ್ರಶ್ನೆ ಬರುತ್ತದೆ. ಈ ನೀತಿಯನ್ನು ಅಕಸ್ಮಾತ್ ಯಾರಾದರೂ violate ಮಾಡಿದ್ದರೆ, ಅವರಿಗೆ ಕೊಡುವಂತಹ incentive ನಿಂದ ಹಿಡಿದು ಎಲ್ಲವನ್ನು ನಿಲ್ಲಿಸುತ್ತೇವೆ. ಅವರಿಗೆ ಯಾವುದೇ ಸೌಲಭ್ಯಗಳನ್ನು ಕೊಡುವಂತಹ ಪ್ರಶ್ನೆಯೇ ಇಲ್ಲ. ಆ ರೀತಿಯ ಷರತ್ತು ಇದೆ. ನಮ್ಮ deed ತೆಗೆದು ನೋಡಬಹುದು. Lease cum Sale Deed ಮತ್ತೊಂದು deed ಗಳನ್ನು register ಮಾಡಿಕೊಡುತ್ತೇವೆ, ಅವರಿಗೆ ಏನು land allotment ಕೊಡುತ್ತೇವೆ, ಆ ಸಂದರ್ಭದಲ್ಲಿ ನಮ್ಮ deed ನಲ್ಲಿಯೇ ಈ condition ಗಳನ್ನು ಹಾಕಿರುತ್ತೇವೆ. ಮೊನ್ನೆ ದಿವಸ ಉತ್ತರ ಪ್ರದೇಶದವರು ಒಬ್ಬರು ಬಂದು ತಕ್ಷಣವೇ ಸ್ಥಳೀಯರಿಗೆ ಇಷ್ಟೊಂದು ಉದ್ಯೋಗ ಕೊಡುವುದು doubt ಇದೆ, ಅದಕ್ಕೆ ಇದರಲ್ಲಿ ವಿನಾಯಿತಿ ಕೊಡಿ ಎಂದು ಮನವಿ ಮಾಡಿದರು. ಅಂದರೆ, ಆ condition ಇದ್ದಿದರಿಂದ ಅವರಿಗೆ ಹೆದರಿಕೆ ಇದೆ. ಇದನ್ನು impose ಮಾಡಿದರೆ ಅವರಿಗೆ ಸಿಗುವಂತಹ incentive ಸಿಗುವುದಿಲ್ಲ ಎನ್ನುವುದು ಅವರಿಗೆ ಗೊತ್ತಿದೆ. ಆ ಹಿನ್ನೆಲೆಯಲ್ಲಿ ಅದನ್ನು ಬಹಳ strict ಆಗಿ implement ಮಾಡುತ್ತಿದ್ದೇವೆ. ನಾನು ಉತ್ತರದಲ್ಲಿ ಎಲ್ಲ ವಿಷಯಗಳನ್ನು clear cut ಆಗಿ ಹೇಳಿದ್ದೇನೆ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಹೇಳಿದಂತೆ, ಎಲ್ಲಿಯಾದರೂ violate ಮಾಡಿದ್ದರೆ, ಅದು ನಮ್ಮ ಗಮನಕ್ಕೆ ಬಂದರೆ, definitely we will take strict action.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂತಹ ಕಂಪನಿಯ ವಿರುದ್ದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಸ್ಥಳೀಯರಿಗೆ ಆದ್ಯತೆ ಕೊಡಬೇಕು ಮತ್ತು ಯಾರು land looser ಇದ್ದಾರೆ ಅವರ ಪ್ರತಿಯೊಂದು ಕುಟುಂಬದವರಿಗೂ ಸಹ ಉದ್ಯೋಗದಲ್ಲಿ ಆದ್ಯತೆ ಕೊಡಬೇಕು. ಈಗ ಮಾನ್ಯ ಸದಸ್ಯರು ಕಸ ಸ್ವಚ್ಛ ಮಾಡುವುದಕ್ಕೆ, gardening ಮಾಡುವುದಕ್ಕೆ ಮಾತ್ರ ಸ್ಥಳೀಯರು ಬೇಕಾಗಿದ್ದಾರೆಂದು ಹೇಳಿದ್ದಾರೆ. ಆದರೆ, ಆ ಕುಟುಂಬದಲ್ಲಿ ಯಾರಾದರೂ Engineers ಇದ್ದು, technically know-how ವ್ಯಕ್ತಿಗಳಿದ್ದು, ಅವರಿಗೆ ಅರ್ಹತೆ ಇದ್ದರೂ ಸಹ ಅವರನ್ನು ಮುಖ್ಯವಾದ ಹುದ್ದೆಗಳಿಗೆ ತೆಗೆದುಕೊಂಡಿಲ್ಲವೆಂದು specific ದೂರುಗಳಿದ್ದರೆ, definitely I will take very serious action against that company. ಆ ರೀತಿ ಯಾವುದು ಆಗಿಲ್ಲ. ಆ ರೀತಿ ಯಾವುದಾದರೂ ಆಗಿದ್ದರೆ, ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ತೆಗೆದುಕೊಂಡು ಬರಲಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ಬಹಳ strict ಆಗಿ implement ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ರೀತಿಯ ಉತ್ತರ ಕೊಟ್ಟಿದ್ದರಿಂದ ನನಗೆ ಬಹಳಷ್ಟು ನೋವಾಗುತ್ತದೆ. ಮಾನ್ಯ ಸಚಿವರ ಉತ್ತರದಲ್ಲಿ ಸ್ಥಳೀಯರಿಗೆ ಎಷ್ಟು ಪ್ರಮಾಣದಲ್ಲಿ ಉದ್ಯೋಗ ಕೊಟ್ಟಿದೆ ಎಂದು ಹೇಳಿದ್ದಾರೆ. ಆದರೆ, ಯಾವ category ಯಲ್ಲಿ ಕೊಡಲಾಗಿದೆ ಎಂಬುದನ್ನು ಹೇಳಿಲ್ಲ. ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ನನ್ನ ಸೋದರ ಮಾವನ ಮಗ ಮಾಲೂರಿನಲ್ಲಿ Engineering ಮಾಡಿದ್ದಾನೆ. ನಾವು influence ಮಾಡಿದ್ದರೂ ಸಹ ಅವನನ್ನು ಆ ಕಂಪನಿಯಲ್ಲಿ ಕೆಲಸಕ್ಕೆ ತೆಗೆದುಕೊಂಡಿಲ್ಲ. ಇದು ಒಂದಲ್ಲ. ಇಂತಹ ಬೇಕಾದಷ್ಟು ಉದಾಹರಣೆಗಳು ಇವೆ. ನಾನು ಖುದ್ದಾಗಿ ಮಾಲೂರಿನಲ್ಲಿರುವಂತಹ Honda Two Wheelers Company ಗೆ Engineering ಮಾಡಿರುವಂತಹ ವಿದ್ಯಾರ್ಥಿ merit ಇದ್ದಾನೆ. ಹಾಗಾಗಿ ತೆಗೆದುಕೊಳ್ಳಿ ಎಂದರೂ ಸಹ ತೆಗೆದುಕೊಳ್ಳಲಿಲ್ಲ. ಮಾಲೂರಿನಲ್ಲಿ ಸರ್ಕಾರ ಕೊಟ್ಟಿರುವಂತಹ ಜಮೀನಿನಲ್ಲಿರುವ ಕೈಗಾರಿಕೆಯಿಂದ ಒಂದು Electrical Bus Company ಬರುತ್ತಿದೆ. ಮಾನ್ಯ ಸಚಿವರು 100ಕ್ಕೆ 100ರಷ್ಟು D-Group posts ಸ್ಥಳೀಯರಿಗೆ ಕೊಡಬೇಕು ಮತ್ತು ಎ, ಬಿ ಮತ್ತು ಸಿ ಹುದ್ದೆಗಳಲ್ಲಿ 70% ಕೊಡಬೇಕೆಂದು ಹೇಳಿದ್ದಾರೆ. Not even 30 percent ಸಹ ಕೊಟ್ಟಿಲ್ಲ. ಅವರು ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ನಾನು check ಮಾಡುವುದಕ್ಕೆ ಆಗುತ್ತದೆಯೇ? ಈ

ಇಲಾಖೆಗೆ ಎಲ್ಲಾ ರೀತಿಯ ಸವಲತ್ತುಗಳಿವೆ, ಅಧಿಕಾರ ಇದೆ. ಹಾಗಾಗಿ A, B, C and D-Group ನಲ್ಲಿ ಎಷ್ಟು ಉದ್ಯೋಗಗಳನ್ನು ಕೊಟ್ಟಿದ್ದೀರಿ ಎಂದು ಲೆಕ್ಕ ಕೊಡಿ ಎಂದರೆ, ಅವರು ಲೆಕ್ಕ ಕೊಡಬೇಕಾಗುತ್ತದೆ.

**(ಮುಂದು)**

**(571) 23-03-2021 (11-40)ಎಂವಿ-ಎಂಡಿ**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಅದನ್ನು ಮಾನ್ಯ ಸಚಿವರು ತಮ್ಮ ಇಲಾಖೆಯ ವತಿಯಿಂದ ಮಾಡಬೇಕು. ಈಗ ಟೊಯೋಟಾ ಕಂಪನಿಯಲ್ಲಿ ನೌಕರರು ವರ್ಷಾನುಗಟ್ಟಲೆಯಿಂದ ಮುಷ್ಕರ ಮಾಡಿಕೊಂಡು ಕುಳಿತ್ತಿದ್ದಾರೆ. ಅಲ್ಲಿನ ಸ್ಥಳೀಯರಿಗೆ ಬೆದರಿಕೆಯನ್ನು ಹಾಕುತ್ತಿದ್ದಾರೆ. ಅವರು ನ್ಯಾಯ ಕೇಳಿದರೆ ಅವರನ್ನು ಕೆಲಸದಿಂದ ವಜಾ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅಲ್ಲೂ ಕೂಡ ಸ್ಥಳೀಯರಿಗೆ ಬಹಳಷ್ಟು ಅನ್ಯಾಯವಾಗಿದೆ. ದಯಮಾಡಿ technically qualified ಇರುವಂತಹ ರೈತರ ಮಕ್ಕಳು ಯಾರು ಇರುತ್ತಾರೋ ಅವರು ಬಿ.ಇ., ಮಾಡಿರಲಿ, ಡಿಪ್ಲೊಮಾ ಮಾಡಿರಲಿ ಅಥವಾ ಐ.ಟಿ.ಐ ಟ್ರೈನಿಂಗ್ ಮಾಡಿರಲಿ, ಅದಕ್ಕೆ ಅನುಗುಣವಾಗಿ ಏನು ಕೆಲಸ ಕೊಡಬೇಕಾಗಿದೆಯೋ ಅಂತಹ ಕೆಲಸವನ್ನು ಕೊಟ್ಟಿದ್ದಾರೋ ಇಲ್ಲವೋ ಎಂದು ಇಲಾಖೆಯ ವತಿಯಿಂದ ದಯಮಾಡಿ ಕೂಡಲೇ ಆ ಕಾರ್ಖಾನೆಗಳಿಗೆ ಭೇಟಿ ನೀಡುವುದರ ಮೂಲಕ ಅವರು ಎಷ್ಟು ಜನರಿಗೆ ಕೆಲಸ ನೀಡಿದ್ದಾರೆಂದು ಪರಿಶೀಲಿಸಲಿ. ಏಕೆಂದರೆ, ಇವತ್ತು ಕಂಪನಿಗಳು ನಮ್ಮ ರಾಜ್ಯದ ಸವಲತ್ತು ಮತ್ತು ಮ್ಯಾನ್‌ಪವರ್ ಅನ್ನು ಉಪಯೋಗಿಸಿಕೊಂಡು, ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ಲಾಭ ಮಾಡಿಕೊಳ್ಳುತ್ತಿವೆ. ಏನಾದರೂ ಕೆಳಹಂತದ ನೌಕರರು ನ್ಯಾಯ ಕೇಳುವುದಕ್ಕೆ ಹೋದರೆ, ಅವರನ್ನು ಕೆಲಸದಿಂದ ವಜಾ ಮಾಡುತ್ತಾರೆ. ಅವರಿಗೆ ಯಾವುದೇ ರೀತಿಯ ನೋಟಿಸ್ ಸಹ ಕೊಡುವುದಿಲ್ಲ. ಅವರಿಗೆ ಉದ್ಯೋಗದ ಭದ್ರತೆ ಕೂಡ ಇಲ್ಲ. ಇದು ಬಹಳಷ್ಟು ಗಂಭೀರವಾಗಿರುವಂತಹ ಪ್ರಶ್ನೆ ಇದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಚೆಕ್ ಮಾಡಿಸಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಬಹಳ ಭಾವನಾತ್ಮಕವಾಗಿ ಮಾತನಾಡಿದರು, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯರು ಹಾಗೆಯೇ ಇರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಭಾವನಾತ್ಮಕವಾಗಿಲ್ಲ, ಕನ್ನಡಿಗರು ಆ ಕಾರ್ಖಾನೆಯಲ್ಲಿ ಕನ್ನಡ ಮಾತನಾಡುವುದಕ್ಕೆ ಹೆದರುತ್ತಿದ್ದಾರೆ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಎಂ.ನಾರಾಯಣಸ್ವಾಮಿಯವರು ಒಟ್ಟಾಗಿ ಅಲ್ಲಿಗೆ ಹೋಗೋಣವೆಂದು ಹೇಳುತ್ತೇನೆ. ನಾನು ಕೇವಲ ಬೆಂಗಳೂರಿನಲ್ಲಿ ಎ.ಸಿ. ರೂಂನಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿಲ್ಲ. ನಾನು ಪ್ರತಿಯೊಂದು ಜಿಲ್ಲೆಗಳಿಗೂ ಹೋಗಿ ಅದನ್ನು review ಮಾಡುತ್ತಿದ್ದೇನೆ. ಜಿಲ್ಲೆಗಳಿಗೆ ಹೋಗಿ ಜಿಲ್ಲಾಧಿಕಾರಿಗಳಿಗೆ ಮತ್ತು ಅಲ್ಲಿರುವಂತಹ ಅಧಿಕಾರಿಗಳಿಗೆ ಸೂಚನೆಯನ್ನು ಸಹ ಕೊಡುತ್ತಿದ್ದೇನೆ.

**ಸಭಾಪತಿಯವರು:–** ತಾವು ಮೊನ್ನೆಯ ದಿವಸ ಬಿಜಾಪುರಕ್ಕೆ ಸಹ ಹೋಗಿದ್ದೀರಿ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡ್ಯ ಜಿಲ್ಲೆಗೂ ಸಹ ಭೇಟಿ ನೀಡಿದ್ದರು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮೊನ್ನೆ ಬಿಜಾಪುರ ಜಿಲ್ಲೆಗೆ ಹೋಗಿದ್ದೆ ಮತ್ತೆ ಮಂಡ್ಯ ಜಿಲ್ಲೆಗೂ ಸಹ ಭೇಟಿ ನೀಡಿದ್ದೇನೆ. ನಾನು ಎಲ್ಲಾ ಕಡೆಗೂ ಸಹ ಭೇಟಿ ನೀಡುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ಟೊಯೋಟಾ ಕಂಪನಿಗೂ ಸಹ ಭೇಟಿ ನೀಡಿ, ಒಂದು ಗಂಟೆಯ ಸಮಯ ಅಲ್ಲೆಲ್ಲಾ ಓಡಾಡಿ, ಅಲ್ಲಿ ಕೆಲಸ ಮಾಡುತ್ತಿರುವಂತಹ ನೌಕರರನ್ನು ಮಾತನಾಡಿಸಿದ್ದೇನೆ. ಅದರಲ್ಲಿ ಕೆಲವು ನೌಕರರು ಹೇಳಿದರು, ನಾನು ಕೊಪ್ಪಳದಿಂದ ಬಂದಿದ್ದೇನೆ, ಮತ್ತೆ ಕೆಲವರು ಇಲ್ಲೇ ರಾಮನಗರದಿಂದ ಬಂದು ಬಿಡದಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರು. ಬಹುತೇಕ ನಾನು ಎಲ್ಲೆಲ್ಲಿಗೆ ಭೇಟಿ ನೀಡುತ್ತಿದ್ದೇನೆ ಅಲ್ಲೆಲ್ಲಾ ಈ ರೀತಿ ಕಂಪ್ಲೇಂಟ್ ಬರುತ್ತಿದೆ. ನಾನು ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. ಅಂದರೆ, ಅಲ್ಲಿನ ಸ್ಥಳೀಯರಿಗೆ ಉದ್ಯೋಗ ಕೊಟ್ಟಿದ್ದಾರೋ ಇಲ್ಲವೋ random ಆಗಿ ಪರಿಶೀಲಿಸಿ ಎಂದು. ಅವರು ನಾವು ಹೇಳಿದ ರೀತಿಯಲ್ಲಿ ನಮಗೆ ಮಾಹಿತಿ ನೀಡುತ್ತಾರೆ. ಆದರೂ ಸಹ counter check ಮಾಡುವುದು ನಮ್ಮ ಕಡೆಯಿಂದಲೂ ಸಹ ಆಗುತ್ತಿದೆ. ಇಷ್ಟೆಲ್ಲಾ ಆದರೂ ಸಹಿತ, ಯಾರಾದರೂ ಈ ರೀತಿ ಮಾಡಿದರೆ, ನನಗೆ ಮತ್ತು ಇಲಾಖೆಯ ಗಮನಕ್ಕೆ ತಂದರೆ, we will take strict action.

**ಸಭಾಪತಿಯವರು:–** ಈ ಹಿಂದೆ ಇದ್ದುದಕ್ಕಿಂತ ಈಗ ಪ್ರಗತಿಯಾಗಿದೆ ಎಂದು ಇಷ್ಟು ಮಾತ್ರ ಹೇಳಬಹುದು.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸದಸ್ಯರಾದ ಎಂ.ಗೋಪಾಲಸ್ವಾಮಿಯವರ ದಿನಾಂಕ: 16.03.2021ರಂದು 13ನೇ ಪಟ್ಟಿಯಿಂದ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1184ಕ್ಕೆ ಪ್ರಶ್ನೆಯನ್ನು ಕೇಳುವುದು.

**ಪ್ರಶ್ನೆ ಸಂಖ್ಯೆ 1184**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಂ.ಗೋಪಾಲಸ್ವಾಮಿಯವರು ಗೈರು ಹಾಜರಿದ್ದರು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ತಡೆಹಿಡಿಯಲಾದ**
**ಪ್ರಶ್ನೆ ಸಂಖ್ಯೆ 1417**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒದಗಿಸಿರುವಂತಹ ಮಾಹಿತಿ ಪ್ರಕಾರ, ರಾಜ್ಯದಲ್ಲಿ 58 ನಗರಸಭೆ, 117 ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಯ 91 ಕಚೇರಿಗಳಲ್ಲಿ 9972 ಹುದ್ದೆಗಳು ಖಾಲಿ ಇರುವುದು ತಿಳಿದು ಬಂದಿರುತ್ತದೆ. ಇದಕ್ಕೆ ಮಾನ್ಯ ಸಚಿವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಕೆಪಿಎಸ್‌ಸಿಯಿಂದ ಕೇವಲ 530 ಮತ್ತು 103 ಹುದ್ದೆಗಳಿಗೆ ಮಾತ್ರ ನೇಮಕಾತಿ ಮಾಡಿದ್ದೇವೆಂದು ಹೇಳುತ್ತಾರೆ. ಇಷ್ಟು ಕಡಿಮೆ ಹುದ್ದೆಗಳು ಇದ್ದಾಗ ಪಟ್ಟಣ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಅಭಿವೃದ್ಧಿಯ ಕಾರ್ಯಗಳು ಹೇಗೆ ನಡೆಯುತ್ತವೆ? ಇದಕ್ಕೆ ಸಂಬಂಧಪಟ್ಟಂತೆ ಯಾವಾಗ ಕ್ರಮವನ್ನು ಕೈಗೊಳ್ಳುತ್ತಾರೆ.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ರಾಜ್ಯದ ಒಟ್ಟು 293 ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ವೃಂದದ ಒಟ್ಟು 32955 ಹುದ್ದೆಗಳು ಮಂಜೂರಾಗಿದ್ದು, ಅದರ ಎದುರಾಗಿ 11948 ಖಾಯಂ ನೌಕರರು ಹಾಗೂ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ ಮತ್ತು ನೇರಪಾವತಿ ಅಡಿಯಲ್ಲಿ 12105 ನೌಕರರು ಸೇರಿ ಒಟ್ಟು 24089 ನೌಕರರು ಇದ್ದು, ಹೆಚ್ಚುವರಿಯಾಗಿ 1106 ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 9972 ಹುದ್ದೆಗಳು ಖಾಲಿ ಇರುತ್ತವೆ. 'ಬಿ' ವೃಂದದ 4 ಹುದ್ದೆಗಳು ಹಾಗೂ 'ಸಿ' ವೃಂದದ 526 ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ.ಯನ್ನು ಕೋರಲಾಗಿದೆ. ವಿವಿಧ ವೃಂದದ 471 ಹುದೆಗಳು ಆಯ್ಕೆ ಅಂತಿಮಗೊಂಡಿದ್ದು, ನೇಮಕಾತಿ ನೀಡಲು ಆರ್ಥಿಕ ಇಲಾಖೆಯ ಸುತ್ತೋಲೆಯನ್ವಯ ತಾತ್ಕಲಿಕವಾಗಿ ತಡೆಹಿಡಿಯಲಾಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಈಗ ಸುಮಾರು ಒಂಬತ್ತು ಸಾವಿರ ಹುದ್ದೆಗಳು ಖಾಲಿ ಇದ್ದಾಗ, ಕೇವಲ ಒಂದು ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಉಳಿದ ಇನ್ನೂ ಸುಮಾರು ಎಂಟು ಸಾವಿರ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಮತ್ತು ಯಾವಾಗ ಭರ್ತಿ ಮಾಡುತ್ತಾರೆ. ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಈ ಉದ್ಯೋಗಗಳ ಕೊರತೆಯನ್ನು ಯಾವಾಗ ನೀಗಿಸುತ್ತಾರೆ.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಮಟ್ಟದಲ್ಲಿ ವಿಶೇಷ ನೇಮಕಾತಿ ಅಡಿಯಲ್ಲಿ 2137 ಪೌರಕಾರ್ಮಿಕರನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಿಸಿಕೊಳ್ಳಲಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂಬಡ್ತಿ ಕೋಟಾದಡಿ 'ಎ', 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಿಗೂ ಕೂಡ ಅರ್ಹ ಅಭ್ಯರ್ಥಿಗಳನ್ನು ಶೇಕಡಾ 90ರಷ್ಟು ಭಾಗ ಭರ್ತಿ ಮಾಡಲು ಈಗಾಗಲೇ ಆರ್ಥಿಕ ಇಲಾಖೆಯ ಅನುಮತಿಯನ್ನು ಕೋರಲಾಗಿದೆ. ಅನುಮತಿ ಬಂದ ಮೇಲೆ ಅವುಗಳನ್ನು ಸರ್ಕಾರ...

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಈಗ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನೇಮಕ ಮಾಡುವುದಕ್ಕೆ ಅನುಮತಿಯನ್ನು ನೀಡಿದ್ದಾರೆ.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಗ್ರೂಪ್ 'ಎ', 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಶೇಕಡಾ 90ರಷ್ಟು ಭಾಗ ಭರ್ತಿ ಮಾಡಲು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನೇಮಕ ಮಾಡುವುದಕ್ಕೆ ಅನುಮತಿಯನ್ನು ನೀಡಲಾಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಹೇಳಿದರು ಎಂದರೆ, ಈಗಾಗಲೇ ಆರ್ಥಿಕ ಇಲಾಖೆಯ ಅನುಮತಿಯನ್ನು ಕೋರಲಾಗಿದೆ ಎಂದು ಹೇಳಿದರು.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ವಿಶೇಷ ಅನುಮತಿ ನೀಡುವಂತೆ ಕೋರಲಾಗುವುದು.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಕಡೆ ಹೇಳುತ್ತಾರೆ. ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನೇಮಕಾತಿ ಮಾಡುವುದಕ್ಕೆ ಆದೇಶ ಹೊರಡಿಸಲಾಗಿದೆ ಎಂದು.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಶೇಕಡಾ 90ರಷ್ಟು ಭಾಗ ಮಾತ್ರ. ಉಳಿದ ಭಾಗವನ್ನು ಭರ್ತಿ ಮಾಡಲು ಮತ್ತೆ ಆರ್ಥಿಕ ಇಲಾಖೆಯ ಅನುಮತಿಯನ್ನು ಕೋರಿದ್ದೇವೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯ ಅನುಮತಿ ಬರುವವರೆಗೂ ಕಾಯುತ್ತಾರೆಯೋ ಅಥವಾ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು blanket order ಆಗಿ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನೇಮಕಾತಿ ಮಾಡುವುದಕ್ಕೆ ಅನುಮತಿಯನ್ನು ನೀಡಿದ್ದಾರೆ.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಆರ್ಥಿಕ ಇಲಾಖೆಯ ಅನುಮತಿ ಪಡೆದು ಆ ಹುದೆಗಳನ್ನು ಭರ್ತಿ ಮಾಡುತ್ತೇವೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯ ಸಹಮತಿ ಬರುವವರೆಗೂ ನೇಮಕಾತಿ ಮಾಡುವುದಿಲ್ಲ ಅಲ್ಲವೇ?

**ಸಭಾಪತಿಯವರು:-** ಮಾನ್ಯ ಕೆ.ಸಿ.ಕೊಂಡಯ್ಯನವರೆ ತಾವು ಕೇಳುತ್ತಿರುವುದೇ ಬೇರೆ, ಮಾನ್ಯ ಸಚಿವರು ಉತ್ತರ ಹೇಳುತ್ತಿರುವುದೇ ಬೇರೆಯಾಗಿದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ, ಅನುಮತಿ ಎಂದು ಏಕೆ ಹಾಕಿದ್ದಾರೆ?

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರೆ ಈಗ ನಿಮ್ಮನ್ನು ಕರೆದವರು ಯಾರು? ಅದಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ತಾವಾದರೂ ಸರ್ಕಾರವನ್ನು ಕೇಳಬೇಕು.

**ಶ್ರೀ ಎನ್.ನಾಗರಾಜು, ಎಂ.ಟಿ.ಬಿ:-** ಮಾನ್ಯ ಸಭಾಪತಿಯವರೇ, ಪಟ್ಟಣ ಪಂಚಾಯಿತಿಗಳು...

**ಸಭಾಪತಿಯವರು:-** ಮಾನ್ಯ ಕೆ.ಸಿ.ಕೊಂಡಯ್ಯನವರು ಪ್ರಶ್ನೆ ಕೇಳುವುದು ಬೇರೆ ಮತ್ತು ಇವರು ಉತ್ತರ ಕೊಡುವುದು ಬೇರೆಯಾಗಿದ್ದು ಮಾನ್ಯ ಸಚಿವರು ಗೊಂದಲ ಮಾಡಿಕೊಂಡಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ನೇಮಕಾತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು blanket order ಮಾಡಿಯೇ ಅಥವಾ ಆರ್ಥಿಕ ಇಲಾಖೆಯ ಸಹಮತಿ ಇಲ್ಲದಿದ್ದರೆ ನೇಮಕಾತಿ ಮಾಡುವುದಿಲ್ಲವೇ?

**ಸಭಾಪತಿಯವರು:-** ಇದು ಸಿಂಪಲ್ ಆಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಯಾವುದೇ ಗೊಂದಲವಿಲ್ಲ. ಈಗ ಕೆಲವು ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ಕೊಡಬೇಕಾಗುತ್ತದೆ. ಆದರೆ, ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕಾಗುತ್ತದೆ. ಮಾನ್ಯ ಸಚಿವರ ಸ್ಪಷ್ಟತೆ ಏನೆಂದರೆ, ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲಾಧಿಕಾರಿಗಳ ಮೂಲಕ ನೇಮಕ ಮಾಡಿಕೊಳ್ಳುವಂತಹ ಹುದ್ದೆಗಳಾಗಲಿ ಅಥವಾ ಇಲಾಖೆಯ ಮುಖಾಂತರ ನೇಮಕ ಮಾಡಿಕೊಳ್ಳುವಂತಹ ಹುದ್ದೆಗಳಾಗಲಿ ಅವುಗಳಿಗೆ ಶೀಘ್ರದಲ್ಲೇ ಆರ್ಥಿಕ ಇಲಾಖೆಯ ಅನುಮೋದನೆಯ ಪ್ರಸ್ತಾಪನೆಯನ್ನು ಪಡೆದು ನೇಮಕಾತಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಗಮನ ಕೊಡಬೇಕು. ಇಂತಹ ಉತ್ತರವನ್ನು ಕೌನ್ಸಿಲ್‌ನಲ್ಲಿ ಕೊಟ್ಟಿದ್ದು, ದಯಮಾಡಿ ಅದು ಹೊರಗಡೆ ಹೋಗುವುದೂ ಬೇಡ. Once you have given power to the Deputy Commissioner, what is the necessity of getting clearance from Finance Department? Double standard ಆಗಬಾರದು. Finance Department clearance ಕೊಟ್ಟ ಮೇಲೆ ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೇ ನೇಮಕಾತಿ ಮಾಡಿಕೊಳ್ಳುವುದಕ್ಕೆ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಮಾನ್ಯ ಕೆ.ಸಿ.ಕೊಂಡಯ್ಯನವರ ಪ್ರಶ್ನೆ ಸಿಂಪಲ್ ಆಗಿದೆ. ಅದು ಏನೆಂದರೆ, ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಮಾಡುವುದಕ್ಕೆ ಅನುಮತಿಯನ್ನು ನೀಡಿದ್ದೀರಿ, ಅದಕ್ಕೆ ಆರ್ಥಿಕ ಮಿತವ್ಯಯ ಇದೆಯೋ ಮತ್ತು ಅನುಮತಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಎಲ್ಲದಕ್ಕೂ ಸಹ ಆರ್ಥಿಕ ಮಿತವ್ಯಯ ಅನ್ವಯವಾಗುವುದಿಲ್ಲ. ಆದರೆ, ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯಬೇಕೆಂದು ಹೇಳಬೇಕು ಅಷ್ಟೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಅದನ್ನು ಎಷ್ಟು ಕಾಲಮಿತಿಯಲ್ಲಿ ಭರ್ತಿ ಮಾಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶೀಘ್ರದಲ್ಲೇ ಅದನ್ನು ಭರ್ತಿ ಮಾಡಲಾಗುವುದು.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1383ಕ್ಕೆ ಇಲಾಖೆಯವರು ಸಮಯವನ್ನು ಕೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 23ನೇ ಮಾರ್ಚ್, 2021, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 75 ಪ್ರಶ್ನೆಗಳ ಪೈಕಿ, 39 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಉತ್ತರಗಳನ್ನು ಲಗತ್ತಿಸಿದೆ)**

**(ಮುಂದು)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(572) 11.50 23.03.2021 ಎಲ್ಎಲ್/ಎಕೆ**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಸ್ಥಳೀಯ ಯೋಜನಾ ಪ್ರದೇಶಗಳಿಂದ ಹೊರಗಿರುವ ಭೂ ಪರಿವರ್ತಿತ ಜಮೀನುಗಳಿಗೆ ವಿನ್ಯಾಸ ಅನುಮೋದನೆ ನೀಡುವ ಕುರಿತು**

– – –

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಘೋಷಿಸಲಾಗಿರುವ ಸ್ಥಳೀಯ ಯೋಜನಾ ಪ್ರದೇಶಗಳಿಂದ ಹೊರಗಿರುವ ಭೂ ಪರಿವರ್ತಿತ ಜಮೀನುಗಳಿಗೆ ವಿನ್ಯಾಸ ಅನುಮೋದನೆಗಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ದಿನಾಂಕ:11.11.2014ರಲ್ಲಿ ಕೈಪಿಡಿಯನ್ನು ಹೊರಡಿಸಿದ್ದು, ಅದರಲ್ಲಿ 1 ಎಕರೆಗಿಂತ ಕಡಿಮೆ ವಿಸ್ತೀರ್ಣದ ಭೂ ಪರಿವರ್ತಿತ ಜಮೀನುಗಳಿಗೆ ವಿನ್ಯಾಸ ಅನುಮೋದನೆ ನೀಡಲು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರವನ್ನು ನೀಡಿರುತ್ತದೆ.

ಆದರೆ, ಸದರಿ ಅಧಿಕಾರಿಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನೆ ವಿಷಯದಲ್ಲಿ ತಾಂತ್ರಿಕ ಪರಿಣಿತಿ ಇರುವುದಿಲ್ಲ. 1 ಎಕರೆ ಮೀರಿದ ಭೂ ಪರಿವರ್ತಿತ ಜಮೀನುಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ತಾಂತ್ರಿಕ ನೆರವನ್ನು ಪಡೆಯಲಾಗುತ್ತಿದ್ದು, 1 ಎಕರೆಗಿಂತ ಕಡಿಮೆ ವಿಸ್ತೀರ್ಣದ ಜಾಗಗಳಿಗೆ ಇಲಾಖೆಯಿಂದ ತಾಂತ್ರಿಕ ನೆರವನ್ನು ಪಡೆಯದೇ ಇರುವುದಕ್ಕೆ ಕಾರಣಗಳೇನು; ಕೈಪಿಡಿಯ ಕಂಡಿಕೆ 1.3 ಮತ್ತು 1.4ರನ್ವಯ ತಾಂತ್ರಿಕವಾಗಿ ಸಕ್ಷಮವಲ್ಲದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಸಂಬದ್ಧ/ಯೋಜಿತವಲ್ಲದ ಅಂದರೆ, ಪಾರ್ಕ್/ಸಿ.ಎ. ಜಾಗ ನಿಗದಿಪಡಿಸಿದೆ. ಹೆದ್ದಾರಿಗಳ ವಿಸ್ತರಣೆಗೆ ಜಾಗ ನಿಗದಿಪಡಿಸಿದೆ, ಅಸಮರ್ಪಕ ರಸ್ತೆ ಜಾಲ, ಇತ್ಯಾದಿ ನ್ಯೂನತೆಗಳುಳ್ಳ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡುತ್ತಿರುವುದು ಸರಿಯೇ? ಈ ರೀತಿ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡುತ್ತಿರುವ ಯೋಜಿತವಲ್ಲದ/ಅಸಮರ್ಪಕ ವಿನ್ಯಾಸಗಳ ಕುರಿತು ಮೇಲಾಧಿಕಾರಿಗಳಿಂದ ಪರಿಶೀಲಿಸಲಾಗಿದೆಯೇ ಮತ್ತು ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು; ಕೈಪಿಡಿಯಲ್ಲಿ ಸಾಕಷ್ಟು ಲೋಪದೋಷಗಳಿದ್ದು, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಟ್ಟಡ ಉಪವಿಧಿಗಳನ್ನು ಅಧಿಸೂಚಿಸಿದ್ದು, ಸದರಿ ಕಟ್ಟಡ ಉಪವಿಧಿಗಳಲ್ಲಿ ಕೆ.ಟಿ.ಟಿ.ಪಿ. ಕಾಯ್ದೆ 1961ರ ಅವಕಾಶಗಳಿಗೆ ಹಾಗೂ ವಲಯ ನಿಯಮಾವಳಿಗಳಿಗೆ ವಿರುದ್ಧವಾಗಿರುವ ಅಂಶಗಳಿರುವುದನ್ನು ಸರಿಪಡಿಸುವುದಕ್ಕೆ ಏನು ಕ್ರಮಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೈಗೊಂಡಿದೆ ಮತ್ತು ಅಸಮರ್ಪಕ ಮತ್ತು ಯೋಜಿತವಲ್ಲದ ವಿನ್ಯಾಸ ನಕ್ಷೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಅನುಮೋದಿಸುತ್ತಿರುವ ಕ್ರಮವನ್ನು ಕೂಡಲೇ ಸ್ಥಗಿತಗೊಳಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಧಿಕಾರಿಗಳು ಸಮಗ್ರವಾಗಿ ಪರಿಶೀಲಿಸಿ ಯೋಜಿತವಲ್ಲದ ಹಾಗೂ ಅನಧಿಕೃತ ವಿನ್ಯಾಸಗಳು ಸ್ಥಳೀಯ ಯೋಜನಾ ಪ್ರದೇಶದ ಹೊರಗಿರುವ ಜಮೀನುಗಳಲ್ಲಿ ಬರುವುದನ್ನು ತಡೆಗಟ್ಟಲು ಇರಬಹುದಾದ ಪ್ರಸ್ತಾವಗಳ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಈ ವಿಷಯಕ್ಕೆ ಮತ್ತೊಂದು ಅಂಶವನ್ನು ಸೇರಿಸುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ತಾವು ಪ್ರಸ್ತಾಪಿಸಿದ ವಿಷಯ ಬಹಳ ದೊಡ್ಡದಿದೆ. ಹಾಗಾಗಿ, ಈಗ ಸಭಾನಾಯಕರು ತಮ್ಮ ವಿಷಯಕ್ಕೆ ಉತ್ತರ ನೀಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯನವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಆ) ವಿಷಯ:- ವಿಶೇಷ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಹಾಗೂ ನೌಕರರ ವೇತನಕ್ಕೆ ಶೀಘ್ರ ಅನುದಾನ ನೀಡುವ ಬಗ್ಗೆ**

- --

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ **“ವಿಶೇಷ ವಿ.ವಿ. ವಿಲವಿಲ” “ಸಂಗೀತ ವಿ.ವಿ. ಕೇಳುವವರಿಲ್ಲ”** ‘ಅನುದಾನದ ಕೊರತೆ ಕಾರಣ ಚಟುವಟಿಕೆಗಳು ಕುಂಠಿತ’ ಎಂಬ ಶೀರ್ಷಿಕೆಯ ವಿಷಯವನ್ನು ಪ್ರಸ್ತಾಪಿಸುತ್ತಾ, ರಾಜ್ಯ ಸರ್ಕಾರವು ಹೊಸ ವಿಶ್ವವಿದ್ಯಾನಿಲಯಗಳನ್ನು ಘೋಷಣೆ ಮಾಡುವಾಗ ಇರುವ ಆಸಕ್ತಿ ಈ ವಿಶ್ವವಿದ್ಯಾನಿಲಯಗಳಿಗೆ ಅನುದಾನವನ್ನು ನೀಡುವ ವಿಚಾರದಲ್ಲಿ ಇಲ್ಲದ ಕಾರಣ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳು ಕುಂಠಿತವಾಗಿವೆ.

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳ ಜೊತೆಗೆ, ವಿಭಿನ್ನ ಕ್ಷೇತ್ರಗಳ ಅಭಿವೃದ್ಧಿಗೆಂದು ರಾಜ್ಯ ಸರ್ಕಾರ ಆಗಿಂದಾಗ್ಗೆ ಘೋಷಣೆ ಮಾಡಿರುವ ವಿಶೇಷ ವಿಶ್ವವಿದ್ಯಾನಿಲಯಗಳು ಸಂಪೂರ್ಣ ಅವಗಣನೆಗೆ ಒಳಗಾಗಿವೆ.

ಈ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿರುವ ನೌಕರರಿಗೆ ಕಳೆದ 6-7 ತಿಂಗಳಿನಿಂದ ವೇತನ ನೀಡಲು ಅನುದಾನ ಇಲ್ಲದೇ ಇವರ ಸಂಬಳ ಸ್ಥಗಿತಗೊಂಡಿದೆ. ವಿಶೇಷವಾಗಿ ಕಳೆದ 11 ವರ್ಷಗಳ ಹಿಂದೆ ಪ್ರಾರಂಭವಾದ ಮೈಸೂರಿನ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಲ್ಲಿ ಕುಲಪತಿ ಮತ್ತು ವಿತ್ತಾಧಿಕಾರಿ ಮಾತ್ರವೇ ಕಾಯಂ ನೌಕರರಾಗಿದ್ದು, ಉಳಿದ 71 ನೌಕರರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ 6-7 ತಿಂಗಳುಗಳಿಂದ ವೇತನ ನೀಡದೇ ಇರುವುದರಿಂದ ಇವರ ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆ. ಇದಕ್ಕಾಗಿ ಅವರು ಸಾಕಷ್ಟು ಪ್ರತಿಭಟನೆಗಳನ್ನು ಸಹ ನಡೆಸಿರುತ್ತಾರೆ. ಅಂತೆಯೇ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ಜಾನಪದ ವಿಶ್ವವಿದ್ಯಾನಿಲಯ, ಸಂಸ್ಕೃತ ವಿಶ್ವವಿದ್ಯಾನಿಲಯ, ಲಲಿತಕಲೆ ವಿಶ್ವವಿದ್ಯಾನಿಲಯ, ಚನ್ನಮ್ಮ ವಿಶ್ವವಿದ್ಯಾನಿಲಯ ಈ ಎಲ್ಲಾ ವಿಶ್ವವಿದ್ಯಾನಿಲಯಗಳು ಅನುದಾನದ ಕೊರತೆಯಿಂದ ಸಿಬ್ಬಂದಿಗಳಿಗೆ ವೇತನ ಸಮಸ್ಯೆ ಉಂಟಾಗಿರುವುದರ ಜೊತೆಗೆ ಅನುದಾನ ಇಲ್ಲದೇ ಅಭಿವೃದ್ಧಿ ಸಹ ಕುಂಠಿತಗೊಂಡಿರುತ್ತದೆ.

ಆದುದರಿಂದ, ಸರ್ಕಾರ ಈ ಬಗ್ಗೆ ಗಮನಹರಿಸಿ ಈ ವಿಶೇಷ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಹಾಗೂ ನೌಕರರ ವೇತನಕ್ಕೆ ಶೀಘ್ರ ಅನುದಾನವನ್ನು ಬಿಡುಗಡೆ ಮಾಡಬೇಕು ಹಾಗೂ ಕಾಯಂ ನೌಕರರನ್ನು ನೇಮಕ ಮಾಡಿಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

**ಇ) ವಿಷಯ:- ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗೌಡಗೇರಾ ಗ್ರಾಮದ ಸುಸಜ್ಜಿತ ಶಾಲಾ ಕಟ್ಟಡದ ಬಗ್ಗೆ**

---

**ಶ್ರೀ ಯು.ಬಿ. ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗೌಡಗೇರಾ ಗ್ರಾಮದಲ್ಲಿ ಸುಸಜ್ಜಿತ ಶಾಲಾ ಕಟ್ಟಡವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ(ಕೆ.ಕೆ.ಆರ್.ಡಿ.ಬಿ.)ಯ ಒಂದು ಕೋಟಿ ರೂಪಾಯಿಗಳ ಅನುದಾನದಲ್ಲಿ ನಿರ್ಮಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಶಾಲಾ ಕಟ್ಟಡದ ವಿಶೇಷವೆಂದರೆ, ಇಲ್ಲಿ ಶಾಲೆ ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಅನುಮತಿಯನ್ನು ಪಡೆದುಕೊಂಡಿರದಿದ್ದರೂ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡಿದ್ದು, ಈ ಕಟ್ಟಡ ಪ್ರಯೋಜನಕ್ಕೆ ಬಾರದಂತಾಗಿರುವ ಬಗ್ಗೆ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಕಲ್ಯಾಣ ಕರ್ನಾಟಕ ಶೈಕ್ಷಣಿಕ ಸೇರಿದಂತೆ, ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಹಿಂದುಳಿದಿದ್ದು, ಇದರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ವಿಶೇಷ ಅನುದಾನವನ್ನು ಒದಗಿಸುತ್ತಾ ಬರುತ್ತಿದೆ. ಈ ಅನುದಾನ ಉಪಯೋಗವಾಗದೇ ದುರುಪಯೋಗವಾಗುತ್ತಿರುವುದಕ್ಕೆ ಈ ಶಾಲಾ ಕಟ್ಟಡ ಒಂದು ತಾಜಾ ಉದಾಹರಣೆಯಾಗಿದೆ.

ಮಕ್ಕಳಿರುವ ಶಾಲೆಗಳಲ್ಲಿ ಸುವ್ಯವಸ್ಥಿತ ಕಟ್ಟಡಗಳಿರುವುದಿಲ್ಲ. ಕಟ್ಟಡ ಇರುವ ಕಡೆ ಶಾಲೆಗೆ ಅನುಮತಿಯನ್ನೇ ಪಡೆದುಕೊಂಡಿಲ್ಲ. ಶಾಲೆಯು ನಡೆಯುತ್ತಿಲ್ಲ. ಇದೊಂದು ವಿಪರ್ಯಾಸವೇ ಸರಿ. ಶಹಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಈ ಗ್ರಾಮದಲ್ಲಿ 1 ರಿಂದ 8ನೇ ತರಗತಿಯವರೆಗೆ ಶಾಲೆ ಇದೆ. ಈ ಗ್ರಾಮದಲ್ಲಿ ಶಾಲೆ ಕಲಿಯುವ ಎಲ್ಲಾ ಮಕ್ಕಳು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಪಂಗಡದವರೇ ಆಗಿದ್ದಾರೆ. ಅಲ್ಲಿ ಶಾಲಾ ಕಟ್ಟಡವಿದೆ ಆದರೆ, ಶಾಲೆಗೆ ಹೋಗುವ ಭಾಗ್ಯ ಈ ಮಕ್ಕಳಿಗೆ ಇಲ್ಲ. ಅವರು ದೂರದ ಮಾಲಗತ್ತಿ, ಹೆಗ್ಗಣದೊಡ್ಡಿ ಪ್ರೌಢಶಾಲೆಗೆ 9ನೇ ತರಗತಿ ಕಲಿಯಲು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಈ ಶಾಲೆಗೆ ಅನುಮತಿ ಕೋರಿ ಪ್ರಸ್ತಾವನೆ ಹೋದರೂ ಕೇಂದ್ರ ಸರ್ಕಾರ ಮಂಜೂರಾತಿ ನೀಡಿಲ್ಲ. ಆದಕಾರಣ, ಕಟ್ಟಡ ಪೂರ್ಣವಾಗಿದ್ದರೂ ಅದನ್ನು ಹಸ್ತಾಂತರ ಮಾಡಿಕೊಂಡಿಲ್ಲವೆಂದು ರಾಜ್ಯ ಯೋಜನಾ ನಿರ್ದೇಶಕರು ಹೇಳುತ್ತಿದ್ದು, ಈ ಸಂಬಂಧ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಕೂಡಲೇ ಗಮನಹರಿಸಿ, ಈ ಕಟ್ಟಡವನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಶಾಲೆ ಪ್ರಾರಂಭಿಸಲು ಅವಶ್ಯವಿರುವ ಅನುಮತಿಯನ್ನು ಆದಷ್ಟು ಜಾಗ್ರತೆ ಪಡೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಈ) ವಿಷಯ:- ಮರಾಠ ಜನಾಂಗವನ್ನು ಕ್ಯಾಟಗರಿ 3(ಬಿ) ಯಿಂದ 2(ಎ)ಗೆ ಸೇರಿಸುವ ಬಗ್ಗೆ**

– – –

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯಾದ್ಯಂತ ಮರಾಠ ಸಮಾಜ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ:25.09.2012ರಂದು ಮರಾಠ ಸಮಾಜದ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾದ ಮಾನ್ಯ ಶ್ರೀ ಶಂಕರಪ್ಪನವರು ಖುದ್ದಾಗಿ ಪರಿಶೀಲಿಸಿ, ದಿನಾಂಕ:30.12.2012ಕ್ಕೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ 3(ಬಿ) ಯಿಂದ 2(ಎ)ಗೆ ಶಿಫಾರಸ್ಸು ಮಾಡಿರುತ್ತಾರೆ. ಆದರೆ, ರಾಜ್ಯ ಸರ್ಕಾರವು ಮರಾಠ ಸಮುದಾಯದವನ್ನು 2(ಎ)ಗೆ ಸೇರಿಸುವಲ್ಲಿ ವಿಳಂಬ ಮಾಡಿದ್ದಾರೆ. ಮರಾಠ ಸಮುದಾಯಕ್ಕೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಗೆ ಪಕ್ಕದ ಮಹಾರಾಷ್ಟ್ರ ಸರ್ಕಾರ ಸಮ್ಮತಿಯ ಮುದ್ರೆ ಒತ್ತಿರುತ್ತಾರೆ. ಇದರಿಂದಾಗಿ, ಮೀಸಲಾತಿ ಆಗ್ರಹಿಸಿ ಅಲ್ಲಿಯ ಮರಾಠ ಸಮಾಜವು ನಡೆಸಿದ ಪ್ರತಿಭಟನೆಗೆ ಫಲ ದೊರೆತಂತಾಗಿದೆ. ಆದರೆ, ನಮ್ಮಲ್ಲಿ ಮಾತ್ರ ಮರಾಠ ಸಮಾಜದ ಅಭಿವೃದ್ಧಿಗೋಸ್ಕರ ಹಾಗೂ ವಿವಿಧ ಬೇಡಿಕೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಎಷ್ಟು ಬಾರಿ ಮನವಿಯನ್ನು ನೀಡಿದ್ದರೂ ಸಹ ಇಲ್ಲಿಯವರೆಗೆ ಪ್ರಯೋಜನವಾಗಿರುವುದಿಲ್ಲ. ಸರ್ಕಾರಕ್ಕೆ ಮರಾಠರ ಧ್ವನಿ ಕೇಳಿಸಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಸ್ವೀಕರಿಸಿದ 24 ಗಂಟೆಯ ಒಳಗೆ ಮರಾಠ ಸಮುದಾಯದವರಿಗೆ ಮೀಸಲಾತಿ ಅವಕಾಶ ಕಲ್ಪಿಸಿಕೊಡುತ್ತೇನೆಂದು ಬೀದರ್‌ನ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದರು. ಆದರೆ, ಇಲ್ಲಿಯವರೆಗೆ ಮೀಸಲಾತಿ ಸೌಲಭ್ಯ ನೀಡಿರುವುದಿಲ್ಲ. ಇದರ ಹೊರತುಪಡಿಸಿ, ಕೇಂದ್ರದ ಈಗಿನ ಗೃಹ ಸಚಿವರು ಕೂಡ ಬಸವಕಲ್ಯಾಣದಲ್ಲಿ ನಡೆದ ಸಮಾರಂಭದಲ್ಲಿ ಹಿಂದುಳಿದ ಮರಾಠ ಸಮಾಜದ ಪ್ರಗತಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದೆಂದು ಕೂಡ ತಿಳಿಸಿದ್ದರು. ಇದರ ಹೊರತುಪಡಿಸಿ ಸನ್ಮಾನ್ಯ ಗೋವಿಂದ ಕಾರಜೋಳರವರು ಕೂಡ ಮರಾಠ ಸಮಾಜದ ಮೀಸಲಾತಿ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಮೀಸಲಾತಿ ಸೌಲಭ್ಯ ಕಲ್ಪಿಸಲು ಅನುವು ಮಾಡಿಕೊಡುವುದಾಗಿ ತಿಳಿಸಿದ್ದರು. ಆದರೆ, ಮರಾಠ ಸಮುದಾಯದವರಿಗೆ ಇಲ್ಲಿಯವರೆಗೆ ಮೀಸಲಾತಿ ಬಗ್ಗೆ ಯಾವುದೇ ರೀತಿಯಲ್ಲಿ ಸಹಾಯವಾಗಿರುವುದಿಲ್ಲ.

ಆದುದರಿಂದ, ಈಗಲಾದರೂ ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯದ ಮೇರೆಗೆ 3(ಬಿ)ಯಿಂದ 2(ಎ)ಗೆ ಸೇರಿಸಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಲು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತರಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಷಯವನ್ನು ನಾನು ಸುಮಾರು 7 ವರ್ಷಗಳಿಂದ ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಘೋಟ್ನೆಕರ್‌ರವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ. ತಮ್ಮ ಪ್ರಶ್ನೆಗೆ ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನನ್ನ ವಿಷಯಕ್ಕೆ ನಿಖರವಾದ ಉತ್ತರ ಸಿಗದೇ ಇದ್ದರೆ, ನಾನು ಸದನದ ಬಾವಿಯಲ್ಲಿ ಧರಣಿ ಮಾಡುತ್ತೇನೆ.

**ಸಭಾಪತಿಯವರು:–** ಆಯಿತು. ತಾವು ಹಾಗೆಯೇ ಮಾಡಿ.

**(ಮುಂದು)**

**(573) 23.03.2021 12.10 ವೈಎಲ್–ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮರಾಠ ಜನಾಂಗವನ್ನು 3ಬಿ ಯಿಂದ 2ಎ ಗೆ ಸೇರಿಸುವ ಬಗ್ಗೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸುತ್ತೇನೆ.

**ಶ್ರೀ ಶ್ರೀಕಾಂತ್ ಎಲ್.ಘೋಟ್ನೆಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿರುವಂಥ ಸಿ.ಡಿ. ಇದೆ.

**ಸಭಾಪತಿಯವರು:–** ಶೂನ್ಯ ವೇಳೆಯಲ್ಲಿ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕೇ ವಿನಃ ಮಾತನಾಡುವುದಕ್ಕೆ ಅವಕಾಶ ಇಲ್ಲ. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹೌದು. ಅದರಲ್ಲಿ ಎರಡು ಮಾತಿಲ್ಲ. ಆದರೆ, ಮಾನ್ಯ ಸದಸ್ಯರು ವಿಷಯ ಹೇಳುವಾಗ ನಾಲ್ಕು ಸಾಲು ಹೆಚ್ಚಿಗೆ ಮಾತನಾಡಿದರೆ ಏನಾಗುತ್ತದೆ.

**ಸಭಾಪತಿಯವರು:–** ಆ ರೀತಿ ಅವಕಾಶ ನೀಡಿದರೆ, ಎಲ್ಲರೂ ಮಾತನಾಡಲು ಅವಕಾಶ ಕೇಳುತ್ತಾರೆ. ಮಾನ್ಯ ಸಭಾನಾಯಕರೆ ಆದಷ್ಟು ಬೇಗ ಉತ್ತರವನ್ನು ನೀಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅದರ ಬಗ್ಗೆ ಸರಿಯಾಗಿ ಉತ್ತರ ನೀಡುವಂತೆ ಹೇಳಿ.

**ಶ್ರೀ ಶ್ರೀಕಾಂತ್ ಎಲ್.ಘೋಟ್ನೇಕರ್:-** ಮಾನ್ಯ ಸಭಾಪತಿಯವರೇ, 7 ವರ್ಷಗಳಿಂದ ಇದರ ಸಲುವಾಗಿ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿರುವಂಥ ಸಿ.ಡಿ. ಸಹ ನನ್ನ ಹತ್ತಿರ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾ:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಮಂಡಿಸುತ್ತೇನೆ.

**ಉ) ವಿಷಯ:- ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಗ್ರಾಮದಲ್ಲಿ ತ್ರಿವರ್ಣ ಧ್ವಜದ ಬಟ್ಟೆಯನ್ನು ನೇಯ್ಗೆ ಮಾಡುವವರಿಗೆ ಪ್ರೋತ್ಸಾಹ ಧನ ಮಂಜೂರಾತಿ ಕೋರಿರುವ ಬಗ್ಗೆ.**

****

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಗ್ರಾಮದಲ್ಲಿ "ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ" ಕಾರ್ಯಕ್ರಮದಡಿಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಪಾಲ್ಗೊಂಡ ಸಂದರ್ಭದಲ್ಲಿ ಸದರಿ ಗ್ರಾಮದ ಅನೇಕ ಸಮಸ್ಯೆಗಳನ್ನು ನಿವಾರಿಸುವಂತೆ ಸಾರ್ವಜನಿಕರು ಅಹವಾಲು ಸಲ್ಲಿಸಿದರು. ಅವುಗಳಲ್ಲಿ ಪ್ರಮುಖವಾಗಿ ನೂಲುವವರು, ನೇಕಾರರು ಮತ್ತು ಕಾರ್ಯಕರ್ತರ ಸಮಸ್ಯೆಗಳನ್ನು ಪರಿಹರಿಸುವುದು ಅತೀ ಅವಶ್ಯವಾಗಿರುತ್ತದೆ. ನಮ್ಮ ದೇಶ "ರಾಷ್ಟ್ರಧ್ವಜ"ದ ಬಟ್ಟೆಯನ್ನು ನೇಯ್ಗೆ ಮಾಡುವ ಕೇಂದ್ರವು ಸದರಿ ತುಳಸಿಗೇರಿಯಲ್ಲಿದ್ದು, ಇಡೀ ದೇಶದ ಜನರಿಗೆ ಕರ್ನಾಟಕದ ಹೆಮ್ಮೆಯ ವಿಷಯವೆಂದು ತಿಳಿಸುತ್ತೇನೆ. ನಮ್ಮೆಲ್ಲರ ದೇಶಭಕ್ತಿಯ ಪ್ರತೀಕವಾಗಿರುವ ಸದರಿ ಕೇಂದ್ರದಲ್ಲಿ ಸುಮಾರು 100ಕ್ಕೂ ಅಧಿಕ ಮಹಿಳೆಯರು ಕೆಲಸ ಮಾಡುತ್ತಿದ್ದು, ಬೆಳಗ್ಗೆಯಿಂದ ಸಂಜೆವರೆಗೂ ದುಡಿದರೆ ಕೇವಲ ರೂ.120 ಗಳ ಕೂಲಿ ಮಾತ್ರ ದೊರೆಯುತ್ತದೆ. ಸರ್ಕಾರದ ಯೋಜನೆಗಳಾದ ಪಿ.ಎಂ.ಜಿ.ಎಸ್.ವೈ. ಮತ್ತು ನರೇಗಾ ಯೋಜನೆಗಳಡಿ ದುಡಿದವರಿಗೆ ದಿನಕ್ಕೆ ರೂ.275 ಗಳ ಕೂಲಿ ಮಾತ್ರ ದೊರೆಯುತ್ತಿರುವುದು ನಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಆದರೆ, ಇಡೀ ರಾಜ್ಯವೇ ಹೆಮ್ಮೆ ಪಡುವಂತಹ ಮತ್ತು ದೇಶದ ಜನರ ಪ್ರಶಂಸೆಗೆ ಪಾತ್ರವಾದ ಕಾರ್ಯ ಮಾಡುತ್ತಿರುವ ರಾಷ್ಟ್ರಧ್ವಜದ ಬಟ್ಟೆಯನ್ನು ನೇಯ್ಗೆ ಮಾಡುವ ಕಾರ್ಯದಲ್ಲಿ ನಿರತರಾದವರಿಗೆ ಅನ್ಯಾಯವಾಗುತ್ತಿರುವುದನ್ನು ತಪ್ಪಿಸಿ, ಸಹಾನೂಭೂತಿಯಿಂದ ಸದರಿ ಕೆಲಸಗಾರರಿಗೂ ಕೂಡ ದಿನಕ್ಕೆ ಕನಿಷ್ಠ ರೂ.300 ಗಳ ಕೂಲಿಯನ್ನು ನೀಡಬೇಕೆನ್ನುವುದು ಅವರುಗಳ ಪ್ರಮುಖ ಬೇಡಿಕೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಲ್ಲದೇ, ಹಿಂದಿನ ವರ್ಷದಲ್ಲಿ ಕರೋನಾ ರೋಗದ ಪರಿಣಾಮವಾಗಿ ಸದರಿಯವರ ಕೆಲಸವೂ ಕೂಡ ಕುಂಠಿತವಾಗಿದ್ದು, ನಿತ್ಯದ ಜೀವನಕ್ಕೆ ಅತ್ಯಂತ ತೊಂದರೆಯನ್ನು ಅನುಭವಿಸಿರುತ್ತಾರೆ. ಆ ಸಂದರ್ಭದಲ್ಲಿ, ಸದರಿ ಕೆಲಸಗಾರರಿಗೆ ಯಾವುದೇ ರೀತಿಯ ಪರಿಹಾರಧನ ಅಥವಾ ಸಹಾಯಧನ ದೊರೆತಿರುವುದಿಲ್ಲ. ಜವಳಿ ಇಲಾಖೆಯಿಂದ ಕೈಮಗ್ಗ ನೇಕಾರರಿಗೆ ರೂ.2000 ಗಳ ಪರಿಹಾರವನ್ನು ನೀಡಿರುತ್ತಾರೆ. ರಾಷ್ಟ್ರಧ್ವಜದ ಬಟ್ಟೆಯನ್ನು ತಯಾರಿಸುವ ಕಾರ್ಯದಲ್ಲಿ ನಿರತರಾಗಿರುವ ಇವರುಗಳಿಗೂ ಸಹ ರೂ.2000 ಗಳ ಸಹಾಯಧನ/ಪ್ರೋತ್ಸಾಹಧನವನ್ನು ನೀಡಬೇಕೆನ್ನುವುದು ಇವರ ಬೇಡಿಕೆಗಳಲ್ಲೊಂದಾಗಿದೆ ಮತ್ತು ಸದರಿ ಕೇಂದ್ರದ ಕಿಟಕಿ-ಬಾಗಿಲುಗಳು ಹಾಳಾಗಿದ್ದು, ಕಟ್ಟಡವೂ ಶಿಥಿಲಗೊಂಡಿರುತ್ತದೆ. ಹಾಗೂ ಸದರಿ ಕಟ್ಟಡಕ್ಕೆ ಕಾಂಪೌಂಡ್ ಇಲ್ಲದಿರುವುದರಿಂದ ಸದರಿಯವರ ಜಾಗವು ಅತಿಕ್ರಮಣವಾಗುತ್ತಿದೆ ಎಂದು ತಿಳಿಸಿರುತ್ತಾರೆ. ಸದರಿ ಕೆಲಸಗಾರರಿಗೆ ಅನುಕೂಲವಾಗುವಂತೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ. ಇವುಗಳಲ್ಲದೇ, ಸದರಿ ಕೆಲಸಗಾರರಿಗೆ ಸರ್ಕಾರದ ವತಿಯಿಂದ ಸ್ವಂತ ಮನೆ ಅಥವಾ ನಿವೇಶನಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಗ್ರಾಮದಲ್ಲಿ ನಮ್ಮ ದೇಶದ ತ್ರಿವರ್ಣ ರಾಷ್ಟ್ರಧ್ವಜದ ಬಟ್ಟೆಯನ್ನು ನೇಯ್ಗೆ ಮಾಡುವ ಕಸುಬುದಾರರಿಗೆ ಹಾಗೂ ಆ ಗ್ರಾಮದ ಇತರೆ ಬಡಜನರಿಗೆ ಸರ್ಕಾರದ ವತಿಯಿಂದ ಮನೆಗಳನ್ನು ಮಂಜೂರು ಮಾಡುವಂತೆ ಮತ್ತು ಸದರಿ ಕೇಂದ್ರದ ಕಟ್ಟಡವನ್ನು ದುರಸ್ಥಿ ಮಾಡಲು ಅವಶ್ಯವಿರುವ ಅನುದಾನವನ್ನು ಒದಗಿಸುವಂತೆ ಮತ್ತು ಸದರಿ ಕೇಂದ್ರಕ್ಕೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸುವಂತೆ ಹಾಗೂ ಸದರಿ ರಾಷ್ಟ್ರಧ್ವಜದ ಬಟ್ಟೆಯನ್ನು ನೇಯುವ ಕಸುಬುದಾರರಿಗೂ ಸಹಾಯ/ಪ್ರೋತ್ಸಾಹಧನವನ್ನು ನೀಡುವಂತೆ ಮತ್ತು ಸದರಿಯವರ ದಿನಗೂಲಿಯನ್ನು ಕನಿಷ್ಠ ರೂ.300 ಗಳಿಗೆ ಹೆಚ್ಚಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಹಕ್ಕುಚ್ಯುತಿ ಪ್ರಸ್ತಾವ ನೀಡಿ, ಇವೊತ್ತಿಗೆ ಐದಾರು ದಿವಸಗಳಾಗಿವೆ. ನಾಳೆ ಅಥವಾ ನಾಡಿದು ಸದನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಕ್ತಾಯಗೊಳ್ಳುತ್ತದೆ. Privilege motion ತೆಗೆದುಕೊಳ್ಳುತ್ತಾರೆಯೇ ಅಥವಾ ಇಲ್ಲವೇ ಎನ್ನುವಂಥ ಉತ್ತರವನ್ನು ಮಾನ್ಯ ಸಭಾನಾಯಕರು ತಿಳಿಸಬೇಕು.

**ಸಭಾಪತಿಯವರು:-** ಕೊನೆಯಲ್ಲಿ ತಿಳಿಸುತ್ತೇನೆ.

**ಊ) ವಿಷಯ:- ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಬಸವ ಸಂಸ್ಕೃತಿ ಉತ್ಸವ ಆಚರಿಸುವ ಕುರಿತು.**

****

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಶ್ವಗುರು ಬಸವಣ್ಣನವರ ಜನ್ಮ ದಿನದ ಅಂಗವಾಗಿ ಅವರ ಹುಟ್ಟೂರಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ "ಬಸವ ಸಂಸ್ಕೃತಿ ಉತ್ಸವ" ಪ್ರಾರಂಭಿಸಬೇಕೆಂಬುದು ಆ ಭಾಗದ ಜನರ ಬೇಡಿಕೆಯಾಗಿದೆ. ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದವರು. ಅಂದಿನ ಕಾಲಕ್ಕೆ ಪ್ರಜಾಪ್ರಭುತ್ವ, ಕಾಯಕ ನಿಷ್ಠೆ, ಸ್ತ್ರೀ ಸಮಾನತೆಗೆ ಮಹತ್ವ ಕೊಡುವ ಮೂಲಕ ಜಾತೀಯತೆ ಅಳಿಸಲು ಪ್ರಧಾನ ಆಧ್ಯತೆಯನ್ನು ನೀಡಿ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದ ಅಪರೂಪದ ವಿಶ್ವಗುರು ಎಂದು ಬಸವಣ್ಣನವರನ್ನು ಕರೆಯಬಹುದು. ಅಣ್ಣ ಬಸವಣ್ಣ ಕೇವಲ ಸಾಮಾಜಿಕ ಕ್ರಾಂತಿಗೆ ಮಾತ್ರ ರಾಜಕೀಯವಾಗಿಯೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಾಂದಿ ಹಾಡಿದವರು. ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವ ವಚನ ಸಾಹಿತ್ಯದ ಮೂಲಕ ಜನರಲ್ಲಿನ ಅಂಧಶ್ರದ್ಧೆ ತೊಡೆದು ಹಾಕಲು ಪ್ರಯತ್ನಿಸಿದ್ದವರು. ಅನುಭವ ಮಂಟಪದ ಮೂಲಕ ಲಿಂಗ, ಜಾತಿ ಸಮಾನತೆಗೆ ಒತ್ತು ಕೊಟ್ಟವರು. ಸಮಾಜದಲ್ಲಿ ಮೇಲು ಕೀಳೆಂಬ ಭಾವನೆ ಇರಬಾರದು, ಎಲ್ಲರೂ ಸಮಾನರು ಎಂದು ಬೋಧಿಸಿ, ಆಚರಣೆ ಮಾಡಿದವರು. ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು 12ನೇ ಶತಮಾನದಲ್ಲಿಯೇ ಅನುಭವ ಮಂಟಪದ ಮೂಲಕ ಜಾರಿಗೆ ತಂದಿದ್ದು ವಿಶ್ವಗುರು ಬಸವಣ್ಣನವರು. ವಿಚಾರ, ವಾಕ್, ಆಚಾರ ಸ್ವಾತಂತ್ರ್ಯ, ಸಮುದಾಯಿಕ ಚಿಂತನೆ ಪ್ರಜಾಪ್ರಭುತ್ವದ ವಿಶೇಷ.

ನಮ್ಮ ರಾಜ್ಯದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಜನ್ಮ ದಿನದಂದು ಅವರ ಹೋರಾಟ, ತ್ಯಾಗಗಳನ್ನು ಸ್ಮರಿಸುವ ಸಲುವಾಗಿ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ "ಕಿತ್ತೂರು ಉತ್ಸವ" ವನ್ನು ಹಮ್ಮಿಕೊಳ್ಳುತ್ತಾ, ಆಚರಿಸುತ್ತಾ ಬಂದಿದ್ದೇವೆ. ಅದರಂತೆ ವಿಶ್ವಗುರು ಬಸವಣ್ಣನವರ ಜನ್ಮ ದಿನದಂದು ಸರ್ಕಾರಿ ಕಛೇರಿಗಳಲ್ಲಿ ಭಾವಚಿತ್ರಗಳನ್ನು ಅಳವಡಿಸುವ ಹಾಗೂ ಬಸವ ಜಯಂತಿಯನ್ನು ಆಚರಿಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿ ಅಂದು ಅವರ ಜನ್ಮ ಸ್ಥಳವಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ "ಬಸವ ಸಂಸ್ಕೃತಿ ಉತ್ಸವ" ಕಾರ್ಯಕ್ರಮವನ್ನು ತಮ್ಮ ಇಲಾಖೆಯಿಂದ ಪ್ರಾರಂಭಿಸಿ ಪ್ರತಿ ವರ್ಷ ಬಜೆಟ್‌ನಲ್ಲಿ ಅನುದಾನವನ್ನು ಮೀಸಲಿಡಬೇಕೆಂದು ಇಂದಿನ ಶೂನ್ಯ ವೇಳೆ ಪ್ರಸ್ತಾವದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

**ಋ) ವಿಷಯ:- ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಗಿರಿಜನರ ಜೀವನೋಪಾಯಕ್ಕೆ ಸಾಗುವಳಿ ಮಾಡಲು ಭೂಮಿಯ ಮಂಜೂರು ಮಾಡಿದ್ದು, ಕೇರಳ ರಾಜ್ಯದ ಮಧ್ಯವರ್ತಿಗಳಿಂದ ಗುತ್ತಿಗೆ ನೀಡುತ್ತಿರುವ ಬಗ್ಗೆ.**

****

**ಶ್ರೀ ಎಸ್.ನಾಗರಾಜ್(ಸಂದೇಶ ನಾಗರಾಜು)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗಿರಿಜನರು ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಾರೆ. ಇವರಿಗೆ ಸಮಾಜ ಕಲ್ಯಾಣ ಇಲಾಖೆ, ಅಂದರೆ ಗಿರಿಜನ ಕಲ್ಯಾಣ ಇಲಾಖೆಯ ವತಿಯಿಂದ ಕಂದಾಯ ಇಲಾಖೆಯ ಮೂಲಕ ಸ್ವಂತ ಸಾಗುವಳಿಗಾಗಿ ಭೂಮಿಯನ್ನು ಮಂಜೂರು ಮಾಡಲಾಗುತ್ತಿದೆ. ಗಿರಿಜನರು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ಮಾಡುತ್ತಿದ್ದರು. ಅವರಿಗೆ ಸಾಗುವಳಿಯ ಬಗ್ಗೆ ಸರಿಯಾದ ಜ್ಞಾನ ಇರುವುದಿಲ್ಲ. ತರಬೇತಿಯೂ ಇರುವುದಿಲ್ಲ. ಅದರ ಜೊತೆಗೆ ಗಿರಿಜನರಿಗೆ ಭೂಮಿಯನ್ನು ಉಳುಮೆ ಮಾಡಿ, ಬೆಳೆ ಬೆಳೆಯಲು ಅಗತ್ಯವಾದ ಪರಿಕರಗಳಾದ ಎತ್ತುಗಳು, ನೇಗಿಲು, ಬೀಜ, ಗೊಬ್ಬರ, ಕ್ರಿಮಿನಾಶಕ ಮೊದಲಾದವುಗಳನ್ನು ವ್ಯವಸ್ಥಿತವಾಗಿ ಸಮಯಕ್ಕೆ ಸರಿಯಾಗಿ ಉಚಿತವಾಗಿ ಅಥವಾ ರಿಯಾಯಿತಿ ಬೆಲೆಯಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಇರುವುದಿಲ್ಲ. ಇದರಿಂದಾಗಿ ಮಧ್ಯವರ್ತಿಗಳು ಹುಟ್ಟಿಕೊಂಡಿದ್ದು, ಅವರು ಗಿರಿಜನರ ಭೂಮಿಯನ್ನು ಕೇರಳದಿಂದ ಬರುವವರಿಗೆ ಶುಂಠಿ ಬೆಳೆಯಲು ಗುತ್ತಿಗೆ ಕೊಡಿಸುತ್ತಾರೆ. ಕೇರಳಿಗರಿಂದ ಎಕರೆಗೆ 75-80 ಸಾವಿರ ವಾರ್ಷಿಕ ಗುತ್ತಿಗೆ ಪಡೆಯುವ ಮಧ್ಯವರ್ತಿಗಳು ಗಿರಿಜನರಿಗೆ ಕೇವಲ 25-30 ಸಾವಿರ ರೂಪಾಯಿಗಳನ್ನು ನೀಡುತ್ತಾರೆ. ಕೇರಳಿಗರು ಜಮೀನು ಗುತ್ತಿಗೆ ತೆಗೆದುಕೊಳ್ಳುವಾಗ ಬೋರ್‌ವೆಲ್ ಹಾಕಿಸಿಕೊಡುತ್ತೇವೆ, ಜಮೀನು ಹಸನಾಗಿ ಮಾಡುತ್ತೇವೆ ಎಂದೆಲ್ಲಾ ಹೇಳುತ್ತಾರೆ. ಆದರೆ ಪಕ್ಕದ ಜಮೀನಿನಿಂದ ನೀರು ಪಡೆದುಕೊಂಡು, ಎರಡು ಮೂರು ವರ್ಷ

ಶುಂಠಿಯನ್ನು ಬೆಳೆದು, ಚೆನ್ನಾಗಿ ಲಾಭ ಮಾಡಿಕೊಂಡು, ಜಮೀನನ್ನು ಬರಡು ಮಾಡಿ ಹೋಗುತ್ತಿದ್ದಾರೆ. ಇಂತಹ ಅನೇಕ ಪ್ರಕರಣಗಳು ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ನಡೆಯುತ್ತಿವೆ. ಕೂಡಲೇ ಇದನ್ನು ತಡೆಗಟ್ಟಬೇಕು, ಗಿರಿಜನರು ಸ್ವಂತ ಸಾಗುವಳಿ ಮಾಡಿಕೊಂಡು ಹೋಗಲು ಯಾವ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಗಿರಿಜನ ಕಲ್ಯಾಣ ಇಲಾಖೆಯವರು ಕೃಷಿ ಇಲಾಖೆಯವರ ಜೊತೆ ಸೇರಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

**(ಮುಂದು)**

**(574) 23.03.2021/12.10/ಎಸ್‌ಕೆ-ಆರ್‌ಎನ್**

**ಎ) ವಿಷಯ:- ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಚೇರಿ ಮತ್ತು ಠಾಣೆಗಳಲ್ಲಿ ಸ್ಥಳೀಯವಾಗಿ ನೇಮಕ ಮಾಡಿಕೊಂಡಿರುವ ಕಸಗುಡಿಸುವವರನ್ನು ಗ್ರೂಪ್ 'ಡಿ' ನೌಕರರನ್ನಾಗಿ ಖಾಯಂ ಮಾಡುವ ಕುರಿತು**

- - - - -

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಚೇರಿ ಮತ್ತು ಠಾಣೆಗಳಲ್ಲಿ ಕಸಗುಡಿಸುವ ಮತ್ತು ಶುಚಿತ್ವ ಕಾಪಾಡುವ ಉದ್ದೇಶಕ್ಕಾಗಿ 761 ಜಾಡಮಾಲಿಗಳನ್ನು ಸ್ಥಳೀಯವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಕಳೆದ ದಶಕಗಳಿಂದ ಇವರು ಮಾಸಿಕ ರೂ.3,500 ಕನಿಷ್ಠ ವೇತನ ಪಡೆದು ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿರುತ್ತಾರೆ. ಈ ನೌಕರರ ವೇತನವನ್ನು ರೂ.7,500 ಕ್ಕೆ ಹೆಚ್ಚಿಸುವ ಮತ್ತು ಗ್ರೂಪ್ 'ಡಿ' ನೌಕರರೆಂದು ಖಾಯಂ ಪಡಿಸುವಂತೆ ಡಿಜಿಪಿಯವರು 2019 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಸ್ತುತ ಕಡತವು ಆರ್ಥಿಕ ಮತ್ತು ಗೃಹ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಆದರೆ ಈಗ ಠಾಣೆಗಳನ್ನು ಶುಚಿಗೊಳಿಸಲು ಖಾಸಗಿ ಕಂಪನಿಗಳಿಗೆ ಹೊರಗುತ್ತಿಗೆ ನೀಡಲು ಸರ್ಕಾರವು ನಿರ್ಧರಿಸುವ ಹಿನ್ನೆಲೆಯಲ್ಲಿ ಈ ಜಾಡಮಾಲಿಗಳನ್ನು ಮಾರ್ಚ್ 31 ರಿಂದ ಸೇವೆಯಿಂದ ತೆಗೆದು ಹಾಕಲು ಆದೇಶಿಸಲಾಗಿರುತ್ತದೆ. ಇದೇ ಕೆಲಸವನ್ನು ನಂಬಿಕೊಂಡು ಜೀವನವನ್ನು ನಡೆಸುತ್ತಿದ್ದ ಬಡ ಜಾಡಮಾಲಿಗಳು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೀದಿ ಪಾಲಾಗಿದ್ದು, ಜೀವನಕ್ಕಾಗಿ ಪರದಾಡುವಂತಾಗಿದೆ. ಈ ನೌಕರರಿಗೆ ಉದ್ಯೋಗ ಭದ್ರತೆ ಮತ್ತು ಕನಿಷ್ಟ ವೇತನವನ್ನು ನೀಡಲು ಇಲಾಖೆಯಿಂದ ಗ್ರೂಪ್ 'ಡಿ' ನೌಕರರಾಗಿ ನೇಮಕಾತಿ ಮಾಡಬೇಕಾಗಿ ಮತ್ತು ಅವರ ಸೇವೆಯನ್ನು ಮುಂದುವರಿಸಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದರಲ್ಲಿ ಜಾಡಮಾಲಿಗಳನ್ನು ಎನ್ನುವ ಪದವನ್ನು ಉಪಯೋಗಿಸವ ಆಗಿಲ್ಲ. ಪೌರ ಕಾರ್ಮಿಕರ ಎನ್ನುವ ಪದವನ್ನು ಉಪಯೋಗಿಸಿ. ಆ ರೀತಿ ಹೇಳುವ ಆಗಿಲ್ಲ. ರೆಕಾರ್ಡ್‌ಗೆ ಹೋಗುತ್ತದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ ತಾವೊಬ್ಬ ವಕೀಲರಿದ್ದೀರಿ. ತಾವೇ ತಿಳಿದುಕೊಳ್ಳಿರಿ. ಮಾನ್ಯ ಸಭಾನಾಯಕರೇ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು ಕೇಳಿದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಚೇರಿ ಮತ್ತು ಠಾಣೆಗಳಲ್ಲಿ ಸ್ಥಳೀಯವಾಗಿ ನೇಮಕ ಮಾಡಿಕೊಂಡಿರುವ ಕಸಗುಡಿಸುವವರನ್ನು ಗ್ರೂಪ್ 'ಡಿ' ನೌಕರರನ್ನಾಗಿ ಖಾಯಂ ಮಾಡುವ ಕುರಿತು ಶೂನ್ಯವೇಳೆಯಲ್ಲಿ ಕೇಳಿದ ವಿಷಯಕ್ಕೆ ಮಾನ್ಯ ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಏ) ವಿಷಯ:– ಗದಗ ನಗರದಲ್ಲಿರುವ ಪಶು ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಇನ್ನೂ ಮಾನ್ಯತೆ ಸಿಗದೇ ಇರುವ ಬಗ್ಗೆ.**

– – –

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಗದಗ ನಗರದಲ್ಲಿ ಪಶು ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭವಾಗಿ 4 ವರ್ಷ ಕಳೆದಿದೆ. ಭಾರತೀಯ ಪಶು ವೈದ್ಯಕೀಯ ಪರಿಷತ್ತಿನಿಂದ (ವಿ.ಸಿ.ಐ.) ಮಾನ್ಯತೆ ಪಡೆದಿರುವುದರಿಂದ ಪಶು ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ ಎನ್ನುವ ಭೀತಿ ಇಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಪಶು ವೈದ್ಯಕೀಯ ಮಹಾವಿದ್ಯಾಲಯವು ಪಶು ವೈದ್ಯಕೀಯ ಪರಿಷತ್ತಿನ ನಿಗಧಿಪಡಿಸಿದ ಕರಾರುಗಳನ್ನು ಪೂರೈಸದೇ ಇರುವುದರಿಂದ ಮಾನ್ಯತೆ ಕೊಟ್ಟಿರುವುದಿಲ್ಲ. ಈಗಾಗಲೇ ಭಾರತೀಯ ಪಶು ವೈದ್ಯಕೀಯ ಪರಿಷತ್ತು ಗದಗಿನ ಕಾಲೇಜಿಗೆ 2019–20 ಮತ್ತು 2020–21 ನೇ ಶೈಕ್ಷಣಿಕ ಸಾಲಿಗೆ ಮಾತ್ರ ಷರತ್ತು ಬದ್ಧ ಮಾನ್ಯತೆ ನೀಡಿರುವುದು. ಒಂದು ವೇಳೆ ಷರತ್ತುಗಳನ್ನು ಸೂಚಿಸಿದ ನ್ಯೂನತೆಗಳನ್ನು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಿಪಡಿಸದೆ ಇದ್ದರೆ 2021–22ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಇಲ್ಲದಂತಾಗುವುದು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಲಿರುವುದು. ಈ ಕುರಿತು ಪಶು ವೈದ್ಯಕೀಯ ಕಾಲೇಜಿನ ಡೀನ್ ಹಾಗೂ ವಿದ್ಯಾರ್ಥಿಗಳು ಸಂಬಂಧಪಟ್ಟವರ ಗಮನಕ್ಕೆ ತಂದರೂ ಸರ್ಕಾರದಿಂದ ಯಾವ ಸ್ಪಂದನೆ ದೊರಕಿರುವುದಿಲ್ಲ.

ಪಶು ವೈದ್ಯಕೀಯ ಕಾಲೇಜಿಗೆ ಮಾನ್ಯತೆ ಪಡೆಯಲು ಇನ್ನೂ ಹೆಚ್ಚಿನ ಪ್ರಯೋಗಾಲಯ, ಯಂತ್ರೋಪಕರಣಗಳು ಮತ್ತು ನೂತನ ಕಟ್ಟಡಗಳ ಅವಶ್ಯಕತೆ ಇರುವುದು. ಆದ್ದರಿಂದ ಇದು ಅತ್ಯಂತ ಗಂಭೀರವಾದ ಮತ್ತು ಪ್ರಮುಖವಾದ ವಿಷಯ ಇರುವುದರಿಂದ ಕೂಡಲೇ ಪಶು ಸಂಗೋಪನಾ ಇಲಾಖೆಯ ಸಚಿವರು ಅವಶ್ಯಕವಿರುವ ರೂ.115 ಕೋಟಿ ಹಣ ಬಿಡುಗಡೆ ಮಾಡಲು ಕ್ರಮವಹಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಪ್ರಭು ಎಸ್. ಚವ್ಹಾಣ್ (ಪಶು ಸಂಗೋಪನಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ. ಸಂಕನೂರ ಅವರು ಕೇಳಿದ ಗದಗ ನಗರದಲ್ಲಿರುವ ಪಶು ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಇನ್ನು ಮಾನ್ಯತೆ ಸಿಗದೇ ಇರುವ ಕುರಿತು ಶೂನ್ಯವೇಳೆಯಲ್ಲಿ ಕೇಳಿದ ವಿಷಯಕ್ಕೆ ಉತ್ತರವನ್ನು ನಾಳೆ ಒದಗಿಸುತ್ತೇನೆ.

**ಶ್ರೀ ಸಿ.ಸಿ. ಪಾಟೀಲ್ (ಸಣ್ಣ ಕೈಗಾರಿಕೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ):–** ಮಾನ್ಯ ಸಭಾಪತಿಯವರೇ, ಈ ಕುರಿತಂತೆ, ಈಗಾಗಲೇ ನಾನು ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಸಂಬಂಧಪಟ್ಟಂತೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇವತ್ತು ಕೂಡ ಮಾನ್ಯ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳಾದಂತಹ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ನಾವೆಲ್ಲರೂ ಸೇರಿ ಚರ್ಚೆಯನ್ನು ಮಾಡಿ, ಅವಶ್ಯಕತೆಯಿದ್ದಂತಹ ಅನುದಾನವನ್ನು ತಂದು, ಸರಿಪಡಿಸುತ್ತೇವೆ. ಮಾನ್ಯ ಸಂಕನೂರರವರಿಗೆ ಮನವಿ ಮಾಡುವುದೇನೆಂದರೆ, ಸರ್ಕಾರಕ್ಕೆ ಇಂತಹ ಇರಿಸು–ಮುರಿಸು ಆದಂತಹ ಪ್ರಶ್ನೆಯನ್ನು ಆಡಳಿತ ಪಕ್ಷದವರು ತರಬಾರದು.

**ಸಭಾಪತಿಯವರು:–** ಆಯಿತು. ಮಾನ್ಯ ಭಾರತಿ ಶೆಟ್ಟಿಯವರೇ ಹೇಳಿ.

**ಶ್ರೀ ಎಸ್.ವ್ಹಿ. ಸಂಕನೂರ :–** ಮಾನ್ಯ ಸಭಾಪತಿಯವರೇ, ನಾನು ಸಂಬಂಧಪಟ್ಟಂತ ಈ ಕ್ಷೇತ್ರದ ವ್ಯಕ್ತಿ. ಇದರಲ್ಲಿ ಇರಿಸು–ಮುರಿಸು ಪ್ರಶ್ನೆಯಿಲ್ಲ. ನಾನು ಸರ್ಕಾರಕ್ಕೆ ಹೇಳಿಕೊಳ್ಳಬೇಕು. ಇದರ ಬಗ್ಗೆ ಹಲವಾರು ಬಾರಿ ಚರ್ಚೆಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೇ ಆಯಿತು. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ. ಶ್ರೀಮತಿ ಭಾರತಿ ಶೆಟ್ಟಿಯವರೇ ತಾವು ಕೇಳಿ.

**ಐ) ವಿಷಯ:– ಜನ ಸಮುದಾಯದಿಂದ ಜನ ಸಮುದಾಯದ ಶಿಕ್ಷಣ ನೀತಿ ರೂಪಿಸುವ ಕುರಿತು**

**– – –**

**ಶ್ರೀಮತಿ ಭಾರತಿ ಶೆಟ್ಟಿ(ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾರ್ಚ್ 22 ರಂದು ವಿಶ್ವ ಜಲ ದಿನವನ್ನಾಗಿ ಆಚರಿಸುತ್ತೇವೆ. ಈ ಹಿನ್ನೆಲೆಯಲ್ಲಿ ವಿವಿಧ ಪತ್ರಿಕೆಗಳಲ್ಲಿ ಕೆರೆಗಳು ಕಲ್ಯಾಣಿಗಳನ್ನು ಜನ ಸಮುದಾಯವೇ ಪುನರುಜ್ಜೀವನ ಮಾಡುವ ವರದಿಯನ್ನು ನೋಡಿದ್ದೇವೆ. ಸಮಾಜದ ಜನ ಸಮುದಾಯದ ಈ ಸಾಧನೆಗಳು ಇತರ ವರ್ಗಗಳಿಗೂ ಪ್ರೇರಣಾಮಯವಾಗಿರಬೇಕು. ಈ ಪ್ರೇರಣಾಮಯ ಕಾರ್ಯಗಳ ಬಗ್ಗೆ ಸರ್ಕಾರ ಜನ ಸಮುದಾಯದ ನಡುವೆ ವ್ಯಾಪಕವಾಗಿ ತಿಳುವಳಿಕೆ ನೀಡುವ ಕಾರ್ಯ ಮತ್ತು ಸದರಿ ಸಮುದಾಯಗಳನ್ನು ಗುರುತಿಸುವ ಕಾರ್ಯ ಸರ್ಕಾರ ಮಾಡಬೇಕಾದ ಕಡ್ಡಾಯ ಕಾರ್ಯವಾಗಿರುತ್ತದೆ.

ಸದರಿ ಪ್ರೇರಣಾಮಯ ಸ್ಥಳಗಳಿಗೆ ಇತರ ಜಿಲ್ಲೆಯ ಉಳಿದ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಆಸಕ್ತ ಸ್ವಯಂ ಸೇವಕರನ್ನು ಸ್ಥಳಕ್ಕೆ ಕರೆದೊಯ್ದು, ಕಾರ್ಯ ಮಾಡದೇ ವಿವರಣೆ ನೀಡುವ ಮೂಲಕ ಸದರಿ ಕಾರ್ಯವನ್ನು ವ್ಯಾಪಕಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಜನ ಸಮುದಾಯದಿಂದ–ಜನ ಸಮುದಾಯದ ಶಿಕ್ಷಣ ರೂಪಿಸಬೇಕೆಂದು ಸರ್ಕಾರಕ್ಕೆ ಆಗ್ರಹ ಪಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಕೇಳಿದ ಜನ ಸಮುದಾಯದಿಂದ ಜನ ಸಮುದಾಯದ ಶಿಕ್ಷಣ ನೀತಿ ರೂಪಿಸುವ ಕುರಿತು ಶೂನ್ಯವೇಳೆಯಲ್ಲಿ ಕೇಳಿದ ವಿಷಯಕ್ಕೆ ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸರ್ಕಾರದಿಂದ ಲಿಖಿತ ಉತ್ತರಗಳ ಮಂಡನೆ**

**ಅ)ವಿಷಯ: ಗ್ರಾಮ ಪಂಚಾಯತ್ ಗ್ರಂಥಾಲಯದ ಮೇಲ್ವಿಚಾರಕರನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಕನಿಷ್ಠ ವೇತನ ನೀಡಿ ಸೇವಾ ಭದ್ರತೆ ಒದಗಿಸುವ ಕುರಿತು.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಟಿ. ಶ್ರೀಕಂಠೇಗೌಡರು ದಿನಾಂಕ 05.03.2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ: ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ 37 ಲಕ್ಷ ನಷ್ಟ ಮಾಡಿರುವ ಬಗ್ಗೆ ಲೆಕ್ಕ ಪರಿಶೋಧಕರು ವರದಿ ಮಾಡಿರುವ ಬಗ್ಗೆ.**

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ಯು.ಬಿ. ವೆಂಕಟೇಶ್‌ರವರು ದಿನಾಂಕ 10.03.2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ: ರಾಜ್ಯದ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕೋವಿಡ್ ಲಸಿಕೆ ಹಾಕುವ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಅರುಣ ಶಹಾಪುರರವರು ದಿನಾಂಕ 22.03.2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾನಾಯಕರೇ, ನಿನ್ನೆ ದಿವಸ ಮಾನ್ಯ ಸಭಾಪತಿಯವರು ಏನು ಹೇಳಿದರು ಎಂದರೆ, ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರವನ್ನು ಓದಿ ಹೇಳಬೇಕೆಂದು ಅವರು ಹೇಳಿದ್ದಾರೆ. ಇದರ ಬಗ್ಗೆ ನಿನ್ನೆ ದಿವಸ ಚರ್ಚೆಯಾಯಿತು. ತಾವು ಇದಕ್ಕೆ ತಥಾಸ್ತು ಎಂದು ಹೇಳಿದಿರಿ. ತಾವು ಮತ್ತೆ ಅದನ್ನೇ ಪ್ರೆಸೆಂಟ್ ಮಾಡುತ್ತೀರಿ. ತಾವು ಮಂತ್ರಿಗಳನ್ನು ಸ್ವಲ್ಪ ಸುಧಾರಣೆ ಮಾಡಿ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ನಾವು ಉತ್ತರವನ್ನು ಓದುವಾಗ, ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಯವರು ಓದಬೇಕಲ್ಲ. ಅದು ದಾಖಲೆಗೆ ಹೋಗಬೇಕಲ್ಲ. ತಮಗೆ ಅಷ್ಟು ಹೇಳುವುದು ಕಷ್ಟವಾದರೆ . . .

**ಸಭಾಪತಿಯವರು:-** ಇದನ್ನು ಮಂತ್ರಿಯವರೇ ಓದಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಕಷ್ಟ ಎಂದು ಹೇಳಲಿಲ್ಲ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿಯಾಗಿದ್ದಾಗ, ಹೀಗೆಯೇ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಆಗ ನಾನು ಮಾಡುತ್ತಿರಲಿಲ್ಲ. ನಾನು ನನ್ನ ಸ್ಥಳದಲ್ಲಿ ಕುಳಿತುಕೊಂಡು ನನ್ನ ಹಕ್ಕನ್ನು ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಸದಸ್ಯರಿದ್ದಾರೆ.

**ಸಭಾಪತಿಯವರು:-** ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಅಲ್ಲಿದ್ದು ಏನು ಹೇಳುತ್ತಾರೆ ಮತ್ತು ಇಲ್ಲಿದ್ದು ಏನು ಹೇಳುತ್ತಾರೋ, ನಾವು ಎಲ್ಲದಕ್ಕೂ ಬದ್ಧ.

**ಶ್ರೀ ಎಸ್.ಆರ್. ಪಾಟೀಲ್:- ಮಾನ್ಯ ಸಭಾನಾಯಕರೇ,** ನನಗೆ ಏನು ಹೇಳುತ್ತೀರಾ ಹೇಳಿ. ನಿನ್ನೆ ದಿವಸ ಚರ್ಚೆ ಮಾಡಿದ್ದೇವೆ. ಶೂನ್ಯವೇಳೆಯಲ್ಲಿ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರವನ್ನು ಏನು ಕೊಟ್ಟಿದ್ದಾರೋ, ಅದನ್ನು ಬಂದು ಸಚಿವರು ಓದಬೇಕು ಎಂದು ಹೇಳಿದ್ದಾರೆ. ಇದಕ್ಕೆ ತಾವು ಒಪ್ಪಿಕೊಂಡಿದ್ದೀರಾ. ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಹೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಒಂದು ಪ್ರಶ್ನೆಯಿದೆ. ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಪರವಾಗಿ ಒಂದು ಪ್ರಶ್ನೆಯಿದೆ.

**ಸಭಾಪತಿಯವರು:-** ಅದು ಬೇರೆ. ಇದಕ್ಕೆ ಉತ್ತರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಓದಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ತಾವು ನಿನ್ನೆ ಒಪ್ಪಿಕೊಂಡಿದ್ದೀರಾ.

**ಸಭಾಪತಿಯವರು:-** ಆಯಿತು ಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ರೆಡಿ ಇದೆ. ತಾವು ಹೇಳಿದರೆ, ನಾನು ಓದುತ್ತೇನೆ.

**<u>ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಮಂತ್ರಿಗಳು ಹಾಗೂ ಅಧಿಕಾರಿಗಳು</u>**

**ಸಭಾಪತಿಯವರು:-** ಆಯಿತು. ಇವತ್ತು ಸದನದಲ್ಲಿ ಕಡ್ಡಾಯವಾಗಿರಬೇಕಾದ ಮಾನ್ಯ ಸಚಿವರುಗಳಾದ ಡಾ॥ ಸಿ.ಎನ್. ಅಶ್ವತ್ಥನಾರಾಯಣ, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಶ್ರೀಮಂತ್ ಬಾಳಾ ಸಾಹೇಬ್ ಪಾಟೀಲ್, ಶ್ರೀ ಎಸ್. ಅಂಗಾರ, ಶ್ರೀ ಆರ್. ಶಂಕರ್, ಶ್ರೀ ಸಿ.ಪಿ. ಯೋಗೇಶ್ವರ್ ಮತ್ತು ಅಧಿಕಾರಿಗಳಾದ ಶ್ರೀ ಎನ್. ಜಯರಾಂ, ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. ಶ್ರೀಮತಿ ಬಿ.ಬಿ. ಕಾವೇರಿ, ನಿರ್ದೇಶಕರು, ಪೌರಾಡಳಿತ ಇಲಾಖೆ. ಶ್ರೀಮತಿ ಜಯಶ್ರೀ, ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ. ಶ್ರೀ ಹಿದಾಯುತುಲ್ಲ, ಸರ್ಕಾರದ ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ. ಅಧಿವೇಶನ ಮಧ್ಯಾಹ್ನದಲ್ಲಿ ಇರಬೇಕಾದ ಅಧಿಕಾರಿಗಳು ಡಾ॥ ಪಿ.ಎಸ್. ಹರ್ಷ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. ಡಾ॥ ಬಸವರಾಜ್, ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ. ಶ್ರೀ ಪ್ರಸನ್ನ ಕುಮಾರ್, ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಶ್ರೀ ಎಂ.ಬಿ. ವಿಜಯಕುಮಾರ್, ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾನಾಯಕರೇ, ಇಷ್ಟೊಂದು ಅಧಿಕಾರಿಗಳು ಯಾರಿದ್ದಾರೆ ಮತ್ತು ಯಾರಿಲ್ಲ ಎಂಬುದರ ಬಗ್ಗೆ ತಾವು ನೋಡಿಕೊಳ್ಳಿ. ಮಾನ್ಯ ಸಭಾನಾಯಕರೇ, ನಾಲ್ಕು ಜನ ಹಾಜರಾತಿಗೆ ವಿನಾಯಿತಿಯನ್ನು ಕೇಳಿದ್ದಾರೆ. ಸದನದಲ್ಲಿ ಅಧಿಕಾರಿಗಳು ಮತ್ತು ಸಚಿವರು ಇರಬೇಕೆಂದು ಹೇಳಿ, ನನಗೆ ಬೇಸರ ಬಂದಿದೆ. ಇದರ ಬಗ್ಗೆ ತಾವು ಏನು ಮಾಡುತ್ತೀರಾ ನೋಡಿ. ಪ್ರತಿ ಬಾರಿ ಹೇಳಿ ನನಗೆ ಸಾಕಾಗಿದೆ. ಮಾನ್ಯ ಈಶ್ವರಪ್ಪನವರು ಕೆಳಮನೆಗೆ ಹೋಗುತ್ತಾರೆ. ಈಗ ವರದಿಯನ್ನೊಪ್ಪಿಸುವುದು.

## 5. ವರದಿಯನ್ನೊಪ್ಪಿಸುವುದು

**ಶ್ರೀ ಮಾನೆ ಶ್ರೀನಿವಾಸ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ಯ ಸಂಸ್ಥೆಗಳ ಸಮಿತಿಯ ಸದಸ್ಯನಾದ ನಾನು ಸಿ.ಎ.ಜಿ.ಯವರು ನೀಡಿರುವ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ" ಯೋಜನೆಯ ಮೇಲಿನ ವರದಿಯಲ್ಲಿನ ಆಡಿಟ್ ಆಕ್ಷೇಪಣೆಗಳ ಕುರಿತು ಸಮಿತಿಯು ಪರಿಶೀಲಿಸಿ ತಯಾರಿಸಿದ 33ನೇ ವರದಿಯನ್ನು ಸಮಿತಿಯ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಒಪ್ಪಿಸಲಾಯಿತು.

**ಸಭಾಪತಿಯವರು:-** ಈಗ ವಿತ್ತೀಯ ಕಾರ್ಯಕಲಾಪಗಳಿವೆ. ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಕೆಳಮನೆಗೆ ಹೋಗಬೇಕಾಗಿರುವುದರಿಂದ, Calling Attention ತೆಗೆದುಕೊಂಡು, ಅವರನ್ನು ಕಳುಹಿಸಿಕೊಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆ ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ

**ವಿಷಯ: ಅಂಗನವಾಡಿಯ ಕೆಲವೊಂದು ಕೇಂದ್ರಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್‌ನ್ನು ನಿರ್ಮಿಸಿ ಮಕ್ಕಳಿಗೆ ಶುದ್ಧೀಕರಿಸಿದ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸದೇ ಇರುವ ಕಾರಣದಿಂದಾಗಿ ಅಂಗನವಾಡಿ ಕಲಿಕೆಯಲ್ಲಿ ತೊಡಗಿರುವ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಕುರಿತು.**

– --

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):**-ಮಾನ್ಯ ಸಭಾಪತಿಯವರೇ, ಅಂಗನವಾಡಿಯ ಕೆಲವೊಂದು ಕೇಂದ್ರಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್‌ನ್ನು ನಿರ್ಮಿಸಿ ಮಕ್ಕಳಿಗೆ ಶುದ್ಧೀಕರಿಸಿದ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸದೇ ಇರುವ ಕಾರಣದಿಂದಾಗಿ ಅಂಗನವಾಡಿ ಕಲಿಕೆಯಲ್ಲಿ ತೊಡಗಿರುವ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):**- ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ. ತಿಪ್ಪೇಸ್ವಾಮಿ ಕೇಳಿದಂತಹ ಗಮನ ಸೆಳೆಯುವ ಸೂಚನೆಗೆ ನನ್ನ ಉತ್ತರ ಹೀಗಿದೆ. ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ‘ಜಲ ಜೀವನ್ ಮಿಷನ್’ನ 100 ದಿನಗಳ ಅಭಿಯಾನದ ಅಡಿ ರಾಜ್ಯದಲ್ಲಿ ಗ್ರಾಮೀಣ ಭಾಗದ ಶಾಲೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ಆಶ್ರಮ ಶಾಲೆಗಳಿಗೆ ನಳದ ಮೂಲಕ ಕುಡಿಯಲು, ಅಡುಗೆ ಮನೆಗೆ, ಶೌಚಾಲಯಕ್ಕೆ ಹಾಗೂ ಕೈತೊಳೆಯಲು ನೀರನ್ನು ಒದಗಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಒಂದು ವೇಳೆ ಅಂಗನವಾಡಿ ಕೇಂದ್ರವು ಖಾಸಗಿ ಕಟ್ಟಡದಲ್ಲಿ ಇದ್ದರೂ ಸಹ ನಳ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಅದಕ್ಕೆ ತಗಲುವ ವೆಚ್ಚವನ್ನು ಕಟ್ಟಡ ಮಾಲೀಕರಿಗೆ ಸಲ್ಲಿಸುವ ಬಾಡಿಗೆ ಹಣದಲ್ಲಿ ಮಾಡಲು ಸೂಚಿಸಿದೆ.

ಮುಂದುವರೆದು, ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಶಾಲೆ ಹಾಗೂ ಅಂಗನವಾಡಿಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ನೀರನ್ನು ಪೂರೈಸುವ ಬಗ್ಗೆ ಈಗಾಗಲೇ ಸರ್ಕಾರದಿಂದ ಆದೇಶಿಸಲಾಗಿರುತ್ತದೆ.

**(ಲಿಖಿತ ಪ್ರತಿಯನ್ನು ಲಗತ್ತಿಸಲಾಗಿದೆ.)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(575) 23.03.2021, 12.20, ಟಿಸಿಹೆಚ್-ಆರ್‌ಎನ್**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಹೊಸ ಶಿಕ್ಷಣ ನೀತಿ ಕಾನೂನು ಮುಂದಿನ ವರ್ಷದಿಂದ ಬರಬಹುದು. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಅಂಗನವಾಡಿಗಳು ಅಂದರೆ, ಬಾಲ ವಿಕಾಸ ಕೇಂದ್ರ ಇರಬಹುದು, ಬಾಲವಾಡಿಗಳು ಇರಬಹುದು ಇವುಗಳು ಮುಂದಿನ ದಿನಗಳಲ್ಲಿ ನಲಿ-ಕಲಿ ಎನ್ನುವಂತಹ ಮಕ್ಕಳ ಕಲಿಕೆ ಎನ್ನತಕ್ಕಂಥದ್ದು ಏನಿದೆ, ಅವುಗಳಿಗೆ ಪೂರಕವಾಗಿ ಗ್ರಾಮಾಂತರ ಪ್ರದೇಶದಲ್ಲಿ ಕಲಿಯತಕ್ಕಂಥ ಮಕ್ಕಳು ಮುಂದಿನ ದಿನಗಳಲ್ಲಿ ಮೊದಲನೆಯ ತರಗತಿಗೆ ಬರಬೇಕಾದರೆ, ನಮ್ಮ ನಗರ-ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಮಕ್ಕಳು ಏನು ಬೇಬಿ ಸಿಟ್ಟಿಂಗ್‌ನಲ್ಲಿ ಪ್ರೀ-ಸ್ಕೂಲ್‌ನಲ್ಲಿ ಓದಿರುತ್ತಾರೆ, ಆ ಮಕ್ಕಳೊಂದಿಗೆ ಒಂದನೇ ತರಗತಿಯಲ್ಲಿರತಕ್ಕಂಥ ಪಠ್ಯಕ್ರಮದೊಂದಿಗೆ ಅವರು ಸ್ಪರ್ಧಿಸಬೇಕಾಗುತ್ತದೆ. ಈ ಅಂಗನವಾಡಿಗಳು ಯಾವ ಪರಿಸ್ಥಿತಿಯಲ್ಲಿವೆ ಎಂಬುದು, ನಾವು ಪ್ರತಿಯೊಂದು ತಾಲ್ಲೂಕು KDP (Karnataka Development Programme) ಮೀಟಿಂಗ್ ನಲ್ಲಾಗಲಿ, ಜಿಲ್ಲಾ ಮಟ್ಟದ KDP ಮೀಟಿಂಗ್‌ನಲ್ಲಾಗಲಿ ನೋಡುತ್ತಿದ್ದೇವೆ. ಕೆಲವಾರು ಅಂಗನವಾಡಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ, ಕೆಲವೊಂದು ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿವೆ. ಆದರೆ ಅವುಗಳಿಗೆ ಯಾವುದೇ ರೀತಿಯ ಕಾಂಪೌಂಡ್ ಇಲ್ಲ.

ಇನ್ನು ಎರಡನೆಯದಾಗಿ, ಈ ಅಂಗನವಾಡಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಸರ್ಕಾರ 'ಜಲ ಜೀವನ್ ಮಿಷನ್' ಯೋಜನೆಯಡಿಯಲ್ಲಿ 60,000 ರೂಪಾಯಿಗಳಿಂದ 70,000 ರೂಪಾಯಿಗಳನ್ನು ಮಂಜೂರು ಮಾಡಿದೆ. ಒಂದು ಸಂಪ್ ಮತ್ತು ಅದರ ಮೇಲೆ ಒಂದು ಟ್ಯಾಂಕ್‌ನ್ನು ಇಡಬೇಕೆಂದು ಆದೇಶ ಇದೆ. ಆದರೆ ಸಂಪ್ ಇಲ್ಲ, ಬರೀ ಟ್ಯಾಂಕ್‌ನ್ನು ಮಾತ್ರ ಹೊರಗಡೆ ಇಟ್ಟಿದ್ದಾರೆ. ಟ್ಯಾಂಕ್‌ನ್ನು ಒಳಗಡೆ ಇಟ್ಟಿಲ್ಲ. ಎಷ್ಟೋ ಬಾರಿ ನಲ್ಲಿ ನೀರನ್ನು ನೇರವಾಗಿ ಆ ಪ್ಲಾಸ್ಟಿಕ್ ಟ್ಯಾಂಕ್‌ನಲ್ಲಿ ತುಂಬಿಸಿ ಇಡುತ್ತಾರೆ. ಆ ಪ್ಲಾಸ್ಟಿಕ್ ಟ್ಯಾಂಕ್‌ನ್ನು ದಿನನಿತ್ಯವಾಗಲಿ ಅಥವಾ ವಾರಕ್ಕೊಮ್ಮೆಯಾಗಲಿ ಕೂಡ ಕ್ಲೀನ್ ಮಾಡಿಸತಕ್ಕಂಥ ವ್ಯವಸ್ಥೆ ಇಲ್ಲ. ಮತ್ತೆ ದೊಡ್ಡ ಟ್ಯಾಂಕ್‌ನ್ನು ಒಳಗಡೆ ಇಡುವುದಕ್ಕೂ ಕೂಡ ಜಾಗವಿಲ್ಲ. [illegible]ರು ಅಂಗನವಾಡಿಯನ್ನು ನಡೆಸಬೇಕೆಂದರೆ, ಸಾಕಷ್ಟು ರೀತಿಯಲ್ಲಿ ಸಮನ್ವಯದ ಕೊರತೆ ಇದೆ. ಮೊಟ್ಟಮೊದಲನೆಯದಾಗಿ, ನಮಗೆಲ್ಲರಿಗೂ ಗೊತ್ತಿರುವಂತೆ ಇವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ಬರತಕ್ಕಂಥ ಅಂಗನವಾಡಿಗಳೇ ಹೆಚ್ಚಿಗೆ ಇವೆ. ಅದೇ ರೀತಿ ಶಿಕ್ಷಣ ಇಲಾಖೆಯಲ್ಲಿ ನಡೆಯತಕ್ಕಂಥವು ಹೆಚ್ಚಿಗೆ ಇವೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಇಲಾಖೆಯಿಂದ ಕುಡಿಯುವ ನೀರಿನ ಪೂರೈಕೆ ಆಗಬೇಕು. ಆದರೆ ಒಂದಕ್ಕೊಂದು ಸಮನ್ವಯ

ಇಲ್ಲ. ಆಮೇಲೆ ಆ ಅಂಗನವಾಡಿಗಳಲ್ಲಿ ಮಕ್ಕಳಿಗೆ ಏನಾದರೂ R.O. Plantನ್ನು ಹಾಕುತ್ತಾರೆಯೇ? ಅದಕ್ಕೂ ಕೂಡ ಏನೂ ವ್ಯವಸ್ಥೆ ಇಲ್ಲ. ಆಗಬೇಕಾಗಿರತಕ್ಕಂಥ ಕಾಮಗಾರಿಗಳು ಕೂಡ ಸರಿಯಾಗಿ ಆಗಿಲ್ಲ. ಸಾಕಷ್ಟು ರೀತಿಯಲ್ಲಿ ದೂರುಗಳಿವೆ. ಒಂದಕ್ಕೊಂದು ಸಮನ್ವಯತೆ ಇಲ್ಲ. ಎಷ್ಟೋ ಬಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಮಾಡಿರುತ್ತಾರೆ, ಆದರೆ ಅದನ್ನು handover ಮಾಡಿಲ್ಲ. ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಆದ್ದರಿಂದ ನನ್ನ ಕೋರಿಕೆ ಇಷ್ಟೆ, ಇದು ಗ್ರಾಮಾಂತರ ಹಳ್ಳಿಗಾಡಿನ ಮಕ್ಕಳ ಭವಿಷ್ಯಕ್ಕೆ, ವಿದ್ಯಾಭ್ಯಾಸಕ್ಕೆ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ, ದಯಮಾಡಿ ಸರ್ಕಾರದಲ್ಲಿ ಯಾವುದೇ ರೀತಿಯಲ್ಲೂ ತಿರಸ್ಕಾರ ಮನೋಭಾವ ಇರಬಾರದು. ಪ್ರತಿಯೊಂದು ಅಂಗನವಾಡಿಯಲ್ಲಿಯೂ ಕೂಡ ಸಂಪ್ ಇರಲೇಬೇಕು. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ತಾವೇನು ಸಿಂಟೆಕ್ಸ್ ಟ್ಯಾಂಕ್ ಇಡುತ್ತೀರಿ, ಅದನ್ನು ಒಳಗಡೆ ಇಡಬೇಕು. ಮತ್ತೆ ಶುದ್ಧೀಕರಣಗೊಳಿಸುವುದಕ್ಕೋಸ್ಕರ ಒಂದು R.O Plant ನ್ನು ಕೂಡ ಸರ್ಕಾರ ಮಾಡಬೇಕು. ಇದಕ್ಕೆ ಕೋಟ್ಯಂತರ ರೂಪಾಯಿಗಳ ವೆಚ್ಚವಾದರು ಕೂಡ ಸರ್ಕಾರ ಚಿಂತೆ ಮಾಡಬಾರದು. ಏಕೆಂದರೆ ಇದು ಮಕ್ಕಳ ಭವಿಷ್ಯ ಮತ್ತು ಮಕ್ಕಳ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಇರತಕ್ಕಂಥದ್ದು. ಆದ್ದರಿಂದ ದಯಮಾಡಿ ಈಗ ಏನು ಈ ಮೂರು ಇಲಾಖೆಗಳಿವೆ, ಅವುಗಳಲ್ಲಿ ಸಮನ್ವಯದ ಕೊರತೆ ಇದೆ. ಈ ರೀತಿಯಾಗಿರುವಾಗ ಕುಡಿಯುವ ನೀರನ್ನು ಪೂರೈಕೆ ಮಾಡುವುದಕ್ಕೋಸ್ಕರ ಸರ್ಕಾರ ಏನು ಕ್ರಮ ಕೈಗೊಂಡಿದೆ? ಯಾವ ದಿಸೆಯಲ್ಲಿ ಇದು ನಡೆಯುತ್ತಿವೆ ಎಂದು ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರ ಕಳಕಳಿಯನ್ನು ನಿಜಕ್ಕೂ ಮೆಚ್ಚಬೇಕಾಗಿರುತ್ತದೆ. ಮಾನ್ಯ ಪ್ರಧಾನಮಂತ್ರಿಯವರ 100 ದಿನಗಳ ಒಂದು ಗುರಿಯನ್ನು ಏನು ಇಟ್ಟುಕೊಂಡಿದ್ದರು, ಅದನ್ನು ಜಲಜೀವನ್ ಮಿಷನ್ ಯೋಜನೆ ಮುಖಾಂತರ ಜಾರಿಗೊಳಿಸಲು ಪ್ರಾರಂಭ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವಂಥ ಒಟ್ಟು 53,568 ಶಾಲೆಗಳಲ್ಲಿ ಈಗಾಗಲೇ 40,062 ಶಾಲೆಗಳಿಗೆ ನೀರಿನ ಸೌಲಭ್ಯಗಳನ್ನು ಕೊಟ್ಟಿದ್ದೇವೆ. ಹೊಸದಾಗಿ 13,206 ಶಾಲೆಗಳಿಗೆ ಕೊಡಬೇಕು. ಒಟ್ಟು 55,396 ಅಂಗನವಾಡಿಗಳಲ್ಲಿ 31,872 ಅಂಗನವಾಡಿಗಳಿಗೆ ಈಗಾಗಲೇ ಕುಡಿಯುವ ನೀರನ್ನು ಕೊಟ್ಟಿದ್ದೇವೆ. ಇನ್ನೂ 23,524 ಅಂಗನವಾಡಿಗಳಿಗೆ ನಾವು ಕುಡಿಯುವ ನೀರನ್ನು ಕೊಡಬೇಕಾಗಿದೆ. ಒಟ್ಟು ನಾವು ಈಗ ಈ ಸ್ಕೀಂನ್ನು ಮುಗಿಸಿ, ಬರುವಂಥ ದಿನಗಳಲ್ಲಿ ಇಡೀ ರಾಜ್ಯದ ಶಾಲೆಗಳಿಗೆ ಜಲಜೀವನ್ ಮಿಷನ್ ಯೋಜನೆ

ಅಡಿಯಲ್ಲಿ ಅಗತ್ಯವಿರುವಷ್ಟು ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ನಮಗೆ ಹಣದ ಕೊರತೆ ಇಲ್ಲ. ಅಂಗನವಾಡಿ ಮಕ್ಕಳಿಗೋಸ್ಕರವಾಗಿಯೇ ಈ ಯೋಜನೆ ಇರುವುದರಿಂದ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದು ಸರಿ ಇದೆ. ಹಣಕಾಸಿನ ಕೊರತೆ ಇಲ್ಲದೇ ಎಲ್ಲಾ ಅಂಗನವಾಡಿಗಳಿಗೆ ಎಲ್ಲಾ ಶಾಲೆಗಳಿಗೂ ಕೂಡ ನಾವು ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆಗಳನ್ನು ಮಾಡುತ್ತೇವೆ. ಇದರ ಜೊತೆಗೆ ಅವರು ಕಾಂಪೌಂಡ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅದನ್ನೂ ಕೂಡ NAREGA Scheme ಮುಖಾಂತರ ಮಾಡುವುದಕ್ಕೆ ಅವಕಾಶವಿದೆ. ಅದನ್ನೂ ಕೂಡ ನಾವು ಮಾಡಿಕೊಡುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಕಳಕಳಿ ಇರುವುದೇನೆಂದರೆ, ದಯಮಾಡಿ ಸರ್ಕಾರ ಆ ಟ್ಯಾಂಕ್‌ಗಳನ್ನು ಒಳಗಡೆ ಇರಿಸಬೇಕಾಗುತ್ತದೆ. ಏಕೆಂದರೆ, ನಾಳೆ ದಿವಸ ಏನಾದರು ಕುಡಿಯುವ ನೀರಿನ ಸಂಬಂಧ ಹೆಚ್ಚು–ಕಡಿಮೆಯಾದರೂ ಕೂಡ ಒಳ್ಳೆಯ ರೀತಿಯಲ್ಲಿ ಸುರಕ್ಷತೆ ಇಲ್ಲವೆಂದರೆ ಹೇಗೆ? ಆ ಟ್ಯಾಂಕ್‌ಗಳನ್ನೆಲ್ಲಾ ಹೊರಗಡೆ ಇಟ್ಟಿದ್ದಾರೆ. ಅಲ್ಲಿ ಸಂಪ್ ಕೂಡ ಇಲ್ಲ. ಮೊದಲು ನೀರು ಸಂಪ್‌ಗೆ ಬರಬೇಕು, ಆ ಸಂಪ್‌ನಿಂದ ನೀರು ಟ್ಯಾಂಕ್‌ಗೆ ಹೋಗಬೇಕು. ಆ ರೀತಿ ವ್ಯವಸ್ಥೆ ಮಾಡಿಕೊಡಬೇಕು. ಮಾನ್ಯ ಸಚಿವರು ಜಲಜೀವನ್ ಮಿಷನ್ ಯೋಜನೆಯಲ್ಲಿ ಹಣದ ಕೊರತೆಯಿಲ್ಲವೆಂದು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಮಕ್ಕಳ ಆರೋಗ್ಯದ ಸಲುವಾಗಿ ಒಂದು R.O Plant ಹಾಕಿಕೊಡುವ ದಿಸೆಯಲ್ಲಿ ಯೋಚನೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೋರುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನನ್ನ ಕಾಮೆಂಟ್ ಇಲ್ಲ. ಆದರೆ, ಕೆಲವು enclosure ಗಳನ್ನು ಕೊಟ್ಟಿದ್ದಾರೆ, ಅವು ಏನೆಂದು ನನಗೆ ಗೊತ್ತಾಗುತ್ತಿಲ್ಲ. ಕಪ್ಪಾಗಿರುವ ಎರಡು ಹಾಳೆಯಲ್ಲಿ ಕೊಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರಂತೂ ಓದುವುದಕ್ಕೆ ಆಗುವುದಿಲ್ಲ. ಅವರಿಗೆ ಒದಗಿಸಿರುವ ಅವರ ಅಧಿಕಾರಿಗಳೇನಾದರು ಓದುವುದಕ್ಕೆ ಅವಕಾಶವಿದ್ದರೆ, ಓದಿ ಹೇಳಿದರೆ ಒಳ್ಳೆಯದಾಗಬಹುದು. ಇದೇನು ಕಪ್ಪು ಹಾಳೆ ಏನೆಂದು ನನಗೆ ಗೊತ್ತಾಗುತ್ತಿಲ್ಲ.

**ಸಭಾಪತಿಯವರು:–** ಅದನ್ನು ನೋಡಿದೆನು, ನನಗೂ ಕೂಡ ಓದುವುದಕ್ಕೆ ಆಗಲಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಕ್ಷಮಿಸಬೇಕು. ನಾನು ಆ ಅನುಬಂಧವನ್ನು ನೋಡಲಿಲ್ಲ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಓದುವುದಕ್ಕೆ ಆಗದೇ ಇರುವಂಥ ದಾಖಲೆಯನ್ನು ಸದನಕ್ಕೆ ಒದಗಿಸಿದರೆ, ಏನು ಅರ್ಥ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯಮಾಡಿ ನೋಡಬೇಕು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಬುದ್ಧಿವಂತರು ಅಲ್ಲವೇ ಇರುವುದು! ಹಾಗಾಗಿ ಎಲ್ಲರೂ ಓದಿಕೊಳ್ಳುತ್ತಾರೆಂದು ಕೊಟ್ಟಿದ್ದಾರೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದಸ್ಯರು ಅದನ್ನು ಓದಬಾರದು ಎನ್ನುವ ಕಾರಣಕ್ಕೋಸ್ಕರ ಅಧಿಕಾರಿಗಳು ಆ ರೀತಿ ಕೊಟ್ಟಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನೋ ಇರಬಹುದು, ಅದಕ್ಕೆ ಕಪ್ಪಾಗಿ ಜೆರಾಕ್ಸ್ ಮಾಡಿಸಿ ಕೊಟ್ಟಿದ್ದಾರೆ. ಅದು ಏನೆಂದು ಗೊತ್ತಾಗುತ್ತಿಲ್ಲ.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಬುದ್ಧಿವಂತರು ಇದ್ದಾರೆ, ಎಲ್ಲಾ ಕಿಲಾಡಿಗಳು ಇದ್ದಾರೆ, ಹಾಗಾಗಿ ಎಲ್ಲರೂ ಓದಿಕೊಳ್ಳುತ್ತಾರೆಂದು ಆ ರೀತಿ ಕೊಟ್ಟಿದ್ದಾರೆ. ಎಂದು ನನಗೆ ಅನಿಸುತ್ತಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಆದರೆ ಇಷ್ಟೊಂದು ನಿರ್ಲಕ್ಷ್ಯವಾಗಿ ಈ ದಾಖಲೆಯನ್ನು ಒದಗಿಸಿರುವಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೋ, ಬೇಡವೋ? ಇಲ್ಲವಾದರೆ ಈ ಸದನವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎನ್ನುವ ಅರ್ಥ ಬರುತ್ತದೆ. ಹಾಸ್ಯವಾಗಿ ನಾನು ಏನೇ ಪ್ರಸ್ತಾವ ಮಾಡಿದರು ಕೂಡ, ಈ ಸದನಕ್ಕೆ ಏನು ಬೇಕಾದರೂ-ಹೇಗೆ ಬೇಕಾದರೂ ಉತ್ತರವನ್ನು ಒದಗಿಸಬಹುದಾದರೆ, ಆ ಸಂಬಂಧಪಟ್ಟ ಅಧಿಕಾರಿ ಈ ಸದನವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎನ್ನುವಂಥ ಪ್ರಶ್ನೆಗೆ ಉತ್ತರವನ್ನು ಪೀಠ ಕೊಡಿಸುತ್ತದೆಂದು ನಾನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠದಿಂದ ದಯವಿಟ್ಟು ಇದಕ್ಕೆ ಉತ್ತರ ಕೊಡಿಸಬೇಕು.

**ಸಭಾಪತಿಯವರು:-** ಮಾನ್ಯ ಎನ್.ಅಪ್ಪಾಜಿಗೌಡರವರೇ, ಮಾನ್ಯ ಸಚಿವರು ಏನು ಹೇಳುತ್ತಾರೋ ಹೇಳಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇದನ್ನು ನೋಡಿದರೆ, ಕುಡಿಯುವ ನೀರು ಯಾವ ಕಲರ್ ಇರುತ್ತದೆಂದು ಇರುತ್ತದೆಂದು ಗೊತ್ತಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಸಿ.ಎಂ.ಇಬ್ರಾಹಿಂ ಅವರು ಹೇಳುವ ಮಾತು ಸರಿಯಾಗಿದೆ. ಏಕೆಂದರೆ ಅವರ ಹತ್ತಿರ ಬರೀ ಕಪ್ಪೇ ಇರುವುದು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇಲ್ಲ, ನನಗಿಂತ ಮಾನ್ಯ ಸಚಿವರು ಬೆಳ್ಳಗೆ ಇದ್ದಾರೆಯೇ? ನಮ್ಮಿಬ್ಬರನ್ನೂ ಅಕ್ಕಪಕ್ಕದಲ್ಲಿ ನಿಲ್ಲಿಸಿ ನೋಡೋಣ, ಯಾರು ಬೆಳ್ಳಗೆ ಇದ್ದೇವೆಂದು ಹೇಳಲಿ? ಇದನ್ನು ಸದನದಲ್ಲಿ ಮತಕ್ಕೆ ಹಾಕಿಬಿಡೋಣ, ಯಾರಿಗೆ ಅತಿ ಹೆಚ್ಚು ಮತ ಬೀಳುತ್ತವೆಯೋ ನೋಡೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅಳ್ಳೆಗೆ ಪೋಳಿಗಳೆಲ್ಲಾ ಬೆಳ್ಳಗೆ ಇರುತ್ತವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ .

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ ಗೌಡ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಏನು ಹೇಳುವುದೇನೆಂದರೆ, ಈ ಸದನಕ್ಕೆ ಸಾಕಷ್ಟು ಬಾರಿ ನೋವಾಗುತ್ತಿದೆ. ಇಂಥದ್ದು ಒಂದೇ ಘಟನೆ ಅಲ್ಲ, ಬೇರೆ ಬೇರೆ ಘಟನೆಗಳು ಆಗುತ್ತಿವೆ. ಅದಕ್ಕೆ ಕೃಪೆಮಾಡಿ ಈ ರೀತಿ ಏಕೆ ಕೊಟ್ಟಿದ್ದಾರೆಂದು ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ತುಂಬಾ ಸ್ಪಷ್ಟವಾಗಿ ಹೇಳುವುದೇನೆಂದರೆ, ನಮ್ಮ ಅಧಿಕಾರಿಗಳು ಖಂಡಿತವಾಗಿಯು ತಪ್ಪು ಮಾಡಿದ್ದಾರೆ. ನಾವು ಹೊಸ ಪ್ರತಿಯನ್ನು ಸಿದ್ಧಗೊಳಿಸಿ ಕೊಡಿಸುತ್ತೇವೆ. ಇದರಲ್ಲಿ ಏನೂ ಅನುಮಾನವಿಲ್ಲ.

**ಸಭಾಪತಿಯವರು:–** ಒಂದು ವೇಳೆ ತಪ್ಪು ಮಾಡಿದ್ದರೆ?

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ; ಇದು ಒಂದರಲ್ಲೇ ಅಲ್ಲ ಪ್ರತಿ ಬಾರಿ ಇದೇ ರೀತಿ ಆಗುತ್ತಿದೆ. ಅಂತಹವರ ಮೇಲೆ ಕ್ರಮ ಆಗಬೇಕು. ಬೇರೆ ಬೇರೆ ಸಂದರ್ಭದಲ್ಲೂ ಇದೇ ರೀತಿ ಆಗುತ್ತಿದೆ.. .

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ ಗೌಡ ರವರೇ, ತಾವು ನನ್ನ ಅನುಮತಿ ಪಡೆದುಕೊಳ್ಳದೇ ಮಾತನಾಡುತ್ತೀರಲ್ಲ; ಏಕೆ? ಮಾನ್ಯ ಸಚಿವರೇ, ಆಯಿತು ನೀವು ಹೊಸ ಪ್ರತಿಯನ್ನು ಸಿದ್ಧಗೊಳಿಸಿ ಕೊಡಿಸುತ್ತೇನೆ ಎಂದು ಹೇಳುತ್ತಿದ್ದೀರಿ. ಆದರೆ ತಪ್ಪು ಮಾಡಿದವ ಮೇಲೆ ಕ್ರಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳುವುದಿಲ್ಲವೇ? ತಪ್ಪು ಯಾರು ಮಾಡಿದ್ದಾರೊ ಗೊತ್ತಿಲ್ಲ. ಅಧಿಕಾರಿಗಳು ನೋಡದಿದ್ದರೂ ಬೇರೆಯವರು ಅದನ್ನು ನೋಡಬೇಕಲ್ಲವೇ?

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಹೇಳಿದ್ದು; ತಪ್ಪು ಮಾನ್ಯ ಮಂತ್ರಿಗಳೇ ಮಾಡಿರುವುದು, ಅವರೇ ತಾನೆ ಉತ್ತರದ ಪ್ರತಿಗಳಿಗೆ ಸಹಿ ಮಾಡಿ ಕೊಡುವುದು.

**(ಮುಂದು)**

**(576)23.3.2021/12.30/ಎಂ.ಎಂ-ವಿ.ಕೆ**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಧರ್ಮಸೇನರವರೇ, ಪ್ರತಿಗಳಿಗೆ ನಾನು ಸಹಿ ಮಾಡಿಲ್ಲ. ಪ್ರತಿಗಳಿಗೆ ನಾನು ಸಹಿ ಮಾಡಿರುವುದನ್ನು ತೋರಿಸಿ ನೋಡೋಣ. ಪ್ರತಿಗಳಿಗೆ ನಾನು ಸಹಿ ಮಾಡಿಲ್ಲ. (ಗೊಂದಲ) ನಾನು ಮಾಡಿದ್ದೇನೋ ಅಥವಾ ಅವರು ಮಾಡಿದ್ದಾರೋ ಅಂತೂ ತಪ್ಪಾಗಿದೆ. ಹೊಸ ಪ್ರತಿಯನ್ನು ಕೊಡುತ್ತೇವೆ ಹಾಗೂ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಅವರು ಒಳ್ಳೆಯ ಕಾರ್ಯವನ್ನು ತೆಗೆದುಕೊಂಡಿದ್ದಾರೆ. ಶಿಕ್ಷಣ ಇಲಾಖೆಯ ಒಟ್ಟು ಆಡಳಿತಕ್ಕೆ ಸಂಬಂಧಪಟ್ಟಂತೆ ಶಿಕ್ಷಣ ಇಲಾಖೆ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಕಾರ್ಯನಿರ್ವಹಣೆ ಮಾಡುತ್ತದೆ. ನಗರಗಳಲ್ಲಿ, ಪುರಸಭೆ ವ್ಯಾಪ್ತಿಯಲ್ಲಿ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳು ಕೂಡ ಜಿಲ್ಲಾ ಪಂಚಾಯತ್ ಅಡಿಯಲ್ಲಿ ಬರುವ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದೆ. ಅಲ್ಲಿ ಯಾರು ಮಾಡುತ್ತಾರೆ ಎಂದು ಬಹಳ ದೊಡ್ಡ ಪ್ರಶ್ನೆ ಉದ್ಭವವಾಗುತ್ತದೆ, ಏಕೆಂದರೆ, ಇಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಚೆನ್ನಾಗಿ ಮಾಡುತ್ತಿದ್ದೀರಿ. ಈ ಅಂತರವನ್ನು ಹೇಗೆ ಸರಿದೂಗಿಸಬೇಕೆಂದು ಶಿಕ್ಷಣ ಇಲಾಖೆ ಹಾಗೂ ಪಂಚಾಯತ್‌ರಾಜ್ ಇಲಾಖೆ ಒಟ್ಟಿಗೆ ಕುಳಿತುಕೊಂಡು Urban Local Bodies ನಲ್ಲೂ ಕೂಡ ಇದನ್ನು ಜಾರಿಗೊಳಿಸುವ ದೃಷ್ಟಿಯಿಂದ ಒಂದು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವುದು ಸರಿ ಇದೆ. ನಗರಪ್ರದೇಶಕ್ಕೆ ಗ್ರಾಮೀಣಾಭಿವೃದ್ಧಿ ಇಲಾಖೆ ಸಂಬಂಧ ಬರುವುದಿಲ್ಲ. ಆದರೂ ಕೂಡ ನಾವು ಮಾಡಿದ್ದೇವೆ. ಇಲ್ಲಿ ಮಾನ್ಯ ಪ್ರಸನ್ನಕುಮಾರ್‌ರವರು, ಮಾನ್ಯ ಆಯನೂರು ಮಂಜುನಾಥ್‌ರವರು ಇದ್ದಾರೆ. ಶಿವಮೊಗ್ಗ ನಗರದಲ್ಲಿ ನಾವು ಮಾಡಿರುವ ಯಾವ ಯಾವ ಸಂಘಸಂಸ್ಥೆಗಳಿವೆ; ನಾನು 1989ರಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧಾನಸಭೆಗೆ ಪ್ರವೇಶಿಸಿದ್ದೇನೆ. ಅಂದಿನಿಂದ ಇಂದಿನವರೆಗೂ ನಗರಪ್ರದೇಶದ ಶಾಲೆಗಳನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಖಾಸಗಿ ಶಾಲೆಗಳಲ್ಲಿ ಬಹಳ ಚೆನ್ನಾಗಿರುತ್ತದೆ. ಹಾಗಾದರೆ ಈ ಮಕ್ಕಳೇನು ಸೆಕೆಂಡ್ ಗ್ರೇಡಾ? ಇದಕ್ಕೆ ಎಲ್ಲಾ ಪ್ರಯತ್ನ ಮಾಡಿದರೂ ನನ್ನ ಕೈನಲ್ಲಿಯೇ ಆಗಲಿಲ್ಲ. ಅದಕ್ಕೋಸ್ಕರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸ್ವಲ್ಪ ಹಣ ಬರುತ್ತದೆ. ಅದನ್ನೂ ಜೋಡಿಸಿಕೊಂಡು, ಖಾಸಗಿ ಶಾಲೆಗಳ ಹಣವನ್ನು ಜೋಡಿಸಿ, ಸಿ.ಎಸ್.ಆರ್., ಫಂಡ್‌ಗಳನ್ನು ನೋಡಿಕೊಂಡು ಮತ್ತು ದಾನಿಗಳಿಂದಲೂ ತೆಗೆದುಕೊಂಡು ಶಿವಮೊಗ್ಗ ನಗರದ 87 ಶಾಲೆಗಳಿಗೆ smart education ಕೊಡುವ ರೂಪದಲ್ಲಿ ಎಲ್ಲಾ ಬೋರ್ಡ್‌ಗಳು, ಅಲ್ಲಿಯ ಕಾಂಪೌಂಡ್‌ಗಳು, ಶೌಚಾಲಯ ಎಲ್ಲವನ್ನೂ ವ್ಯವಸ್ಥಿತವಾಗಿ ಯಾವುದೇ ಖಾಸಗಿ ಶಾಲೆಗೂ ಕೂಡ ನಮ್ಮ ಸರ್ಕಾರಿ ಶಾಲೆ ಕಡಿಮೆಯಿಲ್ಲ ಎನ್ನುವ ರೂಪದಲ್ಲಿ ನಾವು ಶಿವಮೊಗ್ಗ ಜಿಲ್ಲೆಯಲ್ಲಿ ಮಾಡಿದ್ದೇವೆ. ನಾನು ಉಳಿದ ಎಲ್ಲರಿಗೂ ಪ್ರಾರ್ಥನೆ ಮಾಡುತ್ತೇನೆ, ಈ ದಿಕ್ಕಿನಲ್ಲಿ ಸಂಬಂಧಪಟ್ಟ ಮಂತ್ರಿ ಮಾನ್ಯ ಸುರೇಶ್‌ಕುಮಾರ್‌ರವರ ಬಳಿಯೂ ಮಾತನಾಡಿದ್ದೇನೆ. ಅವರು ಕೂಡ ಪ್ರಯತ್ನ ಮಾಡುತ್ತಾರೆ, ನೀವೂ ಪ್ರಯತ್ನ ಮಾಡಿ. ಮಾನ್ಯ ಅರುಣ ಶಹಾಪುರರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಕೇಳುತ್ತಿರುವುದೂ ಅದನ್ನೇ. ಗ್ರಾಮಾಂತರ ಪ್ರದೇಶಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಣ ಬರುತ್ತದೆ. ನಗರಪ್ರದೇಶದ ಸರ್ಕಾರಿ ಶಾಲೆಗಳಿಗೆ ಏತಕ್ಕೆ ಬರುವುದಿಲ್ಲ ಎಂಬುದು ನನಗೂ ಗೊತ್ತಿಲ್ಲ. ಮಾನ್ಯ ಸಭಾಪತಿಯವರು ಅದೇ ಇಲಾಖೆಯಿಂದ ಏಳು ಸಲ ಚುನಾವಣೆಯಲ್ಲಿ ಗೆದ್ದಿದ್ದಾರೆ. ಇದು ಯಾರ ಮುಖಾಂತರ ಆಗಬೇಕೆನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಮಂತ್ರಿಯಾಗಿ ಅಷ್ಟು ಸ್ಪಷ್ಟವಾಗಿ ಹೇಳುತ್ತೇನೆ.

**ಸಭಾಪತಿಯವರು:-** ನಮ್ಮ ಊರಿನಲ್ಲಿ ಮಾಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಿಮ್ಮ ಊರಿನಲ್ಲಿ ಮಾಡಿದ್ದರೆ ಫೈನ್. ನಾನೂ ಕೂಡ ನಮ್ಮ ಊರಿನಲ್ಲಿ ಮಾಡಿದ್ದೇನೆ. ಎಲ್ಲರೂ ಮಾಡಬೇಕು. ಇದನ್ನು ಸರ್ಕಾರ ಏತಕ್ಕೆ ಮಾಡುವುದಿಲ್ಲ ಎಂದು ಗೊತ್ತಿಲ್ಲ. ಸರ್ಕಾರ ನಗರ ಪ್ರದೇಶದಲ್ಲೂ ಕೂಡ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ತಿಪ್ಪೇಸ್ವಾಮಿಯವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಎಲ್ಲಾ ಅಂಗನವಾಡಿಗಳಲ್ಲಿ ಒಳ್ಳೆಯ ಕುಡಿಯುವ ನೀರನ್ನು, ಶೌಚಾಲಯವನ್ನು ಕೊಡುವ ಮತ್ತು ಕಾಂಪೌಂಡ್ ಹಾಕುವ ದಿಕ್ಕಿನಲ್ಲಿ ನಮ್ಮ ಇಲಾಖೆ ಅದು ಅಂಗನವಾಡಿ ಅಥವಾ ಶಾಲೆ ಇರಬಹುದು ಅದನ್ನು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಸಭಾಪತಿಯವರು:–** ಎಷ್ಟು ಜನ ಕೇಳುತ್ತೀರಿ? ಎರಡು ದಿವಸ ಕೇಳದೇ ಮಾತನಾಡಿದ್ದೀರಿ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನಾವು ಕೇಳುವುದೇ ಅಪರೂಪ. ಜಾಸ್ತಿ ಕೇಳುವುದಿಲ್ಲ.

**ಸಭಾಪತಿಯವರು:–** ನಿಮ್ಮ ನಿಮ್ಮ ಪ್ರಶ್ನೆಯನ್ನು ಮಾತ್ರ ಕೇಳಬೇಕು. ಬೇಗ ಕೇಳಿ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಚಿವರು ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಹೇಳಿದ್ದಾರೆ. ಹಿಂದೆ ಇದರ ಬಗ್ಗೆ ಬಹಳ ಚರ್ಚೆಯಾಗಿತ್ತು. ಮಾನ್ಯ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಆದೇಶದ ಮೇರೆಗೆ ಎಲ್ಲೂ ಕೂಡ ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಡುವುದಿಲ್ಲ ಎಂದು ಹಿಂದೆ ಹೇಳಿದ್ದರು. ಈಗ ಎಲ್ಲೋ ಒಂದು ಕಡೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕೊಡುತ್ತೇವೆಂದು ಹೇಳುತ್ತೀರಲ್ಲಾ ಇದು controversial or contradictory statement ಅಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ವಿಧಾನಸಭೆ ಮತ್ತು ವಿಧಾನ ಪರಿಷತ್ ಎರಡರಲ್ಲೂ ಕೂಡ ಸ್ಪಷ್ಟನೆ ಮಾಡಿದ್ದೇನೆ. ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಸಾಕಷ್ಟು ಅವ್ಯವಹಾರವಾಗಿದೆ ಎನ್ನುವುದು ಪ್ರಸ್ತಾಪವಾಗಿದ್ದಕ್ಕೋಸ್ಕರ ಈಗಾಗಲೇ ಜಂಟಿ ಸದನ ಸಮಿತಿಯನ್ನು ನೇಮಕ ಮಾಡಿದ್ದೇವೆ. ಅದರ ವರದಿಗಾಗಿ ಕಾಯುತ್ತಿದ್ದೇವೆ. ಇದಾದ ನಂತರ ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಸುಪ್ರೀಂ ಕೋರ್ಟ್ ಏನು ಹೇಳಿದೆ ಅದನ್ನು ಗಮನಿಸಿ ಏನೇನು ಮಾಡಬೇಕೋ ಆ ದಿಕ್ಕಿನಲ್ಲಿ ಪ್ರಯತ್ನ ನಡೆಸುತ್ತೇವೆ.

**ಸಭಾಪತಿಯವರು:–** ಈಗ ವಿತ್ತೀಯ ಕಾರ್ಯಕಲಾಪಗಳು. ಈಗ ಮಾನ್ಯ ಪಿ.ಆರ್. ರಮೇಶ್. ಅವರು ಮಾತನಾಡಿದ ನಂತರ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ನಾನು ಎರಡು ದಿವಸಗಳಿಂದ ಅವಕಾಶ ಕೇಳುತ್ತಿದ್ದೇನೆ. ನಿನ್ನೆಯೇ ನನಗೆ ಬರಬೇಕಾಗಿತ್ತು.

**ಸಭಾಪತಿಯವರು:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಒಂದು ನಿಮಿಷ ಕೇಳಿ. ಲಿಸ್ಟ್‌ನಲ್ಲಿ ನಿಮ್ಮ ಹೆಸರೇ ಇದೆ. ಮಾನ್ಯ ಪಿ.ಆರ್. ರಮೇಶ್‌ರವರು ಎಲ್ಲಿಗೋ ಹೋಗಬೇಕಾಗಿದೆಯೆಂದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಎರಡು ದಿನಗಳಿಂದ ಇಲ್ಲಿಯೇ ಕುಳಿತಿದ್ದೇನೆ. ಇದರ ಸಲುವಾಗಿ ಊರಿಗೆ ಹೋಗುವುದನ್ನೂ ಬಿಟ್ಟಿದ್ದೇನೆ. ನಾನು ಸ್ವಲ್ಪ ಸಮಯ ಮಾತನಾಡುತ್ತೇನೆ. ಆಮೇಲೆ ಮಾನ್ಯ ಪಿ.ಆರ್. ರಮೇಶ್‌ರವರು ಮಾತನಾಡಲಿ.

**ಸಭಾಪತಿಯವರು:-** ಆಯಿತು. ನಿಮ್ಮ ನಂತರ ಮಾನ್ಯ ಪಿ.ಆರ್. ರಮೇಶ್‌ರವರು ಮಾತನಾಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಎರಡು ದಿವಸಗಳಿಂದ ಮಾತನಾಡಬೇಕೆಂದು ಕಾಯುತ್ತಾ ಕುಳಿತಿದ್ದೆ.

**ಸಭಾಪತಿಯವರು:-** ಆಯಿತು ಮಾತನಾಡಿ. ನಾನು ಪಾಳಿ ಬಿಟ್ಟು ಮಾಡಿಲ್ಲ. ಪಟ್ಟಿ ಪ್ರಕಾರ ನಿಮಗೆ ಅವಕಾಶ ಕೊಟ್ಟಿದ್ದೇನೆ.

## 7. ವಿತ್ತೀಯ ಕಾರ್ಯಕಲಾಪಗಳು

**2021-22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬಜೆಟ್‌ನ್ನು ನೋಡಿದಾಗ ಪ್ರಥಮವಾಗಿ ಯಾವ ಇಲಾಖೆಗೆ ಸಂಬಂಧಿಸಿದ ಉಲ್ಲೇಖವನ್ನು ಗಮನಿಸಿದರೂ ಕೂಡ ಇಲಾಖೆಗಳು ಯಾವುದೇ ಹೊಸ ಯೋಜನೆಗಳನ್ನು ಕೊಡುತ್ತಿರುವುದು ಕಾಣುತ್ತಾ ಇಲ್ಲ. ಕೆಲವು ಹಳೆಯ ಜನಪರ ಯೋಜನೆಗಳಿದ್ದವು. ಉದಾಹರಣೆಗೆ ಅನ್ನ ಭಾಗ್ಯ ಯೋಜನೆ ಮತ್ತು ಇಂದಿರಾ ಕ್ಯಾಂಟೀನ್. ಇವತ್ತು ಎಲ್ಲಾ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚುವಂತಹ ಪರಿಸ್ಥಿತಿ ಇರುವುದನ್ನು ದೂರದರ್ಶನದ ಮುಖಾಂತರ ನೋಡುತ್ತಿದ್ದೀರಿ. ಕೆಲವು ಮುಚ್ಚಿವೆ, ಇನ್ನೊಂದಿಷ್ಟು ಮುಚ್ಚುವುದರಲ್ಲಿವೆ. ಇನ್ನು ಒಂದು ವರ್ಷದಲ್ಲಿ ಪೂರ್ತಿ ಮುಚ್ಚುತ್ತಾರೆ ಎನ್ನುವ ಭಾವನೆ ಇದೆ. ಯಾವುದೇ ಬಜೆಟ್ ಮಾಡಲಿ, ಕಳೆದ ವರ್ಷ ಇಷ್ಟು ಬಜೆಟ್ ಇತ್ತು, ಅದರಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆ ಎಂಬುದನ್ನು ಉಲ್ಲೇಖ ಮಾಡಬೇಕಲ್ಲವೇ? ಈ ಬಜೆಟ್‌ನಲ್ಲಿ ಆ ಉಲ್ಲೇಖ ಕೂಡ ಇಲ್ಲ. ಎಸ್.ಸಿ.ಪಿ/ಟಿ.ಎಸ್.ಪಿ ಯಲ್ಲಿ ಹಣ ಇಟ್ಟಿರುತ್ತಾರೆ. ಪ್ರತಿ ವರ್ಷ ಶೇ. 24.1 ರಷ್ಟು ಹಣವನ್ನು ಎಸ್.ಸಿ.ಪಿ/ಟಿ.ಎಸ್.ಪಿ ಸಲುವಾಗಿ ಹರಿಜನ ಮತ್ತು ಗಿರಿಜನರ ಸಲುವಾಗಿ ಮೀಸಲಾಗಿ ಇರುವಂತಹ ಹಣವದು. ಕಳೆದ ಸಲ ಆ ಹಣವನ್ನು ಎಷ್ಟು ಮೀಸಲಿಟ್ಟಿದ್ದರು, ಎಷ್ಟು ಖರ್ಚಾಗಿದೆ, ಇನ್ನೂ ಎಷ್ಟು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಳಿದಿದೆ, ಅದೇನು lapsable or non-lapsable funds, ಅದನ್ನು ಬಜೆಟ್‌ನಲ್ಲಿ ಹೇಳಬೇಕಾಗಿತ್ತು. ಆದರೂ ಇವರು ಏನೂ ಮಾಡಿಲ್ಲ. ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ, ಎಸ್.ಸಿ.ಪಿ/ಟಿ.ಎಸ್.ಪಿ ಹಣವನ್ನು ಕಾನೂನು ಪ್ರಕಾರ ಮಾಡಬೇಕು. ಹಣವನ್ನು ಆ ಜನರಿಗೆ ಉಪಯೋಗ ಮಾಡಬೇಕೆಂದು ಒಂದು ಕಾನೂನಿದೆ. ಕಳೆದ ವರ್ಷ ಎಸ್.ಸಿ.ಪಿ/ಟಿ.ಎಸ್.ಪಿ ಹಣವನ್ನು ತಮಗೆ ಬೇಕಾದ ಗುತ್ತೇದಾರರುಗಳಿಗೆ ಸರ್ಕಾರ ಹಣ ಪಾವತಿ ಮಾಡಿದೆ. ಇದರ ಬಗ್ಗೆ ತನಿಖೆಯಾಗಬೇಕು. ಹೀಗೆ ಏತಕ್ಕೆ ಮಾಡಿದರು? ಈಗ ಕೋವಿಡ್ ಆಗಿರುವಂತಹ ಸಂದರ್ಭವಿದೆ, ಆ ಹಣವನ್ನು ಕೋವಿಡ್ ಸಲುವಾಗಿ ಉಪಯೋಗ ಮಾಡಲಾಗಿದೆಯೆಂದರೆ ನಮ್ಮದೇನೂ ಅಭ್ಯಂತರವಿಲ್ಲ. ನದಿಗಳಲ್ಲಿ ಪ್ರವಾಹ ಬಂದಿರುತ್ತದೆ. ಅಂತಹ ಸಂದರ್ಭದಲ್ಲಿ ಹಣವನ್ನು ಉಪಯೋಗ ಮಾಡಿದರೆ ಜನರಿಗೆ ತಕ್ಷಣವಾಗಿ ಸ್ಪಂದಿಸುವ ಸಲುವಾಗಿ ಆ ಹಣವನ್ನು ತೆಗೆದುಕೊಂಡಿದ್ದಾರೆ ಎಂದರೆ ಅದು ಸರಿಯಾದ ಕೆಲಸ. ಆದರೆ ಒಬ್ಬ ಗುತ್ತೇದಾರನಿಗೆ ಹಣ ಪಾವತಿ ಮಾಡುವ ಸಲುವಾಗಿ ಎಸ್.ಸಿ.ಪಿ/ಟಿ.ಎಸ್.ಪಿ ಹಣವನ್ನು ಬಳಸುತ್ತಾರೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಬಗ್ಗೆ ಇವರಿಗೆ ಎಷ್ಟು ಬದ್ಧತೆ ಇದೆಯೆಂಬುದು ತೋರಿಸುವ ಕೆಲಸವಿದು.

ನಾನು ಮುಖ್ಯವಾಗಿ ನನ್ನ ವಿಷಯವಾದ ಕೃಷಿ ವಿಚಾರಕ್ಕೆ ಬರುವುದಕ್ಕಿಂತ ಮುಂಚೆ ಮದ್ಯ ನಿಷೇಧದ ಬಗ್ಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಕಳೆದ ಡಿಸೆಂಬರ್‌ನಲ್ಲಿ ಹೈಕೋರ್ಟ್ ಒಂದು ಆದೇಶ ಮಾಡಿತು. ಏನೆಂದರೆ, ಅನಧಿಕೃತವಾದಂತಹ ಮದ್ಯವನ್ನು ಯಾರ್‍ಯಾರು ಮಾರುತ್ತಿದ್ದರೆ ಅದನ್ನು ಮಾರಬಾರದು ಎಂದು ಆದೇಶ ಮಾಡಿತು. ಆ ಆದೇಶವಾದ ಮೇಲೆ ಅಬಕಾರಿ ಇಲಾಖೆಗಳು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಕ್ರಮ ತೆಗೆದುಕೊಳ್ಳದಿದ್ದಕ್ಕೆ ಪ್ರತಿ ಜಿಲ್ಲೆಯಲ್ಲಿ ಎಲ್ಲಾ ಮಹಿಳೆಯರೂ ಧರಣಿಗೆ ಕುಳಿತಿದ್ದಾರೆ. ಮೊನ್ನೆ ಕೂಡ ಮುಖ್ಯಮಂತ್ರಿಯವರು ಚುನಾವಣಾ ಪ್ರಚಾರದ ಸಲುವಾಗಿ 'ಮಸ್ಕಿ'ಗೆ ಹೋಗಿದ್ದರು. ಅವತ್ತು ಸಾಕಷ್ಟು ಮಹಿಳೆಯರು ಹೈಕೋರ್ಟ್ ಆದೇಶವನ್ನು ಹಿಡಿದುಕೊಂಡು ಮುಖ್ಯಮಂತ್ರಿಯವರಿಗೆ ಮದ್ಯ ನಿಷೇಧದ ಬಗ್ಗೆ ದೂರು ಕೊಡುವುದಕ್ಕೆ ಬಂದಿದ್ದರು. ಆಗ ಪೊಲೀಸ್ ಇಲಾಖೆಯು ಮುಖ್ಯಮಂತ್ರಿಯವರಿಗೆ ದೂರು ಕೂಡ ಕೊಡದಂತೆ ನೋಡಿಕೊಂಡರು. ರಾಯಚೂರಿನಲ್ಲಿ ಸುಮಾರು 40 ದಿವಸಗಳಿಂದ ಗಾಂಧಿ ಪ್ರತಿಮೆಯ ಕೆಳಗೆ ನೂರಾರು ಮಹಿಳೆಯರು ಹೋರಾಟ ನಡೆಸುತ್ತಿದ್ದಾರೆ. ಅದನ್ನು ಒಬ್ಬರೂ ಕೇಳುವುದಕ್ಕೆ ಮತ್ತು ಹೇಳುವುದಕ್ಕೆ ತಯಾರಿಲ್ಲ. ಸರ್ಕಾರ ಈ ರೀತಿಯ ಧೋರಣೆ ಮಾಡುತ್ತಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಹೆಜ್ಜೆ ಇಡಬೇಕೆಂದು ತಮ್ಮ

ಮುಖಾಂತರ ಹೇಳುತ್ತೇನೆ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಾನ್ಯ ರಮೇಶ್‌ರವರಿಗೆ ಮಾತನಾಡುವುದಕ್ಕೆ ಹೇಳಿದ್ದೀರಿ.

**ಸಭಾಪತಿಯವರು:-** ಏನೂ ಇಲ್ಲ, ಮಾತನಾಡಿ. ನೀವು ಬಿಟ್ಟಾಗ ಅವರು ಮಾತನಾಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಕೃಷಿ ಮತ್ತು ನೀರಾವರಿ ಬಗ್ಗೆ ಸ್ವಲ್ಪ ತಮ್ಮ ಮುಖಾಂತರ ಬೆಳಕು ಚೆಲ್ಲಬೇಕೆಂದು ನನ್ನ ಆಸೆ. ಬೇರೆ ವಿಚಾರ ನನಗೆ ಜಾಸ್ತಿ ತಿಳಿಯುವುದಿಲ್ಲ. ನಿಮ್ಮ ಹಾಗೆ ನನಗೆ ರಾಜಕೀಯ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಸ್ವಲ್ಪ ವಿಷಯ ಸಿಕ್ಕಿದರೂ ಮೂರು ಗಂಟೆಗಳ ಕಾಲ ಬೇಕಾದರೂ ಮಾತನಾಡುತ್ತೀರಿ. ನನಗೆ ಅದು ತಿಳಿಯುವುದಿಲ್ಲ. ಅದು ತಿಳಿದಿದ್ದರೆ ನಾನೂ ಅಲ್ಲಿರುತ್ತಿದ್ದೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ನಿಮ್ಮ ನಸೀಬು ಸರಿಯಿಲ್ಲ.

**(ಮುಂದು)**

**(577) 23-03-2021/ 12-40/ ಕೆಹೆಚ್-ವಿಕೆ**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ನಾವು ಮತ್ತು ಮಾನ್ಯ ಎಸ್.ಆರ್.ಪಾಟೀಲ್‌ರವರು ಮೊದಲ ಬಾರಿ ಒಂದೇ ಸಮಯದಲ್ಲಿ ಆಯ್ಕೆಯಾಗಿ ಬಂದಿದ್ದೇವೆ. ಹಾಗೆಯೇ, ಮಾನ್ಯ ಬಸವರಾಜ ಬೊಮ್ಮಾಯಿಯವರು, ನಾವು, ಇವರು, ಮಾನ್ಯ ಸತೀಶ್ ಜಾರಕಿಹೊಳಿಯವರು ಮೊದಲ ಬಾರಿ ಆಯ್ಕೆಯಾಗಿದ್ದೇವೆ. ಈಗ ಇವರೆಲ್ಲಾ ಎಲ್ಲೆಲ್ಲಿ ಕುಳಿತುಕೊಂಡಿದ್ದಾರೆ ನೋಡಿ. ನಮ್ಮ ಹಣೆಬರಹ ಹೇಗಿದೆ ನೋಡಿ. ಇರಲಿ ಬಿಡಿ. ದೈವ ಇಚ್ಛೆ ಹಾಗೆ ಆಗಲಿ.

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರ ಜಾಗದಲ್ಲಿ ತಮ್ಮನ್ನು ನೋಡಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಬೇಡ. ಅರ್ಹತೆ ಬಂದಾಗ ಕುಳಿತುಕೊಳ್ಳುತ್ತೇವೆ. ಇಲ್ಲದಿದ್ದರೆ ಮನೆಯಲ್ಲಿ ಇರುತ್ತೇನೆ. ಅದಕ್ಕೇನೂ ತೊಂದರೆ ಇಲ್ಲ. ಈ ವರ್ಷ ಕೃಷಿ ಮತ್ತು allied ಗೆ ಸುಮಾರು 31,028 ಕೋಟಿ ರೂಪಾಯಿಗಳ ಅನುದಾನವನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆ. ತಮ್ಮ ಮುಖಾಂತರ ನನ್ನ ವಿನಂತಿಯೇನೆಂದರೆ, ಈ ಬಜೆಟ್‌ನಲ್ಲಿ committed expenditure ಇರುತ್ತದೆ. ಸುಮ್ಮನೆ ಎರಡು ಲಕ್ಷ ಕೋಟಿ, ಎರಡೂವರೆ ಲಕ್ಷ ಕೋಟಿ ರೂಪಾಯಿಗಳನ್ನು ಮಾಡುವುದಕ್ಕಿಂತ, committed ನಲ್ಲಿ ಈ ಸಂಬಳದೆಲ್ಲಾ ತೆಗೆಯಬೇಕು. ಭಾಗ-1, ಭಾಗ-2 ಎಂದು ಬಜೆಟ್ ಅನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಡಬೇಕು. ಭಾಗ–1 ರಲ್ಲಿ committed expenditure ಬಗ್ಗೆ ಮಾಡಬೇಕು. ವರ್ಷ ಪೂರ್ತಿ ಗಾತ್ರ ನೋಡುವುದು, 3 ಲಕ್ಷ ಕೋಟಿ ರೂಪಾಯಿಗಳು ಆಯಿತು ಎಂದು ಹೇಳುವುದು. ಅಲ್ಲಿ committed expenditure ಗೆ ಎರಡೂವರೆ ಲಕ್ಷ ಕೋಟಿ ರೂಪಾಯಿಗಳು ಆಗುತ್ತದೆ. ಭಾಗ–2 ರಲ್ಲಿ ಅಭಿವೃದ್ಧಿ ಕೆಲಸಗಳು ಏನೇನು ಮಾಡುತ್ತೇವೆ ಎಂದು ಅದರಲ್ಲಿ ಮಾಡಬೇಕು. ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಅನುದಾನ ಕೊಡುತ್ತೇವೆ ಎಂದು ಮಾಡಿ. ಸುಮ್ಮನೆ 30 ಸಾವಿರ ಇದೆಯೆಂದರೆ, 28 ಸಾವಿರ ಸಂಬಳವನ್ನು ಕೊಟ್ಟು, ಒಂದು ಸಾವಿರ ರೂಪಾಯಿಗೆ ನಾವು ಕೃಷಿಯಲ್ಲಿ ಹೀಗೆ ಮಾಡಿದ್ದೇವೆ. ನೀರಾವರಿಗೆ ಇಷ್ಟು ಅನುದಾನವನ್ನು ಕೊಟ್ಟಿದ್ದೇವೆ ಎನ್ನುವಂತಹದ್ದು ನನ್ನ ಅನಿಸಿಕೆಯಾಗಿದೆ. ಇದನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಮುಂದಿನ ಬಾರಿ ಬಜೆಟ್ ತೆಗೆದುಕೊಂಡು ಬರಬೇಕಾದರೆ committed expenditure ಗೆ ಬೇರೆ ತೆಗೆದುಕೊಂಡು ಬನ್ನಿ. ಅಭಿವೃದ್ಧಿ ಕೆಲಸಗಳಿಗೆ ಬೇರೆ ತೆಗೆದುಕೊಂಡು ಬನ್ನಿ. ಇವೆಲ್ಲಾ ಅಂಶಗಳು ಒಂದೇ ಪುಸ್ತಕದಲ್ಲಿ ಇರಲಿ. ತಾವು committed expenditure ಎಂದು ತೋರಿಸಿ. ತಾವು ಸಂಬಳ ಎಂದು ಕೊಡಬೇಕಾಗಿಲ್ಲ. ಶಿಕ್ಷಕರಿಗೆ ಕೊಡಬೇಕು. ಅಧಿಕಾರಿಗಳಿಗೆ ಕೊಡಬೇಕು. ಇದನ್ನು ಖಾಯಂ ಆಗಿ ಕೊಡಬೇಕಾಗಿರುವುದೇ ಆಗಿರುತ್ತದೆ. ಅದನ್ನು ಬಜೆಟ್‌ನಲ್ಲಿ ಏಕೆ ತರುವುದು. Part-1, part-2 ಎಂದು ಇಟ್ಟು. ಭಾಗ–2 ರಲ್ಲಿ ಪೂರ್ಣವಾಗಿ ಅಭಿವೃದ್ಧಿ ಕೆಲಸಗಳ ಬಜೆಟ್ ಎಂದು ಹೇಳಬೇಕು. ಯಾವ್ಯಾವ ಇಲಾಖೆಗಳಿಗೆ ಎಷ್ಟು ಅನುದಾನವನ್ನು ಕೊಡಲಾಗಿದೆ. ಎಷ್ಟು expenditure ಆಗಿದೆ. ನಂತರ ಕಳೆದ ಬಾರಿ ಎಷ್ಟು ಅನುದಾನವನ್ನು ಕೊಡಲಾಗಿದೆ. ಅದರಲ್ಲಿ ಎಷ್ಟು ಉಳಿದಿದೆ. ಅದನ್ನು ಕೂಡಾ ಉಲ್ಲೇಖ ಮಾಡುವಂತಹದ್ದು ಆಗಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ.

ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೆ ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರು ಸುಮಾರು 2022 ರ ಒಳಗೆ ನಮ್ಮ ರೈತರ ಆದಾಯವನ್ನು ದುಪ್ಪಟ್ಟು ಮಾಡುವಂತಹ ಕನಸು ಇದೆ ಎನ್ನುವಂತಹ ಮಾತನ್ನು ಸುಮಾರು 5–6 ವರ್ಷಗಳ ಹಿಂದೆ ಹೇಳಿದ್ದಾರೆ. ಆ ದುಪ್ಪಟ್ಟು ಮಾಡುವುದರಲ್ಲಿ ಏನಾಗಿದೆ ಎನ್ನುವಂತಹದ್ದು ಕೂಡ ನಾವು ಪರಾಮರ್ಶೆ ಮಾಡುವಂತಹದ್ದು ಬಹಳ ಮುಖ್ಯವಾಗಿದೆ. ಏಕೆಂದರೆ, ರಾಜ್ಯ ಸರ್ಕಾರ ಕೂಡ ಇದನ್ನು ಅಳವಡಿಸಬೇಕಾಗುತ್ತದೆ. ಇನ್ನು 5 ವರ್ಷಗಳಲ್ಲಿ ಪ್ರತಿಯೊಬ್ಬ ರೈತನ ಆದಾಯ ದುಪ್ಪಟ್ಟು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ, ರಾಜ್ಯ ಸರ್ಕಾರ ಏನು ಮಾಡಿದೆ. ಇವತ್ತಿನವರೆಗೂ ರಾಜ್ಯ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿಲ್ಲ. ಅದಲ್ಲದೇ,

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಮುಖ್ಯಮಂತ್ರಿಯವರಾದ ಮಾಜಿ ಹೆಚ್.ಡಿ.ಕುಮಾರಸ್ವಾಮಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಇವತ್ತು ಆದಾಯವನ್ನು ದುಪ್ಪಟ್ಟು ಮಾಡುವ ಬದಲು inputs and ಖರ್ಚು ದುಪ್ಪಟ್ಟು ಆಗಿದೆಯೇ ಹೊರತು, ಆದಾಯ ದುಪ್ಪಟ್ಟು ಆಗಿಲ್ಲ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಸ್ವಾಮಿನಾಥನ್ ಆಯೋಗದ ವರದಿಯನ್ನು ಕೊಟ್ಟಿದ್ದಾರೆ. ನಾವು ದೇಶದಲ್ಲಿ ಈ ಕೃಷಿಯನ್ನು ಹೇಗೆ ಅಭಿವೃದ್ಧಿಪಡಿಸಬೇಕು? ಮೂಲತಃ ಶೇಕಡಾ 72 ರಿಂದ ಶೇಕಡಾ 80 ರಷ್ಟು ಜನರು they are dependent on agriculture. ನಂತರ ಕೃಷಿ ಮೂಲದಿಂದಲೇ ನಮ್ಮ ಬದುಕು. ಉಳಿದಿದ್ದೆಲ್ಲಾ ಶೇಕಡಾ 25 ರಿಂದ 30 ರಷ್ಟು subsidiary ಇದ್ದ ಹಾಗೆ ಇರುತ್ತದೆ. ಈ ಜನಾಂಗವನ್ನು ಮತ್ತು ಈ ರೈತ ಸಮೂಹವನ್ನು ಯಾವ ರೀತಿ ಮೇಲಕ್ಕೆ ಎತ್ತಬೇಕು. ಯಾವ ರೀತಿ ನಮ್ಮ ದೇಶವನ್ನು sustain ಮಾಡಬೇಕು. ನಮ್ಮ ದೇಶದ ಆದಾಯವನ್ನು ಹೆಚ್ಚು ಮಾಡುವಂತಹದ್ದು ಈ ಸ್ವಾಮಿನಾಥನ್ ಆಯೋಗ ವರದಿಯನ್ನು ಮಾಡಿಕೊಟ್ಟಿದೆ. ಯಾವ ಸರ್ಕಾರವೂ ಕೂಡ ಈ ಸ್ವಾಮಿನಾಥನ್ ಆಯೋಗದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಸ್ವಾಮಿನಾಥನ್ ವರದಿಯಲ್ಲಿ ಬಹಳ ಸ್ವಚ್ಛವಾಗಿ ಹೇಳಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಯೆಂದರೆ, ಇವತ್ತು ಒಬ್ಬ ರೈತ ಒಂದು ರೂಪಾಯಿಯನ್ನು ಹೂಡಿಕೆ ಮಾಡಿದರೆ, ಅವನಿಗೆ ಎರಡೂವರೆ ರೂಪಾಯಿ ಬರುತ್ತದೆ. 10 ಸಾವಿರ ರೂಪಾಯಿಗಳನ್ನು ಹೂಡಿಕೆ ಮಾಡಿದರೆ, ಅವನಿಗೆ 25 ಸಾವಿರ ರೂಪಾಯಿಗಳು ಬರಬೇಕು. ಆ ರೀತಿಯಾದಾಗ ಮಾತ್ರ ಮುಂದೆ ಕೃಷಿ ಮಾಡುವುದಕ್ಕೆ ಆ ರೈತನಿಗೆ ಶಕ್ತಿ ಇರುತ್ತದೆ. ಇಲ್ಲದಿದ್ದರೆ ಶಕ್ತಿ ಬರುವುದಕ್ಕೆ ಸಾಧ್ಯ ಇಲ್ಲ. ಎಲ್ಲಾ ಸರ್ಕಾರಗಳು ಬಹಳಷ್ಟು ವರ್ಷಗಳಿಂದ ರೈತರನ್ನು ತುಳಿತಕ್ಕೆ ಒಳಪಡಿಸುತ್ತಲೇ ಬಂದಿದ್ದಾರೆ.

ಇವತ್ತು ಫ್ಯಾಕ್ಟರಿಯವನು ಒಂದು ಬಲ್ಬ್ ಅನ್ನು ಮಾರಬೇಕಾದರೆ, ಅವನು ಒಂದು ಎಲ್.ಇ.ಡಿ., ಬಲ್ಬ್ ಅನ್ನು 25 ರೂಪಾಯಿಗಳಿಗೆ ಮಾರಾಟ ಮಾಡಬೇಕೆಂದು ನಿಗದಿ ಮಾಡುತ್ತಾನೆ. ಆದರೆ, ರೈತರಿಗೆ ಒಂದು ಬೆಲೆಯನ್ನು ನಿಗದಿ ಮಾಡುವುದಕ್ಕೆ ಯಾವುದಾದರೂ ಅವಕಾಶವನ್ನು ಕೊಡಲಾಗಿದೆಯೇ, ಇವತ್ತಿನವರೆಗೂ ಕೊಟ್ಟಿಲ್ಲ. 10 ರೂಪಾಯಿ ಬೆಲೆ ಇದ್ದರೆ, ಇವರು 2 ರೂಪಾಯಿಗೆ ಮಾರಾಟ ಮಾಡಬೇಕೆಂದು ಹೇಳುತ್ತಾರೆ. ಇವತ್ತಿನ ದಿವಸ ಆ ರೀತಿಯ ಪರಿಸ್ಥಿತಿಯನ್ನು ತಂದಿದ್ದಾರೆ. ಎಲ್ಲಾ ಸರ್ಕಾರಗಳು ರೈತರಿಗೆ ಒಂದು ರೀತಿಯಲ್ಲಿ ಶೋಷಣೆ ಮಾಡಿಕೊಂಡು ಬಂದಿದ್ದಾರೆ. ಇವತ್ತು ರೈತರು ಕೂಡ ಎದ್ದು ಕುಳಿತುಕೊಂಡಿದ್ದಾರೆ. ಸ್ವಾಮಿನಾಥನ್ ಆಯೋಗದ ವರದಿಯಲ್ಲಿ MSP (Minimum

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Support Price) ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತಿನ ದಿವಸ ಸಾಕಷ್ಟು ವಿಷಯಗಳು ಬಂದಾಗ ಮಾನ್ಯ ಮುಖ್ಯಮಂತ್ರಿಯವರಾಗಲಿ, ಕೃಷಿ ಸಚಿವರಾಗಲಿ ಮಾತನಾಡಿದರು. ಭಾರತ ಸರ್ಕಾರ ಮತ್ತು ನಮ್ಮ ಸರ್ಕಾರ MSP ಅನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಒಬ್ಬ ರೈತನಿಗೆ ಕನಿಷ್ಠವಾದ ಬೆಲೆ ಸಿಗಬೇಕೆನ್ನುವುದನ್ನು minimum support price ಎಂದು ಕರೆಯುತ್ತಾರೆ. MSP ಅನ್ನು ತಾವು ಕುಳಿತುಕೊಂಡು ಘೋಷಣೆ ಮಾಡಿದರೆ ಆಗುವುದಿಲ್ಲ. That is not a minimum support price. Minimum support price ಬರಬೇಕಾದರೆ it should be legalized.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರಾದ ಎಂ.ಕೆ.ಪ್ರಾಣೇಶ್‌ರವರು ಸಭಾಪೀಠವನ್ನು ಅಲಂಕರಿಸಿದರು.)**

ಇವತ್ತು ಇವರು Rs. 6,200 or 6,300 for Toor ಎಂದು ಘೋಷಣೆ ಮಾಡಿದ್ದಾರೆ. ಅದನ್ನು mandatory ಮಾಡಬೇಕು. 6200 ಕೆಳಗೆ ಮಾಡಕೂಡದು. ಆ ರೀತಿಯಾದಾಗ ಮಾತ್ರ minimum support price ಗೆ value ಇದೆ. ಇಲ್ಲದಿದ್ದರೆ ಅದಕ್ಕೆ ಬೆಲೆ ಎಲ್ಲಿದೆ? Unless you legalize that minimum support price. ಅದೇನೂ ಕೆಲಸಕ್ಕೆ ಬರುವುದೇ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕೆ buyers ಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಮೊದಲು mandatory ಮಾಡಬೇಕು. MSP ಅನ್ನು declare ಮಾಡಿ ಘೋಷಣೆ ಮಾಡುತ್ತಾರೆ. MSP ಗೆ ಹೋಗುತ್ತದೆಯೇ, ಹೋಗುವುದಿಲ್ಲ. Buyers ಇಲ್ಲದಿದ್ದರೆ Government has to take action.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಕೇಂದ್ರ ಸರ್ಕಾರದವರು ಸಕ್ಕರೆ ಕಾರ್ಖಾನೆಯಲ್ಲಿ 31 ರೂಪಾಯಿಗೆ ಒಂದು ಕೆ.ಜಿ., ಸಕ್ಕರೆಯನ್ನು ಮಾರಾಟ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದಾರೆ. ಮಾನ್ಯ ಸಚಿವರಾದ ಶ್ರೀಮಂತ್ ಬಾಳಾ ಸಾಹೇಬ್ ಪಾಟೀಲ್‌ರವರೇ, ಒಂದು ಕೆ.ಜಿ., ಸಕ್ಕರೆ 31 ರೂಪಾಯಿಗೆ ಮಾರಾಟವಾಗುತ್ತದೆಯಲ್ಲವೇ, ಹಾಗೆಯೇ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ಕ್ವಿಂಟಾಲ್ ಸಕ್ಕರೆಗೆ 3100 ರೂಪಾಯಿಗಳು ಆಗುತ್ತದೆ. 3000 ರೂಪಾಯಿಗಳ ಒಳಗೂ ಸಹ ಮಾರಾಟವಾಗುತ್ತದೆ. ಖರೀದಿ ಮಾಡುವುದಕ್ಕೆ ಯಾರು buyers ಇಲ್ಲ. ಕೇಂದ್ರ ಸರ್ಕಾರ ಮತ್ತು ನಾವು 3100 ರೂಪಾಯಿಗಳಿಗೆ receipt ಹರಿಯಬೇಕು. ಏನಾದರೂ ಕಡಿಮೆಯಾದರೆ ಅದು offence ಆಗುತ್ತದೆ. ಕೇಂದ್ರ ಸರ್ಕಾರದಿಂದ ಇಷ್ಟು ನಿರ್ದೇಶನಗಳು ಇದ್ದರೂ ಕೂಡ ಇಷ್ಟೆಲ್ಲಾ ನೋಡಿ, 3100 ರೂಪಾಯಿಗಳ ಒಳಗೆ ಮಾರಾಟ ಮಾಡಿದರೆ ದಂಡ ವಿಧಿಸುವಂತಹ ವ್ಯವಸ್ಥೆ ಇದ್ದರೂ ಕೂಡ 3000 ರೂಪಾಯಿಗಳಿಗೆ ಮಾರಾಟವಾಗುತ್ತದೆ. ಇದ್ದರಿಂದ, ಇವರಿಗೆ ಬಹಳ ಕಷ್ಟವಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾನು ಅದಕ್ಕೆ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಕ್ಕರೆ ಮಾರಾಟ ಮಾಡಲಿಲ್ಲವೆಂದರೆ ಗತಿ ಏನು? ಇದನ್ನು ತೆಗೆದುಕೊಳ್ಳುವವರೇ ಇಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಮ್ಮ ನಾಯಕರಾದ ಎಸ್.ಆರ್.ಪಾಟೀಲ್‌ರವರಿಗೆ ಹೇಳಬಯಸುತ್ತೇನೆ. ಮೊದಲು ಎಂ.ಎಸ್.ಪಿ., ಅನ್ನು mandatory ಮಾಡಿ ಎಂದು ಕೇಳಿದ್ದಾರೆ. Legalize ಅದಕ್ಕೆ ಮಾಡಿ ಎಂದು ಹೇಳಿದರು. ರೈತರು ನಾಳೆ 10 ರೂಪಾಯಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆಗ ತಾವು ಏನು ಮಾಡುತ್ತೀರಿ. ಪ್ರತಿಯೊಂದಕ್ಕೂ ಎಂ.ಎಸ್.ಪಿ., ದರವನ್ನು ನಿಗದಿ ಮಾಡಿ, ಅದನ್ನು mandatory ಮಾಡಬೇಕು. ಅದನ್ನು legalize ಮಾಡಬೇಕು, all over India for all the crops. ತಾವು ಒಂದು ವೇಳೆ ಈಗ ಕಡಿಮೆ ದರಕ್ಕೆ ಹೋಗುತ್ತದೆ ಎಂದು ಹೇಳಿದ್ದೀರಿ. Government intervention ಆಗಬೇಕು. ಪ್ರತಿವರ್ಷ 10 ಸಾವಿರ, 20 ಸಾವಿರ ಕೋಟಿ ರೂಪಾಯಿಗಳು, ಒಂದು ಲಕ್ಷ ಕೋಟಿ ರೂಪಾಯಿಗಳು ರಾಜ್ಯ ಸರ್ಕಾರಕ್ಕೆ ಬಂದರೆ, ಕೇಂದ್ರ ಸರ್ಕಾರ NAFED (National Agricultural Cooperative Marketing Federation of India) ಗಳಿಗೆ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು revolving fund ಅನ್ನು ಇಡಬೇಕು. ಮಾರುಕಟ್ಟೆಯನ್ನು revolve ಮಾಡಬೇಕು. ಕೇಂದ್ರ ಸರ್ಕಾರ ನಾವೆಲ್ಲಾ ಮುಕ್ತ ಮಾಡಿದ್ದೇವೆ ಎಂದು ಹೇಳಿದೆ. ಹೌದು, ಈಗ ತಾವು ಎಲ್ಲಾ ಮುಕ್ತ ಮಾಡಿದ್ದೀರಿ. ಈಗ ತಾವು ಹೇಳಿದ ಹಾಗೆ under-price ಗೆ ಖರೀದಿ ಮಾಡುತ್ತಾರೆ. 4 ವಲಯಗಳಲ್ಲಿ 4 ಗೋಡೌನ್‌ಗಳು

ತಯಾರಾಗಿವೆ. North Zone, East Zone, West Zone and Central Zone. ಇವತ್ತು ಈ ಎಲ್ಲಾ ವಲಯಗಳಲ್ಲಿ ದೊಡ್ಡ ದೊಡ್ಡ Industrialist ಯವರು ಲಕ್ಷಗಟ್ಟಲೆ capacity ಇರುವಂತಹ ದೊಡ್ಡ ದೊಡ್ಡ ಗೋಡೌನ್‌ಗಳನ್ನು ಮಾಡಿದ್ದಾರೆ. ಶೀತಲ ಗೃಹಗಳನ್ನು ಸಹ ಮಾಡುತ್ತಿದ್ದಾರೆ. ಇವತ್ತು under price, ಅಂದರೆ, 6100 ರೂಪಾಯಿಗೆ ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಜಾಸ್ತಿ ಬಂದಾಗೆಲ್ಲಾ 6800 ರೂಪಾಯಿಗೆ ಹೋಗುತ್ತದೆ. ಇದನ್ನೆಲ್ಲಾ ತೆಗೆದುಕೊಂಡು ಗೋಡೌನ್‌ನಲ್ಲಿ 6 ತಿಂಗಳು ಹಾಗೆಯೇ ಇಟ್ಟಿರುತ್ತಾರೆ. ನಂತರ ಇದನ್ನು ಮಾರುಕಟ್ಟೆಯಲ್ಲಿ regulate ಮಾಡುತ್ತಾರೆ. ಮೊದಲು 6500 ರೂಪಾಯಿಗೆ ಖರೀದಿ ಮಾಡುವುದಕ್ಕೆ ಪ್ರಾರಂಭವಾಗುತ್ತದೆ. ಆಗ ತಾವು ಏನು ಮಾಡುತ್ತೀರಿ? ಆಗ Essential Commodity Act ಕೂಡ ಇರುವುದಿಲ್ಲ. ಏಕೆಂದರೆ, ತಾವು ಫ್ರೀ ಮಾಡಿದ್ದೀರಿ. ಇನ್ನು ತೆಗೆದುಕೊಳ್ಳುವ ವಿಚಾರ ಎಲ್ಲಿ ಬಂದಿತು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಈ ಕಾಯ್ದೆಯನ್ನು ತೆಗೆದಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗ ಇದನ್ನು ತೆಗೆದುಬಿಟ್ಟಿದ್ದಾರೆ. Essential Commodity Act ಇದ್ದರೆ, 3 ರಿಂದ 4 ತಿಂಗಳು ಇಟ್ಟುಕೊಳ್ಳಬಹುದು. ನಂತರ ಅದನ್ನು disburse ಮಾಡಬೇಕೆನ್ನುವುದು ಇರುತ್ತಿತ್ತು. ಈಗ Essential Commodity Act ಹೋಗಿದೆ. ಈಗ ತಾವು ಏನು ಮಾಡುತ್ತೀರಿ. ಇವರು ಎಲ್ಲಾ ಬೆಳೆಗಳಲ್ಲಿ ಈ ರೀತಿ ಮಾಡುತ್ತಾರೆ ಎಂದು ನಾನು ಹೇಳುತ್ತಿಲ್ಲ. ಮುಖ್ಯವಾಗಿ ಯಾವ್ಯಾವ ಬೆಳೆಗಳು ಇರುತ್ತವೋ, ಅದಕ್ಕೆ ಮಾಡುತ್ತಾರೆ. ಉದಾಹರಣೆಗೆ ಮೆಣಸಿನಕಾಯಿಯನ್ನು ತೆಗೆದುಕೊಂಡರೆ, ಕಳೆದ ವರ್ಷ ಮಳೆ ಬಂದು ಮೆಣಸಿನಕಾಯಿ ಸಿಗದೇ ಇರುವ ರೀತಿಯಾಯಿತು. ಇದರ ಬಗ್ಗೆ ಮಾನ್ಯ ಸಚಿವರಾದ ಆರ್.ಶಂಕರ್‌ರವರಿಗೆ ಗೊತ್ತಿರಬಹುದು. ರಾಣೆಬೆನ್ನೂರಿನ ಬ್ಯಾಡಗಿ ಮೆಣಸಿನಕಾಯಿ ಒಂದು ಕ್ವಿಂಟಾಲ್ 51 ಸಾವಿರ ರೂಪಾಯಿಗೆ ಮಾರಾಟವಾಗಿದೆ ಎಂಬುದು ತಮಗೆ ಗೊತ್ತಿದೆಯೋ, 51 ಸಾವಿರ ರೂಪಾಯಿಗೆ ಬ್ಯಾಡಗಿ ಕಡ್ಡಿ ಮಾರಾಟವಾಗಿದೆ. ಈ ರೀತಿಯ ಸಂದರ್ಭ ಬಂದರೆ ಹ್ಯಾಗೆ? ಅದನ್ನು ಅಲ್ಲಿ exploitation ಮಾಡುತ್ತಾರೆ. ಒಂದು ವೇಳೆ Essential Commodity Act ಇತ್ತು. Regulate ಮಾಡುವುದು ಇದೆಯೆಂದರೆ, 3 ತಿಂಗಳಿಗಿಂತ ಹೆಚ್ಚು ಯಾರು ಇಡುವಂತಹದ್ದಲ್ಲ. Disburse ಮಾಡಬೇಕೆಂಬ ಬಗ್ಗೆ ಒಂದು ಕಾನೂನು ಇದ್ದರೆ, ತಾನಾಗಿಯೇ ಅದು circulate ಆಗುತ್ತಿತ್ತು. ಇವತ್ತು ಆ ರೀತಿಯ ಯಾವುದೇ ಕಾನೂನುಗಳು ಇಲ್ಲದೇ ಇರುವುದಕ್ಕೆ ಈ ರೀತಿಯ ಸಮಸ್ಯೆಯಾಗುತ್ತಿದೆ. ಇವತ್ತಿನ ದಿವಸ ರೈತರು ಏಕೆ ಧರಣಿ ಮಾಡುತ್ತಿದ್ದಾರೆ? **(ಮುಂದು)**

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(578) 23/03/2021/ಎಸ್‌ಪಿಆರ್/ಬಿಎನ್‌ಎಸ್/12:50 (ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ಇವತ್ತಿನ ದಿವಸ ರೈತರು ಧರಣಿಗಳನ್ನು ಏಕೆ ಮಾಡುತ್ತಿದ್ದಾರೆ? 'ನಮ್ಮಲ್ಲಿನ ಎಲ್ಲವನ್ನೂ ನೀಡಿ, ಅವರಿಂದ ಕೈಗೆ ಬೇಡಿಯನ್ನು ಹಾಕಿಸಿಕೊಳ್ಳುವಂತಹ ಪರಿಸ್ಥಿತಿಯುಂಟಾಗಿದೆ' ಎನ್ನುವ ಮಾತನ್ನು ಪ್ರತಿ ಜಿಲ್ಲೆಯ ಹಾಗೂ ಪ್ರತಿ ರಾಜ್ಯದ ರೈತರು ಹೇಳುತ್ತಿರುವುದನ್ನು ನಾವು ನೋಡಿದ್ದೇವೆ. ಹೀಗಾಗಿ ಇವುಗಳೆಲ್ಲವನ್ನೂ ಕಾನೂನುಬದ್ಧಗೊಳಿಸುವುದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂತನೆ ಮಾಡಬೇಕು. ಅದನ್ನು ಬಿಟ್ಟು, ಕೇವಲ ರೈತರಿಗೆ ಅವರ ಆದಾಯವನ್ನು ದ್ವಿಗುಣಗೊಳಿಸುತ್ತೇವೆ ಎನ್ನುವ ಭರವಸೆಯನ್ನು ನೀಡಿದರೆ ಸಾಕಾಗುವುದಿಲ್ಲ. ಇಲ್ಲಿಯವರೆಗೆ ರೈತರ ಯಾವ ಆದಾಯವನ್ನು ಕೇಂದ್ರ ಸರ್ಕಾರವು ದ್ವಿಗುಣಗೊಳಿಸಿದೆ? ರೈತರಿಗೆ ಯಾವುದಾದರೂ ಒಂದು ಸಹಾಯವನ್ನು ಸರ್ಕಾರವು ಮಾಡಿದೆಯೇ? ಕೇವಲ ರೈತರ ಸಾಲವು ಮಾತ್ರವೇ ದ್ವಿಗುಣಗೊಂಡಿದೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವ ಯೋಜನೆಯನ್ನು 2023 ನೇ ಸಾಲಿನವರೆಗೆ ಘೋಷಿಸಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು 2021 ನೇ ಇಸವಿಗೆ ಕಾಲಿಟ್ಟಿದ್ದೇವೆ. ಇಷ್ಟು ಹೊತ್ತಿಗೆ ಕೇಂದ್ರ ಸರ್ಕಾರವು ರೈತರ ಆದಾಯವನ್ನು 10 ಪೈಸೆಗಳಷ್ಟಾದರೂ ದ್ವಿಗುಣಗೊಳಿಸಬೇಕಾಗಿತ್ತು. ಈಗಾಗಲೇ cost of input ನ ಮೊತ್ತವು ದ್ವಿಗುಣಗೊಂಡಿದೆ.

ನಾವು ಉತ್ಪಾದಿಸಿದ ಆಹಾರ ಧಾನ್ಯ, ತರಕಾರಿ ಮತ್ತಿತರೆ ಆಹಾರ ಪದಾರ್ಥಗಳನ್ನು ಇವತ್ತಿನ ದಿವಸ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಖರೀದಿಸುತ್ತಿಲ್ಲ. ಈ ಹಿಂದೆ ನಮ್ಮ ರಾಜ್ಯ ಹಾಗೂ ರಾಯಚೂರು ಭಾಗದಲ್ಲಿ ಬೆಳೆದ 'ಸೋನಾ ಮಸೂರಿ' ಅಕ್ಕಿಯನ್ನು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿತ್ತು. ಆಗ ನಮಗೆ ಒಳ್ಳೆಯ ಬೆಲೆಯು ದೊರೆಯುತ್ತಿತ್ತು. ಆದರೆ ಇತ್ತೀಚಿನ 7-8 ವರ್ಷಗಳಿಂದ ಸದರಿ 'ಸೋನಾ ಮಸೂರಿ' ಅಕ್ಕಿಯು ರಫ್ತಾಗುತ್ತಿಲ್ಲ. ಸದರಿ ಆಹಾರ ಪದಾರ್ಥಗಳ ಮೇಲಿರುವ residual effect ಇದಕ್ಕೆ ಕಾರಣವಾಗಿದೆ. ಇವತ್ತಿನ ದಿವಸ ನಾವು ಕೀಟನಾಶಕ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೈರೆಥ್ರಾಯ್ಡ್, ರಾಸಾಯನಿಕ ಇತ್ಯಾದಿಗಳನ್ನು ಬಳಸುತ್ತಿದ್ದೇವೆ. ನಾವು ಬೆಳೆದ ಆಹಾರ ಪದಾರ್ಥಗಳ ಮೇಲೆ chemical residual effect ಇರುವುದರಿಂದ, ಅವರು ಸದರಿ ಆಹಾರ ಪದಾರ್ಥಗಳನ್ನು ಪರೀಕ್ಷಿಸಿ, 'ನಿಮ್ಮ ಮಾಲನ್ನು ನಾವು ತಿರಸ್ಕರಿಸುತ್ತೇವೆ' ಎಂದು ಬಹಳ ಸ್ಪಷ್ಟವಾಗಿ ತಿಳಿಸುತ್ತಾ, 'ನೀವು ಬೆಳೆದ ಆಹಾರ ಪದಾರ್ಥಗಳನ್ನು ನಮಗೆ ಕಳುಹಿಸಬೇಡಿ' ಎಂಬ ಮಾತನ್ನು ಹೇಳಿರುತ್ತಾರೆ. ಇದರ ಬಗ್ಗೆ ಸರ್ಕಾರವು ಯಾವ ಚಿಂತನೆಯನ್ನು ಮಾಡಿದೆ? ಇದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರಗಳು ಏನು ಮಾಡಿವೆ ಎಂದು ನಾನು ಕೇಳಲಿಚ್ಛಿಸುತ್ತೇನೆ.

ಇವತ್ತಿನ ದಿವಸ ಕೃಷಿ ವಿಶ್ವವಿದ್ಯಾಲಯಕ್ಕೆ ಒಂದು ಪೈಸೆಯಷ್ಟೂ ಸಹಾಯಾನುದಾನವನ್ನು ಸರ್ಕಾರವು ನೀಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ನಮ್ಮಲ್ಲಿನ 4-5 ಕೃಷಿ ವಿಶ್ವವಿದ್ಯಾಲಯಗಳು ಹೇಗೆ ಸಂಶೋಧನೆ ಮಾಡಬೇಕು? ಉದಾಹರಣೆಗೆ ಹೇಳುವುದಾದರೆ, ಕೃಷಿ ವಿಶ್ವವಿದ್ಯಾಲಯಕ್ಕೆ ಸರ್ಕಾರವು 6 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದರೆ, ಅಲ್ಲಿ 5.90 ಕೋಟಿ ರೂಪಾಯಿಗಳು ಕೇವಲ salary component ಸಲುವಾಗಿಯೇ ಹೋಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ವಿಶ್ವವಿದ್ಯಾಲಯಗಳು ಎಲ್ಲಿಂದ ಸಂಶೋಧನೆಯನ್ನು ಮಾಡುತ್ತವೆ? ಕೃಷಿ ವಿಶ್ವವಿದ್ಯಾಲಯಗಳಿಗೆ ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಇವತ್ತಿನ ದಿವಸ ICAR (Indian Council of Agricultural Research) ಸಂಸ್ಥೆಯು ಅಲ್ಪ ಪ್ರಮಾಣದ ಹಣವನ್ನು ಕೃಷಿ ವಿಶ್ವವಿದ್ಯಾಲಯಗಳಿಗೆ ನೀಡುತ್ತಿದ್ದು, ಅಲ್ಪ ಪ್ರಮಾಣದ ಸಂಶೋಧನೆಯು ನಡೆಯುತ್ತಿದೆ. ಒಂದು ವೇಳೆ ಐ.ಸಿ.ಎ.ಆರ್.ಸಂಸ್ಥೆಯು ಅನುದಾನ ನೀಡುವುದನ್ನು ಸ್ಥಗಿತಗೊಳಿಸಿದರೆ, ರಾಜ್ಯ ಸರ್ಕಾರವು ಏನು ಮಾಡುತ್ತದೆ? ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ಎಳ್ಳಷ್ಟೂ ಪ್ರಮಾಣದಲ್ಲಿ ಒದಗಿಸದೇ, ಕೇವಲ 'ಅದು ಮಾಡುತ್ತೇವೆ; ಇದು ಮಾಡುತ್ತೇವೆ' ಎಂಬುದಾಗಿ ಸರ್ಕಾರವು ಹೇಳುತ್ತಿದೆ. ಸಂಶೋಧನೆಯ ಅಭಿವೃದ್ಧಿಗಾಗಿ ಅವಶ್ಯಕವಾಗಿರುವ ಮತ್ತು ಮೂಲಭೂತವಾಗಿ ಬೇಕಾಗಿರುವುದನ್ನು ಒದಗಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ಆದರೆ ಸರ್ಕಾರ ಮತ್ತು ಕೃಷಿ ಇಲಾಖೆಯವರು ಈ ವಿಚಾರದಲ್ಲಿ ಒಂದು ಪೈಸೆ ಪ್ರಮಾಣದಷ್ಟೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಆದರೆ ಸಚಿವರು ಸುಮ್ಮನೆ ಟ್ರ್ಯಾಕ್ಟರ್‌ನ್ನು ಹತ್ತಿ, ಫೋಟೋಗಳನ್ನು ತೆಗೆಸಿಕೊಂಡು, ಹೊಲದಲ್ಲಿ ಟಿಲ್ಲಿಂಗ್ ಮಾಡಿದ್ದೇವೆ ಎಂಬುದಾಗಿ ತೋರಿಸಿಕೊಳ್ಳುತ್ತಾರೆ. ಅವರು ಯಾವ ರೀತಿಯ ಟಿಲ್ಲಿಂಗ್‌ನ್ನು ಮಾಡುತ್ತಾರೆ? ತೋಟಗಾರಿಕೆ ಸಚಿವರಾದ ಶ್ರೀ ಆರ್.ಶಂಕರ್‌ರವರು ತಮ್ಮ ಇಲಾಖಾಧಿಕಾರಿಗಳೊಂದಿಗೆ ತೋಟಕ್ಕೆ ಹೋಗಿ ಟ್ರ್ಯಾಕ್ಟರ್‌ನ್ನು ಹತ್ತಿ ಫೋಟೋಗಳನ್ನು ತೆಗೆಸಿಕೊಂಡರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದು ಇವರು ಕೊಡುವ ಸಂದೇಶವೇ? ಈ ರೀತಿಯ ಉದಾಹರಣೆಯನ್ನು ನಾನು ನೀಡುತ್ತಿದ್ದೇನೆ. ಸಚಿವರು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದಾರೆ. ಇದು ಅವರಿಗೆ ನೆನಪಿದೆಯೇ? ಅಲ್ಲಿನ ತೋಟಗಾರಿಕೆಯನ್ನು ಅವರು ಹೇಗೆ ಅಭಿವೃದ್ಧಿಪಡಿಸಬಹುದು ಎಂಬ ಬಗ್ಗೆ ಗಮನ ಹರಿಸಬೇಕಾಗುತ್ತದೆ. ದಕ್ಷಿಣ ಕರ್ನಾಟಕ ಭಾಗ ಅಂದರೆ, ದಾವಣಗೆರೆ ಜಿಲ್ಲೆಯಿಂದ ಕೆಳಭಾಗದಲ್ಲಿ ಎಲ್ಲಾ ಕಡೆಗಳಲ್ಲಿ ಕೆಂಪು ಮಣ್ಣಿದೆ. ಅಲ್ಲಿನ ಒಂದೊಂದು ಎಕರೆಯಲ್ಲಿ ಬಂಗಾರವನ್ನು ಬೆಳೆಯಬಹುದು. ನಾನು ತಂತ್ರಜ್ಞಾನದ ಬಗ್ಗೆ ಹೇಳುತ್ತಿದ್ದೇನೆ. ರಾಮನಗರ ಜಿಲ್ಲೆಯಲ್ಲಿ ಬಹಳ ಸುಂದರವಾಗಿ ರೇಷ್ಮೆ ಬೆಳೆಯನ್ನು ಬೆಳೆಯುತ್ತಾರೆ. ಶ್ರೀಯುತ ರವಿಯವರು ಆ ಭಾಗವನ್ನು ಪ್ರತಿನಿಧಿಸುತ್ತಾರೆ. ಈ ಭಾಗದಲ್ಲಿ ಉತ್ತಮ ಬೆಳೆ ಬರುತ್ತದೆ.

**ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಕೋಲಾರ ಭಾಗದ ರೈತರು ಉತ್ತಮವಾದ ಸಾವಯವ ಕೃಷಿ ಮಾಡುತ್ತಿದ್ದಾರೆ; ಅಲ್ಲಿ ಬಹಳ ಫಲವತ್ತಾದ ಮಣ್ಣಿದೆ. ಆದರೆ ಆ ಭಾಗದ ರೈತರಿಗೆ ನೀರಿನ ಸೌಕರ್ಯವಿಲ್ಲ. ಈ ಭಾಗದ ರೈತರಿಗೆ ನೀರಿನ ಸೌಲಭ್ಯ ಒದಗಿಸಿದರೆ, ಅವರು ಚಿನ್ನವನ್ನೂ ಸಹ ಬೆಳೆಯುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಇದೇ ವಿಚಾರವನ್ನು ಹೇಳುತ್ತಿದ್ದೇನೆ. ಯಾವ್ಯಾವ ಭಾಗದಲ್ಲಿ ಯಾವ್ಯಾವ ಅನುಕೂಲವಿದೆ ಅದಕ್ಕನುಗುಣವಾಗಿ ಅಲ್ಲಿ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಕೆಲಸವಾಗಬೇಕು. ರಾಜ್ಯದ ಕೊಪ್ಪಳ, ಬಾಗಲಕೋಟೆ, ಕೋಲಾರ ಮತ್ತು ಮೈಸೂರು ಜಿಲ್ಲೆಗಳ ಭಾಗದಲ್ಲಿ ಒಳ್ಳೆಯ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಸಂಪೂರ್ಣ ಅವಕಾಶವಿದೆ. ಆದರೆ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಆ ಭಾಗದ ಕಡೆ ಹೋದರೆ, ಅಲ್ಲಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. 2-3 ಎಕರೆಗಳಷ್ಟು ಹೊಲವನ್ನು ಹೊಂದಿದ ರೈತನೊಬ್ಬನು ಆರಾಮವಾಗಿ ವ್ಯವಸಾಯ ಮಾಡಿ, ಓಡಾಡಲು ಕಾರನ್ನು ಇಟ್ಟುಕೊಂಡು ಸ್ವಾವಲಂಬನೆಯಿಂದ ತನ್ನ ಜೀವನ ನಡೆಸಬಹುದಾಗಿದೆ. ಅವನು ಸ್ವಂತ ಕಾಲಿನಲ್ಲಿ ನಿಲ್ಲುವಷ್ಟು ಯೋಗ್ಯವಾದ ಭೂಮಿಯು ಅಲ್ಲಿ ಲಭ್ಯವಿದೆ. ಕೆಲವು ಪ್ರದೇಶಗಳಲ್ಲಿ ನೀರಿನ ಸೌಲಭ್ಯವೂ ಸಹ ಇದೆ. ಇಂತಹವರಿಗೆ ನಾವು ತಂತ್ರಜ್ಞಾನದ ಅನುಕೂಲ ಮಾಡಿಕೊಡಬೇಕು. ಉದಾಹರಣೆಗೆ ಹೇಳುವುದಾದರೆ, ಇವತ್ತಿನ ದಿವಸ ರೈತರಿಗೆ ಅನುಕೂಲವಾಗಲು 'ಗಂಗಾ ಕಲ್ಯಾಣ' ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದು ಯಾವ ರೀತಿಯಾಗಿ ಉಪಯೋಗವಾಗುತ್ತದೆ? ಯಾವುದೋ ಒಬ್ಬ ರೈತ ಒಂದು ದಿನ ಬೋರ್‌ವೆಲ್‌ನ್ನು ಕೊರೆಸುತ್ತಾನೆ; ಎರಡು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಷಗಳ ನಂತರ ಅಲ್ಲಿಗೆ ವಿದ್ಯುತ್ ಸರಬರಾಜು ಕಂಪನಿಯವರು ಬರುತ್ತಾರೆ; ಮೂರು ವರ್ಷಗಳ ನಂತರ ಬೋರ್‌ವೆಲ್‌ನ್ನು ಸಂಪರ್ಕ ನೀಡುವ ಇಲಾಖೆಯವರು ಬರುತ್ತಾರೆ; ಅಷ್ಟರೊಳಗೆ ಕೊರೆದಿರುವ ಬೋರ್‌ವೆಲ್ ಬತ್ತಿ ಹೋಗಿರುತ್ತದೆ. ಹೀಗಾಗಿ ಸರ್ಕಾರವು ಇದರ ಬಗ್ಗೆ ಯೋಚನೆ ಮಾಡಬೇಕು.

ಇವತ್ತಿನ ದಿವಸ ಸರ್ಕಾರ ಯಾವುದೇ ಯೋಜನೆಗಳನ್ನು ಜಾರಿಗೊಳಿಸಿದರೆ, ಅದರ ಬಗ್ಗೆ ಬಹಳವಾಗಿ ವಿಚಾರ ಮಾಡಬೇಕು. ಯಾವುದೇ ಯೋಜನೆಗಳು ರೈತರಿಗೆ ಉಪಯುಕ್ತವಾಗಿದ್ದರೆ ಮಾತ್ರವೇ ಅಲ್ಲಿ ಅಂದುಕೊಂಡ ಕೆಲಸಗಳಾಗುತ್ತವೆ. ಇವತ್ತಿನ ದಿವಸ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರನ್ನು ಗುರ್ತಿಸಿ, ಅವರ ಜಮೀನಿನಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಿಕೊಡಲಾಗುತ್ತಿದೆ. ಸರ್ಕಾರವು ಈ ವಿಚಾರದಲ್ಲಿ ನನ್ನ ಸಲಹೆಗಳನ್ನು ಸ್ವೀಕರಿಸಬೇಕು. ಕಂದಾಯ ಸಚಿವರಾದ ಶ್ರೀ ಆರ್.ಅಶೋಕ್‌ರವರು ಪ್ರಸ್ತುತ ಸದನದಲ್ಲಿದ್ದಾರೆ, ಅವರು ನಾನು ಹೇಳುವುದನ್ನು ಸ್ವಲ್ಪ ಕೇಳಬೇಕು. ಏಕೆಂದರೆ, ಮುಂದಿನ ದಿನಗಳಲ್ಲಿ ಅವರೇ ರಾಜ್ಯದ ಮುಖ್ಯಮಂತ್ರಿಗಳಾಗುವವರಿದ್ದಾರೆ. ನಾನು ಬಹಳ ಒಳ್ಳೆಯ ವಿಚಾರಗಳನ್ನು ಮಂಡಿಸುತ್ತಿದ್ದೇನೆ. ಯಾವುದೇ ಯೋಜನೆಗಳನ್ನು ಘೋಷಣೆ ಮಾಡಿದ್ದಕ್ಕಿಂತ ಜಾರಿಗೊಳಿಸುವುದು ಬಹಳ ಮುಖ್ಯವಾಗಿದೆ.

**(ಈ ಹಂತದಲ್ಲಿ ಸಚಿವರಾದ ಶ್ರೀ ಆರ್.ಅಶೋಕ್‌ರವರು ಸದಸ್ಯರಿಗೆ ಕೈಮುಗಿದರು)**

ಶ್ರೀ ಅಶೋಕ್‌ರವರು ನನಗೆ ಕೈಮುಗಿಯುವುದು ಬೇಡ; ನಾನು ಯಾವುದೇ ಬೆಂಕಿಯನ್ನು ಹಚ್ಚುವ ಕೆಲಸವನ್ನು ಮಾಡುತ್ತಿಲ್ಲ. ಸರ್ಕಾರವು ರೈತರಿಗೆ ಬೋರ್‌ವೆಲ್ ಮತ್ತು ಹೈನುಗಾರಿಕೆಯ ಸೌಲಭ್ಯಗಳನ್ನು ನೀಡುತ್ತಿದೆ. ಇದರ ಜೊತೆಗೆ ಎಲ್.ಪಿ.ಎಸ್. ಯೋಜನೆಯಡಿ ಭೂಮಿಯನ್ನೂ ಸಹ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಭೂಮಿಯನ್ನು ನೀಡುವ 'ಭೂಮಿ ಖರೀದಿ ಯೋಜನೆ' (Land Purchase Scheme) ಇದಾಗಿರುತ್ತದೆ.

**ಉಪಸಭಾಪತಿಯವರು:-** ಮಾನ್ಯ ಮಂತ್ರಿಗಳು ನಮಸ್ಕಾರ ಮಾಡಿದ್ದು ಬೇಕು ಅಂತಲೋ ಅಥವಾ ಬೇಡವೆಂತಲೋ ಎನ್ನುವುದು ಅರ್ಥವಾಗಲಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈ ಯೋಜನೆಯಲ್ಲಿ ಸರ್ಕಾರವು ರೈತನೊಬ್ಬನನ್ನು ಆಯ್ಕೆ ಮಾಡಬೇಕು. ಕೇವಲ 10 ಫಲಾನುಭವಿಗಳಿಗೆ ಈ ಯೋಜನೆಯನ್ನು ನೀಡಲಿ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರವಾಗಿಲ್ಲ. ಹೀಗೆ ಆಯ್ಕೆಗೊಂಡ ರೈತನಿಗೆ ಮೂರು ಎಕರೆ ಹೊಲ, ಒಂದು ಬೋರ್‌ವೆಲ್, ಹೈನುಗಾರಿಕೆಗೆ ಒಂದು ಹಸು ಮತ್ತು ನಾಲ್ಕೈದು ಮೇಕೆ ಮರಿ ಈ ರೀತಿಯ ಸೌಲಭ್ಯಗಳನ್ನು ನೀಡಬೇಕು. ಆಗ ಆತನು ಸಂಪೂರ್ಣವಾಗಿ ತನ್ನ ಪರಿವಾರದೊಂದಿಗೆ ತನಗೆ ದೊರೆತ ಭೂಮಿಯಲ್ಲಿ ವ್ಯವಸಾಯವನ್ನು ಮಾಡಬೇಕು. ಅದಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ನೀಡಬೇಕು. ಇಂತಹ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಒಬ್ಬೊಬ್ಬ ರೈತನಿಗೆ ನೀಡುವ ಬದಲು ಎಲ್ಲಾ ಸೌಲಭ್ಯಗಳನ್ನು ಗಂಡ-ಹೆಂಡತಿ, ಮಗ-ಸೊಸೆ ಮತ್ತು ಮೊಮ್ಮಕ್ಕಳನ್ನು ಹೊಂದಿದ ಒಂದು ಕುಟುಂಬಕ್ಕೆ ನೀಡಬೇಕು. ಹೀಗೆ ಸರ್ಕಾರವು ಒಂದು ಕುಟುಂಬಕ್ಕೆ ಒಂದಿಷ್ಟು ಜಮೀನನ್ನು ಪಶುಸಂಗೋಪನೆ ಮತ್ತು ಬೋರ್‌ವೆಲ್ ನೀರಿನ ಸೌಲಭ್ಯದೊಂದಿಗೆ ನೀಡಿದರೆ, ಆಗ ರೈತನು ತನಗೆ ದೊರೆತ ಐದು ಎಕರೆಯ ಪೈಕಿ ಎರಡು ಎಕರೆ ಪ್ರದೇಶದಲ್ಲಿ ಆಹಾರ ಧಾನ್ಯಗಳನ್ನು; ಒಂದೆರಡು ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾನೆ. ಇದನ್ನು Comprehensive Farming System ಎಂದು ಕರೆಯುತ್ತಾರೆ. ಆ ರೈತನು ತನಗೆ ದೊರೆತ ಜಮೀನಿನ ಬದುವಿನಲ್ಲಿ ದೈನಂದಿನ ಅವಶ್ಯಕ ಬೆಳೆಯಾದ ತೊಗರಿ ಬೇಳೆ ಹಾಗೂ ಇನ್ನಿತರೆ ಕಾಳುಗಳನ್ನು ಬೆಳೆಯುತ್ತಾನೆ. ಬೇಳೆ-ಕಾಳುಗಳು, ಧಾನ್ಯಗಳು ಜಮೀನಿನ ಬದುವಿನ ಪ್ರದೇಶದಲ್ಲಿಯೇ ಬೆಳೆಯುತ್ತವೆ. ಒಂದು ಕುಟುಂಬಕ್ಕೆ ವಾರ್ಷಿಕ 20-25 ಕೆ.ಜಿ. ಬೇಳೆ-ಕಾಳುಗಳ ಅವಶ್ಯಕತೆ ಇದ್ದು, ಇವುಗಳು ವಾಣಿಜ್ಯ ಬೆಳೆಗಳೂ ಸಹ ಆಗಿವೆ. ಮತ್ತೊಂದೆಡೆಗೆ ರೈತನು ಕೋಳಿ, ಮೇಕೆ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಿರುತ್ತಾನೆ. ಅವುಗಳನ್ನು ಯಾವಾಗ ಬೇಕಾದರೂ ಮಾರಾಟ ಮಾಡಬಹುದು. ಆತನಿಗೆ ದೊರೆತ ಭೂಮಿಯಲ್ಲಿ ತೋಟಗಾರಿಕೆ ಮತ್ತಿತರೆ ಹಣ್ಣುಗಳನ್ನೂ ಸಹ ಬೆಳೆಯಬಹುದು. ಇದರ ಜೊತೆಗೆ ಒಂದು-ಒಂದೂವರೆ ಎಕರೆ ಪ್ರದೇಶದಲ್ಲಿ ಆಹಾರ ಧಾನ್ಯಗಳನ್ನೂ ಸಹ ಬೆಳೆಯುತ್ತಿರುತ್ತಾನೆ. ಇದು ಆತನ ಕುಟುಂಬದ ಉಪಯೋಗಕ್ಕಾಗುತ್ತದೆ. ಇದರಿಂದಾಗಿ ರೈತನು ಸಮಗ್ರವಾಗಿ ಮತ್ತು ಶೇಕಡಾ 90 ರಷ್ಟು ಸ್ವಾವಲಂಬಿಯಾಗುತ್ತಾನೆ ಮತ್ತು ಮುಂದಿನ ದಿನಗಳಲ್ಲಿ ಆತನಿಗೆ ಅನುಕೂಲವಾಗುತ್ತದೆ. ಆದರೆ ಇದನ್ನು ಬಿಟ್ಟು ಸರ್ಕಾರವು ಒಬ್ಬೊಬ್ಬರಿಗೆ ಒಂದೊಂದು ಸೌಲಭ್ಯದಂತೆ ಬೋರ್‌ವೆಲ್, ಹೈನುಗಾರಿಕೆ, ಮೇಕೆ ಇತ್ಯಾದಿಗಳನ್ನು ಪ್ರತ್ಯೇಕವಾಗಿ ನೀಡಿದಾಗ ಯಾವುದೇ ಅನುಕೂಲವಾಗುವುದಿಲ್ಲ. ದನ-ಕರುಗಳನ್ನು ಮತ್ತು ಮೇಕೆ ಮತ್ತಿತರೆ ಪ್ರಾಣಿಗಳನ್ನು ರೈತರು ಮಾರಾಟ ಮಾಡಿಕೊಳ್ಳುತ್ತಾರೆಯೇ ವಿನಃ ಅವುಗಳನ್ನು ಉಪಯೋಗಿಸಿಕೊಂಡು ಕೃಷಿ ಮಾಡುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸರ್ಕಾರವು ಸಮಾಜದ ಬಡ ವರ್ಗದ ಜನರಿಗೆ ಅನುಕೂಲ ಮಾಡಿಕೊಡುತ್ತದೆ. ಇವತ್ತಿನ ದಿವಸ ಸರ್ಕಾರವು ಯಾವುದೇ ಯೋಜನೆಗಳ ಮೂಲಕ ಹಣವನ್ನು ಖರ್ಚು ಮಾಡಬೇಕಾದರೆ, ಅದರ ನೂರು ಪಟ್ಟು ಆಲೋಚನೆ ಮಾಡುವ ಕೆಲಸಗಳು ಸರ್ಕಾರದಿಂದಾಗಬೇಕೆಂದು ನಾನು ವಿನಂತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ಸೌಲಭ್ಯವಿಲ್ಲದೇ, ಒಬ್ಬ ಬಡ ರೈತ ಏನು ವ್ಯವಸಾಯ ಮಾಡುವುದಕ್ಕೆ ಸಾಧ್ಯವಿದೆ? ಸರ್ಕಾರವು ಇಂತಹ ಯೋಜನೆಗಳನ್ನು ಮೊದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜಾರಿಗೊಳಿಸಬೇಕು. ಒಂದು ವೇಳೆ ಅದು ಯಶಸ್ವಿಗೊಂಡರೆ, ನಂತರದಲ್ಲಿ ಇನ್ನಿತರೆ ಹಿಂದುಳಿದ ವರ್ಗಗಳಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಈ ರೀತಿಯ ಯೋಜನೆಯ ಸೌಲಭ್ಯಗಳನ್ನು ನೀಡುವ ಕೆಲಸಗಳನ್ನು ಮಾಡಬೇಕು. ಆಗ ಮಾತ್ರವೇ ಯೋಜನೆಯ ಸಂಪೂರ್ಣ ಉಪಯೋಗವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಕೃಷಿಕರಿಗೆ 'ಮಣ್ಣಿನ ಆರೋಗ್ಯ ಕಾರ್ಡ್'ಗಳನ್ನು ನೀಡಲಾಗುತ್ತದೆ ಎಂದು ಸರ್ಕಾರವು ಆಯವ್ಯಯದಲ್ಲಿ ಘೋಷಣೆ ಮಾಡಿತ್ತು. ಇಲ್ಲಿಯವರೆಗೆ ಯಾರಿಗೆ ಮತ್ತು ಎಷ್ಟು ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ಸರ್ಕಾರವು ವಿತರಿಸಿದೆ ಎಂದು ನಾನು ಕೇಳಲಿಚ್ಛಿಸುತ್ತೇನೆ. ಈ ಕಾರ್ಡ್‌ಗಳನ್ನು ಯಾರಿಗೂ ಸಹ ವಿತರಿಸಿಲ್ಲ. ಒಂದು ವೇಳೆ ಮಣ್ಣಿನ ಆರೋಗ್ಯ ಕಾರ್ಡ್‌ಗಳ ಮಾಹಿತಿ ಇದ್ದರೆ, ಅದು ಕೇವಲ ಅವರ ಕಛೇರಿಗಳ Registers ನಲ್ಲಿ ದಾಖಲೆಯಿರಬಹುದು. ಆದರೆ ಇದರ ಬಗ್ಗೆ ಯಾವುದೇ ರೈತನಿಗೆ ಮಾಹಿತಿ ಇಲ್ಲ. ರೈತನಿಗೆ ತನ್ನ ಮಣ್ಣಿನ ಗುಣಮಟ್ಟ, ಅದರ ರಚನೆ ಮತ್ತು ಅದರಲ್ಲಿನ ಪಿ.ಹೆಚ್. ಅಂಶಗಳ ಬಗ್ಗೆಯೂ ಸಹ ತಿಳಿದಿಲ್ಲ. ಆತನ ಜಮೀನಿನ ಮಣ್ಣಿಗೆ ಯಾವ ಬೆಳೆಯು ಸೂಕ್ತವಾಗುತ್ತದೆ ಎನ್ನುವ ಮಾಹಿತಿಯೂ ಸಹ ತಿಳಿದಿರುವುದಿಲ್ಲ. ಪ್ರಾಯಶಃ ಇಂತಹ ಕಾರ್ಡ್‌ಗಳನ್ನು ಕೃಷಿ ಇಲಾಖೆಯಲ್ಲಿಯೇ ಮುಚ್ಚಿಟ್ಟುಕೊಂಡಿರಬೇಕು. ಏಕೆಂದರೆ, ಎಷ್ಟು ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂಬುದರ ಬಗ್ಗೆ ಸದಸ್ಯರು ಸದನದಲ್ಲಿ ಪ್ರಶ್ನೆಯನ್ನು ಕೇಳಿದಾಗ, ಕೃಷಿ ಸಚಿವರು 'ನಾವು ಇಲ್ಲಿಯವರೆಗೆ 23 ಲಕ್ಷ ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಿದ್ದೇವೆ' ಎಂಬುದಾಗಿ ಉತ್ತರಿಸುತ್ತಾರೆ. ಇದು ಇಷ್ಟಕ್ಕೆ ಮಾತ್ರವೇ ಸೀಮಿತವಾಗಿದೆ. ನನಗೆ ತಿಳಿದಂತೆ, ನಮ್ಮ ತಾಲ್ಲೂಕಿನಲ್ಲಿ ಒಬ್ಬರಿಗಾದರೂ ಸಹ ಈ ಕಾರ್ಡ್‌ಗಳನ್ನು ವಿತರಿಸಿಲ್ಲ. ಹೀಗಾಗಿ ಸರ್ಕಾರವು ಯಾವ ರೀತಿಯ ಕೆಲಸಗಳನ್ನು ಮಾಡುತ್ತಿದೆ ಎನ್ನುವುದು ತಿಳಿಯುತ್ತಿಲ್ಲ.

ಇವತ್ತಿನ ದಿವಸ ಕೇಂದ್ರ ಸರ್ಕಾರವು 'ಕಿಸಾನ್ ಸಮ್ಮಾನ್' ಯೋಜನೆಯನ್ನು ರೈತರಿಗಾಗಿ ಜಾರಿಗೊಳಿಸಿದ್ದು, ಇದರಲ್ಲಿ ರೈತರಿಗೆ 6,000 ರೂಪಾಯಿಗಳನ್ನು ನೀಡಲಾಗುತ್ತಿದೆ. ಈ ಯೋಜನೆಯನ್ವಯ ರಾಜ್ಯ ಸರ್ಕಾರವು ರೈತರಿಗೆ 4,000 ರೂಪಾಯಿಗಳನ್ನು ನೀಡುತ್ತಿದೆ. ಈ ಮೊದಲು, Minimum Input Subsidy ಎನ್ನುವ ಯೋಜನೆಯು ಜಾರಿಯಲ್ಲಿತ್ತು. ಈ ಯೋಜನೆಯಡಿ ಬೆಳೆ ನಾಶ ಮತ್ತಿತರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭಗಳಲ್ಲಿ ರೈತರಿಗೆ ಸಹಾಯಾನುದಾನ ನೀಡಲಾಗುತ್ತಿತ್ತು. 'ಕಿಸಾನ್ ಸಮ್ಮಾನ್' ಯೋಜನೆಯಡಿ ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುಕ್ರಮವಾಗಿ 6,000 ಮತ್ತು 4,000 ರೂಪಾಯಿಗಳು ದೊರೆಯುತ್ತಿದೆ.

(ಮುಂದು)

**(579)/23-3-2021/1-00/ಎಲ್‌ಎಂ**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ನಾನು ಸರ್ಕಾರಕ್ಕೆ ಕೊಡುವ ಸಲಹೆ ಏನು ಎಂದರೆ, ಕನಿಷ್ಠ 1 ಎಕರೆಗೆ 10,000 ರೂಪಾಯಿಗಳನ್ನು ಕೊಡಿ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟಾದರೂ ಇರಲಿ, ರಾಜ್ಯ ಸರ್ಕಾರದ ಪಾಲು ಎಷ್ಟಾದರೂ ಇರಲಿ. ಆದರೆ ಈ ಸರ್ಕಾರ ರೈತರಿಗೆ ಒಟ್ಟು ಇಷ್ಟು ಎಂದು ಕೊಡುತ್ತಾರೆಯೇ ಹೊರತು ಪ್ರತಿ ಎಕರೆಗೆ ಕೊಡುವುದಿಲ್ಲ. ತೆಲಂಗಾಣ ರಾಜ್ಯದಲ್ಲಿ ಎಷ್ಟು ಎಕರೆ ಇದೆ ಅಷ್ಟು ಎಕರೆಗೆ 'ಕಿಸಾನ್ ಸಮ್ಮಾನ್' ಯೋಜನೆಯಲ್ಲಿ ಹಣವನ್ನು ಕೊಡುತ್ತಾರೆ. ಮತ್ತು ತಮ್ಮ ಪಾಲನ್ನು ಸೇರಿಸಿ ಕೊಡುತ್ತಾರೆ. ಈ ರೀತಿ ಮಾಡಿದಾಗ 60% 70% ರೈತನ input ಹೊರಗಿನಿಂದ ಬಂದಾಗ ಅವನಿಗೆ ಸ್ವಲ್ಪ ಹೊರೆ ಕಡಿಮೆಯಾಗುತ್ತದೆ. ಒಂದು ವೇಳೆ ಬೆಳೆ ನಾಶವಾದರೂ ಸಹ ಒಂದು ವರ್ಷ ಸಹಿಸಿಕೊಳ್ಳುವಂತಹ ಶಕ್ತಿ ಆ ರೈತನಿಗೆ ಬರುತ್ತದೆ. ಇದರ ಬಗ್ಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಸುಮ್ಮನೆ 2000 ರೂ.ಗಳನ್ನು ಕೊಟ್ಟರೆ ಅದನ್ನು ಡ್ರಾ ಮಾಡಿ ಅಲ್ಲೇ ಖರ್ಚು ಮಾಡಿ ಹೋಗುತ್ತಾರೆ. ಈ ರೀತಿಯಾಗಬಾರದು. ಸಬ್ಸಿಡಿ ಕೊಡಬೇಕಾದರೆ ಯಾವ ಸಮಯದಲ್ಲಿ ಕೊಡಬೇಕು ಎನ್ನುವುದು ಮುಖ್ಯವಾಗುತ್ತದೆ. ಪ್ರತಿ ತಿಂಗಳು 500/ 1000 ರೂಪಾಯಿಗಳನ್ನು ಕೊಡುತ್ತೇವೆ ಎಂದರೆ ಏನು ಉಪಯೋಗ? ಜೂನ್ ತಿಂಗಳಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಮೇ ಕೊನೆಯ ವಾರದಲ್ಲಿ ಮಳೆ ಪ್ರಾರಂಭವಾಗುತ್ತದೆ. ಆದರೆ ಕೆಲವು ಭಾಗದಲ್ಲಿ ಆ ಸಮಯದಲ್ಲಿ ಮಳೆ ಬರುತ್ತದೆ, ಕೆಲವು ಭಾಗಗಳಲ್ಲಿ ಬರುವುದಿಲ್ಲ. ಜೂನ್‌ನಲ್ಲಿ 50% ಭಾಗದಲ್ಲಿ ಮಳೆಯಾಗುತ್ತದೆ. ಜುಲೈನಲ್ಲಿ 80 - 90% ಮಾನ್ಸೂನ್ ಪ್ರತಿಯೊಂದು ಭಾಗಗಳಲ್ಲಿ ಬರುತ್ತದೆ. ಕೃಷಿಗೆ 10000 ರೂ.ಗಳ ಸಬ್ಸಿಡಿಯನ್ನು ಕೊಡಬೇಕಾದರೆ at a time ಕೊಡಬೇಕು. ಅದು ಜೂನ್‌ನಲ್ಲಿ ಕೊಡಬೇಕು. ಮೇ ಕೊನೆ ವಾರ ಮತ್ತು ಜೂನ್ ಮೊದಲನೆ ವಾರದಲ್ಲಿ ರೈತನ ಕೈ ಸೇರಿದಾಗ ಅವನಿಗೆ ಬೇಕಾದ ಬೀಜ ಗೊಬ್ಬರವನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. 500/1000 ರೂ.ಗಳನ್ನು ಕೊಟ್ಟರೆ ಅದು ಯಾವ ಕೆಲಸಕ್ಕೂ ಉಪಯೋಗವಾಗುವುದಿಲ್ಲ. ಏಕೆಂದರೆ ನಮ್ಮವೆ ನೂರು ಸಮಸ್ಯೆಗಳು ಇರುತ್ತವೆ, 2000 ರೂ.ಗಳು ಬಂದಿವೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ ತಕ್ಷಣ ಹೋಗಿ ಡ್ರಾ ಮಾಡಿಕೊಂಡು ಸದ್ಯಕ್ಕೆ ಆಗಬೇಕಾದ ಕೆಲಸವನ್ನು ಮಾಡಿಕೊಂಡು ಆ ಹಣವನ್ನು ಖರ್ಚು ಮಾಡಿಬಿಡುತ್ತೇವೆ. ಬೇರೆ ಸಮಸ್ಯೆಗಳಿಗೆ ಖರ್ಚಾಗುತ್ತದೆ, ಕೃಷಿಗೆ ಉಪಯೋಗವಾಗುವುದಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಉದ್ದೇಶ ರೈತರಿಗೆ ಸಬ್ಸಿಡಿ ಕೊಡಬೇಕು ಅದರಿಂದ ರೈತನಿಗೆ ಉಪಯೋಗವಾಗಬೇಕು, ಅವರ ಬೆಳೆಗಳು ಚೆನ್ನಾಗಿ ಬರಬೇಕು ಎನ್ನುವ ಉದ್ದೇಶಕ್ಕಾಗಿ ಈ ಬಜೆಟ್‌ನಲ್ಲಿ ಹಣ ಕೊಡಲಾಗುತ್ತದೆ. ಹೇಗೂ ಸರ್ಕಾರದ ಹಣ ಹೋಗೆ ಹೋಗುತ್ತದೆ, ಅದನ್ನೇ ಒಂದೇ ಸಮಯದಲ್ಲಿ ಏಕೆ ಕೊಡಬಾರದು? ಇದರ ಬಗ್ಗೆಯು ಗಂಭೀರವಾಗಿ ಚಿಂತನೆ ಮಾಡಬೇಕು.

ಇದು ಅಲ್ಲದೆ ಮಾರುಕಟ್ಟೆ ಸೌಲಭ್ಯಗಳನ್ನು ಸಹ ಒದಗಿಸುವುದು ಅಷ್ಟೇ ಮುಖ್ಯವಾಗಿದೆ. ಕೇಂದ್ರ ಸರ್ಕಾರದ ಕಾಯಿದೆಯಿಂದ ಇವತ್ತು ಎಪಿಎಂಸಿಗಳು defunct ಆಗಿವೆ. ಎಪಿಎಂಸಿ ಯಲ್ಲಿ ಈಗ ಯಾರಿಗೂ ಆಸಕ್ತಿ ಇಲ್ಲ. ಎಲ್ಲೊ ಬಂದರೆ ತೆಗೆದುಕೊಳ್ಳುತ್ತಾರೆ ಇಲ್ಲದಿದ್ದರೆ ಇಲ್ಲ. ಮೊದಲು ಅವರಿಗೆ ಆಸಕ್ತಿ ಇತ್ತು. ರೈತರಿಗೆ ಕರೆದು ಸಾಲ ಕೊಡುತ್ತಿದ್ದರು. ರೈತರ ಬೆಳೆ ನಮ್ಮ ಹತ್ತಿರವೇ ಬರುತ್ತದೆ ಎಂದು ನಂಬಿಕೆ ಅವರಿಗೆ ಇತ್ತು. ಇವತ್ತು ರೈತರು ಎಲ್ಲಿಯಾದರೂ ತಮ್ಮ ಬೆಳೆಯನ್ನು ಮಾರಾಟ ಮಾಡಬಹುದಾಗಿದೆ. ಕೇಂದ್ರ ಸರ್ಕಾರ ತಂದಿರುವ ಈ ಕಾಯಿದೆ ಹೊಸದೇನು ಅಲ್ಲ. ನಾನು ಕೃಷಿಯನ್ನು ನೋಡಿಕೊಂಡೆ ಬಂದಿದ್ದೇನೆ. ಮೊದಲು ಸಹ ರೈತ ತನ್ನ ಬೆಳೆಯನ್ನು ಎಲ್ಲಿಯಾದರೂ ಮಾರಬಹುದಿತ್ತು. ನಾವು ಹತ್ತಿ ಬೆಳೆಯುತ್ತಿದ್ದೆವು. ಹತ್ತಿಯನ್ನು ನೇರವಾಗಿ ಮಿಲ್‌ಗೆ ಹಾಕುತ್ತಿದ್ದೆವು, ಎಪಿಎಂಸಿ ಗೆ ಹೋಗುತ್ತಿರಲಿಲ್ಲ. ನಮ್ಮ ರಾಯಚೂರಿನಲ್ಲಿ ಔಡಲ ಬೆಳೆಯುತ್ತೇವೆ. ರಾಯಚೂರಿನಲ್ಲಿ ಔಡಲಕ್ಕೆ ಮಾರುಕಟ್ಟೆಯೇ ಇಲ್ಲ. ನಾವು ಆಧೋನಿಗೆ ಹೋಗಿ ಮಾರಿ ಬರುತ್ತಿದ್ದೆವು. ಇದೇ ಎಪಿಎಂಸಿ ಗೆ ಹೋಗಬೇಕು, ಇಲ್ಲಿಯೇ ಮಾರಬೇಕು ಎನ್ನುವ ನಿರ್ಬಂಧವೇನು ಆಗ ಇರಲಿಲ್ಲ. ಆಗ ಎಪಿಎಂಸಿಗಳು ಚಟುವಟಿಕೆಯಿಂದ ಇದ್ದವು. ರೈತರು ನಮ್ಮ ಹತ್ತಿರವೇ ಬಂದು ತಮ್ಮ ಬೆಳೆಯನ್ನು ಮಾರಾಟ ಮಾಡುತ್ತಾರೆ ಎಂದು 90% ನಂಬಿಕೆ ಇತ್ತು. ನಮ್ಮಲ್ಲಿ paddy ಇದೆ. ಈ ಕಾಯಿದೆ ಬಂದ ಮೇಲೆ ಒಬ್ಬ ಕೈಗಾರಿಕೋದ್ಯಮಿ ಬಾಂಬೆಯಿಂದ ನಮ್ಮ ಜಿಲ್ಲೆಗೆ ಬಂದರು. 75 ಕೆ.ಜಿ.ಯ ಒಂದು ಬ್ಯಾಗಿಗೆ 1050–1100 ರೂ.ಗಳಷ್ಟು ಇತ್ತು. ಆ ವ್ಯಕ್ತಿ ಬಂದು 1200 ರೂ.ಗಳಿಗೆ ಖರೀದಿ ಮಾಡಲು ಪ್ರಾರಂಭ ಮಾಡಿದರು. 100 ರೂಪಾಯಿ ಹೆಚ್ಚಿಗೆ ಕೊಟ್ಟು ಖರೀದಿ ಮಾಡಲು ಪ್ರಾರಂಭ ಮಾಡಿದರು. ಬರಿ 500/1000 ಕ್ವಿಂಟಾಲ್ ಮಾತ್ರ ಖರೀದಿ ಮಾಡಿದರು. ಆ ಸಮಯದಲ್ಲಿ ನಮ್ಮ ರೈತರು ನಮಗೂ ಹೆಚ್ಚಿನ ಬೆಲೆ ಬರುತ್ತದೆ ಎಂದು ತಮ್ಮಲ್ಲಿರುವಂತಹ ಎಲ್ಲಾ ಸರಕನ್ನು ತಂದು ಜಮಾ ಮಾಡಿದರು. ಆದರೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಸಂಗ್ರಹವಾದ ತಕ್ಷಣ ಆ ವ್ಯಕ್ತಿ ಒಂದು ಬ್ಯಾಗಿಗೆ 1200 ರೂ.ಗಳು ಇದ್ದುದನ್ನು 1000 ರೂ.ಗಳಿಗೆ ಬೆಲೆಯನ್ನು ನಿಗದಿಗೊಳಿಸಿ 1000 ರೂ.ಗಳಿಗೆ ಕೊಟ್ಟರೆ ಖರೀದಿ ಮಾಡುತ್ತೇನೆ ಇಲ್ಲದಿದ್ದರೆ ಇಲ್ಲ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿಬಿಟ್ಟರು. ಜನರು ತಮ್ಮ ಹೆಸರನ್ನು ಬರೆಯಿಸಿದ್ದರಿಂದ ಮಾರಲೇ ಬೇಕಾಯಿತು, ಆಗ ಆ ವ್ಯಕ್ತಿ ನಂತರ ಆ ಬೆಳೆಯೆಲ್ಲವು ಆಂಧ್ರಪ್ರದೇಶದ ಗೋಡೌನ್‌ಗೆ ಹೋಯಿತು. ಅವರು ಮಾರುಕಟ್ಟೆಯನ್ನು regulate ಮಾಡುತ್ತಾರೆ. ಭಾರತ ದೇಶದಲ್ಲಿ ಯಾವ ಪ್ರದೇಶದಲ್ಲಿ ಅಕ್ಕಿ ಕಡಿಮೆ ಇದೆ, ಯಾವ ಭಾಗದಲ್ಲಿ ತೊಗರಿಬೇಳೆ ಕಡಿಮೆ ಇದೆ, ಯಾವ ಪ್ರದೇಶದಲ್ಲಿ ಯಾವ fruit ಕಡಿಮೆ ಇದೆ ಎನ್ನುವುದೆಲ್ಲವನ್ನು ಅವರು ಮಾರುಕಟ್ಟೆ ಸ್ಟಡಿ ಮಾಡುತ್ತಾರೆ. ಎಲ್ಲ ಬೆಳೆಯನ್ನು ತಮ್ಮಲಿ ಶೇಖರಿಸಿಕೊಂಡು ಯಾವಾಗ ಯಾವ ಪ್ರದೇಶಕ್ಕೆ ಏನು ಬೇಕು ಅದನ್ನು ಕೊಡುತ್ತಾ ಹೋಗುತ್ತಾರೆ. ಆದರೆ ಈ ಮೊದಲು ನಮ್ಮಲ್ಲಿ ಎಪಿಎಂಸಿ ಯವರು ಖರೀದಿ ಮಾಡಿ ಮಹಾರಾಷ್ಟ್ರಕ್ಕೆ, ತಮಿಳುನಾಡಿಗೆ ಮತ್ತು ಕೊಯಮತ್ತೂರಿಗೆ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ಕಳುಹಿಸುತ್ತಿದ್ದರು. ಈಗ ಯಾರು ಎಲ್ಲಿ ಬೇಕದರೂ ಖರೀದಿ ಮಾಡಬಹುದು ಎನ್ನುವ ಕಾಯಿದೆ ಬಂದ ಮೇಲೆ ನಮ್ಮ ಅಕ್ಕಿ ತಮಿಳುನಾಡಿಗೆ ಹೋಗುವುದು ನಿಂತುಬಿಟ್ಟಿದೆ. ಇದರಿಂದ ರೈತರಿಗೆ ಇನ್ನೊಂದು ರೀತಿಯಲ್ಲಿ ಹೊಡೆತ ಬೀಳುತ್ತದೆ. ರೈತರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ನಾವ್ಯಾರು ಉಳಿಯದಂತಹ ಪರಿಸ್ಥಿತಿ ಬರುತ್ತದೆ. ಈಗ ಭೂಮಿ ಹಂಚಿಕೆಯಾಗುತ್ತಿದೆ. ಮೊದಲಿನ ಹಾಗೆ ಒಬ್ಬ ರೈತನ ಹತ್ತಿರ ಹತ್ತು ಎಕರೆ, 50 ಎಕರೆ ಜಮೀನು ಈಗ ಇಲ್ಲ. ಬಹಳ ಶ್ರೀಮಂತ ಎನ್ನುವವನ ಹತ್ತಿರ 50/100 ಎಕರೆ ಜಮೀನು ಇರಬಹುದು. ನನಗೆ ತಿಳಿದ ಮಟ್ಟಿಗೆ 80% of the farmers own less than five acres of land. They come under small and marginal farmers. ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತನಾದ ಮೇಲೆ ಸಾಕಷ್ಟು ಬಂಡವಾಳವನ್ನು ಹಾಕಿ ಕೃಷಿ ಮಾಡುವ ಶಕ್ತಿ ಕಡಿಮೆ ಇರುತ್ತದೆ. So, they have to go for commercial crops or horticultural crops. ತೋಟಗಾರಿಕೆ ಬೆಳೆ ಬೆಳೆಯಬೇಕಾದರೆ ಸುಮಾರು ಲಕ್ಷಗಟ್ಟಳೆ ರೂ.ಗಳವರೆಗೆ ಬಂಡವಾಳವನ್ನು ಹಾಕಬೇಕಾಗುತ್ತದೆ. ಉದಾಹರಣೆಗೆ ಬಾಳೆಹಣ್ಣು, ಪಪ್ಪಾಯ ಯಾವುದೆ ಮಾಡಲಿ ಲಕ್ಷಾಂತರ ಗಟ್ಟಳೆ ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಆ ರೈತನಿಗೆ ಅಷ್ಟು ಶಕ್ತಿ ಇರುವುದಿಲ್ಲ. ನಮ್ಮಲ್ಲಿ Indian Institute of Horticultural Research (IIHR) ಇದೆ. ನಮ್ಮ ಕೃಷಿ ಇಲಾಖೆಯ ಬಗ್ಗೆ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಆಂಧ್ರ ಮತ್ತು ತೆಲಂಗಾಣ ಸರ್ಕಾರಗಳು ಸುಮಾರು ಒಂದೂವರೆ ಸಾವಿರ ಕೋಟಿ ರೂ.ಗಳನ್ನು ಕೃಷಿಗಾಗಿ IIHR ನಿಂದ ರೈತರಿಗೆ ಸಾಲವನ್ನು ಕೊಡಿಸಿದ್ದಾರೆ. ಆದರೆ ನಮ್ಮ ರಾಜ್ಯದವರು ನೂರು ಕೋಟಿ ರೂಪಾಯಿಗಳನ್ನು ಸಹ ಅಲ್ಲಿಂದ ತೆಗೆದುಕೊಂಡಿರುವುದಿಲ್ಲ. ಆಂಧ್ರದ ರೈತರು ನಮ್ಮಲ್ಲಿ ಕೃಷಿ ಮಾಡುತ್ತಿರುವುದನ್ನು ನೋಡಿ ಅವರಿಂದ ತಿಳಿದುಕೊಂಡು ನಮ್ಮವರು ಹೋಗಿ ತೆಗೆದುಕೊಳ್ಳುತ್ತಿದ್ದಾರೆ. ಆದರೆ ನಮ್ಮ ಕೃಷಿ ಇಲಾಖೆಯಿಂದ ಏನು

ಸಹಾಯ ಮಾಡಿರುವುದಿಲ್ಲ. ನಮ್ಮ ಕೃಷಿ ಇಲಾಖೆಯವರಿಗೆ ಅದರಿಂದ ಏನು ಆಗಬೇಕಾಗಿಲ್ಲ. ಈಗ ನಮ್ಮ ಸರ್ಕಾರದಲ್ಲಿ ಹಣ ಇಲ್ಲ, ಅದನ್ನೇ ಕೇಂದ್ರ ಸರ್ಕಾರಕ್ಕೆ ಕೇಳಬೇಕು. ಕೇಂದ್ರ ಸರ್ಕಾರ ರೈತರಿಗೆ ಸಾಲವನ್ನು ಕೊಡಲು ತಯಾರಿದೆ. ಆದರೆ ಅದಕ್ಕೆ applications forward ಮಾಡಬೇಕು. ಇದರ ಬಗ್ಗೆ ರೈತರ ಗಮನಕ್ಕೆ ತರಬೇಕು. ಯಾರ್‍ಯಾರು ತೋಟಗಾರಿಕೆಯಲ್ಲಿ ಏನೇನು ಬೆಳೆ ಬೆಳೆಯುತ್ತಿದ್ದೀರಿ ಹೇಳಿ, ನಿಮಗೆ ಸಾಧ್ಯವಾದಷ್ಟು IIHR ನಿಂದ ಸಾಲ ಕೊಡಿಸುತ್ತೇವೆ ಎಂದು ಸರ್ಕಾರ ಹೇಳಬೇಕು. ಸಾಕಷ್ಟು ಸಾಲವನ್ನು ಕೊಡುತ್ತಿದ್ದಾರೆ. ಸುಮಾರು ರೈತರು 5 ಎಕರೆಗೆ 25–30 ಲಕ್ಷ ರೂ.ಗಳಷ್ಟು ಸಾಲವನ್ನು ತೆಗೆದುಕೊಂಡು ಚೆನ್ನಾಗಿ ತೋಟಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ್ದಾರೆ. ಕೋಲಾರ ಆಂಧ್ರಪ್ರದೇಶಕ್ಕೆ ಹತ್ತಿರವಿದೆ. ಅಲ್ಲಿಯ ರೈತರು IIHR ನಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಕೋಲಾರದ ಬಹಳಷ್ಟು ರೈತರಿಗೆ ಇದು ಗೊತ್ತಿದೆ. ಆಂಧ್ರಪ್ರದೇಶದ ರೈತರು ಬಹಳ innovative farmers. ತೆಲಂಗಾಣಕ್ಕಿಂತ ಆಂಧ್ರಪ್ರದೇಶದ ರೈತರು they are most innovative farmers. ನಮ್ಮ ಸರ್ಕಾರ ಅದರ ಬಗ್ಗೆ ಏನು ಚಿಂತನೆ ಮಾಡುತ್ತಿಲ್ಲ. ಸರ್ಕಾರ ಎಂದ ಮೇಲೆ ಕೇಂದ್ರ ಸರ್ಕಾರದಲ್ಲಿ ಕೃಷಿಗಾಗಿ ಏನು ಸ್ಕೀಮ್‌ಗಳು ಇವೆ, ರಾಜ್ಯ ಸರ್ಕಾರದಿಂದ ಏನು ಸಹಾಯ ಮಾಡಲು ಸಾಧ್ಯವಿದೆ, ಪ್ರತಿಯೊಂದು ಜಿಲ್ಲಾ, ತಾಲ್ಲೂಕಿನಲ್ಲಿ ಯಾವ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ, ಅದಕ್ಕೆ ಎಲ್ಲಿಂದ ಸಬ್ಸಿಡಿ ಕೊಡಿಸಬಹುದು, ಸಾಲವನ್ನು ಕೊಡಿಸಬಹುದು ಎನ್ನವುದನ್ನು ಸರ್ಕಾರ ಚಿಂತನೆ ಮಾಡಬೇಕಾಗಿತ್ತು. ಇದರ ಬಗ್ಗೆ ಕೇವಲ ಎಂಎಲ್‌ಎ ಗೆ ಮತ್ತು ಅವರ ಹಿಂದೆ ಇರುವ ವ್ಯಕ್ತಿಗಳಿಗೆ ಮಾತ್ರ ಇದು ಗೊತ್ತಿರುತ್ತದೆ. ಹಿಂದೆ ತೋಟಗಾರಿಕಾ ಇಲಾಖೆಯಲ್ಲಿ ಟ್ಯಾಂಕರ್‌ಗಳನ್ನು ಕೊಟ್ಟರು. ಎಂಎಲ್‌ಎ ಹಿಂದೆ ಇರುವವರಿಗೆ ಮಾತ್ರ ಟ್ಯಾಂಕರ್ ಕೊಡಲಾಯಿತು. ಬೇರೆ ಯಾರಿಗೂ ಅದರ ಬಗ್ಗೆ ಗೊತ್ತೆ ಇಲ್ಲ. ಈ ರೀತಿ ಮಾಡಿದರೆ ರೈತರು ಉದ್ಧಾರವಾಗಲು ಸಾಧ್ಯವಿಲ್ಲ. Comprehensive ಆಗಿ ತರಬೇಕು. ಎಂಎಲ್‌ಎ ಹಿಂದೆ ಇರುವವರಿಗೆ ಕೊಡಿ, ಆದರೆ ಅವರಂತೆ ಉಳಿದವರಿಗೂ ಅದನ್ನು ಕೊಡಬೇಕು. ಸಬ್ಸಿಡಿಯಲ್ಲಿ ಒಂದು ಟ್ರ್ಯಾಕ್ಟರ್ ಕೊಡುತ್ತಾರೆ. ಒಂದು ಟ್ರ್ಯಾಕ್ಟರ್ ಯಾರಿಗೆ ಆಗುತ್ತದೆ? ಕೊಟ್ಟರೆ ಒಂದು ತಾಲ್ಲೂಕಿಗೆ 10 ಟ್ರ್ಯಾಕ್ಟರ್ ಕೊಡಿ ಇಲ್ಲದಿದ್ದರೆ ಕೊಡಲು ಹೋಗಬೇಡಿ. ಯಾರು ಬಲವಂತ ಇರುತ್ತಾನೆ ಅವನು ಒಂದು ಟ್ರ್ಯಾಕ್ಟರ್ ತೆಗೆದುಕೊಳ್ಳುತ್ತಾನೆ. ಯಾವುದೇ ಸ್ಕೀಮ್ ತರಬೇಕಾದರೆ ಅದರ ಬಗ್ಗೆ ವಿಚಾರ ಮಾಡಬೇಕು. ಸುಮ್ಮನೆ ಟ್ರ್ಯಾಕ್ಟರ್ ಕೊಟ್ಟಿದ್ದೇವೆ ಎಂದು ಹೇಳಿದರೆ ಏನು ಉಪಯೋಗ. ನಾನು ಹೇಳುವುದು ಸರಿಯಾಗಿದೆ ಅಲ್ಲವೆ ಆಯನೂರ ಸರ್‌ರವರೆ. ಒಂದು ಟ್ರ್ಯಾಕ್ಟರ್ ಯಾಕೆ ಕೊಡಬೇಕು, ಅದನ್ನು ಸರ್ಕಾರವೆ ಇಟ್ಟುಕೊಂಡರೆ ಒಳ್ಳೆಯದು. RKVY (Rashtriya Krishi Vikas Yojana) ನಿಂದ ಎಲ್ಲಾ ಸೊಸೈಟಿಗಳಿಗೆ ಟ್ರ್ಯಾಕ್ಟರ್‌ಗಳನ್ನು ಕೊಟ್ಟಿದ್ದಾರೆ. ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕದಲ್ಲಿ ಒಟ್ಟು ಎಷ್ಟು ಸೊಸೈಟಿಗಳು ಇವೆ ಗೊತ್ತಿಲ್ಲ. ಉದಾಹರಣೆಗೆ 200 ಸೊಸೈಟಿಗಳು ಇವೆ ಎಂದು ತಿಳಿದುಕೊಂಡರೆ ಅದರಲ್ಲಿ 175 tractors defunct ಇವೆ. ಸೊಸೈಟಿ ಮುಂದೆ ನಿಂತಿವೆ, ಕೆಲವು ಟೈರ್ ಪಂಕ್ಚರ್ ಆಗಿವೆ, ಕೆಲವು ಗಾಳಿ ಹೋಗಿವೆ. ಇನ್ನೂ ಕೆಲವು ಯಾರು ಉಪಯೋಗ ಮಾಡದೆ ಹಾಗೆ ನಿಂತಿವೆ. ಸೊಸೈಟಿಯಲ್ಲಿ ಯಾರಾದರೂ ಬಲಾಢ್ಯರಿದ್ದರೆ ಅವರ ಮನೆಯಲ್ಲಿ ಆ ಟ್ರ್ಯಾಕ್ಟರ್ ಇರುತ್ತದೆ. ಕೊಟ್ಟಿರುವ ಟ್ರ್ಯಾಕ್ಟರ್ ಉಪಯೋಗವಾಗುತ್ತಿಲ್ಲ, ಮತ್ತೆ ಕೃಷಿ ಯಂತ್ರಧಾರೆ ಎನ್ನುವ ಯೋಜನೆಯನ್ನು ತಂದಿದ್ದಾರೆ. ಇವೆಲ್ಲವು ಸಮರ್ಪಕವಾಗಿ ಜಾರಿಯಾದಾಗ ಮಾತ್ರ ಉಪಯೋಗವಾಗುತ್ತದೆಯೇ ಹೊರತು ಸುಮ್ಮನೆ ಸ್ಕೀಮ್ ಸಲುವಾಗಿ ತಂದಿದ್ದೇವೆ, ನಾವು ಸರ್ಕಾರದವು ಈ ರೀತಿ ಮಾಡಿದ್ದೇವೆ ಎಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಈ ಎಲ್ಲಾ ಸ್ಕೀಮ್ ಬಂದ್ ಮಾಡಿ ಒಂದು ಎಕರೆಗೆ ಇಷ್ಟು ಎಂದು ವರ್ಷಕ್ಕೆ ಒಂದು ಸಾರಿ ರೈತರಿಗೆ ಹಣ ಕೊಟ್ಟುಬಿಡಿ. Rainfed condition ನಲ್ಲಿ ಒಂದು ಎಕರೆಗೆ 10,000 ಮತ್ತು irrigated condition ನಲ್ಲಿ ಒಂದು ಎಕರೆಗೆ 15,000 ರೂಪಾಯಿಗಳನ್ನು ಒಂದು ಎಕರೆಗೆ ಪ್ರತಿವರ್ಷಕ್ಕೆ ಕೊಟ್ಟು ಬಿಡಿ.

**(ಮುಂದು)**

**(580)23-03-2021(01-10)ಬಿಎಸ್‌ಡಿ-ಜಿಆರ್**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದುವರಿದು):-**

ಬೇರೆ ಯಾವ scheme ತರಲಿದ್ದರೂ ಅವರು ಮಾಡುತ್ತಾರೆ, ರೈತ ಹೆಚ್ಚು ಬೆಳೆ ಬೆಳೆದರೆ ಆತನೇ ಇಟ್ಟುಕೊಳ್ಳಲಿ, ಈ ಎಲ್ಲಾ scheme ತೆಗೆದು ಹಾಕಿಬಿಟ್ಟರೆ ರೊಕ್ಕ ಸರಿಯಾಗಿ adjust ಆಗುತ್ತದೆ. scheme ಗಳಲ್ಲಿ ಕೇವಲ middlemen ಗಳು ಮಾತ್ರ ತಿನ್ನುತ್ತಾರೆ. Agriculture implements ನಲ್ಲಿ ಎಷ್ಟು double rate ಗೆ ಹೋಗುತ್ತಿದೆ? Agriculture implements ನಲ್ಲಿ tiller, plough ಎಲ್ಲವನ್ನೂ ಕೊಡುತ್ತಾರೆ. ಅವೆಲ್ಲವೂ double rate ಇರುತ್ತದೆ. ಅದರ ಹೊರ ಮಾರುಕಟ್ಟೆಯಲ್ಲಿ ರೂ.15 ಸಾವಿರ ಇದ್ದರೆ ಇವರು ರೂ.30-35 ಸಾವಿರ ಬಿಲ್ ಮಾಡಿರುತ್ತಾರೆ. ಇದರ ಬದಲು ರೈತರಿಗಾದರೂ ಕೊಡಲಿ. At least, ಸರ್ಕಾರಗಳು ಪ್ರತಿ ವರ್ಷ ರೈತರುಗಳಿಗೆ ಇಷ್ಟು ರೊಕ್ಕ ಕೊಡುತ್ತವೆ ಎಂದಾಗುತ್ತದೆ. ಅವನ safety ಏನು ಹೇಳುತ್ತದೆಂದರೆ ಒಂದು ಎಕರೆಗೆ ಖರ್ಚಾಗುವಷ್ಟು ರೊಕ್ಕ ಬರುತ್ತಿರುತ್ತದೆ, ಅವನು ಚಲೋ ದುಡಿದು ಇನ್ನೂ ಚಲೋ ಆಗುತ್ತಾನೆ, ಇರುವುದರಲ್ಲಿ ಸರ್ಕಾರ

ಎಷ್ಟು help ಮಾಡುವುದಕ್ಕೆ ಆಗುತ್ತದೋ, ಅಷ್ಟು ಮಾಡುವುದು ಅಗುತ್ತದೆ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, agriculture ಬಹಳ important ಇದೆ ಎಂದು ಪ್ರತಿಯೊಬ್ಬರು ಹೇಳುತ್ತಾರೆ. ಇವತ್ತು ದೇಶದ ಪ್ರಧಾನ ಮಂತ್ರಿಯಿಂದ ಹಿಡಿದು ಅವರು-ನಾವು ಸೇರಿದಂತೆ ಎಲ್ಲರೂ ಭಾಷಣದಲ್ಲಿ ರೈತರು ದೇಶದ ಬೆನ್ನೆಲುಬು, ರೈತರು ಬಹಳ ಮುಖ್ಯ, ರೈತರಿಂದಲೇ ಉದ್ಧಾರ ಎಂದೆಲ್ಲಾ ಹೇಳುತ್ತೇವೆ. ಅದರ ಬಗ್ಗೆ ಹೆಚ್ಚಿನ ಚಿಂತನೆ ಆಗಬೇಕೆಂದು ಹೇಳಬಯಸುತ್ತೇನೆ.

ಇವತ್ತು ಗ್ರಾಮೀಣ ಪ್ರದೇಶದಲ್ಲಿ agriculture ಅನ್ನು ಗಂಡು ಮಕ್ಕಳು ಮಾತ್ರ ಮಾಡುತ್ತಿಲ್ಲ, 80% farm women ಗಳು ಕೆಲಸ ಮಾಡುತ್ತಿದ್ದಾರೆ. agriculture ಅನ್ನು farm women ಗಳೇ ಮಾಡುತ್ತಿರುವುದು. ಗಂಡು ಮಕ್ಕಳು 20% ಸಹ ಮಾಡುತ್ತಿಲ್ಲ. ಸುಮ್ಮನೆ tractor ನಡೆಸಬೇಕೆಂದು tractor ಒಯ್ಯುತ್ತಿದ್ದರೆ, ಹಿಂದೆ trolly ಯಲ್ಲಿ ಹೆಣ್ಣುಮಕ್ಕಳೇ labours ರೀತಿ ಕುಳಿತಿರುತ್ತಾರೆ. Hybrid variety ತಯಾರು ಮಾಡುವುದಕ್ಕೆ pollination ಅಂದರೆ ಪರಾಗಸ್ಪರ್ಶ ಮಾಡುವ ಕೆಲಸ ಒಬ್ಬ ಗಂಡಸಿಗೂ ಗೊತ್ತಿರುವುದಿಲ್ಲ. ಅದಕ್ಕೆ ಒಂದು ಸಮಯ ಇರುತ್ತದೆ. ಅದನ್ನು ಆ ಸಮಯದಲ್ಲಿಯೇ ಮಾಡಬೇಕು. ಪ್ರತಿ ಹೆಣ್ಣು ಮಕ್ಕಳಿಗೂ ಇದು ಗೊತ್ತಿದ್ದು, ಕೈಗೆ gloves ಹಾಕಿಕೊಂಡು ಪಟಪಟ ಮಾಡಿಬಿಡುತ್ತಾರೆ. ಇದು ಗಂಡು ಮಕ್ಕಳಿಗೆ ಗೊತ್ತೇ ಇರುವುದಿಲ್ಲ. ಅವರು tractor ನಲ್ಲಿ ಕರೆದುಕೊಂಡು ಹೋಗುವುದಷ್ಟೇ ಕೆಲಸ, ಇವರಿಗೆ pollination ಅಂದರೆ ಗೊತ್ತಿರುವುದಿಲ್ಲ. So, agriculture ನಲ್ಲಿ 90% farm women ಕೆಲಸ ಮಾಡುವುದು. ಈ farm women ಗಳಿಗೆ ಏನು welfare schemes ಇದೆ? ಸರಿಯಾಗಿ hospital facilities ಇಲ್ಲ, ಅವರಿಗೆ ಯಾವುದೇ ರೀತಿ ಸವಲತ್ತುಗಳು ಇಲ್ಲ, ಅವರು ಮುಂಜಾನೆ ಹೊರಟು 7 ಗಂಟೆಗೆ ಕೆಲಸ start ಮಾಡಿದರೆ ಸಂಜೆ 5-6 ಗಂಟೆಯವರೆಗೂ ಕೆಲಸ ಮಾಡಿ, ರಾತ್ರಿ ಗಂಡ-ಮಕ್ಕಳಿಗೆ ಅಡಿಗೆ ಮಾಡಬೇಕು, ಉಣಿಸಬೇಕು ಹಾಗೂ ಮತ್ತೆ ಮುಂಜಾನೆ ಅಡಿಗೆ ಮಾಡಿಟ್ಟು ಕೆಲಸಕ್ಕೆ ಹೋಗಬೇಕು. ಅವರ ಪರಿಸ್ಥಿತಿ ಬಹಳ ದುಸ್ತರ ಇದೆ. ಅವರ health care ಬಗ್ಗೆ ಯಾರೂ ಗಮನಹರಿಸುತ್ತಿಲ್ಲ. Last time ಸದನದಲ್ಲಿ Women and Child Welfare Minister ಆದ ಶ್ರೀಮತಿ ಜೊಲ್ಲೆ madam ನವರಿಗೆ scheme ತಯಾರು ಮಾಡುವ ಬಗ್ಗೆ request ಮಾಡಿಕೊಂಡಿದ್ದೆನು. ಏಕೆಂದರೆ maximum ಸುಮಾರು ರೂ.31 ಸಾವಿರ ಕೋಟಿ ಹಣ Women and Child Welfare ಗೆ ಇದೆ. ಆ ಹಣವನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

schemes ಗಳಲ್ಲಿ ಉಪಯೋಗ ಮಾಡಲಿ. ಪೌಷ್ಠಿಕತೆ ಕೊಡಲಿ, ಏನು ಬೇಕಾದರೂ ಅವರಿಗೆ ಕೊಡಲಿ, education ಸಲುವಾಗಿ help ಮಾಡಲಿ. ಮಕ್ಕಳ education ಸಲುವಾಗಿ help ಮಾಡಲಿ. ಅವರ individual health ಬಗ್ಗೆ care ತೆಗೆದುಕೊಳ್ಳಲಿ. ಅವರು healthy ಇದ್ದಾಗ ಮಾತ್ರ ಎಲ್ಲವೂ ಸಾಧ್ಯ, ಅವರ health ಬಗ್ಗೆ care ಮಾಡದಿದ್ದರೆ ಬಹಳ ಕಷ್ಟ ಇದೆ. ಇವತ್ತು ಸಾಕಷ್ಟು ಹೆಣ್ಣು ಮಕ್ಕಳು ನಮ್ಮ ಪ್ರದೇಶದಲ್ಲಿ ಕೆಲಸ ಮಾಡುವುದನ್ನು ನೋಡಿದ್ದೇನೆ. ಆ ನಿಟ್ಟಿನಲ್ಲಿ ಸರ್ಕಾರದ ಚಿಂತನೆ ಆಗಬೇಕೆಂದು ಹೇಳಬಯಸುತ್ತೇನೆ.

ಇನ್ನು ಪಡಿತರ ಬಗ್ಗೆ ಹೇಳಬೇಕೆಂದರೆ, ಪಡಿತರ ಹಂಚಿಕೆಯು ಬಹಳಷ್ಟು village ಗಳಲ್ಲಿ ಇಲ್ಲವೇ ಇಲ್ಲ. ಎಲ್ಲೋ ಒಬ್ಬ agent ಗೆ ಐದಾರು ಊರುಗಳನ್ನು attach ಮಾಡಿರುತ್ತಾರೆ. ಒಂದು ಹೋಬಳಿ sector ನಲ್ಲಿ ನಾಲ್ಕೈದು ಮಂದಿಗೆ ಇದ್ದು, ಒಬ್ಬೊಬ್ಬನಿಗೆ ಏಳೆಂಟು ಊರುಗಳನ್ನು ಕೊಟ್ಟಿರುತ್ತಾರೆ. ಅವನೇ ಊರುಗಳಿಗೆ ಹೋಗಿ ಪಡಿತರವನ್ನು ಹಂಚಬೇಕು. ಸರ್ಕಾರವು ಎಲ್ಲಾ ಊರುಗಳಲ್ಲಿ ಮಹಿಳೆಯರ ಸ್ವಸಹಾಯ ಗುಂಪುಗಳನ್ನು ಮಾಡಿದ್ದು, ಬಹಳಷ್ಟು ಊರುಗಳಲ್ಲಿ ಚೆನ್ನಾಗಿ ನಡೆದಿವೆ. ಸರ್ಕಾರವು ಸ್ವಲ್ಪ help ಮಾಡುತ್ತಿದ್ದು, ಅವರೇ rotation ನಲ್ಲಿ ಲಗ್ನ ಇದ್ದಾಗ ಅಥವಾ ಮನೆಯಲ್ಲಿ ಕಷ್ಟ ಇರುವಾಗ ರೊಕ್ಕ ತೆಗೆದುಕೊಂಡು ಮತ್ತೆ ವಾಪಸ್ಸು ಕೊಡುತ್ತಾರೆ. ಇವು ಒಂದು type ಚೆನ್ನಾಗಿ ನಡೆದಿವೆ. ಆ ಎಲ್ಲಾ ಸ್ವಸಹಾಯ ಗುಂಪುಗಳಿಗೆ ಪಡಿತರ ಹಂಚಿಕೆಯನ್ನು ಕೊಡಲಿ. ಒಬ್ಬನಿಗೆ attach ಮಾಡಿ ಹತ್ತತ್ತು ಊರುಗಳನ್ನು ಕೊಟ್ಟಾಗ, ಅವನು ಬರುವವರೆಗೂ ಕಾಯಬೇಕು, ಅವನನ್ನು ಕೇಳಬೇಕು, ಮೂರು ದಿವಸಗಳಾದ ಮೇಲೆ thumb impression ಆಗುವವರೆಗೂ ಬರುವುದಿಲ್ಲ, ಸುಮ್ಮನೆ ಏಕೆ ಅವರು ತಿರುಗಾಡಬೇಕು? ಇವರು ಹೊಲಕ್ಕೆ ಹೋಗಿದ್ದಾಗ ಅವನು ಬಂದು ಹೋಗಿರುತ್ತಾನೆ. ಮರುದಿವಸ ಕೆಲಸ, ಕೂಲಿ ಬಿಟ್ಟು ಪಡಿತರ ತೆಗೆದುಕೊಳ್ಳಲು ಹೋಗಬೇಕು. ಇದನ್ನು streamline ಮಾಡಿ, ಪ್ರತಿ ಊರಿನಲ್ಲಿರುವ ಸ್ವಸಹಾಯ ಗುಂಪುಗಳಿಗೆ ಕೊಡಬೇಕು. ಇದನ್ನು ಎಲ್ಲಾ ಊರುಗಳಲ್ಲಿ ಕೊಡಬೇಕು ಅಥವಾ handicapped ಇದ್ದಾರೆ, widows ಇದ್ದಾರೆ, ಇಂತಹವರಿಗೆ ಒಂದು establishment ಆಗುತ್ತದೆ. ಹತ್ತತ್ತು village ಗಳನ್ನು ಒಬ್ಬರಿಗೆ ಕೊಟ್ಟಾಗ ಅವನು ಒಬ್ಬನೇ ಬರಬೇಕು, ಅವನು ಕೊಟ್ಟಷ್ಟು ಕೊಡುತ್ತಾನೆ, ಇಲ್ಲದಿದ್ದರೆ ವಾಪಸ್ಸು ತೆಗೆದುಕೊಂಡು ಹೋಗುತ್ತಾನೋ ಅಥವಾ ಅವನ ಮನೆಗೆ

ಒಯ್ಯುತ್ತಾನೋ, ಇದು ಯಾರಿಗೂ ಗೊತ್ತಿರಲಾರದ ಸಂದರ್ಭ ಇರುತ್ತದೆ. ಮಾನ್ಯ ಸಭಾಪತಿಯವರೇ, agriculture ಬಗ್ಗೆ ಇಷ್ಟು ಸಾಕು ಎಂದು ಅನಿಸುತ್ತದೆ. I will go to irrigation.

ಇನ್ನು Irrigation Department ಬಗ್ಗೆ ಹೇಳಬೇಕೆಂದರೆ, it is also an ally of Agriculture. ಇವತ್ತು Irrigation Department, Agriculture Department, Energy Department, Co-operation Department ಇವೆಲ್ಲವೂ ಒಂದಕ್ಕೊಂದು interlink ಇರುವ ಇಲಾಖೆಗಳಾಗಿವೆ. ಮುಖ್ಯವಾಗಿ agriculture ಚಲೋ ಆಗಬೇಕೆಂದರೆ ನೀರಿನ ಅವಶ್ಯಕತೆ ಇದೆ. ನೀರಿಲ್ಲದೇ ಯಾವ agriculture ಚಲೋ ಆಗುವುದಿಲ್ಲ. ಏಕೆಂದರೆ ನಾವು ಮಳೆ ಮೇಲೆ depend ಆಗಿದ್ದು, ಒಮ್ಮೆ ಮಳೆ ಬರುತ್ತದೆ, ಒಮ್ಮೆ ಮಳೆ ಬರುವುದಿಲ್ಲ, ಒಮ್ಮೆ ಸರಿಯಾಗಿ ಬರುತ್ತದೆ, ಒಮ್ಮೆ ಸರಿಯಾಗಿ ಬರುವುದಿಲ್ಲ, ಇಂತಹ ಸಮಸ್ಯೆಗಳು ಇರುವಾಗ agriculture ಗೆ assured water ಕೊಟ್ಟಾಗ ಹೆಚ್ಚಿನ ನಿರೀಕ್ಷೆ ಮಾಡುವುದನ್ನು ನೋಡಬಹುದು. ಬಜೆಟ್‌ನಲ್ಲಿ ನಮ್ಮ ಭಾಗದ ಕೃಷ್ಣಾ ಮೇಲ್ದಂಡೆ ಯೋಜನೆಗೆ ರೂ.5,600 ಕೋಟಿ ಇಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, III Stage ನ ಕೆಲಸ complete ಆಗಲು ರೂ.1 ಲಕ್ಷ ಕೋಟಿ ಅವಶ್ಯಕತೆ ಇದೆ. ಒಂದು ಲಕ್ಷ ಕೋಟಿ ಬದಲಾಗಿ ರೂ.5,600 ಕೋಟಿಗಳನ್ನು ಇಟ್ಟಿದ್ದು, ಅವರ ಪ್ರಕಾರ ಹೋದರೆ ಕೆಲಸ ಮುಗಿಯಲು 30 ವರ್ಷ ಬೇಕಾಗುತ್ತದೆ. ಬಹುಶ: ನಾನಂತೂ ಆಗ ಇರುವುದಿಲ್ಲ. – infrastructure develop ಮಾಡಿದ್ದಾರೆ, ಪ್ರತಿಯೊಂದನ್ನೂ ಮಾಡಿದ್ದಾರೆ. ಎಲ್ಲವನ್ನು ಮಾಡಿದ ಮೇಲೆ ಯೋಜನೆಗೆ ರೊಕ್ಕ ಇಟ್ಟು complete ಮಾಡದಿದ್ದರೆ ಅರ್ಥವೇ ಇರುವುದಿಲ್ಲ. ಇದಕ್ಕೆ 30 ವರ್ಷ prolong ಮಾಡುತ್ತಾರೆಯೇ? ಒಂದು example ಆಗಿ ಹೇಳುವುದೇನೆಂದರೆ, ಕೊಪ್ಪಳ ಜಿಲ್ಲೆಯಲ್ಲಿ Koppal Lift Irrigation ಅನ್ನು ಮಾಡಿದ್ದು, ಅಲ್ಲಿ ಮಾರೂರು ಮತ್ತು ಕಲಾಲ್‌ಬಂಡೆ ಎಂಬ ಊರುಗಳ ಬಳಿ ಎರಡು stage ನಲ್ಲಿ lift ಆಗುತ್ತಿದೆ. ಅಲ್ಲಿ 20 kilometers pipeline ಮಾಡಿದ್ದಾರೆ. Ten kilometers open canal ಮಾಡಿದ್ದಾರೆ. 5 ವರ್ಷದಿಂದ motors - install ಮಾಡಿದ್ದಾರೆ. ಇವತ್ತಿನವರೆಗೂ ಅದಕ್ಕೆ electricity ಕೊಟ್ಟಿಲ್ಲ. 5 ವರ್ಷದ ಹಿಂದೆ install ಆದ motors ಗೆ ಇವತ್ತಿನವರೆಗೂ electricity ಕೊಟ್ಟಿಲ್ಲ. ಅಂದರೆ ಎಷ್ಟು ಬೇಜವಾಬ್ದಾರಿತನವಾಗಿದೆ ಎಂಬುದನ್ನು ಕಾಣಬಹುದು. electricity ಕೊಟ್ಟಿದ್ದರೆ 5 ವರ್ಷಗಳಿಂದ ಆ ಪ್ರದೇಶದಲ್ಲಿ ಇರುವ ಎಲ್ಲಾ ಭೂಮಿಗೆ ನೀರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಯಿಸಿದ್ದರೆ ಎಷ್ಟು revenue ಬರುತ್ತಿತ್ತು? Irrigation Department ನಲ್ಲಿ ಬಹಳ ತಲೆ ಇಲ್ಲದ ಕೆಲಸ ಆಗುವುದು ನಡೆದಿದೆ. ಈ ನಮೂನೆ ಆದರೆ project ಗಳು ಯಾವಾಗ complete ಆಗುತ್ತವೆ, ಯಾವಾಗ ಜಾರಿಗೆ ತರುತ್ತಾರೆ? ಆ officers ಏನು ಮಾಡುತ್ತಿದ್ದಾರೆಂದು ತಿಳಿಯುತ್ತಿಲ್ಲ. ಯಾವುದೇ ಯೋಜನೆ ತೆಗೆದುಕೊಂಡರೂ ಅದರ bottleneck ಏನೆಂಬುದೇ ಗೊತ್ತಿರುವುದಿಲ್ಲ. ಮಾನ್ಯ ಸಭಾಪತಿಯವರೇ, ಈ Upper Krishna Project ದಲ್ಲಿ NRBC ಮಾಡಿದ್ದು, canals ಗಳನ್ನು ಮಾಡಿ ಮೂರು ವರ್ಷಗಳು ಕಳೆದಿವೆ. ಅಲ್ಲಿ ಒಂದೆರಡು canal drop ಗಳು...... ಈ canal drops ಇಲ್ಲದಿದ್ದರೆ ಮುಂದಕ್ಕೆ ನೀರು ಹೋಗುವುದಿಲ್ಲ. 95 K.M., to 158 K.M., ಎಲ್ಲ canal ಮಾಡಿದ್ದಾರೆ. ಇನ್ನು ಸ್ವಲ್ಪ ಮಾಡದೇ ಉಳಿದಿದ್ದು, ಅದಕ್ಕೂ ಕರೆದಿದ್ದಾರೆ. ಒಂದು canal drop ಗಳ ಸಲುವಾಗಿ 20 ಕಿ.ಮೀ ನೀರು ಹೋಗುವುದು 4 ವರ್ಷಗಳಿಂದ ನಿಂತಿದೆ. ಆ canal drop ಏನೆಂದರೆ ರೂ.3 ಕೋಟಿ ಆಗುತ್ತದೆ. ಅವು ಮಾಡಿದರೆ ನೀರು ಹೋಗುತ್ತದೆ. ಈಗ 10 ವರ್ಷ ಆಯಿತು, ಅದನ್ನು ಮಾಡಿ. ಎಷ್ಟು ತಲೆ ಇಲ್ಲದ ಕೆಲಸ ಸರ್ಕಾರದಿಂದ ನಡೆಯುತ್ತಿದೆ. ಯಾವ ಹೊತ್ತಿನಲ್ಲಿ ಏನು ಮಾಡಬೇಕು ಹಾಗೂ ಹೇಗೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು. Canal drop ಅಂದರೆ ನೀರು ಬಂದು ಬೀಳುತ್ತದೆ, height ಇರುವ ಕಡೆಯಿಂದ ನೀರು ಕೆಳಗೆ ಬೀಳುತ್ತದೆ. ಅದಕ್ಕೆ Canal drops ಎನ್ನುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನೀರಾವರಿ ಇಲಾಖೆ ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಾರೆ, ಏಕೆಂದರೆ ಅವರು ಕೃಷಿ ಪದವೀಧರರಾಗಿದ್ದಾರೆ. Basically, he is a progressive farmer. ಈ ನೀರಾವರಿ ಬಗ್ಗೆ ಹೇಳುವಾಗ ಒಂದು drop ಮಾಡದೇ ಇರುವುದಕ್ಕೆ ಮುಂದೆ 20 ಕಿ.ಮೀ., canal ನಲ್ಲಿ ನೀರು ಹೋಗುವುದಿಲ್ಲ ಎಂದು ಹೇಳಿದರು. ಅದೇ ರೀತಿ ನಮ್ಮ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಮರೋಳ Marol Lift Irrigation Scheme ಎಂದು ಇದ್ದು, ಇದು ಸಹ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿಯೇ ಬರುತ್ತದೆ. ಅಲ್ಲಿ 60 ಸಾವಿರ ಎಕರೆ drip irrigation ಮಾಡಿದ್ದು, ಈಗಾಗಲೇ 4 ವರ್ಷಗಳು ಕಳೆದಿವೆ. ಅಲ್ಲಿ ನೀರು ಕೊಟ್ಟಿದ್ದು, 60 ಸಾವಿರ ಎಕರೆಯಲ್ಲಿ ಎಷ್ಟು ಎಕರೆಗಳಿಗೆ Canal

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

drip irrigation ಮುಖಾಂತರ ನೀರು ಕೊಡುತ್ತಾರೆಂದರೆ ಕೇವಲ ಒಂದು ಸಾವಿರ ಎಕರೆ ನೀರು ಉಣಿಸುತ್ತಾರೆ.

**(ಮುಂದು)**

**(581)/23.03.2021/1.20/ಹೆಚ್‌ವಿ:ಜಿಆರ್** **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸನ್ಮಾನ್ಯ ಸಭಾಪತಿಯವರೆ, ಮರೋಳು ಏತ ನೀರಾವರಿ ಯೋಜನೆಯಡಿಯಲ್ಲಿ Netafim India Irrigation Private Limited and Jain Irrigation Systems Limited ಸಂಸ್ಥೆಗಳ ಸಹಯೋಗದೊಂದಿಗೆ ಸುಮಾರು 60 ಸಾವಿರ ಎಕರೆಗೆ ನೀರುಣಿಸುವ ಹನಿ ನೀರಾವರಿ ಯೋಜನೆಯಿಂದ ಇವತ್ತು ಕೇವಲ ಒಂದು ಸಾವಿರ ಎಕರೆಗೆ ಮಾತ್ರ drip ಮೂಲಕ ನೀರು ಒದಗಿಸುತ್ತಿದ್ದಾರೆ. ಉಳಿದ 59 ಸಾವಿರ ಎಕರೆಗೆ ಒಂದು ಹನಿ ನೀರು ಹೋಗುತ್ತಿಲ್ಲ. ಇವು ಎಂತಹ ಯೋಜನೆಗಳು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರುವ ಆಯವ್ಯಯದಲ್ಲಿ, '60 ಸಾವಿರ ಎಕರೆ ಪ್ರದೇಶಕ್ಕೆ ಹನಿ ನೀರಾವರಿಯ ಮೂಲಕ ಈ ಜಿಲ್ಲೆಯ ರೈತರಿಗೆ ನೀರಾವರಿ ಒದಗಿಸಿದ್ದೇವೆ' ಎಂದು ಹೇಳುತ್ತಾರೆ. ಆದರೆ, ಅಲ್ಲಿಯ ರೈತರಿಗೆ ಒಂದು ಹನಿ ನೀರು ಸಹ ಸಿಗುತ್ತಿಲ್ಲ. ಕೆಲವು ಕಡೆಗಳಲ್ಲಿ ಭೂಮಿಯ ಆಳದಲ್ಲಿ ಪಿ.ವಿ.ಸಿ., ಪೈಪ್‌ಗಳನ್ನು ಅಳವಡಿಸಲಾಗಿರುತ್ತದೆ. ಸುಮಾರು 4 ಕೆ.ಜಿ., 6 ಕೆ.ಜಿ., 10 ಕೆ.ಜಿ., ಸಾಮರ್ಥ್ಯದ ಒತ್ತಡ ತಡೆಯುವಂತಹ Pressure Pipes ಅಳವಡಿಸಬೇಕಾಗುತ್ತದೆ. ಆದರೆ, ಇದಕ್ಕಿಂತ ಕಡಿಮೆ ಸಾಮರ್ಥ್ಯದ ಪೈಪುಗಳನ್ನು ಅಳವಡಿಸಿದರೆ ಒತ್ತಡ ತಡೆಯುವುದಕ್ಕೆ ಸಾಧ್ಯವಾಗದೇ ಅವು ಸ್ಫೋಟಗೊಳ್ಳುತ್ತವೆ. ರಿಪೇರಿ ಮಾಡುವುದಕ್ಕೆ ಬಂದರೆ, ಪಕ್ಕದ ಬೇರೆ ಜಮೀನಿನ ರೈತರು ನನ್ನ ಜಮೀನಿನಲ್ಲಿ ಪೀಕು ಇದೆ. ನೀವು ಎಲ್ಲಿಗೆ ಹೋಗುತ್ತೀರಿ ಎಂದು ಪ್ರಶ್ನೆ ಮಾಡುತ್ತಾರೆ. ಈ ರೀತಿ ಆದರೆ, ಮುಂದೆ ಇರುವಂತಹ ಜಮೀನುಗಳಿಗೆ ನೀರು ಹೋಗುವುದಿಲ್ಲ. ಇಂತಹ ಯೋಜನೆಗಳನ್ನು ಸರ್ಕಾರ ಜಾರಿಗೆ ತರುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ತುಂಬ ಚೆನ್ನಾಗಿ ಮಾತನಾಡುತ್ತಿದ್ದೀರಿ, ಮಾತನಾಡಿ. ಇನ್ನೂ ಎಷ್ಟು ಸಮಯದೊಳಗಾಗಿ ತಾವು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸುತ್ತೀರಿ?

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಸನ್ಮಾನ್ಯ ಸಭಾಪತಿಯವರೇ, ಇನ್ನೊಂದು 10–15 ನಿಮಿಷಗಳೊಳಗಾಗಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಇಟಗಿಯವರೇ, ಸರಿಯಾಗಿ 1 ಗಂಟೆ 30 ನಿಮಿಷಗಳಿಗೆ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ. ತಾವು ಮಾತನಾಡಲು ಪ್ರಾರಂಭಿಸಿ ಇಲ್ಲಿಗೆ ಸುಮಾರು 55 ನಿಮಿಷಗಳಾಗಿವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಸನ್ಮಾನ್ಯ ಸಭಾಪತಿಯವರೇ, ನಮಗೆ ಹೆಚ್ಚು ಮಾತನಾಡಬೇಕೆನ್ನುವ ಹಂಬಲವಿಲ್ಲ, ನನಗೆ ಕಥೆ ಹೇಳುವುದಕ್ಕೆ ಬರುವುದಿಲ್ಲ. Point to point ಮಾತನಾಡುತ್ತೇನೆ. ಆದರೆ, ನನ್ನ ಮಾತುಗಳನ್ನು ಕೇಳುವವರು ಇಲ್ಲ. ನಮಗೆ ಸಭಾನಾಯಕರೇ ಗತಿ. ಯಾರೂ ಇರದಿದ್ದರೂ ಕೊನೆಯ ಪಕ್ಷ ಮಾನ್ಯ ಸಭಾನಾಯಕರು ಇದ್ದರೆ ಸಾಕು. ಅವರು ಕೇಳಿಸಿಕೊಳ್ಳುತ್ತಿದ್ದಾರೆ. ಆದರೆ, ಮಂತ್ರಿಗಳು ಇಲ್ಲ. Implementing authority is the concerned Minister. ಸಂಬಂಧಪಟ್ಟ ಮುಖ್ಯವಾದ ಸಚಿವರು ಉಪಸ್ಥಿತರಿದ್ದರೆ, ನಾನು ಹೇಳುವ ಮಾತುಗಳನ್ನು ಕೇಳಿ ಕೆಲವು ಅಂಶಗಳನ್ನಾದರೂ ಅವರು ಅನುಷ್ಠಾನಗೊಳಿಸಬಹುದು. ಅವರಿಲ್ಲದಿದ್ದರೆ, ಬರೀ ಗೋಡೆಗೆ ಹೇಳಿದಂತೆ ಆಗುತ್ತದೆ ಅಷ್ಟೇ.

**ಉಪ ಸಭಾಪತಿಯವರು:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತುಂಬಾ ಚೆನ್ನಾಗಿ ಮಾತನಾಡುತ್ತಿದ್ದೀರಿ, ತಮ್ಮ ಮಾತುಗಳು ರೆಕಾರ್ಡ್ ಆಗಿದೆ. ತಮ್ಮ ಮಾತುಗಳನ್ನು 1 ಗಂಟೆ 30 ನಿಮಿಷಗಳಿಗೆ ಮುಕ್ತಾಯಗೊಳಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ನಂದವಾಡಿಗೆ ಒಂದು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ವೆಚ್ಚದಲ್ಲಿ ಹನಿ ನೀರಾವರಿಯನ್ನು ಅಳವಡಿಸಲಾಗಿದೆ. ಒಂದು ಅಣೆಕಟ್ಟು ನಿರ್ಮಾಣವಾದರೆ, ಅಲ್ಲಿ ಎಷ್ಟು ಸಾಮರ್ಥ್ಯದ ನೀರನ್ನು ಸಂಗ್ರಹಣೆ ಮಾಡಬಹುದು ಎನ್ನುವುದು ನಮಗೆ ಗೊತ್ತಿರುತ್ತದೆ. ಆ ನೀರನ್ನು ಇಂತಹ ಯೋಜನೆಗಳಿಗೆ ಇಷ್ಟು ಟಿ.ಎಂ.ಸಿ., ನೀರು ಎಂದು ಅಲಾಟ್‌ಮೆಂಟ್ ಮಾಡಲಾಗಿರುತ್ತದೆ. ಯಾರೋ ಒಬ್ಬ ಪ್ರಭಾವಶಾಲಿ ಎಂ.ಎಲ್.ಎ., ಬಂದು, ‘ನಮಗೆ ನೀರು ಬೇಕು, ಏತ ನೀರಾವರಿ ಯೋಜನೆ ಆಗಬೇಕು, ಆ

ಯೋಜನೆ ಬೇಕು, ಈ ಯೋಜನೆ ಬೇಕು' ಎಂದು ಹಠ ಹಿಡಿದು ಕುಳಿತಾಗ, ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಅವರ ಒತ್ತಡ ತಡೆಯುವುದಕ್ಕೆ ಸಾಧ್ಯವಾಗದೇ, 'ನಿಮ್ಮ ಭಾಗಕ್ಕೆ ಏತ ನೀರಾವರಿ ಯೋಜನೆಯನ್ನು ಕೊಡುತ್ತೇವೆ' ಎಂದು ಹೇಳಿ, ಹನಿ ನೀರಾವರಿ ಯೋಜನೆಗಳನ್ನು ಕೊಡುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನನ್ನ ಅನುಭವದ ಪ್ರಕಾರ ಹೇಳಬೇಕಾದರೆ, ಹನಿ ನೀರಾವರಿಯನ್ನು ವೈಯಕ್ತಿಕವಾಗಿ ಮಾಡಿದರೆ ಸರಿ ಹೋಗುತ್ತದೆ. ಅದನ್ನು ಬಿಟ್ಟು ಸರ್ಕಾರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಎಷ್ಟೇ ತಲೆ ಕೆಡಿಸಿಕೊಂಡರೂ ಸಮುದಾಯವಾಗಿ ಮಾಡಿದರೆ ಅದು ಯಶಸ್ವಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಒಂದು ಸಣ್ಣ ಹರಳು ಬಂದು ಫಿಲ್ಟರ್‌ನಲ್ಲಿ ಕುಳಿತುಕೊಂಡರೆ, ಅದನ್ನು ತೆಗೆಯುವವರು ಯಾರೂ? ಎನ್ನುವ ಪ್ರಶ್ನೆ ಎದುರಾಗುತ್ತದೆ. ಅದನ್ನು ಸರ್ಕಾರ ತೆಗೆಯಬೇಕೇ ಅಥವಾ ಸಂಬಂಧಪಟ್ಟ ಎಂಜಿನಿಯರ್ ಬಂದು ತೆಗೆಯಬೇಕೇ ಎನ್ನುವ ಗೊಂದಲವುಂಟಾಗುತ್ತದೆ. ರೈತ ನೀರು ಬರುತ್ತಿಲ್ಲವೆಂದು ಕೈಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಾನೆ. ಅದೇ ರೈತ ವೈಯಕ್ತಿಕವಾಗಿ ತನ್ನ ಹೊಲಕ್ಕೆ ಹನಿ ನೀರಾವರಿಯನ್ನು ಹಾಕಿಸಿಕೊಂಡಿದ್ದರೆ, ಪ್ರತಿದಿನ ಡ್ರಿಪ್ ಅನ್ನು ಸ್ಟಾರ್ಟ್ ಮಾಡುವುದಕ್ಕೂ ಮೊದಲೇ ಫಿಲ್ಟರ್‌ಗಳು ಸರಿ ಇವೆಯೇ ಎನ್ನುವುದನ್ನು ನೋಡುತ್ತಾನೆ. ಆಗ ಮಾತ್ರ ಸುಗಮವಾಗಿ ನೀರು ಹರಿಯುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಂದು ರಂಧ್ರವನ್ನು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡುತ್ತಿರುತ್ತಾನೆ. ಏಕೆಂದರೆ, ಆ ರಂಧ್ರಗಳಲ್ಲಿ ಏನಾದರೂ ಸಿಕ್ಕಿ ಹಾಕಿಕೊಂಡಿದ್ದರೆ ನೀರು ಹರಿಯುವುದಿಲ್ಲ. ರೈತನಿಗೆ ತನ್ನ ಹೊಲ ಎಷ್ಟಿದೆ, ಯಾವ ಪೈಪ್‌ನಲ್ಲಿ ಸರಿಯಾಗಿ ನೀರು ಬರುವುದಿಲ್ಲವೆನ್ನುವುದು ಅವನಿಗೆ ಗೊತ್ತಿರುತ್ತದೆ. ಎಲ್ಲಿ ಬ್ಲಾಕ್ ಆಗಿದೆ ಎನ್ನುವುದು ಅವನಿಗೆ ಅರ್ಥವಾಗುತ್ತದೆ. ಸಮುದಾಯ ಹನಿ ನೀರಾವರಿ ಯೋಜನೆಯಲ್ಲಿ ಪೈಪ್ ಬ್ಲಾಕ್ ಆದರೆ, ಅದನ್ನು ಯಾರು ತೆಗೆಯುತ್ತಾರೆ? ಇದನ್ನು ನೋಡಿಕೊಳ್ಳುವುದಕ್ಕೆ ಯಾರನ್ನು ನೇಮಿಸಿದರೂ ಏನೂ ಆಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮುದಗಲ್‌ನಿಂದ ಇಳಕಲ್‌ಗೆ ಹೋಗುವ ದಾರಿಯಲ್ಲಿ ಬಲಭಾಗದಲ್ಲಿ ನಂದಗುಡಿ ಇದೆ. ಇಲ್ಲಿ 30-40 ಸಾವಿರ ಎಕರೆ ಸಮುದಾಯಿಕ ಹನಿ ನೀರಾವರಿ ಯೋಜನೆಯನ್ನು ಮಾಡಲಾಗಿದೆ. ಆದರೆ, ಪೈಪ್‌ಗಳು ಎಲ್ಲೆಂದರೆ ಅಲ್ಲಿ ಬಿದ್ದಿವೆ. ಈ ಯೋಜನೆ ಪ್ರಾರಂಭವಾಗಿ ಒಂದು ವರ್ಷವಾಗಿಲ್ಲ, 500-600 ಕೋಟಿ ರೂಪಾಯಿಗಳಷ್ಟು ಬಿಲ್ ತೆಗೆದುಕೊಂಡಿದ್ದಾರೆ. ಆದರೆ, ಏನೇನು ಉಪಯೋಗವಾಗಿಲ್ಲ. ಒಂದು ಹತ್ತು ಎಕರೆಗೆ ನೀರಾವರಿ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಇಟಗಿಯವರು ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕೆನ್ನುವುದನ್ನು ಹೇಳಬೇಕಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಏನು ಪ್ರಶ್ನೆ ಕೇಳುತ್ತೇನೆ ಅದಕ್ಕೆ ಸಲಹೆಯನ್ನು ಸಹ ಹೇಳುತ್ತೇನೆ ಅಥವಾ ಏನು ಮಾಡಬಹುದು ಎನ್ನುವುದನ್ನು ಹೇಳುತ್ತೇನೆ. ನಾನು ಹೇಳಿರುವುದೇ ಅಂತಿಮ ಎಂದು ಹೇಳುವುದಿಲ್ಲ. ನನಗೆ ತಿಳಿದಿರುವುದನ್ನು ನಾನು ಹೇಳುತ್ತಿದ್ದೇನೆ. ಮಾಡುವುದು ಬಿಡುವುದು ಸರ್ಕಾರಕ್ಕೆ ಸೇರಿದ್ದು.

**ಶ್ರೀ ಎಸ್.ಶಂಕರ್(ತೋಟಗಾರಿಕಾ ಮತ್ತು ರೇಷ್ಮೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡುತ್ತಿರುವ ಸಲಹೆಗಳನ್ನು ನಾನು ನೋಟ್ ಮಾಡಿಕೊಳ್ಳುತ್ತಿದ್ದೇನೆ. ಮುಂದೆ ಈ ರೀತಿ ಆಗದಂತೆ ಕ್ರಮ ವಹಿಸಲಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಸನ್ಮಾನ್ಯ ಸಭಾಪತಿಯವರೇ, ಒಬ್ಬ ರೈತನಿಗೆ ಏನು ಸೌಲಭ್ಯಗಳನ್ನು ಒದಗಿಸಬೇಕೆಂದು ನನಗೆ ಅನಿಸುತ್ತಿದೆ ಅದನ್ನು ನಾನು ಹೇಳುತ್ತಿದ್ದೇನೆ. ಎಷ್ಟು ಎಕರೆ ಪ್ರದೇಶಕ್ಕೆ ಹನಿ ನೀರಾವರಿಯನ್ನು ಒದಗಿಸಬೇಕೆಂದು ಸರ್ಕಾರ ಉದ್ದೇಶಿಸಿದೆ ಅಷ್ಟು ಪ್ರಮಾಣದ ಹೊಂಡಗಳನ್ನು ನಿರ್ಮಿಸಿ, ಹನಿ ನೀರಾವರಿಯನ್ನು ಮಾಡಲು ಉದ್ದೇಶಿಸಿರುವ ರೈತರನ್ನು ಗುರುತಿಸಿ, ಆ ಹೊಂಡಗಳಿಗೆ ನೀರನ್ನು ತುಂಬಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಮುಂದೆ ಆ ನೀರನ್ನು ಹೊಲಕ್ಕೆ ಹಾಯಿಸುವಂತಹ ಕೆಲಸ ರೈತನಿಗೆ ಸೇರಿದ್ದು. ಮೂಲಸೌಕರ್ಯಗಳಾದ ವಿದ್ಯುತ್ ಮತ್ತು ನೀರನ್ನು ಸರ್ಕಾರ ರೈತನಿಗೆ ಸಕಾಲಕ್ಕೆ ಒದಗಿಸಿ ಕೊಡಬೇಕಾಗುತ್ತದೆ. ರೈತನಿಗೆ ನೀರು, ವಿದ್ಯುತ್ ಕೊಡದಿದ್ದರೆ ಅವನು ಏನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ?

ಸನ್ಮಾನ್ಯ ಸಭಾಪತಿಯವರೇ, ಏತ ನೀರಾವರಿಯಲ್ಲಿರುವ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ರೈತ ಬೀಜ ಬಿತ್ತಿ, ಗೊಬ್ಬರ ಹಾಕಿ ಶೇಕಡಾ 50-60 ರಷ್ಟು ಖರ್ಚು ಮಾಡಿರುತ್ತಾನೆ. ಹೊಲಕ್ಕೆ ನೀರು ಹಾಯಿಸಲು ಸುಮಾರು 65 ಹೆಚ್.ಪಿ., ಅಥವಾ 120 ಹೆಚ್.ಪಿ., ಸಾಮರ್ಥ್ಯದ ಮೋಟಾರ್ ಅನ್ನು ಅಳವಡಿಸಿರುತ್ತಾರೆ. ಮೋಟರ್‌ನಲ್ಲಿ ಏನಾದರೂ ದೋಷ ಕಂಡು ಬಂದರೆ ಅಥವಾ ಆ ಮೋಟರ್ ಕೆಟ್ಟು ಹೋದರೆ, ಹೊಲಕ್ಕೆ ನೀರು ಹಾಯಿಸಲು ಸಾಧ್ಯವಾಗುವುದಿಲ್ಲ. ಮೋಟಾರ್ ಕೆಟ್ಟು

ಹೋದರೆ, ಮೊದಲಿಗೆ ಅಸಿಸ್ಟೆಂಟ್ ಎಂಜಿನಿಯರ್ ಬಂದು ನೋಡಬೇಕಾಗುತ್ತದೆ. ರೈತ ಹೋಗಿ ಅಸಿಸ್ಟೆಂಟ್ ಎಂಜಿನಿಯರ್‌ನನ್ನು ಭೇಟಿ ಮಾಡಿ ಕೇಳಿದ ಎರಡು ದಿನಗಳ ನಂತರ ಅಸಿಸ್ಟೆಂಟ್ ಎಂಜಿನಿಯರ್ ಬರುತ್ತಾನೆ. ಬಂದು ಲಿಸ್ಟ್ ಮಾಡಿ 'ಇಂತಹ ಮೋಟರ್ ಕೆಟ್ಟಿದೆ' ಎಂದು ಎ.ಇ.ಇ.,ಗೆ ರಿಪೋರ್ಟ್ ಮಾಡುತ್ತಾನೆ. ರಿಪೋರ್ಟ್ ಪಡೆದುಕೊಂಡ ಎ.ಇ.ಇ., ಹೋಗಿ ಎಕ್ಸಿಕ್ಯುಟೀವ್ ಎಂಜಿನಿಯರ್‌ನಿಂದ ಹಣಕಾಸಿನ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆಗಳು ನಡೆಯಲು ಸುಮಾರು 15 ರಿಂದ 20 ದಿನಗಳು ಬೇಕಾಗುತ್ತದೆ. ನಂತರ ಮೋಟರ್ ಅನ್ನು ಅಳವಡಿಸುವಷ್ಟರಲ್ಲಿ ಒಂದು ತಿಂಗಳಾಗುತ್ತದೆ. ಒಂದು ತಿಂಗಳ ಕಾಲ ನೀರಿಲ್ಲದೇ ಯಾವುದೇ ಬೆಳೆ ಇರುವುದಕ್ಕೆ ಸಾಧ್ಯವಾಗುತ್ತದೆಯೇ? ಈಗ ಯಾವುದೇ ಬೆಳೆ ಬೆಳೆದರೂ 90–100 ದಿನಗಳಲ್ಲಿ ಬೆಳೆಯಲಾಗುತ್ತಿದೆ. ತರಕಾರಿ ಬೆಳೆಗಳು 60 ರಿಂದ 90 ದಿನಗಳೊಳಗಾಗಿ ಕೈಗೆ ಬರುತ್ತವೆ. ಈಗ ಒಂದು ಎಕರೆಯಲ್ಲಿ 40 ಟನ್‌ಗಳಷ್ಟು ತರಕಾರಿ ಬೆಳೆಗಳನ್ನು ಬೆಳೆಯುವಷ್ಟು ಸಾಮರ್ಥ್ಯವಿದೆ. ಇವತ್ತಿನ ದಿನ ಇದರಿಂದಲೇ ರೈತರು ಬದುಕಿದ್ದಾರೆ. ಕೃಷಿ ಸಂಶೋಧನೆಗಾಗಿ ಹೆಚ್ಚು ಅನುದಾನವನ್ನು ನೀಡಬೇಕೆಂದು ನಾವು ಏತಕ್ಕೋಸ್ಕರ ಒತ್ತಾಯ ಮಾಡುತ್ತೇವೆಂದರೆ, ಬೀಜದ ಗುಣಮಟ್ಟವನ್ನು ಮತ್ತು ತಳಿಗಳನ್ನು ಅಭಿವೃದ್ಧಿಪಡಿಸುವ ಸಂಶೋಧನಾ ಕಾರ್ಯಕ್ಕೆ ಸರ್ಕಾರ ಹಣ ಕೊಟ್ಟರೆ ಮಾತ್ರ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಒಂದು ಎಕರೆಯಲ್ಲಿ 40 ಟನ್ ತರಕಾರಿ ಬೆಳೆದಿರುವುದನ್ನು ನಾವು ನೋಡಿದ್ದೇವೆ. ಆ ಬೆಳೆ ಹೋಗುವುದರೊಳಗಾಗಿ ಪಕ್ಕದಲ್ಲಿ ಬೇರೆ ತರಕಾರಿ ಬೆಳೆ ಹಾಕಿರುತ್ತಾರೆ. ಒಂದು ಎಕರೆಯಲ್ಲಿ ಸೊಪ್ಪು ಬೆಳೆದರೆ ಕನಿಷ್ಠ 15–20 ಟನ್‌ಗಳಷ್ಟು ಬರುತ್ತದೆ. ಟಮೋಟೋ, ಬದನೇಕಾಯಿ ಮುಂತಾದವುಗಳನ್ನು ಒಂದು ಎಕರೆಯಲ್ಲಿ 40 ಟನ್‌ನಷ್ಟು ಬೆಳೆಯಲಾಗುತ್ತಿದೆ. It depends on the farmer. ಏನೂ ಮಾಡದೇ 40 ಟನ್ ಬರಬೇಕು ಎಂದರೆ ಎಲ್ಲಿಂದ ಬರುತ್ತದೆ? With very good agriculture, we will get 40 tons per acre. ರೈತರಿಗೆ ಟೆಕ್ನಾಲಜಿ ಕೊಟ್ಟಾಗ ಮಾತ್ರ ಈ ಪ್ರಮಾಣದಲ್ಲಿ ಬೆಳೆ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ನಾವು ಕೃಷಿ ಹೊಂಡಗಳನ್ನು ರೈತರಿಗೆ ಕೊಡುತ್ತಿದ್ದೇವೆ. ಈ ರೀತಿಯ ಹೊಂಡಗಳನ್ನು ನಿರ್ಮಾಣ ಮಾಡಿ, ಆ ಹೊಂಡಗಳಿಗೆ ನೀರು ತುಂಬಿಸಿ ಕೊಡಬೇಕಾಗುತ್ತದೆ. ಕೃಷಿ ಹೊಂಡಗಳಿಗೆ ನಿಗದಿಪಡಿಸಿರುವ ವಿಸ್ತೀರ್ಣವನ್ನು ಇನ್ನೂ ಹೆಚ್ಚು ಮಾಡಬೇಕಾಗುತ್ತದೆ. ರೈತನ ಹೊಲಕ್ಕೆ

ಅವಕಶ್ಯತೆ ಇರುವಷ್ಟು ನೀರನ್ನು ಪೂರೈಕೆ ಮಾಡುವಂತಹ ಹೊಂಡಗಳನ್ನು ನಿರ್ಮಾಣ ಮಾಡಿ ನೀರು ತುಂಬಿಸಿಕೊಟ್ಟರೆ, ಉಳಿದ ಕೆಲಸವನ್ನು ರೈತ ಮಾಡಿಕೊಳ್ಳುತ್ತಾನೆ. ರೈತ ತನ್ನ ಸ್ವಂತ ಹೊಲದಲ್ಲಿ ಹನಿ ನೀರಾವರಿಯನ್ನು ಅಳವಡಿಸಿಕೊಳ್ಳುವುದರಿಂದ ಅದರಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳುತ್ತಾನೆ. ಸಮುದಾಯ ಹನಿ ನೀರಾವರಿ ಯೋಜನೆಯಡಿಯಲ್ಲಿ ಈ ರೀತಿ ಆಗುವುದಿಲ್ಲ. ಏನಾದರು ರಿಪೇರಿ ಬಂದರೆ, ಅವನು ಮಾಡಲಿ ಇವನು, ಇವನು ಮಾಡಲಿ ಎಂದು ಅವನು ಸುಮ್ಮನೆ ಕುಳಿತಿರುತ್ತಾರೆ. ಯಾರೂ ಮಾಡುವುದಿಲ್ಲ, ಒಟ್ಟಾರೆ ಆ ವ್ಯವಸ್ಥೆಯೇ ವ್ಯರ್ಥವಾಗುತ್ತದೆ. ಈ ರೀತಿ ಮಾಡಿರುವುದರಿಂದ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಸುಮಾರು 30 ರಿಂದ 40 ಸಾವಿರ ಕೋಟಿ ರೂಪಾಯಿಗಳನ್ನು ವ್ಯರ್ಥ ಮಾಡಲಾಗಿದೆ. ನಮ್ಮ ಭಾಗದಲ್ಲಿಯೇ ಸುಮಾರು ಒಂದರಿಂದ ಎರಡು ಸಾವಿರ ಕೋಟಿ ರೂಪಾಯಿಗಳು ವ್ಯರ್ಥವಾಗಿರಬಹುದು. ಹಿಂದೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಾಗ, ಗುಳ್‌ಬಾಳ್ ಎನ್ನುವ ಪ್ರದೇಶದಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಲು ಅನುಕೂಲವಾಗುವಂತೆ ಹನಿ ನೀರಾವರಿ ಯೋಜನೆಯನ್ನು ಮಾಡಿಕೊಟ್ಟಿದ್ದರು. ಅದು ಸಂಪೂರ್ಣವಾಗಿ ವಿಫಲಗೊಂಡಿತು. ಕಾರಣವೇನೆಂದರೆ, ಈ ಯೋಜನೆಯನ್ನು ಸಮುದಾಯ ಹನಿ ನೀರಾವರಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿತ್ತು. ಒಬ್ಬ ರೈತನೇ ಹನಿ ನೀರಾವರಿ ಕೈಗೊಂಡರೆ ಅದು ಸಫಲಗೊಳ್ಳುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಕೈಗೊಳ್ಳುವ ಯಾವುದೇ ಯೋಜನೆಗಳು ಸಕಾಲದಲ್ಲಿ ಮುಗಿಯಬೇಕಾಗುತ್ತದೆ. ಅದಕ್ಕೊಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಒಂದು ಲಕ್ಷ ಕೋಟಿ ರೂಪಾಯಿಗಳ ಅವಶ್ಯಕತೆ ಇದೆಯೆನ್ನುವುದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರವಾಗಿದೆ. ಈ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು 5,600 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಏತಕ್ಕೋಸ್ಕರ ನೀರಾವರಿ ಯೋಜನೆಗಳು ಪೂರ್ಣಗೊಳ್ಳುವುದು ತಡವಾಗುತ್ತಿವೆಯೆಂದರೆ, ಕೃಷ್ಣ ಭಾಗ್ಯ ಜಲ ನಿಗಮದಲ್ಲಿ ಟೆಂಡರ್‌ಗಳನ್ನು ಕರೆಯಲಾಗುತ್ತದೆ. ಟೆಂಡರ್ ಆದ ನಂತರ ಡಿ.ಎಸ್.ಆರ್., ರೇಟ್ ಎಂದು ನಿಗದಿ ಮಾಡಿ, ಎಸ್ಟಿಮೇಟ್ ಮಾಡಲಾಗುತ್ತದೆ. ಸರ್ಕಾರವೇ ಅಂದಾಜು ವೆಚ್ಚವನ್ನು ನಿಗದಿ ಮಾಡುವುದಿಲ್ಲ. ದೊಡ್ಡದೊಡ್ಡ ಕಂಪನಿಗಳು ಅಂದಾಜು ವೆಚ್ಚವನ್ನು ನಿಗದಿಗೊಳಿಸುತ್ತವೆ. ಹಿಂದಿನ ವರ್ಷ ಕಬ್ಬಿಣದ ದರ ಒಂದು ಕೆ.ಜಿ.ಗೆ 46-47 ರೂಪಾಯಿಗಳಾಗಿತ್ತು. ಈ

ವರ್ಷ ಅದರ ದರ 82 ರೂಪಾಯಿಗಳಾಗಿವೆ. ಆ ಕಂಪನಿಯವರು ಮಾಡಿ ಕಳುಹಿಸಿಕೊಡುವ ಅಂದಾಜು ವೆಚ್ಚಕ್ಕೆ ಇಂಜಿನಿಯರ್‌ಗಳು ತಮ್ಮ ಮುದ್ರೆ ಹಾಕಿ, ಸಹಿ ಮಾಡಿಕೊಡುತ್ತಾರೆ.

(ಮುಂದು)

**(582) 23.2.2021 1.30 ಪಿಕೆ:ಎಂಡಿ**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಈ ವರ್ಷದ್ದು ಇತ್ತೆಂದರೆ ಈ ವರ್ಷದ ದರದಲ್ಲೇ ಮಾಡಬೇಕಾಗುತ್ತದೆ. 3 ತಿಂಗಳು ದಾಟಿದರೆ updation ಮಾಡಿಬಿಡುತ್ತಾರೆ. Updation ಮಾಡಿ 500 ಕೋಟಿ ರೂ.ಗಳಿದ್ದದ್ದು 700 ಕೋಟಿ ರೂ. ಮಾಡಿಬಿಡುತ್ತಾರೆ. ಟೆಂಡರ್ ಹಾಕಿದ ಮೇಲೆ 1000 ಕೋಟಿ ರೂ.ಗಳಿಗೆ ತಂದಿಡುತ್ತಾರೆ. 300 ಕೋಟಿ ರೂ.ಗಳ ಕೆಲಸಕ್ಕೆ 700 ಕೋಟಿ ರೂ.ಗಳನ್ನು ಹೆಚ್ಚು ಮಾಡಿರುವಂತಹ ನಿದರ್ಶನಗಳು ಇವೆ. Upper Krishna Project ವಿಚಾರವಾಗಿ ನಾವು ಈಗಾಗಲೇ ದೂರನ್ನು ಕೂಡ ಕೊಟ್ಟಿದ್ದೇವೆ. Re-modernization ಕೆಲಸ ಆಗಿದೆ. Re-modernization ಕೆಲಸಕ್ಕೆ first original estimate 300-400 ಕೋಟಿ ರೂಪಾಯಿಗಳಿಗೆ ಇರುತ್ತದೆ. ಇವತ್ತು 926 ಕೋಟಿ ರೂ.ಗಳಿಗೆ ಟೆಂಡರ್ ಆಗಿದೆ. ಅಲ್ಲಿ 450 ಕೋಟಿ ರೂ.ಗಳ marram quantity ಗೆ ಇಟ್ಟಿದ್ದಾರೆ. Marram ಅಂದರೆ CNS (Cohesive Non-Swelling) layer ಇಟ್ಟಿದಾರೆ, ಆದರೆ ಅಲ್ಲಿ *Semi-pervious layer use* ಮಾಡಿಲ್ಲ. 1 ಲಕ್ಷ ಕ್ಯೂಬಿಕ್ ಮೀಟರ್ ಬಳಕೆ ಮಾಡಿಲ್ಲ. ಟೆಂಡರ್‌ನಲ್ಲಿ ಇರುವುದು 64 ಲಕ್ಷ ಕ್ಯೂಬಿಕ್ ಮೀಟರ್ ಹೂಳು ಕೊಟ್ಟಿದ್ದಾರೆ. ಇದನ್ನು ನೋಡಿದಾಗ ತುಂಗಭದ್ರಾ ನದಿಯಿಂದ ಹೂಳು ತೆಗೆಯುವುದಕ್ಕೆ ಆಗುವುದಿಲ್ಲ ಎಂದು ಹಾಗೆಯೇ ಬಿಟ್ಟರು. ಹೀಗಿರುವಾಗ 64 ಲಕ್ಷ ಕ್ಯೂಬಿಕ್ ಮೀಟರ್ ಎಲ್ಲಿಂದ ಬರುತ್ತದೆ? ಒಂದೊಂದಕ್ಕೂ marram ಹಾಕಿಲ್ಲ. Updation ಮಾಡಿ ಈ ರೀತಿ ತೆಗೆದುಕೊಂಡರೆ 1 ಲಕ್ಷ ಕೋಟಿ ಅಲ್ಲ, 10 ಲಕ್ಷ ಕೋಟಿ ರೂ.ಗಳಾದರೂ ಈ ಪ್ರಾಜೆಕ್ಟ್ ಮುಗಿಯುವುದಿಲ್ಲ. ಇದರ ಬಗ್ಗೆ ಯಾರು ಕಡಿವಾಣ ಹಾಕಬೇಕು? ಇವತ್ತು ನಾಲ್ಕೈದು ಕಂಪನಿಗಳಿಗೆ ಪ್ರತಿಯೊಂದು ಕೆಲಸಗಳನ್ನು ಕೊಡುತ್ತಿದ್ದಾರೆ. ಮೊದಲು, 50 ಲಕ್ಷ ರೂ.ಗಳ ಕೆಲಸವಿದ್ದರೆ ಅಷ್ಟೇ ಮೊತ್ತಕ್ಕೆ ಸೀಮಿತವಾಗಿರುತ್ತಿದ್ದವನಿಗೆ ಆ ಕೆಲಸ ಕೊಡುತ್ತಿದ್ದರು. ಅದೇರೀತಿ, 1 ಕೋಟಿ, 4 ಕೋಟಿ, 6 ಕೋಟಿ ಮತ್ತು 50 ಕೋಟಿ ರೂ.ಗಳ ಮೊತ್ತದ ಕೆಲಸವನ್ನು ಅಂತಹ ಸಾಮರ್ಥ್ಯವಿದ್ದವರಿಗೆಯೇ ಕೊಡುತ್ತಿದ್ದರು. ಆದರೆ ಇವತ್ತು KBJNL (Krishna Bhagya Jala Nigama Limited), VJNl

(Visveswarya Jala Nigam Limited) ಗಳಲ್ಲಿ ಎಲ್ಲಾ ಕೆಲಸಗಳನ್ನು ಕ್ಲಬ್ ಮಾಡಿ, 500 ಕೋಟಿ ಇದ್ದುದನ್ನು 1000 ಕೋಟಿ ಎಂದು ಮಾಡಿ ಅವನ ಕಡೆಯಿಂದಲೇ ಎಸ್ಟಿಮೇಟ್ ಮಾಡಿಸಿ ಅವನಿಗೆ ಕೊಟ್ಟುಬಿಡುತ್ತಾರೆ. ಇಂತಹ ಕಡೆ ತುಂಡು ಗುತ್ತಿಗೆ ಕೊಡಬೇಕು. ಸರ್ಕಾರಕ್ಕೆ ನಾನೊಂದು ಮನವಿ ಮಾಡಿಕೊಳ್ಳುತ್ತೇನೆ. ಇಡೀ state works 4 ಕಂಪನಿಗಳಿಗೆ ಕೊಟ್ಟುಬಿಡಿ. ಟೆಂಡರ್‌ಗಳನ್ನೇಕೆ ಕರೆಯುತ್ತೀರಿ? ಟೆಂಡರ್ ಕರೆಯುವ ಅವಶ್ಯಕತೆಯೇ ಇಲ್ಲ. ಮಾನ್ಯ ಸಭಾಪತಿಯವರೇ, Public Undertaking Committee meeting ನಲ್ಲಿ, 17000 ಕೋಟಿ ರೂ. ಮೊತ್ತದ ಕೆಲಸವನ್ನು ಒಂದೇ ಕಂಪನಿಗೆ ನಿರ್ವಹಣೆ ಮಾಡಲು ಕೊಟ್ಟಾಗ 2-3 ವರ್ಷಗಳಲ್ಲಿ ಅಲ್ಲಿ ಅವ್ಯವಹಾರವಾಗಿರುವುದು ಕಂಡು ಬಂತು. ಇದರ ಬಗ್ಗೆ ಯಾರು ಕೇರ್ ತೆಗೆದುಕೊಳ್ಳಬೇಕು? ಹೀಗಾದರೆ ನಮ್ಮ ರಾಜ್ಯದ ಪ್ರಾಜೆಕ್ಟ್‌ಗಳು ಯಾವಾಗ ಮುಗಿಯುತ್ತವೆ? ಅವು ಮುಗಿಯುವುದಕ್ಕೆ ಸಾಧ್ಯವೇ ಇಲ್ಲ. Upper Krishna Project ಗೆ 5000 ಕೋಟಿ ಇಟ್ಟಿದ್ದೀರಿ, ಇಷ್ಟು ಮೊತ್ತ ಇಟ್ಟರೇ ಇನ್ನು 100 ವರ್ಷವಾದರೂ ಈ ಪ್ರಾಜೆಕ್ಟ್ ಮುಗಿಯುವುದಿಲ್ಲ. 5000 ಕೋಟಿ ರೂ.ಗಳಿಗೆ ಅವನು 25000 ಕೋಟಿ ರೂ.ಗಳ ಬಿಲ್ ಮಾಡಿರುತ್ತಾನೆ. ಮಾನ್ಯ ಸಭಾಪತಿಯವರೇ, ಇವರಿಗೆ bill clearance ಗೆಂದು SCP-TSP (Special Component Plan and Tribal Sub-Plan) ಯ ಹಣ ಕೂಡ ಸಂದಾಯವಾಗುತ್ತದೆ. ಹೀಗೆ ಎಲ್ಲಾದರೂ ಉಂಟೇ? SCP-TSP ಹಣದಿಂದ ಬಿಲ್ ಕ್ಲಿಯರ್ ಮಾಡುತ್ತಾರೆ. SCP-TSP ಹಣವನ್ನು ಬಡವರ, ದೀನ-ದಲಿತರ ಸಲುವಾಗಿ ಇಟ್ಟಿದ್ದೇವೆ, ಅವರ ಕೆಲಸಕ್ಕಾಗಿ ಇಟ್ಟಿದ್ದೇವೆ.

**ಉಪಸಭಾಪತಿಯವರು:-** ಮಾನ್ಯ ಇಟಗಿಯವರೇ ನಿಮ್ಮ ಕಾಲಾವಕಾಶ ಮುಗಿಯಿತು. ದಯವಿಟ್ಟು ಮುಗಿಸಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಕಡಿಮೆ ಕಾಲಾವಕಾಶ ಮಾಡಿಕೊಟ್ಟಿದ್ದೀರಿ. ಪೀಠದಲ್ಲಿ ಮಾನ್ಯ ಹೊರಟ್ಟಿಯವರಿದ್ದರೆ ಹೆಚ್ಚು ಮಾತನಾಡುವುದಕ್ಕೆ ಕೊಡುವುದಿಲ್ಲ, ಮಾನ್ಯ ಪ್ರಾಣೇಶ್‌ರವರು ಪೀಠದಲ್ಲಿದ್ದರೆ ಮಾನಾಡುವುದಕ್ಕೆ ಹೆಚ್ಚು ಕಾಲಾವಕಾಶ ಕೊಡುತ್ತಾರೆ ಎಂದು ಭಾವಿಸಿದ್ದೇನೆ.

**ಉಪಸಭಾಪತಿಯವರು:-** ನೀವು ತುಂಬಾ ಚೆನ್ನಾಗಿ ಮಾತನಾಡಿದ್ದೀರಿ. ನಿಮ್ಮ ವಿಚಾರಗಳು ಎಲ್ಲರ ಮನ ಮುಟ್ಟಿದೆ. ಸಮಯದ ಸಮಸ್ಯೆ ಇರುವುದು ತಮಗೂ ಗೊತ್ತಿದೆ. ಆದ್ದರಿಂದ ಬೇಗ ಮುಗಿಸಿಬಿಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಒಂದೆರಡು ನಿಮಿಷದ ಒಳಗೆ ಹೈದರಾಬಾದ್–ಕರ್ನಾಟಕದ ಬಗ್ಗೆ ಮಾತನಾಡಿಬಿಡುತ್ತೇನೆ. ಕಲ್ಯಾಣ ಕರ್ನಾಟಕಕ್ಕೆ 1500 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಕಳೆದ 3 ವರ್ಷಗಳಿಂದ ಹೆಚ್ಚಿನ ಬಜೆಟ್ ಇಡುತ್ತಿಲ್ಲ. ನಾವು 2500 ಕೋಟಿ ರೂ.ಗಳನ್ನು ಕೇಳಿದ್ದೆವು. ಹೋದ ವರ್ಷ 1000 ರೂ.ಗಳನ್ನು ಮಾತ್ರ ಇಟ್ಟಿದ್ದರು. ಮಾನ್ಯ ಸಭಾಪತಿಯವರೇ, ರಾಯಚೂರಿನಲ್ಲಿ ವಿಶ್ವವಿದ್ಯಾಲಯ ತೆರೆದು ಎಷ್ಟು ವರ್ಷವಾಯಿತು? ಒಂದು ಪೈಸೆಯನ್ನೂ ಕೂಡ ವಿಶ್ವವಿದ್ಯಾಲಯಕ್ಕೆ ಕೊಡದೇ ಹೋದರೆ ಹೇಗೇ? ಹಣ ಕೊಡುವುದಕ್ಕೆ ಆಗದೇ ಹೋದರೆ ವಿಶ್ವವಿದ್ಯಾಲಯವನ್ನು ಏಕೆ ತೆರೆಯಬೇಕು? ಗುಲ್ಬರ್ಗಾ ವಿಶ್ವವಿದ್ಯಾಲಯವನ್ನು bifurcate ಮಾಡಿ, ಯಾದಗಿರಿ–ರಾಯಚೂರಿಗೆ ಒಂದು ವಿಶ್ವವಿದ್ಯಾಲಯ ಮತ್ತು ಬೀದರ್–ಗುಲ್ಬರ್ಗಾಕ್ಕೆ ಒಂದು ವಿಶ್ವವಿದ್ಯಾಲಯ ಮಾಡಿದ್ದಾರೆ. ಆದರೆ ಅದಕ್ಕೆ ಹಣವನ್ನೇ ಕೊಟ್ಟಿಲ್ಲ, ಸಿಬ್ಬಂದಿಗಳಿಲ್ಲ. ರಾಯಚೂರಿನಲ್ಲಿ Aerodrome ಇದೆ. Aerodrome ಗೆ ಮತ್ತು ವಿಶ್ವವಿದ್ಯಾಲಯಕ್ಕೆ ಇವರು ದುಡ್ಡು ಕೊಡುವುದಿಲ್ಲ, ದುಡ್ಡನ್ನು ಕೇಳಿದರೆ HKDB (Hyderabad-Karnataka Development Board) grant ನಿಂದ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. 371 ಜೆ ಅಡಿಯಲ್ಲಿ HKDB ಗೆ special grant ಕೊಟ್ಟಿದ್ದು ಅದರಿಂದಲೇ ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಸ್ಪೆಷಲ್ ಗ್ರ್ಯಾಂಟ್ ಎಂಬುದಕ್ಕೆ ಅರ್ಥವೇನಿದೆ? Special status ಹೇಗೆ ಕೊಟ್ಟ ಹಾಗೆ ಆಗುತ್ತದೆ?

ಮಾನ್ಯ ಸಭಾಪತಿಯವರೇ, ಇನ್ನು ಮೂರ್‍ನಾಲ್ಕು ಸ್ಕೀಮ್‌ಗಳು cancel ಆಗಿರುವುದರ ಬಗ್ಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಹೈದರಾಬಾದ್–ಕರ್ನಾಟಕಕ್ಕೆ Railway Division ಬರುವುದಿತ್ತು, ಆದ್ರೆ ಅದನ್ನು cancel ಮಾಡಿ ರಾಯಗಡ್‌ಗೆ ಹಾಕಿದ್ದಾರೆ. ಯಾದಗಿರಿಯಲ್ಲಿ Textile Park ಬರುವುದಿತ್ತು. ಆದರೆ ಇವತ್ತು ಈ Textile Park cancel ಆಗಿದೆ. ಮೊದಲು IIT (Indian Institute of Technology) ರಾಯಚೂರಿಗೆ ಎಂದಿತ್ತು, ನಂತರ ಅದನ್ನು ತೆಗೆದು ಹುಬ್ಬಳ್ಳಿಗೆ ಕೊಟ್ಟರು. ನಮ್ಮಲ್ಲಿ AIIMS (All India Institute of Medical Sciences) ಬರುತ್ತದೆ ಎಂದು ಹೇಳಿದ್ದರು. ಆದರೆ ಈ AIIMS ನ್ನೂ ಕೂಡ ಹುಬ್ಬಳ್ಳಿಗೆ ಹಾಕುತ್ತಾರೆ ಎಂದು ಸುದ್ದಿ ಬರುತ್ತಿದೆ. ಇಎಸ್‌ಐ ಆಸ್ಪತ್ರೆಗೆ ಸುಮಾರು 4000–5000 ಕೋಟಿ ರೂ.ಗಳನ್ನು ಖರ್ಚು ಮಾಡಿ, ಒಂದೇ ಸೂರಿನಡಿಯಲ್ಲಿ Dental College, Medical College, Nursing College, Para-

Medical etc ಎಲ್ಲದಕ್ಕೂ ಹಾಸ್ಟೆಲ್‌ಗಳು, Ladies' Hostel, ಸುಸಜ್ಜಿತವಾದ ಹಾಸಿಗೆಗಳು ಹಾಗೂ ಅತ್ಯುತ್ತಮ ಉಪಕರಣಗಳಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡಿದರು. ಕೇಂದ್ರ ಸರ್ಕಾರ 87 ಪರ್ಸೆಂಟ್ ಕೊಡುತ್ತದೆ, ನಮ್ಮ ರಾಜ್ಯ ಸರ್ಕಾರ 13 ಪರ್ಸೆಂಟ್ ಕೊಡಬೇಕು. ಅಂಥದ್ದನ್ನು ಉಪಯೋಗಿಸಿಕೊಳ್ಳದೇ ಧೂಳು ಹಿಡಿಯುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಹೊಸದಾಗಿ ಮೂಲಭೂತ ಸೌಕರ್ಯಗಳನ್ನು ಕೊಡುತ್ತೇವೆ, ಎಲ್ಲವನ್ನೂ ಹೊಸದಾಗಿ ಕೊಡುತ್ತೇವೆ ಎಂದು ಏನು ಹೇಳುತ್ತಾರೋ ಅದರ ಬದಲಿಗೆ ಇರುವಂತಹ ಇಎಸ್‌ಐ ಆಸ್ಪತ್ರೆ ಬಳಕೆಯಾಗುವ ದಿಸೆಯಲ್ಲಿ ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಬೇಕು. ಇದರಿಂದ ಬಹಳಷ್ಟು ಜನರಿಗೆ ಉಪಯೋಗವಾಗುತ್ತದೆ. ಮತ್ತೆ, ಹೈದರಾಬಾದ್-ಕರ್ನಾಟಕಕ್ಕೆ ಮಲತಾಯಿ ಧೋರಣೆ ತೋರಿಸುವಂಥದ್ದು ಆಗಬಾರದು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕಡಿಮೆ ಹಣವನ್ನು ಇಟ್ಟಿದ್ದರು; ಈ ಸರ್ಕಾರದ ಪರಿಸ್ಥಿತಿಯೂ ಹಾಗೆ ಇದೆ. ಮುಂದಿನ ದಿವಸಗಳಲ್ಲಿ ಹೈದರಾಬಾದ್-ಕರ್ನಾಟಕಕ್ಕೆ ಸಂಬಂಧಪಟ್ಟಂತೆ 371(ಜೆ) ಮೀಸಲಾತಿಗಳು ಮತ್ತು ಅದಕ್ಕೆ ಬರುವಂತಹ ಹಣವನ್ನು ಹೆಚ್ಚು ಉಪಯೋಗ ಮಾಡಬೇಕು, ಹೆಚ್ಚು ಹಣವನ್ನು ಇಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**8. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 81ರ ಸರ್ವೇ ನಂ.199ರಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುತ್ತಿರುವ ಬಗ್ಗೆ.

- - -

**ಶ್ರೀ ಆರ್.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 81ರ ಸರ್ವೇ ನಂ.199ರಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, . . .

**(ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಸದರಿ ಸರ್ವೇ ನಂಬರ್‌ನಲ್ಲಿ ಇತ್ತೀಚಿನ 2-3 ವರ್ಷಗಳಲ್ಲಿ 15-20 ಮನೆ ಕಟ್ಟಿದ್ದಾರೆ ಎನ್ನುವ ಮಾಹಿತಿ ಇದೆ. ಮಾನ್ಯ ಸದಸ್ಯರ ಜೊತೆ ಈ ಕುರಿತು ಮಾತನಾಡಿದ್ದೇನೆ. ತಹಸೀಲ್ದಾರರನ್ನು ಅಲ್ಲಿಗೆ ಕಳುಹಿಸುತ್ತೇನೆ. ಯಾರು ಈಗ ಹೊಸದಾಗಿ ಮನೆಗಳನ್ನು ಕಟ್ಟಿದ್ದಾರೋ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:**-ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಆವತ್ತಿನ ಉತ್ತರ ಒಂದು ತರಹ ಇತ್ತು. ಇದೇ ಪ್ರಶ್ನೆಗೆ ಇವತ್ತಿನ ಉತ್ತರ ಇನ್ನೊಂದು ತರಹ ಇದೆ. ಅಂದರೆ ಅಧಿಕಾರಿಗಳು ಯಾವ ರೀತಿ ಸಚಿವರ ದಾರಿಯನ್ನು ತಪ್ಪಿಸುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಆ ಎರಡು ಉತ್ತರಗಳು ನನ್ನ ಕೈಯಲ್ಲಿವೆ. ಮಹದೇವ ಪುರ ಗ್ರಾಮದ ಸರ್ವೇ ನಂಬರ್ 199ರಲ್ಲಿ ಮಾನ್ಯ ಸಚಿವರು ಹೇಳಿದ ಹಾಗೆ 7-18 ಎಕರೆ ಜಾಗ ಸರ್ಕಾರಿ ಜಾಗವಾಗಿದೆ. ಅಲ್ಲಿ ಶಾಲೆಗೆ 20 ಗುಂಟೆ ಜಾಗ ಕೊಟ್ಟಿದ್ದಾರೆ. ಅಂಬೇಡ್ಕರ್ ಭವನ ಕಟ್ಟುವುದಕ್ಕೆ 2-28 ಎಕರೆ ಜಾಗವನ್ನು ಕೊಟ್ಟಿದ್ದಾರೆ. ಸುಮಾರು 5-6 ವರ್ಷಗಳ ಹಿಂದೆ ಅದಕ್ಕೆ ಸರ್ಕಾರ 5 ಕೋಟಿ ರೂ.ಗಳನ್ನು ಬಿಡುಗಡೆ ಕೂಡ ಮಾಡಿದೆ. ಕಾಲಂ ರೈಸ್ ಆಗಿದೆ, ಆದರೆ ಇವತ್ತಿನವರೆಗೂ ಕೆಲಸ ಪೂರ್ಣವಾಗಿಲ್ಲ. ಅಲ್ಲಿ 100 ಕುಟುಂಬಗಳು, ಸುಮಾರು 15-20 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅವರು ಗುಡಿಸಲುಗಳು ಮತ್ತು ಶೀಟ್‌ಗಳಿಂದ ಕೂಡಿದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಯಾರು ಇಷ್ಟು ವರ್ಷಗಳ ಕಾಲ ಮನೆ ಕಟ್ಟಿಕೊಂಡಿದ್ದಾರೋ ಅವರಿಗೆ ಸರ್ಕಾರದ ಕಡೆಯಿಂದ ಹಕ್ಕುಪತ್ರ ಕೊಡುವುದಕ್ಕೆ ನನ್ನ ಬೆಂಬಲವನ್ನು, ಸಹಕಾರವನ್ನು ಕೊಡುತ್ತೇನೆ. ನನ್ನ ಪ್ರಶ್ನೆ ಏನೆಂದರೆ, ಸುಮಾರು 1 ವರ್ಷದಿಂದೀಚೆಗೆ 10 ಮನೆಗಳನ್ನು ಕಟ್ಟಿದ್ದಾರೆ. ಆ ಮನೆಗಳು ಒಳಗೆ ಸ್ಲಂ ನಂತಹ ಪ್ರದೇಶದಲ್ಲಿದ್ದರೆ ಪರವಾಗಿಲ್ಲ, ಆದರೆ ಈ 10 ಮನೆಗಳನ್ನು ಮೇನ್ ರೋಡ್‌ಗೆ ಬರುವ ಸರ್ಕಾರಿ ಜಾಗದಲ್ಲಿ 10-12 ಮನೆಗಳನ್ನು ಕಟ್ಟಿ ಒಂದೊಂದು ಮನೆಗಳನ್ನು ಸುಮಾರು 15-20 ಲಕ್ಷ ರೂಪಾಯಿಗಳಿಗೆ ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದಾರೆ. ಅಲ್ಲಿನ ಸ್ಥಳೀಯ ಶಾಸಕರು ಈಗ ಮಂತ್ರಿಗಳಾಗಿದ್ದಾರೆ. ಅವರದು ಈ ಕೆಲಸದಲ್ಲಿ ಸಂಪೂರ್ಣ ಕೈವಾಡ ಇದೆ. ಲೋಕಲ್ ಬಿ.ಬಿ.ಎಂ.ಪಿ ಮಾಜಿ ಕಾರ್ಪೋರೇಟರ್ ಅವರನ್ನು ಇಟ್ಟುಕೊಂಡು ಅವರ ಮುಖಾಂತರ ಮಾರಾಟ ಮಾಡಿದ್ದಾರೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(583) 23-03-2021 1.40 ಡಿಎಸ್-ಎಂಡಿ**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಅವರ ಏಜೆಂಟ್ ಅವನೇ ನಿಂತುಕೊಂಡು ಮನೆ ಕಟ್ಟಿಸಿ ಕೊಡುತ್ತಾನೆ. ಕಳೆದ ಸಲ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ, 14 ಜನರ ಹೆಸರನ್ನು ಹೇಳಿ, ಇವರು ಅಕ್ರಮವಾಗಿ ಮನೆ ಕಟ್ಟಿದ್ದಾರೆಂದು ಉತ್ತರ ಕೊಟ್ಟಿದ್ದರು. ಇವರು ಅಮಾಯಕರು, ಹಣಪಟ್ಟಿ ಇಲ್ಲದಂಥವರು, ಯಾರು ಇವರಿಗೆ ಸಹಕಾರ ಕೊಡದಿರುವಂಥವರು. ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುತ್ತಾರೆ. ನನ್ನ ಪ್ರಶ್ನೆ ಏನೆಂದರೆ, ಕಳೆದ ಫೆಬ್ರವರಿಯಿಂದೀಚೆಗೆ ಮನೆಗಳನ್ನು ಕಟ್ಟಿ ಮಾರಾಟ ಮಾಡಿದ್ದಾರಲ್ಲಾ ಅದನ್ನು ತೆರವುಗೊಳಿಸಬೇಕೆನ್ನುವ ಬಗ್ಗೆ ನಾನು ಕಳಕಳಿಯ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆದರೆ ಮಾನ್ಯ ಸಚಿವರು ಈಗ ಕೊಟ್ಟಿರುವಂತಹ ಉತ್ತರದಲ್ಲಿ ಸರಿಯಾಗಿ ಹೇಳಿದ್ದಾರೆ. "2 ಎಕರೆ ಜಮೀನಿನಲ್ಲಿ ಸುಮಾರು ವರ್ಷಗಳಿಂದ 100 ಮನೆಗಳಿದ್ದು, ಈ ಪೈಕಿ ಕೆಲವೊಂದು ಮನೆಗಳನ್ನು ಇತ್ತೀಚೆಗೆ ನಿರ್ಮಾಣ ಮಾಡಿರುವುದು ಕಂಡು ಬಂದಿದೆ" ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದು ಯಾವ ರೀತಿ ಕಂಡು ಬಂದಿದೆ? ಸರ್ಕಾರಿ ಜಮೀನಿನಲ್ಲಿ ಇತ್ತೀಚೆಗೆ ಮನೆ ಕಟ್ಟಿರುವಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಗಮನಕ್ಕೆ ಬಂದ ಮೇಲೆ ತೆರವುಗೊಳಿಸುವುದಕ್ಕೆ ಏನು ಕಷ್ಟ? ಅದಕ್ಕೆ ಮತ್ತೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಸರ್ವೆಗೆ ಹಾಕಬೇಕು. ಸರ್ವೆ ಮಾಡುವವರು ಅವರಿಗೆ ಇಷ್ಟ ಬಂದ ಹಾಗೆ ಬರುತ್ತಾರೆ. ಅದಕ್ಕೆ ಮತ್ತೆ ಶಾಸಕರು, ಅವರಿವರು ಒತ್ತಡ ಹಾಕುವುದರಿಂದ ಸರ್ವೆ ಮಾಡುವವರು ವಿಳಂಬ ಮಾಡುತ್ತಾರೆ. ಯಾವಾಗ ತೆರವುಗೊಳಿಸುತ್ತಾರೆ? ಅದಕ್ಕೋಸ್ಕರ ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದರ ಜೊತೆಯಲ್ಲಿ ಇದೇ ಸರ್ವೆ ನಂಬರ್‌ಗೆ ಸೇರಿದ ಕಮರ್ಷಿಯಲ್ ಬಿಲ್ಡಿಂಗ್‌ಗಳಿವೆ. ಸರ್ಕಾರಿ ಜಮೀನಿನಲ್ಲಿ ರಾಜಾರೋಷವಾಗಿ ಬಿಲ್ಡಿಂಗ್‌ಗಳನ್ನು ಕಟ್ಟಿಕೊಂಡು ಕಮರ್ಷಿಯಲ್‌ಗೆ ಬಾಡಿಗೆ ಕೊಟ್ಟು ಹತ್ತಾರು ವರ್ಷಗಳಿಂದ ಲಕ್ಷಾಂತರ ರೂಪಾಯಿ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ನಾನು ತಹಸೀಲ್ದಾರ್‌ಗೆ, ಎ.ಸಿ. ಯವರಿಗೆ, ಡಿ.ಸಿ. ಯವರಿಗೆ ದೂರು ಕೊಟ್ಟಿದ್ದೇನೆ. ಇದು ಬಿಬಿಎಂಪಿ ವ್ಯಾಪ್ತಿಗೆ ಬರುವುದರಿಂದ ಜಂಟಿ ಆಯುಕ್ತರಿಗೆ ಮತ್ತು ಆಯುಕ್ತರಿಗೆ ದೂರನ್ನು ಕೊಟ್ಟಿದ್ದೇನೆ. ಇದುವರೆವಿಗೂ ಕೂಡ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಅದರ ಜೊತೆಗೆ ಕಾರ್ಪೋರೇಷನ್‌ರವರಿಗೆ ಕೇಳಿದರೆ ಕಂದಾಯ ಇಲಾಖೆಯವರ ಮೇಲೆ ಹೇಳುತ್ತಾರೆ. ಕಂದಾಯ ಇಲಾಖೆಯವರನ್ನು ಕೇಳಿದರೆ ಕಾರ್ಪೋರೇಷನ್‌ರವರ ಮೇಲೆ ಹೇಳುತ್ತಾರೆ. ತಪ್ಪಿಸುವುದಕ್ಕೆ ಎಲ್ಲಾ ರೀತಿಯಲ್ಲೂ ಮಾಡುತ್ತಿದ್ದಾರೆ. ಕೊನೆಗೆ ವಿಧಿಯಿಲ್ಲದೆ ನಾನೇ ನೇರವಾಗಿ ಲೋಕಾಯುಕ್ತಕ್ಕೆ ಈ ಪ್ರಕರಣವನ್ನು ದಾಖಲು ಮಾಡಿಸುತ್ತೇನೆ. ಸ್ವತಃ ನನ್ನ ಹೆಸರಲ್ಲೇ

ಪ್ರಕರಣವನ್ನು ದಾಖಲು ಮಾಡಿಸಿದ್ದೇನೆ. ಸರ್ಕಾರಿ ಜಮೀನನ್ನು ಯಾವ ರೀತಿ ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದಾರೆ. ಇದರಲ್ಲಿ ಸ್ಥಳೀಯ ಶಾಸಕರು ಮತ್ತು ಕಾರ್ಪೋರೇಟರ್‌ರವರು ಶಾಮೀಲಾಗಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ ಭಯ ಇರುವುದರಿಂದ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಅದಕ್ಕೋಸ್ಕರ ನಾನು ಲೋಕಾಯುಕ್ತಕ್ಕೆ ದೂರು ಕೊಡುತ್ತೇನೆ. ಅವರಿಗೆ ನೋಟಿಸ್ ಕೊಡುವುದನ್ನು ಬಿಟ್ಟರೆ ಬೇರೆ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಫೋಟೋಗಳ ಸಮೇತವಾಗಿ ಮನೆ ಯಾವ ರೀತಿ ಕಟ್ಟುತ್ತಿದ್ದಾರೆಂದು ಹಂತ ಹಂತವಾಗಿ ದಾಖಲೆಗಳನ್ನು ಕೊಟ್ಟಿದ್ದೇನೆ. Foundation ಹಾಕಿದಾಗ ಯಾವ ರೀತಿ ಇತ್ತು, ಶೀಟ್ ಹಾಕಿದಾಗ ಯಾವ ರೀತಿ ಇದೆ, ವಾಟರ್ ಟ್ಯಾಂಕ್ ಹೇಗೆ ಕಟ್ಟಿಸುತ್ತಿದ್ದಾರೆ, ಕಿಚನ್‌ನಲ್ಲಿ ಟೈಲ್ಸ್ ಯಾವ ರೀತಿ ಹಾಕುತ್ತಿದ್ದಾರೆ, ಸಂಪ್ ಟ್ಯಾಂಕ್ ಹೇಗೆ ಮಾಡುತ್ತಿದ್ದಾರೆ, ಪ್ರತಿಯೊಂದು ದಾಖಲೆಗಳನ್ನು ಕೊಟ್ಟರೂ ಕೂಡ ಅವರನ್ನು ಇವತ್ತಿನವರೆವಿಗೂ ತೆರವು ಮಾಡಿಲ್ಲ. ನಾನು ಮಾನ್ಯ ಸಚಿವರಿಗೆ ಕಳಕಳಿಯಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಮಾನ್ಯ ಸಚಿವರು ಈ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ಸ್ಥಳೀಯ ತಹಸೀಲ್ದಾರ್‌ರವರಿಂದ ಹಿಡಿದು ಎ.ಸಿ. ಮತ್ತು ಡಿ.ಸಿ. ವರೆಗೂ ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಇವರನ್ನು ತೆರವುಗೊಳಿಸುವುದಕ್ಕೆ ಎಲ್ಲೋ ಒಂದು ಕಡೆ ಕೈಯನ್ನು ಕಟ್ಟಿ ಹಾಕಿದ್ದಾರೆ. ಮೊನ್ನೆ ಮಾನ್ಯ ಸಚಿವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಗೆ ಹೇಳಿಕೆಯನ್ನು ಕೊಡುತ್ತಾರೆ. ಅದನ್ನು ಓದಿದ್ದರೆ ಬಹಳ ಚೆನ್ನಾಗಿತ್ತು. ಅದನ್ನು ಎಲ್ಲೋ ಇಟ್ಟಿಬಿಟ್ಟಿದ್ದೇನೆ. "ನಾನು ಕೂಡ ವಿರೋಧ ಪಕ್ಷದಲ್ಲಿ ಕುಳಿತ್ತಿದ್ದಾಗ ಸರ್ಕಾರಿ ಜಮೀನುಗಳ ಬಗ್ಗೆ ಧ್ವನಿಯನ್ನು ಎತ್ತುತ್ತಿದ್ದೆ, ನಾನು ಇವತ್ತು ಆಡಳಿತ ಪಕ್ಷಕ್ಕೆ ಬಂದಿದ್ದೇನೆ, ಕಂದಾಯ ಸಚಿವನಾಗಿದ್ದೇನೆ, ಇದರ ವಿರುದ್ಧವಾಗಿ ಮಾತನಾಡುವುದಕ್ಕೆ ನನ್ನ ಕೈಗಳು ಕಟ್ಟಿ ಹಾಕಿವೆ" ಎನ್ನುವಂತಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಮಾನ್ಯ ಸಚಿವರು ಕೊಟ್ಟಿರುವಂತಹ ಹೇಳಿಕೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. ನಾನು ವಿರೋಧ ಪಕ್ಷದಲ್ಲಿದ್ದಾಗ ಸರ್ಕಾರಿ ಜಮೀನನ್ನು ಉಳಿಸಬೇಕೆಂದು ನಾನು ಧ್ವನಿ ಎತ್ತಿದ್ದೆ, ಇವತ್ತು ಅದೃಷ್ಟವಶಾತ್ ನಾನು ಆಡಳಿತ ಪಕ್ಷದಲ್ಲಿದ್ದೇನೆ, ಅದು ನಾನು ಕಂದಾಯ ಸಚಿವನಾಗಿದ್ದೇನೆ, ಇದರ ಬಗ್ಗೆ ಮಾತನಾಡುವುದಕ್ಕೆ ನನ್ನ ಕೈಗಳು ಕಟ್ಟಿ ಹಾಕಿವೆ ಎನ್ನುವ ಹೇಳಿಕೆಯನ್ನು ಮಾನ್ಯ ಸಚಿವರು ಕೊಡುತ್ತಾರೆ. ಇವರು ಇನ್ನೆಷ್ಟು ಪ್ರಭಾವಿಗಳಾಗಿರಬಹುದು? ಅವರ ಕಾಳಜಿಯನ್ನು ನಾನು ಒಪ್ಪುತ್ತೇನೆ. ಅವರಿಗೆ ಸರ್ಕಾರಿ ಜಮೀನು ಉಳಿಸಬೇಕೆನ್ನುವ ಕಾಳಜಿ ಇದೆ. ಆದರೆ, ಇವರು ಅವರಿಗಿಂತ ಪ್ರಭಾವಿಗಳೇ? ಈ ಅಧಿಕಾರಿಗಳಿಂದ ಆಗುವುದಿಲ್ಲ, ಈ ಅಧಿಕಾರಿಗಳು ಬಡಪಾಯಿಗಳು. ಮಾನ್ಯ ಸಚಿವರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಕೊನೆ ಪಕ್ಷ ಅಪರ ಮುಖ್ಯ ಕಾರ್ಯದರ್ಶಿಯವರನ್ನು ಕೂಡಲೇ ಅಲ್ಲಿಗೆ ಕಳುಹಿಸಿಕೊಟ್ಟು ಅಲ್ಲಿ ಏನಾಗಿದೆ ಎಂಬುದನ್ನು ನೋಡಲಿ. ಕೂಡಲೇ ಅದನ್ನು ತೆರವುಗೊಳಿಸುವಂತಹ

ಕೆಲಸ ಮಾಡಬೇಕು. ಆಮೇಲೆ ಸರ್ವೆ ಮಾಡಲಿ. ಯಾರು ಅಕ್ರಮವಾಗಿ ಆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆಯೋ ಹಣ ತೆಗೆದುಕೊಂಡು ಮಾರಾಟ ಮಾಡಿದ್ದಾರೆಯೋ ಅವರನ್ನು ತೆರವುಗೊಳಿಸಿ, ಆಮೇಲೆ ಸರ್ವೆಯನ್ನು ಮಾಡಿ. ಸರ್ಕಾರಿ ಜಮೀನನ್ನು ಉಳಿಸಿಕೊಡಿ. ಅದಕ್ಕೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ,....

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ನಿಯಮ 72 ಆಗಿರುವುದರಿಂದ ಬೇರೆಯವರು ಮಾತನಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ನನಗೂ ಸೇರಿ ಉತ್ತರ ಕೊಡಿ. ನನಗೆ ಗಾಬರಿ ಏಕೆ ಮಾಡುತ್ತೀರಿ?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಿಯಮ 72 ರಲ್ಲಿ ಪ್ರಶ್ನೆ ಕೇಳಿದವರಿಗೆ ಮಾತ್ರ ಉತ್ತರ ಕೊಡಬೇಕಾಗುತ್ತದೆ.

**Sri P.R.RAMESH:-** It's a property of the House.

**ಶ್ರೀ ಆರ್.ಅಶೋಕ್:-** ನಿಯಮಾವಳಿ ಪುಸ್ತಕದಲ್ಲಿ ಏನಿದೆ ಎಂಬುದನ್ನು ನೋಡಿ.

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ನಿಯಮ 72 ರಲ್ಲಿ ಏನಿದೆ ಎಂಬುದು ತಮಗೂ ಗೊತ್ತಿದೆ. ಯಾರು ಪ್ರಶ್ನೆಯನ್ನು ಕೇಳಿದ್ದಾರೆ,....

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಿಯಮ 72 ರಲ್ಲಿ ಗಮನ ಸೆಳೆದಿರುವಂಥದ್ದು ನಮ್ಮ ಇಡೀ ಸದನಕ್ಕೆ ಸಂಬಂಧಪಟ್ಟಿರುವಂಥದ್ದು. ಈ ವಿಚಾರ ಬೆಂಗಳೂರಿಗೆ ಸಂಬಂಧಪಟ್ಟಿರುವಂಥದ್ದು. ನಾನು ಒಬ್ಬ ಬೆಂಗಳೂರು ಪ್ರತಿನಿಧಿಯಾಗಿದ್ದೇನೆ. ನನಗೂ ಆಸಕ್ತಿ ಇದೆ. ದಯವಿಟ್ಟು ನನ್ನ ಅನಿಸಿಕೆಯನ್ನು ತಿಳಿದುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುವಾಗ ನನ್ನದು ಸೇರಿಸಿ ಉತ್ತರ ಕೊಡಲಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ನಾರಾಯಣಸ್ವಾಮಿಯವರಿಗೆ ಉತ್ತರ ಕೊಟ್ಟುಬಿಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ನನಗೂ ಉತ್ತರವನ್ನು ಕೊಟ್ಟುಬಿಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ನಿಯಮ ಬಿಟ್ಟು ಮಾಡುವುದಕ್ಕಾಗುವುದಿಲ್ಲ. ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅದಾದ ಮೇಲೆ ಅವಕಾಶ ಕೊಡುತ್ತೀರಾ?

**ಉಪ ಸಭಾಪತಿಯವರು:-** ನೀವು ಮಾತನಾಡುವುದಕ್ಕೆ ನಿಯಮದಲ್ಲಿ ಅವಕಾಶವಿಲ್ಲ. ಬೇಕಾದರೆ ನಿಯಮವನ್ನು ಓದಿ ಹೇಳುತ್ತೇನೆ. ತಾವು ಬುದ್ಧಿವಂತರಿದ್ದೀರಿ, ತಿಳುವಳಿಕೆಯುಳ್ಳವರಾಗಿದ್ದೀರಿ. ಮತ್ತೆ ಅದನ್ನೇ ಕೇಳುವುದರಲ್ಲಿ ಅರ್ಥವಿಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರು ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಅದು ಮುಂದೆ ಹೋಗಿದೆ. ಬೆಂಗಳೂರಿನದ್ದು ಬಂದಾಗ ಅವರು ಆಳವಾಗಿ ಮಾತನಾಡಲಿ. ಅವರಿಗೆ ಅರ್ಧ ಗಂಟೆ ಸಮಯ ಕೊಡಿ.

**ಉಪ ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ತಮ್ಮ ಪ್ರಶ್ನೆಗೆ ಒಂದು ವಾರದ ನಂತರ ಮಾನ್ಯ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಈ ವಿಷಯವು ಅದರಲ್ಲಿ ಅಡಗಿದೆ ಎಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರು ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಹಾಕಿದ್ದಾರೆ. ಅವರು ಇಡೀ ರಾಜ್ಯದ ಬಗ್ಗೆ ಮಾಹಿತಿ ಕೇಳಿರುವುದಕ್ಕೆ ನಾನು ಉತ್ತರ ಕೊಡುವುದಕ್ಕಾಗಲಿಲ್ಲ. ಬೆಂಗಳೂರು ಬಗ್ಗೆಯೇ ಕೊಡಿ ಎಂದು ಹೇಳಿದ್ದಾರೆ. ಅವರ ವಿಷಯ ಬಂದಾಗ ಬೆಂಗಳೂರು ಬಗ್ಗೆ ಏನು ಬೇಕಾದರೂ ಮಾತನಾಡಲಿ. ಅದಕ್ಕೆ ಅವಕಾಶ ಇದೆ. ಈಗ ಈ ಪ್ರಶ್ನೆಯನ್ನು ಮಾನ್ಯ ಎಂ.ನಾರಾಯಣಸ್ವಾಮಿಯವರು ನಿಯಮ 72 ರಡಿಯಲ್ಲಿ ತಂದಿದ್ದಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ನಿಮ್ಮ ಕೈಗಳು ಕಟ್ಟಿ ಹಾಕಿವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾಧ್ಯಮದಲ್ಲಿ ಬಂದಿರಬಹುದು. ಆ ತರಹ ಏನೂ ಕೈ ಕಟ್ಟಿ ಹಾಕಿದೆ ಎಂದು ನಾನು ಹೇಳಲಿಲ್ಲ. ಇದೇನು ಇವತ್ತಿನದಲ್ಲ, 30-40 ವರ್ಷಗಳಿಂದ ನಡೆದುಕೊಂಡು ಬಂದಿರುವಂಥದ್ದು. ಇದೇನು ಬಹಳ ದೊಡ್ಡ ಕಾಯಿಲೆ ಅಲ್ಲ. ಇದನ್ನು ಸರಿ ಮಾಡಬಹುದೆಂದು ಹೇಳಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ಕೈ ಕಟ್ಟಿ ಹಾಕಿಲ್ಲ ಎಂಬುದನ್ನು ಹೇಳುವುದು ಬೇಡ. ನನ್ನ ಮೊಬೈಲ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಿ. ಇದೆಲ್ಲಾ ಮೊಬೈಲ್‌ನಲ್ಲಿದೆ. ಅದರಲ್ಲಿ ನೋಡಿ ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಆಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ನೀವು ಪ್ರಶ್ನೆ ಕೇಳಿದಿರಿ, ಅವರು ಉತ್ತರ ಕೊಡಲಿ. ಆಮೇಲೆ ಏನಾದರೂ ಕೇಳುವುದಿದ್ದರೆ ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಅವರು ಫೋಟೋ ಸಮೇತ ಹಾಕಿ ಹೇಳಿದ್ದಾರೆ.

**ಶ್ರೀ ಆರ್.ಅಶೋಕ್:-** ನಾನು ಅವರು ಪ್ರಶ್ನೆ ಮಾಡಿಕೊಳ್ಳುತ್ತೇವೆ. ಎದುರಿರುವವರು ಅವರು, ಕೇಳಿರುವುದು ನಾನು. ಇದರಲ್ಲಿ ಮಧ್ಯೆ ನಿಮ್ಮ ಪ್ರಶ್ನೆ ಬರುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಏನು ಹೇಳಿದ್ದಾರೆಂದರೆ, ಹೆಚ್ಚುವರಿಯಾಗಿ 10 ಮನೆಗಳನ್ನು ಕಟ್ಟಿದ್ದಾರೆ, ಕೂಡಲೇ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ತೆರವುಗೊಳಿಸಿ ಎಂದು ಹೇಳಿದ್ದಾರೆ. ಇದನ್ನು ನಾವು ಕಾನೂನು ಪ್ರಕಾರ ಮಾಡಬೇಕು. ನಾವು ಹೋಗಿ ಏಕಾಏಕಿ demolition ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶವಿಲ್ಲ. ಅವರಿಗೆ ನೋಟಿಸ್ ಕೊಡಬೇಕಾಗುತ್ತದೆ. ನೋಟಿಸ್ ಕೊಟ್ಟು ಸರ್ವೆ ಮಾಡಿಸಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರಿದ್ದಾರೆ, ಅವರೇ ಏನು ಮಾಡಬೇಕೆಂಬುದನ್ನು ಹೇಳಲಿ. ಹಾಗೆ ಒಡೆಯುವುದಕ್ಕೆ ನಮಗೆ ಅನುಮತಿ ಇದೆಯೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಈಗ ಕಾನೂನು ಹೇಳುತ್ತಿದ್ದೀರಲ್ಲಾ, ನೀವಾಗಿಯೇ ಅವರು ಕೋರ್ಟ್‌ಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಒತ್ತುವರಿ ಮಾಡಿದ್ದಾರೆಯೋ ಇಲ್ಲವೋ ಎಂದು ನಾವು ಪರಿಶೀಲನೆ ಮಾಡಬೇಕಲ್ಲವೇ? ನಾವೇ ಕಾನೂನು ಮಾಡಿರುವುದು. ಕಾನೂನು ಬಿಟ್ಟು ಹಾಗೆ ಮಾಡಬಹುದೆಂದು ಏನಾದರೂ ಇದ್ದರೆ ಹೇಳಿ. ಹಾಗೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಮನೆ ಅನಗತ್ಯವಾಗಿ ಕಟ್ಟಿರುವುದು ಕಂಡು ಬಂದಿದೆ ಎಂದು ತಮ್ಮ ಉತ್ತರದಲ್ಲಿದೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗ ಒತ್ತುವರಿಯಾಗಿದೆ ಎಂದು ಒಂದು ಪಾರ್ಟಿಯವರು ಹೇಳುತ್ತಾರೆ. ಒತ್ತುವರಿಯಾಗಿಲ್ಲವೆಂದು ಮತ್ತೊಂದು ಪಾರ್ಟಿಯವರು ಹೇಳುತ್ತಾರೆ. ಆಗ ನಾವೇನು ಮಾಡಬೇಕು? ಒತ್ತುವರಿಯಾಗಿದೆಯೋ ಇಲ್ಲವೋ ಎಂಬುದನ್ನು ನಾವು ಪರಿಶೀಲನೆ ಮಾಡಬೇಕು. ಪರಿಶೀಲನೆ ಮಾಡಿದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರದಲ್ಲೇ ಕೊಟ್ಟಿದ್ದೇನೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದ್ದಕ್ಕೆ ಉತ್ತರವನ್ನು ಬದಲಾವಣೆ ಮಾಡಿ ಕೊಟ್ಟಿದ್ದೇನೆ. ಇನ್ನೇನು ಮಾಡಿ ಕೊಡಬೇಕು? ಆದ್ದರಿಂದ ಯಾರೇ ಒತ್ತುವರಿ ಮಾಡಿರಲಿ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಬಿಡುವುದಿಲ್ಲ.

(584)23-03-2021/1-50/bkp-ak

**ಶ್ರೀ ಎಸ್.ಆರ್. ಪಾಟೀಲ್( ವಿರೋಧಪಕ್ಷದ ನಾಯಕರು):** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾಗಿ ಹೇಳಿದ್ದಾರೆ, but an opportunity should be given. Without enquiry and without following the principles of natural justice, ತಾವು ಕ್ರಮ ತೆಗೆದುಕೊಳ್ಳಬಾರದು. No man should be condemned unheard. ನೈಸರ್ಗಿಕ ನ್ಯಾಯದ ಪ್ರಕಾರ ಸರ್ವೆ ಮಾಡಬೇಕು, ಅತಿಕ್ರಮಣವಾಗಿದ್ದರೆ ನೋಟೀಸ್ ಕೊಡಬೇಕು. ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ತಿಳಿಸಿರುವಂತೆ, ನಂತರ ಅವರು ಕೋರ್ಟ್‌ಗೆ ಹೋಗುತ್ತಾರೆ. ಮೂಲಭೂತವಾಗಿ ಸರ್ಕಾರಿ ಆಸ್ತಿಯಲ್ಲಿ ಅವರುಗಳು ಮನೆಗಳನ್ನು ಕಟ್ಟಿಕೊಳ್ಳುವವರೆಗೂ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಸರ್ಕಾರಿ ಆಸ್ತಿ ಅಂದರೆ there will be a demarcation. ಖಾಸಗಿ ಆಸ್ತಿ ಯಾವುದು, ಸರ್ಕಾರಿ ಆಸ್ತಿ ಯಾವುದು; ಆ ಸರ್ಕಾರಿ ಆಸ್ತಿಯಲ್ಲಿ ಅವರು ಎಲ್ಲಾ foundation ತೆಗೆದು, ಮನೆಗಳನ್ನು ಕಟ್ಟಿಸಿ ವಾಸ ಮಾಡುವುದಕ್ಕೆ ಪ್ರಾರಭಿಸಿ ಎಷ್ಟು ವರ್ಷಗಳಾಯಿತು?

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಅವರು ಹಳಬರು ಸುಮಾರು 20 ವರ್ಷಗಳಾಗಿದೆ. ಈಗ ಹೊಸದಾಗಿ ಒಂದು ವರ್ಷದಿಂದ ಕಟ್ಟಿರುವುದು ಅದು.

**ಶ್ರೀ ಎಸ್.ಆರ್.ಪಾಟೀಲ್:** ಈಗ ಒಂದು ವರ್ಷದಿಂದ why you allowed them to enter the Government premises. ಸರ್ಕಾರಕ್ಕೆ ಸಂಬಂಧಿಸಿದಂತಹ ಜಮೀನನ್ನು ರಾಜಾರೋಷವಾಗಿ ಹೋಗಿ ಅಲ್ಲಿ ಎಲ್ಲಾ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುವುದಕ್ಕೆ ಅವಕಾಶವನ್ನೇ

ಕೊಡಬಾರದಾಗಿತ್ತು ಅಲ್ಲವೇ? Prevention is better than cure. ಅಕ್ರಮವಾಗಿ ಸರ್ಕಾರಿ ಆಸ್ತಿ encroach ಮಾಡಿ ಅಲ್ಲಿ ಮನೆ ಕಟ್ಟುವವರೆಗೆ ಅಧಿಕಾರಿಗಳು ಏನು ಮಾಡುತ್ತಿದ್ದರು? ಅವರೂ ಸಹ ಅಲ್ಲಿ collude ಆಗಿರಬೇಕು. ಸ್ಥಳೀಯವಾಗಿ ಯಾರು ಪ್ರಭಾವಿ ವ್ಯಕ್ತಿಗಳಿರುತ್ತಾರೆಯೋ ಅವರುಗಳ ಜೊತೆಗೆ collude ಆಗಿ ರಾಜಾರೋಷವಾಗಿ ಅವರುಗಳಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬಿಟ್ಟಿದ್ದಾರೆ. ಆಮೇಲೆ ಈಗ ಮಾನ್ಯ ನಾರಾಯಣಸ್ವಾಮಿಯವರು ಹೇಳುತ್ತಾರೆ. ನೀವು ಕಾನೂನುಬದ್ಧವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೀರಿ. Basically, I am an advocate. I know the law of the land. ಅದರಲ್ಲಿ ನಾನು intervention ಆಗುವುದಕ್ಕೆ ಹೋಗುವುದಿಲ್ಲ. ಆದರೆ, ಈ ತಪ್ಪಿತಸ್ಥರ ಮೇಲೆಯಾದರೂ ನೀವು ಕ್ರಮ ಜರುಗಿಸಬೇಕಲ್ಲವೇ? The Government should keep them under suspension. ಅಂತಹ ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಿ. ನಿಮ್ಮ ಆಸ್ತಿಯನ್ನು ರಕ್ಷಣೆ ಮಾಡುವುದಕ್ಕೆ they are the custodian of that land. Have they slept?

**ಶ್ರೀ. ಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೇ,

**ಉಪ ಸಭಾಪತಿಯವರು:** ಮಾನ್ಯ ರಮೇಶ್‌ರವರೆ, ಕುಳಿತುಕೊಳ್ಳಿ.

**ಶ್ರೀ ಆರ್.ಅಶೋಕ:** ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಎಂದರೆ, ಅದು ಎರಡು ಬೇರೆ ಬೇರೆ ಜಮೀನುಗಳಾಗಿದ್ದು, . ಅಲ್ಲಿ ಈಗಾಗಲೇ ಹಿಂದೆಯೇ 100 ಮನೆಗಳನ್ನು ಕಟ್ಟಿಕೊಂಡುಬಿಟ್ಟಿದ್ದಾರೆ. ಹಿಂದಿನಿಂದಲೂ ಸಹ ಸರ್ಕಾರಿ ಜಮೀನಿನಲ್ಲಿಯೇ ನಿರಂತರವಾಗಿ ಮನೆಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ನಾವು ಇದ್ದಾಗಲೇ ಮನೆಗಳನ್ನು ಕಟ್ಟಿದ್ದಾರೆ ಎಂದು ಅಲ್ಲ. ಹಿಂದಿನಿಂದಲೂ ಮನೆಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ಮಾನ್ಯ ನಾರಾಯಣಸ್ವಾಮಿಯವರು ಹೇಳುತ್ತಿರುವುದು ಇದು. ಯಾರು 100 ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರು ಇರಬೇಕು, ಹೊಸದಾಗಿ ಮನೆಗಳನ್ನು ಕಟ್ಟಿರುವವರನ್ನು ಅಲ್ಲಿಂದ ತೆರವುಗೊಳಿಸಬೇಕು ಎಂದು ಅವರು ಹೇಳುತ್ತಿದ್ದಾರೆ. ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಇಲ್ಲಿ 100 ಜನರು ಏನು permission ತೆಗೆದುಕೊಂಡು ಯಾರೂ ಕಟ್ಟಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಆ 100 ಜನರು ಇರಲಿ, ಇವರನ್ನು 10 ಜನರನ್ನು ತೆಗೆಯಿರಿ ಎಂದು ಹೇಳಿದರು, ನಾನು ಅದಕ್ಕೂ ಒಪ್ಪಿಕೊಂಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:** 100 ಜನರು ಇರಲಿ ಎಂದು ನಾವು ಏತಕ್ಕೆ ಹೇಳುತ್ತಿದ್ದೇವೆ ಎಂದರೆ, ಅವರು ಸುಮಾರು 30–40 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿರುವಂತಹವರಾಗಿದ್ದು, ಇದೂವರೆಗೂ ಬಂದು ಹೋದಂತಹ ಯಾವುದೇ ಸರ್ಕಾರ ಕೂಡ ಹಕ್ಕುಪತ್ರಗಳನ್ನು ಕೊಟ್ಟಿಲ್ಲ. ಅವರು ಸೆಕ್ಷನ್ 94ಸಿಸಿ ಅಡಿಯಲ್ಲಿ ಅರ್ಜಿಗಳನ್ನೂ ಕೂಡ ಹಾಕಿಕೊಂಡಿರುವಂತಹವರು. ಅವರನ್ನು ತೆರವುಗೊಳಿಸಿ ಎಂದು ನಾನು ಹೇಳುತ್ತಿಲ್ಲ. ಇತ್ತೀಚೆಗೆ ಇದನ್ನು ನಾವು ಸರ್ಕಾರದ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರುಗಳು ಮನೆಗಳನ್ನು ರಾಜಾರೋಷವಾಗಿ ಕಟ್ಟುತ್ತಿದ್ದಾರೆ. ಮಾರಾಟ ಮಾಡಿದ್ದಾರೆ. ಆದರೆ, ಆ ಹಿಂದಿನ ನೂರು ಮನೆಗಳನ್ನು ಯಾರೂ ಮಾರಾಟ ಮಾಡಿ ದುಡ್ಡನ್ನು ತೆಗೆದುಕೊಂಡಿಲ್ಲ. ಈಗ ಕಟ್ಟಿರುವಂತಹ ಮನೆಗಳು ಏನು ಇದೆಯೋ ಅದನ್ನು ಸ್ಥಳೀಯ ಮುಖಂಡರುಗಳು ಮಾರಾಟ ಮಾಡಿರುವಂತಹದ್ದು.

**ಶ್ರೀ. ಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಅವಕಾಶ ಕೊಡುತ್ತಿದ್ದೀರಿ. ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

**ಉಪ ಸಭಾಪತಿಯವರು:** ಈಗ ನೀವು ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರು ಮಾತನಾಡುತ್ತಿದ್ದಾರೆ. ಇದರಲ್ಲಿ ಮತ್ತೆ ಏನಾದರೂ ಗೊಂದಲವಿದ್ದರೆ ನಂತರ ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**: ಮಾನ್ಯ ಸಭಾಪತಿಯವರೆ, ಒಂದೇ ಪ್ರದೇಶದಲ್ಲಿ ನೂರಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಒಂದಿಷ್ಟು ಮನೆಗಳನ್ನು ಮಾತ್ರ ತೆರವುಗೊಳಿಸಬೇಕು, ಉಳಿದದ್ದು ತೆರವು ಮಾಡಬೇಡಿ ಎಂದು ಹೇಳಿದರೆ ಅದುಸಾಮಾಜಿಕ ನ್ಯಾಯ ಎನಿಸಿಕೊಳ್ಳುತ್ತದೆಯೇ?

**(ಗೊಂದಲ)**

**ಶ್ರೀ ಆರ್.ಅಶೋಕ:** ನಾನು ಮಾನ್ಯ ನಾರಾಯಣಸ್ವಾಮಿಯವರ ಪರವಾಗಿಯೇ ಮಾತನಾಡುತ್ತೇನೆ. ಹೊಸದಾಗಿ ಕಟ್ಟಿದ್ದಾರೆ. ಈ ಹಿಂದೆ ಕಟ್ಟಿರುವಂತಹವರು ಬಹಳ ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ. ಅವರಿಗೆ ಸೆಕ್ಷನ್ 94ಸಿಸಿ ಅಡಿಯಲ್ಲಿ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶವಿದೆ, ಹೊಸದಾಗಿ ಕಟ್ಟಿರುವವರಿಗೆ ಅವಕಾಶವಿಲ್ಲವೆನ್ನುವುದು ಅವರ ಭಾವನೆಯಾಗಿದೆ. ಬಿಡಿ ಆಯಿತು. ಮುಗಿಯಿತು.

**ಶ್ರೀ ಎಂ.ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿರುವುದಕ್ಕೆ clarification ಕೊಡುತ್ತೇನೆ. ಇದು ಯಾವ ನ್ಯಾಯ? ಅವರು ಸುಮಾರು 30–40 ವರ್ಷಗಳಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಲ್ಲಿ ವಾಸವಾಗಿದ್ದರೂ ಸಹ ಅದು ಅವರು ಯಾರೂ ದುಡ್ಡನ್ನು ಕೊಟ್ಟು ತೆಗೆದುಕೊಂಡಿರುವಂತಹ ಜಾಗವಲ್ಲ. ಅವರುಗಳ ತಂದೆ-ತಾಯಂದಿರ ಕಾಲದಿಂದಲೂ ಅವರುಗಳು ಅಲ್ಲಿ ವಾಸ ಮಾಡುತ್ತಿರುವಂತಹದ್ದು. ನಮಗೆ ಹಕ್ಕುಪತ್ರಗಳನ್ನು ಕೊಡಿ ಎಂದು ಎಲ್ಲಾ ಸರ್ಕಾರಗಳಿಗೂ ಸಹಿತ ಅವರು ಮನವಿ ಮಾಡಿಕೊಂಡಿದ್ದು, ಸೆಕ್ಷನ್ 94ಸಿಸಿ ಅಡಿಯಲ್ಲಿ ಅವರು ಅರ್ಜಿಗಳನ್ನೂ ಕೂಡ ಹಾಕಿಕೊಂಡಿದ್ದಾರೆ. ಆದರೆ, ಇವತ್ತು ಅಲ್ಲಿ ಬಂದು ಮನೆಗಳನ್ನು ಕಟ್ಟಿಕೊಂಡಿರುವಂತಹವರು ಬಲಾಢ್ಯರು.

**ಉಪ ಸಭಾಪತಿಯವರು:** ಮಾನ್ಯ ನಾರಾಯಣಸ್ವಾಮಿಯವರೆ, ಈಗ ಮಾನ್ಯ ಸಚಿವರು ಹೇಳಿದಂತಹ ಅಂಶವನ್ನು ನೀವು catch ಮಾಡಿದ್ದೀರಿ ಎಂದು ಅಂದುಕೊಂಡಿದ್ದೇನೆ. ಏನಾದರೂ ಅದರಲ್ಲಿ ತಪ್ಪಾಗಿದ್ದರೆ ಅದಕ್ಕೆ ಕಾನೂನು ಕ್ರಮ ಜರುಗಿಸುತ್ತೇನೆ ಎನ್ನುವಂತಹದ್ದನ್ನು ಸಚಿವರು ಈಗಾಗಲೇ ಹೇಳಿದ್ದಾರೆ. ಈಗ ನೀವು ಮತ್ತೆ ಅದನ್ನ ಕೇಳುವುದು ಬೇಡ, ಏಕೆಂದರೆ ಅವರು ಆಗಲೇ ಹೇಳಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:** ಶೆಡ್ ಹಾಕಿ ತೆಗೆದುಕೊಂಡಿದ್ದಾರೆ. ನಾಳೆ ಅಲ್ಲಿ commercial complex ಕಟ್ಟುತ್ತಾರೆ. ಮಾನ್ಯ ಸಭಾಪತಿಯವರೆ, ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡುವುದೇನೆಂದರೆ, ಕ್ರಮ ತೆಗೆದುಕೊಳ್ಳುತ್ತೇನೆಂದು ಸಚಿವರು ಹೇಳಿಬಿಡಲಿ.

**ಶ್ರೀ ಆರ್.ಅಶೋಕ:** ಮಾನ್ಯ ಸಭಾಪತಿಯವರೆ, immediate ಆಗಿ ಅಧಿಕಾರಿಗಳ ಜೊತೆಗೆ ಮಾತನಾಡುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:** ಈಗಾಗಲೇ ಸಚಿವರು ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ. ಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೆ, ನನಗೆ ಅರ್ಥವಾಗುತ್ತದೆ. ಒಂದು ನಿಮಿಷದ ಮೇಲೆ ನಾನು ಸಮಯವನ್ನು ತೆಗೆದುಕೊಳ್ಳುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:** ಒಂದೇ ನಿಮಿಷದಲ್ಲಿ ಅವರು ಮುಗಿಸುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:** ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಲ್ಲಾ? ಧನ್ಯವಾದಗಳು.

**ಉಪ ಸಭಾಪತಿಯವರು:** ಒಂದು ನಿಮಿಷದಲ್ಲಿ ಮುಗಿಸಿಬಿಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೇ, ನಮಗೆ ಇಲ್ಲಿ ಉತ್ತರ ಕೊಟ್ಟಿರುವಂತಹದ್ದು 7 ಎಕರೆ 18 ಗುಂಟೆ, ಜಮೀನು ಸರ್ವೆ ನಂಬರ್ 199ರಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇಲ್ಲಿ ಲೆಕ್ಕ ಮಾಡುವಾಗ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಅರ್ಧ ಎಕರೆ 20 ಗುಂಟೆ ಜಮೀನು ಕೊಟ್ಟಿದ್ದಾರೆ. ಮತ್ತೆ ಡಾ: ಬಿ.ಆರ್.ಅಂಬೇಡ್ಕರ್ ಭವನಕ್ಕೆ 2 ಎಕರೆ 28 ಗುಂಟೆ ಕೊಟ್ಟಿದ್ದಾರೆ. ಮತ್ತೆ ಉಳಿಕೆ ಎರಡು ಎಕರೆಯಲ್ಲಿದೆ. ಅಂದರೆ ಇದು ಮೂರರದ್ದೂ ಸೇರಿಸಿದರೆ ಕೇವಲ 5 ಎಕರೆ 8 ಗುಂಟೆ ಬರುತ್ತದೆ. ಇನ್ನು ಉಳಿದ 2 ಎಕರೆ 10 ಗುಂಟೆ ಎಲ್ಲಿ ಹೋಯಿತು? ಇಲ್ಲಿ ಮಾಹಿತಿ ಕೊಟ್ಟಿರುವುದು 7 ಎಕರೆ 18 ಗುಂಟೆ ಎಂದು ಕೊಟ್ಟಿದ್ದಾರೆ. ಆದರೆ, ಇಲ್ಲಿ ಲೆಕ್ಕ ಕೊಡುತ್ತಿರುವುದು ಕೇವಲ 5 ಎಕರೆ 8 ಗುಂಟೆ ಇಷ್ಟೆ. ಹಾಗಾಗಿ ಇವತ್ತು ತಾವು ಏನು ಕ್ರಮ ತೆಗೆದುಕೊಳ್ಳಬೇಕೆಂದಿದ್ದೀರಿ, ಈ ಎರಡು ಎಕರೆಯನ್ನೂ ಎಲ್ಲಿದೆಯೆಂದು ಗುರುತು ಮಾಡಿ ಸಂಪೂರ್ಣ ಸರ್ವೆ ಮಾಡಿ superimpose ಮಾಡಿ. ನೀವು ಆದಷ್ಟು ಮನೆಗಳು ಹೊಸದಾಗಿ ಕಟ್ಟಿರುವುದು ಯಾವುದು ಇದೆ, ಅಂದರೆ ಹೊಸದಾಗಿ ಕಟ್ಟಿರುವ ಮನೆಗಳನ್ನೆಲ್ಲಾ ಕೆಡವಿ ಹಾಕಿ.

**ಉಪ ಸಭಾಪತಿಯವರು:** ಮಾನ್ಯ ರಮೇಶ್‌ರವರೆ, ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಆರ್.ಅಶೋಕ:** ಇದು ಬಂಡೆ ಜಮೀನು, ಬಂಡೆ ಜಮೀನು ಹೇಗೆ ಇರುತ್ತದೆ ಎಂಬುದು ತಮಗೆ ಗೊತ್ತಿರುತ್ತದೆ. ಅವರು ಎರಡು ಎಕರೆ ಜಮೀನಿನ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ಪರಿಶೀಲನೆ ಮಾಡುವಾಗ ಆ ಎರಡು ಎಕರೆಯನ್ನೂ ನಾವು ಅದು ಎಲ್ಲಿದೆ ಎಂದು ಗುರುತಿಸಿ ಸರ್ವೆ ಮಾಡಿ, ಅದು ಏನಾಗಿದೆ ಎನ್ನುವುದರ ಬಗ್ಗೆ ಸಹ ಮಾಹಿತಿ ಕೊಡುತ್ತೇವೆ.'.

**ಉಪ ಸಭಾಪತಿಯವರು:** ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(585) 23.03.2021, 3 .10 KG.RN**

**(ಮಧ್ಯಾಹ್ನ 1 ಗಂಟೆ 56 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 18 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ನನಗೆ ಅಯವ್ಯಯ ಅಂದಾಜುಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದರು. ನಂತರ ಶ್ರೀ ಬಸವರಾಜ ಪಾಟೀಲ್ ಇಟಗಿಯವರಿಗೆ ಮಾತನಾಡಿ ಎಂದು ಪೀಠದಿಂದ ಹೇಳಿದ್ದರು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಬೆಳಿಗ್ಗೆ ತಮ್ಮ ಕಡೆಯಿಂದ ಮಾತನಾಡಿದ್ದಾರೆ. ಹಾಗಾಗಿ, ಎಲ್ಲಾ ಕಡೆಯಿಂದಲೂ ಒಂದು round ಬರಬೇಕಲ್ಲವೇ: ನೀವು ನಿಮ್ಮ ನಿಮ್ಮಗೆ ಹೊಂದಾಣಿಕೆಗಳನ್ನು ನಿಮ್ಮ ಪಕ್ಷದಲ್ಲಿ ಮಾಡಿಕೊಳ್ಳಿ. ಮಾನ್ಯ ಸದಸ್ಯರಾದ ರುದ್ರೇಗೌಡರವರೇ, ತಾವೀಗ ಮಾತನಾಡಿ.

**9. ವಿತ್ತೀಯ ಕಾರ್ಯಕಲಾಪ**

**2021-22ನೇ ಸಾಲಿನ ಅಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಎಸ್.ರುದ್ರೇಗೌಡ (ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನನಗೆ ಅಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ 08.03.2021 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿರುವಂತಹ ಬಜೆಟ್ ಬಹುಶಃ ನಮ್ಮ ನಾಡಿನ ಜನರು ಏನು ನಿರೀಕ್ಷೆ ಮಾಡಿದ್ದರೋ, ಅದಕ್ಕಿಂತ ಉತ್ತಮವಾದಂತಹ, ಜನಪರವಾದಂತಹ, ಪ್ರಗತಿಪರವಾದಂತಹ ಬಜೆಟ್‌ನ್ನು ಈ ಸದನದಲ್ಲಿ ಮಂಡಿಸಿದ್ದಾರೆ. **(ಮುಂದು)**

**(586) 23-03-2021(3-20)ಎಂವಿ-ಆರ್‌ಎನ್**

**ಶ್ರೀ ಎಸ್.ರುದ್ರೇಗೌಡ (ಮುಂದು):-**

ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹಣಕಾಸಿನ ಜವಾಬ್ದಾರಿಯನ್ನು ಹೊಂದಿದ್ದರು. ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು 2006-07ನೇ ಸಾಲಿನಲ್ಲಿ ಸುಮಾರು 38,875

ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸುತ್ತಾರೆ. ಬಜೆಟ್ ಅನ್ನು ಮಂಡಿಸಿದಂತಹ ಸಂದರ್ಭದಲ್ಲಿ ಅವರು ಹೇಳುವುದೇನೆಂದರೆ, ನಮ್ಮ ರಾಜ್ಯದಲ್ಲಿರುವಂತಹ ಸಂಪನ್ಮೂಲಗಳಿಗೆ ಹೋಲಿಸಿದರೆ ನಮ್ಮ ಬಜೆಟ್ ಗಾತ್ರ ಅತ್ಯಂತ ಚಿಕ್ಕದು, ಕನಿಷ್ಠ ಅದನ್ನು ಒಂದು ಲಕ್ಷ ಕೋಟಿಗಳಿಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳುತ್ತಾರೆ. ಅವರು ಒಬ್ಬ ಹೋರಾಟಗಾರರು. ಅವರು ಹಣಕಾಸು ಅಥವಾ ಯಾವುದೇ ಆಡಳಿತದ ನಿರ್ವಹಣೆಯಲ್ಲಿ ನೇರವಾಗಿ ಭಾಗಿಯಾಗಿಲ್ಲದಂತಹವರು, ಅದನ್ನು ಸೂಕ್ಷ್ಮವಾಗಿ ಗಮನಿಸಿ, ಅದರ ಜೊತೆಗೆ ಇನ್ನು ಒಂದು ಮಾತನ್ನು ಹೇಳುತ್ತಾರೆ. ಬಜೆಟ್ ಅನ್ನು ಒಂದು ಲಕ್ಷ ಕೋಟಿಗೆ ತೆಗೆದುಕೊಂಡು ಹೋಗುವುದು ಎಂದರೆ ತೆರಿಗೆಯನ್ನು ಹಾಕದ ರೀತಿಯಲ್ಲಿ ತೆಗೆದುಕೊಂಡು ಹೋಗುವುದು ಎಂದು. ಅಂದರೆ, ಸೋರಿಕೆಯನ್ನು ತಡೆಹಿಡಿದು ಬಜೆಟ್ ಅನ್ನು ಒಂದು ಲಕ್ಷ ಕೋಟಿಗೆ ತೆಗೆದುಕೊಂಡು ಹೋಗಬೇಕೆಂದು ಹೇಳುತ್ತಾರೆ. ಆ ಪ್ರಯತ್ನ ನಿರಂತರವಾಗಿ ನಡೆಯುತ್ತದೆ. ಬಹುಶಃ ಆ ಅವಕಾಶವನ್ನು 2013-14ರಲ್ಲಿ ಸನ್ಮಾನ್ಯ ಜಗದೀಶ್ ಶೆಟ್ಟರು 94,450 ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸುತ್ತಾರೆ.

ಈ ರಾಜ್ಯದಲ್ಲಿ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ನಂತರ ಒಂದು ರೀತಿಯ ಆಲೋಚನೆಗಳನ್ನು ಬಿತ್ತಿದ್ದಾರೆ. ಸರ್ಕಾರದಿಂದ ಬಡವರಿಗೆ, ಹೆಣ್ಣುಮಕ್ಕಳಿಗೆ ಮತ್ತು ರೈತರಿಗೆ ವಿಶೇಷವಾದ ಆಲೋಚನೆಗಳು ಮತ್ತು ಕೊಡುಗೆಗಳು ಆರಂಭವಾದವು. ಏನು ಸ್ವಲ್ಪ ಜನ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು ಅಂತಹವರು ನೆಮ್ಮದಿಯ ಜೀವನ ಮಾಡುವಂತೆ ಆಯಿತು. ಬಹುಶಃ ಬಡ್ಡಿ ಇಲ್ಲದೇ ಇರುವಂತಹ ಸಾಲ ಎಂಬುದರ ಬಗ್ಗೆ ವಿಶೇಷವಾದ ಪರಿಕಲ್ಪನೆ ಇತ್ತು. ಬಹಳ ಜನ ಆಡಳಿತ ಪಕ್ಷದಲ್ಲಿ ಇದ್ದಂತಹವರೆ ಇದು ಸಾಧ್ಯಾನಾ ಎಂದು ಚರ್ಚೆ ಮಾಡಿರುವುದು ಇದೆ. ಆದರೆ, ಅವರು ಏನು ಆಲೋಚನೆಗಳನ್ನು ಮಾಡಿದರೂ ಅದು ಅಷ್ಟನ್ನೂ ಕೂಡ ಈ ರಾಜ್ಯದ ಜನತೆಗೆ ಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ವಿಶೇಷವಾಗಿ ಹಲವಾರು ಹಿರಿಯ ನಾಯಕರು ಅತ್ಯಂತ ಒಳ್ಳೆಯ ಸಲಹೆ ಮತ್ತು ಚರ್ಚೆಗಳನ್ನು ಮಂಡಿಸಿದ್ದಾರೆ. ನಾನು ಒಬ್ಬ ಕೈಗಾರಿಕೋದ್ಯಮಿ. ಕೈಗಾರಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯ ಅದರದೆ ಆದ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಕೈಗಾರಿಕೆಗಳಿಗೆ ಅವರು ಕೊಡುತ್ತಿರುವಂತಹ ಪ್ರೋತ್ಸಾಹ, ಅದರಲ್ಲಿ ಮುಖ್ಯವಾಗಿ ಮೂಲಭೂತ ಸೌಕರ್ಯಗಳಿಗೆ ಹೆಚ್ಚು ಒತ್ತು ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 178 ಕೈಗಾರಿಕಾ ಪ್ರದೇಶಗಳಿವೆ ಮತ್ತು ಅಲ್ಲಿ ಲಕ್ಷಾಂತರ ಯುವಕರು ಕೆಲಸ ಮಾಡುತ್ತಿದ್ದಾರೆ. ಖಂಡಿತವಾಗಿ ಆ ಯುವಕರಿಗೆಲ್ಲಾ ಸರಿಯಾದ ವ್ಯವಸ್ಥೆಯಾಗಬೇಕು. ನಾವು ಕೈಗಾರಿಕೆಗಳನ್ನು ಮಾಡಿ, ಯುವಕರಿಗೆ ಕೆಲಸವನ್ನು ನೀಡುತ್ತೇವೆ. ಅವರ ವಸತಿ ಸೌಕರ್ಯಗಳಿರಬಹುದು, ಅವರ ಆರೋಗ್ಯದ ದೃಷ್ಟಿಯಿಂದ ಕೆಲಸ ಮಾಡಿದ ನಂತರ, ಅವರ

ಆಲೋಚನೆಗಳಿಗೆ ತಕ್ಕಂತೆ ವ್ಯವಸ್ಥೆಗಳು ಆಗಬೇಕು. ಈಗ ಭೂಪರಿವರ್ತನೆ ಮಾಡಿದಾಗ, ಅದರಲ್ಲಿ ಕನಿಷ್ಟಪಕ್ಷ ಇಂತಿಂಥ ಸೌಲಭ್ಯಗಳು ಇರಬೇಕೆಂದು ಹೇಳುತ್ತೇವೆ. ಆದರೆ, ಇವತ್ತು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳಿಗಷ್ಟೆ ಮೀಸಲು ಇದೆಯೇ ಹೊರತು, ಅಲ್ಲಿ ಕೆಲಸ ಮಾಡುವಂತಹವರಿಗೆ ಯಾವುದೇ ರೀತಿಯ ಮೀಸಲುಗಳು ಇಲ್ಲ. ಅದರ ಬಗ್ಗೆ ಎಲ್ಲೂ ಕೂಡ ಚರ್ಚೆಯಾಗಿಲ್ಲ. ಈ ಬಜೆಟ್‌ನಲ್ಲಿ ಹಲವಾರು ಹೊಸ ಹೊಸ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರು ದೂರದೃಷ್ಟಿ ಇರುವಂತಹ ಒಬ್ಬ ನಾಯ್ಯಕ. ಬಹಳಷ್ಟು ಜನರು ಈ ದೇಶವನ್ನು ಕಟ್ಟುವ ನಿಟ್ಟಿನಲ್ಲಿ, ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ನಾನು ವೈಯಕ್ತಿಕವಾಗಿ ಡಾ||ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಸಂಪರ್ಕದಲ್ಲಿದ್ದಾಗ, ಬಹಳವಾಗಿ ಮನಸ್ಸಿಗೆ ನಾಟುವಂತಹ ವಿಷಯ ಪ್ರಸ್ತಾಪ ಮಾಡಿರುವುದನ್ನು ನಾನು ಇಲ್ಲಿ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಹರಿಕೋಟದಲ್ಲಿರುವಂತಹ ಉಡಾಯನ ಕೇಂದ್ರವನ್ನು ನೋಡಿದ್ದೇವೆ. ಏಕೆಂದರೆ, ಇವತ್ತು ಅದು ಇಡೀ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ. ಒಂದೇ ಬಾರಿಗೆ ಸುಮಾರು 24 ರಾಕೆಟ್‌ಗಳನ್ನು ಉಡಾವಣೆ ಮಾಡುವಂತಹ ನೈಪುಣ್ಯತೆ ನಮ್ಮ ವಿಜ್ಞಾನಿಗಳಿಗೆ ಬಂದಿದೆ. ನೀವು ಅದರ ಹಿನ್ನೆಲೆಯನ್ನು ನೋಡಿದರೆ, ಸುಮಾರು 60ರ ದಶಕದಲ್ಲಿ ಕೇಂದ್ರ ಸರ್ಕಾರ ನಿರಂತರವಾಗಿ ರಾಜ್ಯ ಸರ್ಕಾರಕ್ಕೆ ಈ ಜಾಗದಲ್ಲಿ ರಾಕೆಟ್ ಲಾಂಚಿಂಗ್ ಸ್ಟೇಷನ್ ಅನ್ನು ಮಾಡಬೇಕಾಗುತ್ತದೆ. ಅದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ ಎಂದು ಪತ್ರ ಬರೆಯುತ್ತಾರೆ. ಆಗ ಶ್ರೀ ಸತೀಶ್ ಧವನ್‌ರವರು ಆ ತಂಡವನ್ನು ನಡೆಸುತ್ತಿರುತ್ತಾರೆ. ಅವರು ಒಬ್ಬ ಹಿರಿಯ ವಿಜ್ಞಾನಿ, ಈಗ ಆ ಸಂಸ್ಥೆಗೆ 'ಸತೀಶ್ ಧವನ್ ಉಡಾಯನ ಕೇಂದ್ರ' ಎಂದು ಅವರ ಹೆಸರನ್ನು ಇಟ್ಟಿದ್ದಾರೆ. ನಿರಂತರವಾಗಿ ಅವರ ಪ್ರಯತ್ನ ನಡೆಯುತ್ತಿರುತ್ತದೆ. ನಂತರ ಒಂದು ಹಂತದಲ್ಲಿ ಅವರಿಗೆ ರಾತ್ರಿ 12.00 ಗಂಟೆಗೆ ಒಂದು ಫೋನ್ ಕಾಲ್ ಬರುತ್ತದೆ. ಅಂದರೆ, ಈ ವಿಷಯ ಒಂದು ಹಂತಕ್ಕೆ ಬಂದಿದೆ, ಆದುದರಿಂದ ನೀವು ರಾಜ್ಯದ ಮುಖ್ಯ ಕಾರ್ಯದರ್ಶಿಯವರನ್ನು ಭೇಟಿ ಮಾಡಬೇಕೆಂದು. ಡಾ||ಎ.ಪಿ.ಜೆ.ಅಬ್ದುಲ್ ಕಲಾಂರವರು ಶ್ರೀ ಸತೀಶ್ ಧವನ್‌ರವರ ತಂಡದಲ್ಲಿ ಇರುತ್ತಾರೆ. ಆಗ ಎಲ್ಲರೂ ಸಹ ರಾಜ್ಯದ ಮುಖ್ಯಕಾರ್ಯದರ್ಶಿಗಳ ಬಳಿಗೆ ದೌಡಾಯಿಸುತ್ತಾರೆ. ಅಲ್ಲಿಗೆ ಹೋದಾಗ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಹೇಳುತ್ತಾರೆ; Sorry Gentlemen, ನೀವು ಯಾವ ಜಾಗವನ್ನು ಕೇಳುತ್ತಿದ್ದೀರಿ ಎಂದು ನಿಮಗೆ ಕಲ್ಪನೆ ಇದೆಯೇ? ನೀವು ಅಲ್ಲಿ ಅಶಾಂತಿ ಉಂಟು ಮಾಡಬೇಕೆಂದು ಆಲೋಚನೆ ಮಾಡಿದ್ದೀರಾ? ಅದು ಖಂಡಿವಾಗಿ ಆಗುವುದಿಲ್ಲವೆಂದು ಹೇಳಿ, ಮತ್ತೆ ಈ ರೀತಿ ಮಾಡಬೇಡಿ ಎಂದು ಒಂದು ರೀತಿಯ ಎಚ್ಚರಿಕೆ ಕೊಟ್ಟು ಕಳುಹಿಸುತ್ತಾರೆ. ಅವರ ಜೊತೆ ಸುಮಾರು 20 ಜನ ಇಂಜಿನಿಯರ್‌ಗಳು ಹೋಗಿದ್ದರು, ಅವರುಗಳೆಲ್ಲರೂ ಸಹ ಬೇಸರ ಮಾಡಿಕೊಂಡು ವಾಪಸ್ಸು ಬರುತ್ತಾರೆ. ಅದಾದ ಸ್ವಲ್ಪ ದಿವಸಗಳಲ್ಲಿ ಶ್ರೀ ಸತೀಶ್ ಧವನ್‌ರವರು ಡಾ||ಎ.ಪಿ.ಜೆ.ಅಬ್ದುಲ್ ಕಲಾಂರವರ ಕೊಠಡಿಗೆ ಬಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಾರೆ, ನಾನು ಒಂದು ಆಲೋಚನೆ ಮಾಡಿದ್ದೇನೆ. ಅಂದರೆ, ನಾವೆಲ್ಲರೂ ಸೇರಿಕೊಂಡು ನಾವೇ ಅಲ್ಲಿಗೆ ಹೋಗಿ ಒಂದು ಪ್ರಯತ್ನ ಮಾಡೋಣವೆಂದು. ಅಲ್ಲಿರುವಂತಹ ಪ್ರಮುಖರನ್ನು ಭೇಟಿ ಮಾಡಿ ಅವರ ಬಳಿ ಮಾತನಾಡಿದ ಮೇಲೆ ಒಂದು ಸಮಯವನ್ನು ನಿಗದಿ ಮಾಡುತ್ತಾರೆ. ಅವರು ಅಲ್ಲಿಗೆ ಹೋದಾಗ ಇಡೀ ದಿನ ಚರ್ಚೆಯಾಗುತ್ತದೆ. ಇಡೀ ದಿನ ಚರ್ಚೆಯಾಗಿ ಕೊನೆಗೆ ಸಂಜೆಯ ಹೊತ್ತಿಗೆ ಒಂದು ನಿರ್ಧಾರಕ್ಕೆ ಬರುತ್ತಾರೆ. ಇವರು ಏನು Satellite Launching Station ಮಾಡಬೇಕೆಂದು ಇದ್ದಾರೆ ಅಂತಹ ಸ್ಥಳದಲ್ಲಿ ಅತ್ಯಂತ ಪ್ರಸಿದ್ಧವಾದ ಒಂದು ಚರ್ಚ್ ಇರುತ್ತದೆ. ಚರ್ಚ್‌ನ ಪಾದ್ರಿಗಳು ಹೇಳುತ್ತಾರೆ, ನಿಮ್ಮ ಅನಿಸಿಕೆಗಳು ರಾಷ್ಟ್ರಕೋಸ್ಕರ ಎನ್ನುವುದು ನನಗೆ ಅರ್ಥವಾಗುತ್ತದೆ. ಈ ಚರ್ಚ್‌ಗೆ ಸಾವಿರಾರು ಜನರು ಬರುತ್ತಾರೆ. ಆದುದರಿಂದ ನಾವು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಆದುದರಿಂದ ಇದು ನನ್ನಿಂದ ಆಗದೇ ಇರುವಂತಹ ಕೆಲಸವೆಂದು ಹೇಳುತ್ತಾರೆ. ಕೊನೆಗೆ ಇವರೆಲ್ಲರೂ ಸಹ ಒಂದು ಮನವಿ ಮಾಡಿಕೊಳ್ಳುತ್ತಾರೆ. ಮಾರನೆಯ ದಿನ ಭಾನುವಾರ ಇರುವುದರಿಂದ ನಾವೆಲ್ಲರೂ ಬಂದು ಒಂದು ಪ್ರಯತ್ನ ಮಾಡಬಹುದೇ ಎಂದು ಕೇಳುತ್ತಾರೆ. ನಮ್ಮನ್ನು ಬಿಡುವಂತೆ ಕಾಣುತ್ತಿಲ್ಲವೆಂದು ಚರ್ಚ್‌ನ ಪಾದ್ರಿಯವರು ಆಯಿತು ನಿಮ್ಮ ಪ್ರಯತ್ನವನ್ನು ನೀವು ಮಾಡಿ ಎಂದು ಹೇಳುತ್ತಾರೆ. ಆಗ ಇವರು ಹೋಗುವಾಗ ಇನ್ನೊಂದು ಮಾತನ್ನು ಹೇಳುತ್ತಾರೆ. ನಮ್ಮ ಕಡೆಯಿಂದ ಒಂದು ಮನವಿ ಏನೆಂದರೆ, ಪ್ರಮುಖರನ್ನು ಕರೆದು ಅವರನ್ನು ಮಾನಸಿಕವಾಗಿ ತಯಾರಿ ಮಾಡಿ ಎಂದು ಹೇಳುತ್ತಾರೆ. ಆಗ ಪಾದ್ರಿಯವರು ಆಯಿತು ಎಂದು ಒಪ್ಪಿಕೊಳ್ಳುತ್ತಾರೆ. ಮಾರನೆಯ ದಿನ ಹತ್ತರಿಂದ-ಹನ್ನೊಂದು ಗಂಟೆಗೆ ಅವರ ಪ್ರಾರ್ಥನೆಯಾದ ಮೇಲೆ ಚರ್ಚ್‌ನ ಪಾದ್ರಿಯವರು ಹೇಳುತ್ತಾರೆ, ಕೆಲವು ಪ್ರಮುಖರು ಬಂದಿದ್ದಾರೆ, ತಮ್ಮ ಜೊತೆ ಕೆಲವು ವಿಷಯಗಳನ್ನು ಹಂಚಿಕೊಳ್ಳುತ್ತಾರೆಂದು. ನಾನು ಈಗಾಗಲೇ ಕೆಲವು ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನೀವುಗಳ್ಯು ಹೋಗುವುದು ಬೇಡವೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಎಲ್ಲರಿಗೂ ಆಶ್ಚರ್ಯವಾಗುತ್ತದೆ.

(ಮುಂದು)

**(587) 03.30 23.03.2021 ಎಲ್‌ಎಲ್/ವಿಕೆ**

**ಶ್ರೀ ಎಸ್. ರುದ್ರೇಗೌಡ(ಮುಂದು):-**

ಕೊನೆಯದಾಗಿ, ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರವರು ಮತ್ತು ಶ್ರೀ ಸತೀಶ್ ಧವನ್‌ರವರು ಆ ಜನರನ್ನು ಉದ್ದೇಶಿಸಿ ಮಾತನಾಡುತ್ತಾರೆ. ಆ ಜಾಗದಲ್ಲಿ ಅವರು ಏನು ಮಾಡಬೇಕೆಂದಿದ್ದಾರೆ, ಆ ಜಾಗದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿರುವಂತಹ ಅವಶ್ಯಕತೆ ಮತ್ತು ಅನಿವಾರ್ಯತೆಗಳೆರಡನ್ನು ಅವರಿಗೆ

ವಿವರಿಸಿದಾಗ, ಅದನ್ನು ಆ ಜನರು ಒಕ್ಕೊರಲಿನಿಂದ ಒಪ್ಪಿಕೊಳ್ಳುತ್ತಾರೆ. ಇದು ಒಬ್ಬ ಕ್ರಿಯಾಶೀಲ ವ್ಯಕ್ತಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಒಳ್ಳೆಯದನ್ನು ಮಾಡಬೇಕು ಎನ್ನುವಂತಹ ವ್ಯಕ್ತಿಗಳು ಏನೆಲ್ಲಾ ಮಾಡಬಹುದು ಎನ್ನುವುದಕ್ಕೆ ಇದು ಒಂದು ಉದಾಹರಣೆ. ಇದು ನನಗೆ ಯಾವಾಗಲೂ ನೆನಪಿಗೆ ಬರುತ್ತಿರುತ್ತದೆ.

ನಾನು ಆಗಲೇ ಮಾತನಾಡುತ್ತಾ, ಈ ಸಾಲಿನ ಬಜೆಟ್‌ನಲ್ಲಿ ಕೆಲವು ಹೊಸ ಹೊಸ ಆಲೋಚನೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ಕೆಲವು ಆಲೋಚನೆಗಳ ಬಗ್ಗೆ ವಿಶೇಷವಾಗಿ ನಾವು ಹಲವಾರು ಸಂದರ್ಭಗಳಲ್ಲಿ ಕೇಳುತ್ತಿರುತ್ತೇವೆ. ಅದೇನೆಂದರೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಕಾರ್ಯಾಗಾರಗಳು ಆದಾಗ, “ಭಾರತಕ್ಕೆ ಯಾವ ಶಕ್ತಿ ಇದೆ ಎಂದರೆ, ಇಡೀ ಪ್ರಪಂಚಕ್ಕೆ ಮಾನವ ಸಂಪನ್ಮೂಲ ಕೊಡುವ ಶಕ್ತಿ ಇದೆ” ಎಂದು. ಆದರೆ, ದುರದೃಷ್ಟವಶಾತ್ ಆ ಗುಣಮಟ್ಟ ನಮ್ಮ ದೇಶದ ಯುವಕರಲ್ಲಿ ಬರಬೇಕೆಂಬ ಮಾತನ್ನು open dais ನಲ್ಲಿ share ಮಾಡುತ್ತಾರೆ. ಅದು ನಿಜ ಕೂಡ ಹೌದು. ಏಕೆಂದರೆ, ಇನ್ಫೋಸಿಸ್ ಮುಖ್ಯಸ್ಥರಾದ ಸನ್ಮಾನ್ಯ ನಾರಾಯಣಮೂರ್ತಿಯವರು ಸಾವಿರಾರು ಜನರಿಗೆ ಹಳ್ಳಿಯ ಯುವಕರಿಗೆ ಕೆಲಸವನ್ನು ಕೊಟ್ಟಂತಹವರು. ಅವರು ಒಂದು ಸರ್ವೇನಲ್ಲಿ, “Employability” ಕಾಲೇಜಿನಿಂದ ನೇರವಾಗಿ ನಮ್ಮ ಕಂಪನಿಗೆ ಬಂದಂತಹ ವಿದ್ಯಾರ್ಥಿಗಳಿಗೆ ನಾವು ಜವಾಬ್ದಾರಿ ಕೊಡುವುದು ಶೇಕಡ 20 ರಷ್ಟು, ಇನ್ನು ಶೇಕಡ 40 ರಷ್ಟು ವಿದ್ಯಾರ್ಥಿಗಳಿಗೆ ನಾವು ಏನಾದರೂ ತರಬೇತಿ ಕೊಟ್ಟರೆ ಅವರು ಸರಿ ಹೋಗುತ್ತಾರೆ ಎನ್ನುವಂತಹವರಿಗೆ ಜವಾಬ್ದಾರಿ ಕೊಡುತ್ತೇವೆ. ಇನ್ನುಳಿದ ಶೇಕಡ 40 ರಷ್ಟು ವಿದ್ಯಾರ್ಥಿಗಳಿಗೆ ಅವರು ಏನು ಮಾಡುವುದಕ್ಕೆ ಆಗುವುದಿಲ್ಲ. ಈ ವಿದ್ಯಾರ್ಥಿಗಳು ತಮಗೆ ಗೊತ್ತಿಲ್ಲದೇ ಈ ವಿಷಯವನ್ನು ಅಧ್ಯಯನ ಮಾಡಿದವರಿಗೆ ಜವಾಬ್ದಾರಿ ನೀಡುತ್ತಾರೆ” ಎಂದು ಹೇಳುತ್ತಾರೆ.

ಇದರ ಅರ್ಥ ಏನೆಂದರೆ, ಬಹುಶಃ ನಮ್ಮ ಶಾಲಾ ಕಾಲೇಜುಗಳಲ್ಲಿಯೂ ಸಹ ಈ ನಿಟ್ಟಿನಲ್ಲಿ ಶಿಕ್ಷಣ ನೀಡಬೇಕು. ಈಗಾಗಲೇ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿರುತ್ತದೆ. ಅಂದರೆ, ಶೈಕ್ಷಣಿಕ ಗುಣಮಟ್ಟ ಸಾಕಷ್ಟು ಸುಧಾರಣೆ ಆಗಬೇಕು ಎನ್ನುವ ಬಗ್ಗೆ ಸಾಕಷ್ಟು ಚರ್ಚೆಗಳಾಗಿರುತ್ತವೆ. ಆ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ಆಗಬೇಕು. ಅದಕ್ಕಾಗಿ, ಇಲ್ಲಿ ಒಂದಿಷ್ಟು ಪ್ರಯತ್ನಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಅದರಂತೆ, ಸರ್ಕಾರಿ ಶಾಲೆಗಳಲ್ಲಿ ಕಲಿಕಾ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಪ್ರೌಢಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಕಲಿಕಾ ವ್ಯವಸ್ಥೆ ಜಾರಿಗೆ ತರಲಾಗಿದೆ. ಇದರಡಿಯಲ್ಲಿ 4687 ಪ್ರೌಢಶಾಲೆಗಳಲ್ಲಿ ಈಗಾಗಲೇ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್ ನೀಡಲಾಗಿದೆ. 2351 ಸರ್ಕಾರಿ ಪ್ರೌಢಶಾಲೆಗಳಲ್ಲಿ ತಲಾ 8 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ. ಉಳಿದ ಎಲ್ಲಾ ಸರ್ಕಾರಿ ಶಾಲೆಗಳಿಗೂ ಈ ಸೌಲಭ್ಯ ಶೀಘ್ರಗತಿಯಲ್ಲಿ ದೊರೆಯಲಿದೆ. ಇದೊಂದು ಪ್ರಯತ್ನ ಇದರ ಜೊತೆಗೆ, ಆಧುನಿಕ

ತಂತ್ರಜ್ಞಾನದೊಂದಿಗೆ ಉನ್ನತ ಶಿಕ್ಷಣದಲ್ಲಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸುವುದು ನಮ್ಮ ಸರ್ಕಾರದ ಆದ್ಯತೆಯಾಗಿದೆ. ಅದಕ್ಕಾಗಿ, ಕಾಲೇಜು ವಿದ್ಯಾರ್ಥಿಗಳಿಗೆ ಹಿಂದಿನ ವರ್ಷಗಳಲ್ಲಿ ಲ್ಯಾಪ್‌ಟಾಪ್ ಮತ್ತು ಟ್ಯಾಬ್ಲೆಟ್ ವಿತರಣೆ ಮಾಡಲಾಗಿದೆ. ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮತ್ತು 14 ಸರ್ಕಾರಿ ಇಂಜಿನಿಯರ್ ಕಾಲೇಜುಗಳನ್ನು ಡಿಜಿಟಲ್ ಕಲಿಕೆಗೆ ಅನುಕೂಲವಾಗುವಂತೆ 'ಸ್ಮಾರ್ಟ್ ಕ್ಲಾಸ್ ರೂಮ್'ಗಳಾಗಿ ಪರಿವರ್ತಿಸಲಾಗಿದೆ. ಇವುಗಳೆಲ್ಲವೂ ಸಹ, ಆ ನಿಟ್ಟಿನಲ್ಲಿ ಒಂದು ಪ್ರಯತ್ನ ಎಂದು ನಾನು ಭಾವಿಸುತ್ತೇನೆ.

ಏಕೆಂದರೆ, ಈಗಿನ ಚಿಕ್ಕ ಮಕ್ಕಳಿಂದ ಹಿಡಿದು ಎಲ್ಲರೂ ಸಹ ತಂತ್ರಜ್ಞಾನದಲ್ಲಿ ಬಹಳಷ್ಟು ಆಕರ್ಷಿತರಾಗಿದ್ದಾರೆ. ಈ ಬಗ್ಗೆ ಇದೇ ಸದನದಲ್ಲಿ ನಿನ್ನೆಯ ದಿವಸ ಚರ್ಚೆ ಮಾಡುತ್ತಿದ್ದೆವು. ಅದೇನೆಂದರೆ, ಮಕ್ಕಳಿಗೆ ನಾವು ಇಂಟರ್‌ನೆಟ್ ಕ್ಲಾಸ್‌ಗಳನ್ನು ಮಾಡುತ್ತೇವೆ. ಆದರೆ, ಅದರಿಂದ ಮಕ್ಕಳ ಕಣ್ಣಿಗೆ ಬಹಳಷ್ಟು ತೊಂದರೆ ಆಗುತ್ತದೆ. ಹೌದು, ಅದು ನಿಜ. ಆದರೆ, ಇವೊತ್ತಿನ ದಿವಸ ಯಾವುದೇ ಮನೆಗೆ ಹೋದರು ಸಹ ಆ ಮನೆಯ ಮಕ್ಕಳು ಲ್ಯಾಪ್‌ಟಾಪ್ ಅಥವಾ ಮೊಬೈಲ್ ಇಟ್ಟುಕೊಂಡು ಆಟ ಆಡುತ್ತಿರುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಸ್ಪೋರ್ಟ್ಸ್ ಮತ್ತು ಕಾಮಿಕ್ಸ್‌ಗಳನ್ನು ನೋಡುತ್ತಿರುತ್ತಾರೆ. ಆ ಮನೆಗಳಲ್ಲಿ ತಂದೆ-ತಾಯಿಗಳು ಸಹ ಮಕ್ಕಳು ಸುಮ್ಮನೆ ಇರಲಿ ಎಂದು ಲ್ಯಾಪ್‌ಟಾಪ್ ಅಥವಾ ಮೊಬೈಲ್ ಅನ್ನು ಅವರಿಗೆ ಕೊಟ್ಟು ಸುಮ್ಮನಿರುತ್ತಾರೆ. ಇವೊತ್ತಿನ ದಿವಸ ನಾವು ಆ ಹಂತಕ್ಕೆ ಬಂದು ತಲುಪಿರುತ್ತೇವೆ. ನನ್ನ ಮನೆಯಲ್ಲಿಯೂ ಸಹ ನನ್ನ ಮೊಬೈಲ್‌ನಲ್ಲಿ ನನ್ನ ಮೊಮ್ಮಗ ಮಾಡುವಷ್ಟು ಚಟುವಟಿಕೆಗಳು ನನಗೆ ಮಾಡುವುದಕ್ಕೆ ಬರುವುದಿಲ್ಲ. ಅಷ್ಟರಮಟ್ಟಿಗೆ ಈಗಿನ ಕಾಲದ ಮಕ್ಕಳ ಬುದ್ಧಿಮತ್ತೆ ಜಾಸ್ತಿಯಾಗಿರುತ್ತದೆ. ಆ ನಿಟ್ಟಿನಲ್ಲಿಯೂ ಸಹ ನಮ್ಮ ಸರ್ಕಾರದ ನೇತೃತ್ವ ವಹಿಸಿದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರು ಆಲೋಚನೆ ಮಾಡಿರುವಂಥದ್ದು ಖಂಡಿತವಾಗಿಯೂ ಅಭಿನಂದನಾರ್ಹವಾದದ್ದು.

ಇಂದಿನ ಸನ್ನಿವೇಶದಲ್ಲಿ ನಾವು ಯಾವಾಗಲೇ ಮಾತನಾಡಲು ಪ್ರಾರಂಭ ಮಾಡಿದರೂ ಸಹ ಕೋವಿಡ್-19ರ ಬಗ್ಗೆ ಮಾತನಾಡುತ್ತೇವೆ. ಅದು ನಿಜ. ಆದರೆ, ಕೋವಿಡ್-19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಸರ್ಕಾರ ಮಾಡಿರುವಂತಹ ಕೆಲಸಗಳನ್ನು ಸಹ ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಇದರ ಜೊತೆಗೆ, ಕೋವಿಡ್-19 ಸಂದರ್ಭದಲ್ಲಿ ಸೇವೆ ಸಲ್ಲಿಸಿದಂತಹ ವೈದ್ಯರು, ಪೊಲೀಸ್, ಆಸ್ಪತ್ರೆಗಳ ಸಿಬ್ಬಂದಿಗಳು, ಸ್ವಚ್ಛತಾಕರ್ಮಿಗಳು ಹಾಗೂ ಇತರೆ ಎಲ್ಲರಿಗೂ ಸಹ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ಕೋವಿಡ್-19 ನಿಂದ ಆಗಿರುವಂತಹ ಸಾವು-ನೋವುಗಳು ಅತಿ ಕಡಿಮೆ. ಅದು ಇಡೀ ಪ್ರಪಂಚದಲ್ಲಿಯೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನಜನಿತವಾಗಿರುವಂಥದ್ದು ಮತ್ತು ದಾಖಲೆಯಾಗಿರುವಂಥದ್ದು. ಕೋವಿಡ್-19 ಕಾಲದಲ್ಲಿ ಬಹಳಷ್ಟು ದೊಡ್ಡ ತೊಂದರೆಯನ್ನು ಅನುಭವಿಸದಂತಹವರೆಂದರೆ ಅಸಂಘಟಿತ ಕ್ಷೇತ್ರಗಳಲ್ಲಿರತಕ್ಕಂತಹ ಕಟ್ಟಡ ಕಾರ್ಮಿಕರು ಹಾಗೂ ಇತರೆ ವೃತ್ತಿ ಮಾಡತಕ್ಕಂತಹವರು. ಆ ಸಂದರ್ಭದಲ್ಲಿ ಸರ್ಕಾರ ಅವರ ನೆರವಿಗೆ ಬಂದು, ಸಾಕಷ್ಟು ಅನುಕೂಲಗಳನ್ನು ಮಾಡಿದೆ. ಅಂದರೆ, ಆ ಸಂದರ್ಭದಲ್ಲಿ ಊಟದ ವ್ಯವಸ್ಥೆಯಿಂದ ಹಿಡಿದು ಹಾಗೂ ಸಂದರ್ಭ ಅತ್ಯಂತ ಬಿಗಡಾಯಿಸಿದಂತಹ ಸಂದರ್ಭದಲ್ಲಿ ಅವರವರ ಕ್ಷೇತ್ರಗಳಿಗೆ ವಾಪ್ಪಸ್ಸು ಕಳುಹಿಸುವಂತಹ ಕೆಲಸವನ್ನು ಕೂಡ ಸರ್ಕಾರ ಮಾಡಿರುವುದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

ಇವೊತ್ತಿನ ದಿವಸ ಪ್ರಪಂಚದಲ್ಲಿ ಈ ಎಲ್ಲಾ ಕ್ಷೇತ್ರಗಳು ಸಹ ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಅದು ವ್ಯವಸಾಯ ಇರಬಹುದು, ಕೈಗಾರಿಕೆ ಇರಬಹುದು ಅಥವಾ ಇತರೆ ಬೇರೆ ಬೇರೆ ಯಾವುದೇ ತಂತ್ರಜ್ಞಾನ ಕ್ಷೇತ್ರಗಳಿರಬಹುದು, ಆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಭಾರತೀಯರು ದಾಪುಗಾಲು ಹಾಕುತ್ತಿದ್ದಾರೆ. ಆದರೆ, ಅವರಿಗೆ ಈಗ ಆಗಬೇಕಾಗಿರುವ ಕೆಲಸ ಏನೆಂದರೆ, ಅವರ ನೆರವಿಗೆ ಸರ್ಕಾರಗಳು ಬರಬೇಕು ಮತ್ತು ಅವರಿಗೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಬೇಕು. ಇದೆಲ್ಲದರ ಮಧ್ಯದಲ್ಲಿ ಸರ್ಕಾರದ ಆದಾಯಕ್ಕೆ ಬಹಳಷ್ಟು ಹೊಡೆತ ಕೂಡ ಬಿದ್ದಿರುತ್ತದೆ. ಬಹುಶಃ ಇಷ್ಟೊಂದು ಕಠಿಣ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಯಾವ ಹೊಸ ತೆರಿಗೆಯನ್ನು ಹಾಕದೇ ಅಥವಾ ಇರುವಂತಹ ತೆರಿಗೆಯನ್ನು ಹೆಚ್ಚು ಮಾಡದೇ ಕಳೆದ ವರ್ಷಕ್ಕಿಂತ ಸುಮಾರು 13 ಸಾವಿರ ಕೋಟಿ ರೂಪಾಯಿಯಷ್ಟು ಹೆಚ್ಚು ಮಾಡಿ ಬಜೆಟ್ ಅನ್ನು ಮಂಡಿಸಿರುವ ಹಿನ್ನೆಲೆಯಲ್ಲಿ ಅವರ ಪ್ರಯತ್ನ ಮತ್ತು ಅದರ ಜೊತೆಗೆ ಅವರು ತಮ್ಮ ಜೀವನದಲ್ಲಿ ಅನುಭವಿಸಿದಂತಹ ಕಷ್ಟಗಳು ಕೂಡ ಸಹಕಾರಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ನಮ್ಮ ರಾಜಸ್ವ ಕೊರತೆ ಖಂಡಿತ ಆಗಿರುತ್ತದೆ. ಆದರೆ, ಅದು ಸಂಪೂರ್ಣವಾಗಿ ಒಂದು ಹಿಡಿತದಲ್ಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. *Karnataka Fiscal Responsibility Act, 2002* ಎಂದು ನಾವು ಮಾಡಿಕೊಂಡಿದ್ದೇವೆ. ಬಹುಶಃ the people who are doing the business and the people who are interacting with the bank will be aware of this. DSCR (Debt Service Coverage Ratio) calculate ಮಾಡುತ್ತಾರೆ. ಅಂದರೆ, ಒಬ್ಬ ಸಾಲ ತೆಗೆದುಕೊಂಡಂತಹ ವ್ಯಕ್ತಿ ಎಷ್ಟು ಹಣದವರೆಗೆ ಸಾಲ ತೆಗೆದುಕೊಳ್ಳಬಹುದು ಎನ್ನುವುದನ್ನು ತೀರ್ಮಾನಿಸುವುದು ಅವರ ಉತ್ಪಾದನೆ ಮಾಡುವಂತಹ ಆದಾಯ ಮತ್ತು ಅವರಿಗೆ ಇರತಕ್ಕಂತಹ ಬೇರೆ ಬೇರೆ ಖರ್ಚು-ವೆಚ್ಚಗಳನ್ನು ಗಮನಿಸಿ, ಅವರು ಸಾಲ ಮರುಪಾವತಿ ಮಾಡಬಹುದೇ ಎನ್ನುವುದನ್ನು evaluate ಮಾಡುತ್ತಾರೆ. ಅದೇ ರೀತಿ ವಿತ್ತೀಯ ಕೊರತೆಯನ್ನು ಈ

ಬಾರಿ ಶೇಕಡ 9 ರಷ್ಟರವರೆಗೆ allow ಮಾಡಿದ್ದಾರೆ. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಂಡಿಸಿದಂತಹ ವಿತ್ತೀಯ ಕೊರತೆ ಕೇವಲ ಶೇಕಡ 3.4 ರಷ್ಟು ಇದೆ. ವಿತ್ತೀಯ ಕೊರತೆ ಎಂದರೆ, ಬಂದಂತಹ ರಾಜಸ್ವದಲ್ಲಿ ನಮ್ಮ ವೆಚ್ಚಗಳನ್ನು meet ಆಗುವಂಥದ್ದಾಗಿದೆ. ಇದರಲ್ಲಿ ಒಟ್ಟಾರೆ ಬಜೆಟ್ ಬೇರೆ. ಏಕೆಂದರೆ, ಒಟ್ಟಾರೆ ಬಜೆಟ್‌ನಲ್ಲಿ ನಮ್ಮ ಸರ್ಕಾರ 71 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮಾಡಿದೆ. ಇಲ್ಲಿಯವರೆಗೆ ನಾವು ಪಡೆದಿರುವಂತಹ ಸಾಲವನ್ನು ಬಡ್ಡಿ ಸಹಿತ ವಾಪಸ್ಸು ಕೊಡುವಂತಹ ಶಕ್ತಿ ನಮಗೆ ಇರುವುದರಿಂದ ಅಷ್ಟು ಸಾಲವನ್ನು ಕೊಡಬಹುದು ಎಂದು ಸಾಲ ಪಡೆಯುವುದಕ್ಕೆ ಅವಕಾಶ ನೀಡಲಾಗಿದೆ.

ಇದರ ಜೊತೆಗೆ, ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ಮಾರ್ಚ್ ತಿಂಗಳ ಅಂತ್ಯದವರೆಗೆ ಸಾಕಷ್ಟು ತೆರಿಗೆ ಸಂಗ್ರಹವಾಗುವುದು ಇರುತ್ತದೆ. ಅಂದರೆ, 12ನೇ ಮಾರ್ಚ್‌ನಲ್ಲಿ ಬಂದಂತಹ ಒಂದು ಸುದ್ದಿ ಪ್ರಕಾರ, "ರಾಜಸ್ವ ಸಂಗ್ರಹದಲ್ಲಿ 3 ಇಲಾಖೆಗಳು ವಿಫಲ" ಎಂದು ಇತ್ತು. ಅವು ಯಾವುದೆಂದರೆ, ವಾಣಿಜ್ಯ ತೆರಿಗೆ ಇಲಾಖೆ, ಅಬಕಾರಿ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಹಾಗೂ ಸಾರಿಗೆ ಇಲಾಖೆ ಎಂದು ಹೇಳಿದ್ದಾರೆ. ಅಬಕಾರಿ ಇಲಾಖೆಯವರು ನಾವು ತೆರಿಗೆಯನ್ನು make up ಮಾಡುತ್ತೇವೆಂದು ಹೇಳಿದ್ದಾರೆ. ಇದೆಲ್ಲವೂ ಸಹ ಬಹುಶಃ ವಾಣಿಜ್ಯ ತೆರಿಗೆ ಸಾಕಷ್ಟು ವ್ಯವಹಾರಗಳಲ್ಲಿ ವ್ಯತ್ಯಯಗಳು ಆಗಿದ್ದರಿಂದ, particularly ಕಳೆದ ವರ್ಷದ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಿನಲ್ಲಿ ಸಾಕಷ್ಟು ಲಾಕ್‌ಡೌನ್ ಆಯಿತು.

**(ಮುಂದು)**

**(588) 23.03.2021 3.40 ಜ್ಯೋವಲ್-ವಿಕೆ**

**ಶ್ರೀ ಎಸ್.ರುದ್ರೇಗೌಡ(ಮುಂದು):-**

ಅಂತರರಾಜ್ಯ ವಹಿವಾಟು ಮತ್ತು ವಸ್ತುಗಳ ಚಲನವಲನ ಸಹ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ಹೀಗಾಗಿ ಸಾಕಷ್ಟು ರಾಜಸ್ವ ಆದಾಯದ ಕೊರತೆ ಉಂಟಾಗಿದೆ. ಆದರೆ, ನೋಂದಣಿ ಮತ್ತು ಮುದ್ರಾಂಕ, ಅಬಕಾರಿ ಮತ್ತು ಸಾರಿಗೆ ಇಲಾಖೆಗಳಲ್ಲಿನ ಅಧಿಕಾರಿಗಳಿಗೆ ಸಾಮಾಜಿಕ ಕಳಕಳಿ ಮತ್ತು ಆರ್ಥಿಕವಾದ ಬದ್ಧತೆ ಇದ್ದರೆ, ಇದನ್ನು ಸರಿದೂಗಿಸಬಹುದು. ಈಗಾಗಲೇ ರೂ.71.00 ಸಾವಿರ ಕೋಟಿಯ ಯೋಜನೆ ಏನಿದೆ, ಅದು provisional ಆಗಿದರೂ ಸಹ ಕಡಿಮೆಯಾಗಬಹುದೆಂಬುದು ನನ್ನ ವೈಯಕ್ತಿಕ ಭಾವನೆಯಾಗಿದೆ. ಏಕೆಂದರೆ, quarter four ನಲ್ಲಿ ಇಂಡಸ್ಟ್ರೀಸ್ ಮತ್ತು ಇನ್ನಿತರ ವ್ಯವಹಾರಗಳು ಬಹಳ ಚೆನ್ನಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಯುತ್ತಿವೆ. ಈ ಹಿಂದೆ ಇದ್ದಂತಹ ವೇಗವನ್ನೇ ತೆಗೆದುಕೊಂಡಿದೆ. ಈ ಸಾಲಿನ ಬಜೆಟ್‌ನಲ್ಲಿ ಹೊಸ ಆಲೋಚನೆಗಳ ಮೂಲಕ ಯುವಕರಿಗೆ ಉದ್ಯೋಗ ಕಲ್ಪಿಸುವಂಥದ್ದು, ರಾಜ್ಯಕ್ಕೆ ಭದ್ರತೆಯನ್ನು ನೀಡುವಂಥದ್ದು, ಅದರ ಜೊತೆಗೆ ಬದಲಾಗಿರತಕ್ಕಂಥ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಹಲವಾರು ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಹೇಳಿದ ಹಾಗೆ ಯುವಕರ ಕೌಶಲ್ಯವನ್ನು ಅಭಿವೃದ್ಧಿ ಮಾಡಲು ಸುಮಾರು 150 ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಉನ್ನತೀಕರಿಸಲು ಟಾಟಾ ಟೆಕ್ನಾಲಜಿಯವರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು, ಅದರಲ್ಲಿ 4636 ಕೋಟಿ ರೂಪಾಯಿಗಳಂತೆ ಅಂದಾಜು ಮಾಡಿ, 4080 ಕೋಟಿ ರೂಪಾಯಿಗಳನ್ನು ಟಾಟಾ ಟೆಕ್ನಾಲಜಿಯವರು ಭರಿಸುತ್ತಾರೆ ಎಂದು ಹೇಳಿದ್ದಾರೆ. ಟಾಟಾ ಟೆಕ್ನಾಲಜಿಯು ನಮ್ಮ ದೇಶದ ಹೆಮ್ಮೆಯ ಕೈಗಾರಿಕೋದ್ಯಮವಾಗಿದೆ. ಅವರ ಜೊತೆಗೆ ಸಹಯೋಗ ಮಾಡಿಕೊಂಡಿರುವುದು ಖಂಡಿತವಾಗಿ ಒಳ್ಳೆಯ ಫಲ ನೀಡುತ್ತದೆ ಎನ್ನುವುದು ನನ್ನ ಭಾವನೆ. ಅದರ ಜೊತೆಗೆ ಬಹಳ ಮುಖ್ಯವಾದ ಇನ್ನೊಂದು ವಿಚಾರವನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು-ಚೆನ್ನೈ ಮತ್ತು ಬೆಂಗಳೂರು-ಮುಂಬೈ ನಡುವೆ 500 ಎಕರೆ ಜಾಗದಲ್ಲಿ ಕೈಗಾರಿಕಾ ವಸಾಹತು ಪ್ರಾರಂಭ ಮಾಡಿ, ಸುಮಾರು ರೂ.10,000 ಕೋಟಿ ಬಂಡವಾಳ ಹೂಡುವ ಬಗ್ಗೆ ಆಲೋಚನೆಯನ್ನು ಮುಂದಿಟ್ಟಿದ್ದು, ಅದರಲ್ಲಿ 5 ಲಕ್ಷ ಹುದ್ದೆಗಳನ್ನು ಸೃಜಿಸುತ್ತೇವೆ ಎನ್ನುವಂಥ ಮಾತನ್ನು ಸಹ ಹೇಳಿದ್ದಾರೆ. ಇವೆಲ್ಲವೂ ನಮ್ಮ ಮುಂದೆ ಇಟ್ಟಿರುವಂಥ ಆಲೋಚನೆಗಳಾಗಿವೆ. ಬಹುಶಃ ಇವೆಲ್ಲವೂ ಸಾಕಾರವಾದರೆ, ಇವತ್ತಿನ ಯುವ ಪೀಳಿಗೆಗೆ ಬಹಳ ಒಳ್ಳೆಯ ರೀತಿಯಲ್ಲಿ ಅನುಕೂಲವಾಗುತ್ತದೆ ಮತ್ತು ಅವರ ಜೀವನಕ್ಕೆ ಗೌರವ ಹಾಗೂ ಬದ್ಧತೆ ಎರಡು ಸಹ ದೊರೆಯುತ್ತದೆ. ಇಂದಿನ ದಿವಸ ಬದಲಾಗುತ್ತಿರುವ ವಾತಾವರಣದಲ್ಲಿ ಅದರಲ್ಲಿಯು ವಿಶೇಷವಾಗಿ Automobile Industries ನಲ್ಲಿ ಪರಿಸರ ಸಂರಕ್ಷಣೆಯಿಂದ ಮತ್ತು ಅತೀ ವೇಗವಾಗಿ ಹೆಚ್ಚಾಗುತ್ತಿರುವ ಇಂಧನದ ದರ ಇವೆರಡಕ್ಕೂ ಕಡಿವಾಣ ಹಾಕುವ ಸಲುವಾಗಿ ಈಗಾಗಲೇ ಎಲೆಕ್ಟ್ರಿಕ್ ವೆಹಿಕಲ್ಸ್ ಬಂದಿದ್ದು, ರಸ್ತೆಗಳಲ್ಲಿ ನಾವು ನೋಡುತ್ತಿರುತ್ತೇವೆ. ಗ್ರೀನ್ ನಂಬರ್ ಪ್ಲೇಟ್ ಇದ್ದರೆ ಅದು ಎಲೆಕ್ಟ್ರಿಕ್ ವೆಹಿಕಲ್ಸ್ ಆಗಿರುತ್ತದೆ. ನನ್ನ ಸ್ನೇಹಿತರೊಬ್ಬರ ಹತ್ತಿರ ಸಹ ಎಲೆಕ್ಟ್ರಿಕ್ ವೆಹಿಕಲ್ ಇದೆ. ಯಾವುದೇ ವ್ಯತ್ಯಾಸ ಇದೆ ಎಂದು ಅನಿಸುವುದಿಲ್ಲ. 120 ಕಿಲೋ ಮೀಟರ್ ವೇಗವಾಗಿ ಬೇಕಾದರೂ ಹೋಗಬಹುದು. ಆದರೆ, ಒಂದು ಸಮಸ್ಯೆಯೇನೆಂದರೆ, 320 ರಿಂದ 360 ಕಿಲೋ ಮೀಟರ್‌ನಷ್ಟು depending on the load, ಅದರೊಳಗೆ ಎಷ್ಟು ಜನ ಕುಳಿತಿರುತ್ತೇವೆ ಅದರ ಮೇಲೆ milage ಅನ್ವಯಿಸುತ್ತದೆ. ಇಂತಹ ಎಲೆಕ್ಟ್ರಿಕ್ ವೆಹಿಕಲ್ಸ್‌ಗಾಗಿ ಸುಮಾರು ಒಂದು ಸಾವಿರದಷ್ಟು ಚಾರ್ಜಿಂಗ್ ಸ್ಟೇಷನ್ ವ್ಯವಸ್ಥೆಯನ್ನು ಕಲ್ಪಿಸುವ

ಬಗ್ಗೆ ಸರ್ಕಾರ ಯೋಜನೆ ಮಾಡುತ್ತಿದೆ. ಇದನ್ನು ನೋಡಿದಾಗ ಸರ್ಕಾರ ಯಾವ ಹಂತದಲ್ಲಿ ಆಲೋಚನೆ ಮಾಡುತ್ತಿದೆ ಎಂಬುದು ಗೊತ್ತಾಗುತ್ತಿದೆ. ಜೊತೆಗೆ ನಾವು ಇಡೀ ರಾಜ್ಯವನ್ನೇ ಟೆಕ್ನಾಲಜಿಯೊಂದಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ಇವೆಲ್ಲವೂ ಒಂದು ಭಾಗವಾಗಿದ್ದು, ನಮ್ಮ ರಾಜ್ಯದ ಘನತೆ ಮತ್ತು ಆದಾಯವನ್ನು ಹೆಚ್ಚಿಸುವಂಥದ್ದಾಗಿದೆ. ಅದಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ನೀಡುವಂಥದ್ದಾಗಿದೆ. ನಾವು ಬೆಳಗ್ಗೆ ಬಂಡವಾಳದ ಬಗ್ಗೆ ಆಲೋಚನೆ ಮಾಡುವಾಗ Foreign Direct Investments ವಿಚಾರದಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದೆ ಎಂದು ಹೇಳಿದರು. ಬಹುಶಃ ಎಲ್ಲವೂ ಸಹ ಬಂಡವಾಳವನ್ನು ಆಕರ್ಷಣೆ ಮಾಡುವುದಕ್ಕೆ ಪೂರಕವಾದಂತಹ ಅಂಶಗಳು ಎನ್ನುವುದು ನನ್ನ ಭಾವನೆ.

ಇದರ ಮಧ್ಯಯಲ್ಲಿ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಪ್ರಸ್ತಾವ ಮಾಡಲಾಗಿದೆ. ಆಯವ್ಯಯ ಮಂಡನೆ ಮಾಡುವಂಥ ಸಂದರ್ಭದಲ್ಲಿ ದಿನಾಂಕ: 08.03.2021 ರಂದು International Women's Day ಯಾಗಿದ್ದು, ವಿಶೇಷವಾಗಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಹೆಚ್ಚು ಒತ್ತು ನೀಡಿದ್ದಾರೆ. 2021-22ನೇ ಸಾಲಿನಲ್ಲಿ ರೂ.37,188 ಕೋಟಿ ಅನುದಾನವನ್ನು ಮಹಿಳಾ ಕ್ಷೇತ್ರಕ್ಕೆ ಮೀಸಲಿಟ್ಟಿದ್ದಾರೆ. ಮಹಿಳೆಯರು ಕೇವಲ ಉದ್ಯೋಗಿಗಳಾಗಿ ಮಾಡುವುದಲ್ಲದೇ, ಮಹಿಳಾ ಉದ್ಯಮಿಗಳಾಗಬೇಕೆಂಬ ಆಲೋಚನೆಯಿಂದಾಗಿ ಸುಮಾರು ರೂ.2.00 ಕೋಟಿಗಳ ವರೆಗೆ ಶೇ.4 ರಷ್ಟು ಬಡ್ಡಿ ವಿಧಿಸಿ, ಕರ್ನಾಟಕ ರಾಜ್ಯ ಹಣಕಾಸಿನ ಸಂಸ್ಥೆಗಳು / ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಸಾಲ ಸೌಲಭ್ಯವನ್ನು ಕಲ್ಪಿಸುವಂಥ ವ್ಯವಸ್ಥೆ ಮಾಡಲಾಗಿದೆ. ಗ್ರಾಮೀಣ ಜೀವನೋಪಾಯ ಅಭಿಯಾನ 'ಸಂಜೀವಿನಿ' ವ್ಯಾಪ್ತಿಯ ಮಹಿಳಾ ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳು, ಕೇಟರಿಂಗ್, ಸ್ವಚ್ಛತಾ ಕಾರ್ಯ, ಕೋಳಿ ಸಾಕಾಣಿಕೆ ಇಂತಹ ಹಲವಾರು ಯೋಜನೆಗಳಲ್ಲಿ ಮಹಿಳೆಯರಿಗೆ ಅನುಕೂಲವಾಗುವ ರೀತಿ 60,000 ಮಹಿಳೆಯರಿಗೆ ಸ್ವಯಂ ಉದ್ಯೋಗದ ಅವಕಾಶ ದೊರೆಯಲಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಉದ್ಯಮದಲ್ಲಿ ಕರ್ತವ್ಯ ನಿರ್ವಹಿಸುವ ಮಹಿಳೆಯರಿಗೆ ರಿಯಾಯಿತಿ ದರದಲ್ಲಿ ಬಿ.ಎಂ.ಟಿ.ಸಿ. ಬಸ್ ಪಾಸ್ ಕಲ್ಪಿಸಲಾಗಿದೆ. ಜೊತೆಗೆ ಕಾರ್ಖಾನೆಗಳಲ್ಲಿ ಅಥವಾ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುವಂಥ ಮಹಿಳೆಯರಿಗೆ ಈಗ ನೀಡುತ್ತಿರುವ ಪ್ರಸೂತಿ ರಜೆಯೊಂದಿಗೆ ಅವರ ಒಟ್ಟು ಸೇವಾವಧಿಯಲ್ಲಿ ಆರು ತಿಂಗಳವರೆಗೆ ಮಕ್ಕಳ ಆರೈಕೆಗೆ ರಜೆಯನ್ನು ಒದಗಿಸಲಾಗಿದೆ. ಈ ರೀತಿಯಾಗಿ ಮಹಿಳೆಯರಿಗೆ ಮತ್ತು ಮಹಿಳಾ ಕ್ಷೇತ್ರಕ್ಕೆ ಗೌರವ ನೀಡುವ ನಿಟ್ಟಿನಲ್ಲಿ ಒಳ್ಳೆಯ ಯೋಜನೆ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿರುವುದನ್ನು ಸ್ವಾಗತಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆಲ್ಲದರ ಜೊತೆಗೆ ಹಲವಾರು ವಿಚಾರಗಳಿದ್ದು, ವಿಶೇಷವಾಗಿ ಈ ನಾಡಿನಲ್ಲಿ ಜನಿಸಿ, ಈ ನಾಡಿನ ಏಳಿಗೆಗೆ ಶ್ರಮಿಸಿದಂಥ ಮಹಾಪುರುಷರ ಹೆಸರನ್ನು ಅವರ ಹುಟ್ಟೂರಿನ ಅಭಿವೃದ್ಧಿ ಕಾರ್ಯಗಳಿಗೆ ತೆಗೆದುಕೊಳ್ಳಲಾಗಿದೆ. ಇವೆಲ್ಲವೂ ಸಹ ವಿಶೇಷ ಆಲೋಚನೆಗಳಾಗಿವೆ. ಕಿತ್ತೂರು ರಾಣಿ ಚೆನ್ನಮ್ಮನವರು ಹಾಗೂ ಕಿತ್ತೂರು ರಾಜವಂಶಸ್ಥರ ವಿವಿಧ ಸ್ಥಳಗಳ ಅಭಿವೃದ್ಧಿಗಾಗಿ ರೂ.50 ಕೋಟಿಗಳನ್ನು ಮೀಸಲಿಟ್ಟಿದ್ದಾರೆ. ಬಸವಕಲ್ಯಾಣದಲ್ಲಿ ಹೊಸ ಅನುಭವ ಮಂಟಪ ನಿರ್ಮಿಸಲು ರೂ.500 ಕೋಟಿ ನೀಡಿರುವುದು. ಜಗಜ್ಯೋತಿ ಬಸವಣ್ಣನವರ ಜನ್ಮಸ್ಥಳವಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮವನ್ನು ಅಭಿವೃದ್ಧಿಪಡಿಸಲು ರೂ.5 ಕೋಟಿ ನೀಡಿದ್ದಾರೆ. ಲೋಕ ಕಲ್ಯಾಣಕ್ಕಾಗಿ ನಾಥ ಪರಂಪರೆಯು ನೀಡಿರುವ ಕೊಡುಗೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಮಂಡ್ಯ ಜಿಲ್ಲೆಯ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ 'ಆದಿಚುಂಚನಗಿರಿ ನಾಥ ಪಾರಂಪರಿಕ ಕೇಂದ್ರ' ವನ್ನು ಸ್ಥಾಪಿಸಲು ರೂ.10 ಕೋಟಿ ನೀಡಿದ್ದಾರೆ. ಈ ರೀತಿಯಾಗಿ ಸಾಂಸ್ಕೃತಿಕವಾಗಿ ಸಹ ಹಲವಾರು ಬಜೆಟ್‌ನಲ್ಲಿ ಅಂಶಗಳ ಬಗ್ಗೆ ಪ್ರಸ್ತಾಪಿಸಿರುವುದು ಅತ್ಯಂತ ವಿಶೇಷವೆಂದು ನಾನು ಭಾವಿಸುತ್ತೇನೆ. ಇನ್ನೂ ವಿಶೇಷವಾದ ಹಲವಾರು ವಿಷಯಗಳನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯ ಗಿರಿಧಾಮವನ್ನು ತೋಟಗಾರಿಕೆ ಇಲಾಖೆಯಿಂದ ಅನುಕ್ರಮವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಮಗ ಮತ್ತು ಜೆ.ಎಲ್.ಆರ್.ಗೆ ಹಸ್ತಾಂತರಿಸಿರುವುದು ಒಳ್ಳೆಯ ಆಲೋಚನೆಯೆಂದು ಭಾವಿಸುತ್ತೇನೆ. ಏಕೆಂದರೆ, ಬಹಳ ವರ್ಷಗಳಿಂದ 'ಕೆಮ್ಮಣ್ಣುಗುಂಡಿ' ಬಹಳ ಪ್ರಸಿದ್ಧವಾದ ಸ್ಥಳವಾಗಿದೆ.

(ಮುಂದು)

**(589)23.03.2021/3.50/ಎಸ್‌ಕೆ-ಬಿಎನ್‌ಎಸ್**

**ಶ್ರೀ ಎಸ್. ರುದ್ರೇಗೌಡ(ಮುಂದು):-**

ಅಲ್ಲಿನ ನಿರ್ವಹಣೆ ಮತ್ತು ಅಲ್ಲಿರುವಂತಹ ವಾತಾವರಣ ಎರಡೂ ಕೂಡ ಪ್ರವಾಸಿಗರನ್ನು ಅತಿ ಹೆಚ್ಚು ಆಕರ್ಷಣೆ ಮಾಡುತ್ತದೆ. ಒಳ್ಳೆಯ ವಸತಿ ಮತ್ತು ಪ್ರವಾಸಿಗರು ಬಂದಂತಹವರಿಗೆ ಒಳ್ಳೆಯ ಊಟ ಇತ್ಯಾದಿ ಅಲ್ಲಿ ಬೇಕಾಗಿರುವಂತಹದ್ದು. ತದಡಿಯಲ್ಲಿ 1,000 ಎಕರೆ ಪ್ರದೇಶದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಪರಿಸರ ಪ್ರವಾಸೋದ್ಯಮ ಉದ್ಯಾನವನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪ ಮಾಡಿದ್ದಾರೆ. ತುಮಕೂರಿನಲ್ಲಿ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಉಡುಪಿಯಲ್ಲಿ ಪೇಜಾವರ ಶ್ರೀ ವಿಶ್ವೇಶ್ವರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರ್ಥ ಶ್ರೀಪಾದರ ಗೌರವಾರ್ಥ ಸ್ಮೃತಿವನವನ್ನು ತಲಾ ಎರಡು ಕೋಟಿ ರೂಪಾಯಿಗಳಲ್ಲಿ ವೆಚ್ಚ ಮಾಡಲಾಗುವುದು. ಇವೆಲ್ಲವೂ ಕೂಡ ಮುಂದಿನ ಪೀಳಿಗೆಗೆ ಈ ನಮ್ಮ ಸಂಸ್ಕೃತಿ ಮತ್ತು ಹಿರಿಯರ ಪರಿಚಯವನ್ನು ಮಾಡತಕ್ಕಂತಹದ್ದು, ಹಾಗೂ ನಮ್ಮ ಧರ್ಮದ ಸಂರಕ್ಷಣೆಗೆ ಅವರ ಮನಸ್ಸುಗಳನ್ನು ಒಲಿಸತಕ್ಕಂತಹದ್ದು. ಈ ರೀತಿ ಹತ್ತು ಹಲವು ವಿಚಾರಗಳ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ. ಇದನ್ನು ನಾನು ಅತ್ಯಂತ ಗೌರವದಿಂದ ಮತ್ತು ಪ್ರಜ್ಞಾಪೂರ್ವಕವಾಗಿ ಸ್ವಾಗತಿಸುತ್ತಾ, ಈ ಆಯವ್ಯಯದ ಮೇಲೆ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ತಾವು ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈ ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇವತ್ತು ಈ ಬಜೆಟ್ ಮೇಲೆ ವಿರೋಧ ವ್ಯಕ್ತಪಡಿಸುವುದಕ್ಕೆ ನಾನು ತಮ್ಮ ಮುಂದೆ ನಿಂತಿದ್ದೇನೆ. ಇದು ಒಂದು ಸುಳ್ಳಿನ ಕಂತೆ ಎಂದು ನಾನು ಭಾವಿಸಿದ್ದೇನೆ. ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಸುಮಾರು 246207 ಕೋಟಿ ರೂಪಾಯಿಗಳ ಬಜೆಟ್‌ನ್ನು ಮಂಡಿಸಿದ್ದಾರೆ. ಈ ಆಯವ್ಯಯದಲ್ಲಿ 124202 ಕೋಟಿ ರೂಪಾಯಿಗಳನ್ನು ರಾಜ್ಯದ ಸ್ವಂತ ತೆರಿಗೆಯಿಂದ ಸಂಗ್ರಹಿಸುವುದಕ್ಕೆ ಮತ್ತು 24273 ಕೋಟಿ ರೂಪಾಯಿಗಳು ಕೇಂದ್ರದ ತೆರಿಗೆಯಿಂದ ಸಂಗ್ರಹಿಸುವುದಕ್ಕೆ ಹಾಗೂ ಕೇಂದ್ರ ಸರ್ಕಾರದಿಂದ ಅನುದಾನ 15538 ಕೋಟಿ ರೂಪಾಯಿಗಳು, 8258 ಕೋಟಿ ರೂಪಾಯಿಗಳು ಇತರೆ ತೆರಿಗೆಯೇತರ ರಾಜಸ್ವದಿಂದ ನಿರೀಕ್ಷಿಸಲಾಗಿದೆ. ಇದೆಲ್ಲಾ ಸೇರಿ ಒಟ್ಟು 172272 ಕೋಟಿ ರೂಪಾಯಿಗಳು ರಾಜಸ್ವವನ್ನು ನಿರೀಕ್ಷೆ ಮಾಡುವಂತಹ ಬಜೆಟ್ ಇದಾಗಿದೆ. ಇದು ಬ್ಲಾಕ್ ಬಜೆಟ್ ಎಂದು ನಾನು ಭಾವಿಸಿದ್ದೇನೆ. ಅಂದರೆ ಹಲವು ವರ್ಷಗಳ ನಂತರ ಒಂದು ರಾಜಸ್ವದ ಕೊರತೆಯ ಬಜೆಟ್‌ನ್ನು ಸನ್ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ. ಇಲ್ಲಿಯವರೆಗೂ ಅವರು ಎಂಟು ಬಜೆಟ್‌ಗಳನ್ನು ಮಂಡಿಸಿದ್ದಾರೆ. ಆದರೆ ಈ ಎಂಟು ಬಜೆಟ್‌ಗಳಲ್ಲಿ ಮೊದಲು 2007 ರಲ್ಲಿ ಅವರು ಹೇಳಿದ್ದಾರೆ, ನಾನು ಪ್ರಪ್ರಥಮ ಮೊದಲನೆಯ ಬಾರಿಗೆ ನಮ್ಮ ರಾಜ್ಯದ ಇತಿಹಾಸದಲ್ಲಿ ಒಂದು ಜೆಂಡರ್ ಬಜೆಟ್‌ನ್ನು present ಮಾಡುತ್ತೇನೆಂದು ಹೇಳಿದರು. ಹಿಂದಿನ ವರ್ಷ ಅವರು ಮುಖ್ಯಮಂತ್ರಿಗಳಾದಾಗ, ಮೊದಲನೇ ಬಾರಿಗೆ ಒಂದು ಚೈಲ್ಡ್ ಬಜೆಟ್ ಮಾಡಿದ್ದೇನೆಂದು ಹೇಳಿದರು. ಚೈಲ್ಡ್ ಬಜೆಟ್‌ನಲ್ಲಿ ಮಕ್ಕಳಿಗೆ ಒಂದು ಮಹತ್ವವನ್ನು ಕೊಡುವುದಕ್ಕೆ ಸುಮಾರು 973 ಕಾರ್ಯಕ್ರಮಗಳನ್ನು ಕೊಟ್ಟಿದ್ದರು. 2020–21ರ ಸಾಲಿನಲ್ಲಿ ಸುಮಾರು 553 ಕಾರ್ಯಕ್ರಮಗಳನ್ನು ಕೊಟ್ಟು, ಅದಕ್ಕೆ 37783 ಕೋಟಿ ರೂಪಾಯಿಗಳನ್ನು ಅದರಲ್ಲಿ ವೆಚ್ಚ ಮಾಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದರು. ಈ 953 ಕಾರ್ಯಕ್ರಮಗಳೇನಿವೆ, ಅದು ಯಾವುದೂ ಅನುಷ್ಠಾನವಾಗಲಿಲ್ಲ. ಕೇವಲ 4000 ಕೋಟಿ ರೂಪಾಯಿಗಳನ್ನು ಇದರಲ್ಲಿ ಬಿಡುಗಡೆ ಮಾಡಿ, ಈ ಬಿಡುಗಡೆಯಲ್ಲಿ ಕೇವಲ ಸಂಬಳಕ್ಕೆ ಸುಮಾರು 2000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ, 1800 ಕೋಟಿ ರೂಪಾಯಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಟ್ಟು, ಸುಮಾರು 953 ಕಾರ್ಯಕ್ರಮಗಳನ್ನು ಕೊಟ್ಟಿದ್ದೇನೆಂದು 2020-21ರ ಬಜೆಟ್‌ನಲ್ಲಿ ಹೇಳಿದರು. ಮಕ್ಕಳ ಕಲ್ಯಾಣಕ್ಕಾಗಿ ವಿಶೇಷವಾಗಿ ಚೈಲ್ಡ್ ಬಜೆಟ್ ಮಾಡುತ್ತೇನೆಂದು ಹೇಳಿ, ಸುಮಾರು 279 ಕಾರ್ಯಕ್ರಮಗಳನ್ನು ಕೊಟ್ಟಿದ್ದರು. ನನ್ನ ಪ್ರಕಾರ ಅದರಲ್ಲಿ ಶೇಕಡ 70 ರಿಂದ ಶೇಕಡ 80 ರಷ್ಟು ಯಾವುದೇ ಕಾರ್ಯಕ್ರಮಗಳು ಆಗಿಲ್ಲ ಎಂಬ ಬಗ್ಗೆ ನಾನು ತಮಗೆ ಹೇಳಿದೆ. ಹಿಂದಿನ ಬಜೆಟ್‌ನಲ್ಲಿ ಅವರು ಏನೇನು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಮತ್ತು ಅದು ಏನೇನು ಅನುಷ್ಠಾನವಾಗಿದೆ ಎಂಬುದನ್ನು ಒಂದು ಬಾರಿ ನೋಡಿದರೆ, ಇದು ಒಂದು ಸುಳ್ಳಿನ ಬಜೆಟ್. ಇದರಲ್ಲಿ ಏನು ಮಾಡಿದ್ದಾರೆ? ಬಜೆಟ್ ಎಂದರೆ ಏನು ಮಾನ್ಯ ಸಭಾಪತಿಯವರೇ? ಬಜೆಟ್ ಎಂದರೆ, it is an annual estimate of revenue and expenditure. ಸರ್ಕಾರದ ವಾರ್ಷಿಕ ಆಯವ್ಯಯ ವೆಚ್ಚಗಳ ಅಂದಾಜು ಮತ್ತು ಪ್ರತಿ ಇಲಾಖೆಯಲ್ಲಿ ಎಷ್ಟು ಖರ್ಚು ಮಾಡುತ್ತೇವೆ ಮತ್ತು ಏನೇನು ಕಾರ್ಯಕ್ರಮಗಳನ್ನು ಕೊಡುತ್ತೇವೆ? ತಾವು ಅದನ್ನು ಬಜೆಟ್‌ನಲ್ಲಿ ಮಂಡಿಸಬೇಕಾಗಿರುವುದು ಕರ್ತವ್ಯ. ಆದರೆ ಮಾನ್ಯ ಯಡಿಯೂರಪ್ಪನವರು ಏನು ಮಾಡಿದರು ಎಂದರೆ ಪ್ರಮುಖ ಆರು ವಲಯಗಳಲ್ಲಿ ಇದನ್ನು ಗುರುತಿಸಿ, ಇದರಲ್ಲಿ ವಿನಿಯೋಗ ಮಾಡುತ್ತೇವೆಂದು ಯೋಜನೆಗಳಲ್ಲಿ ಹೇಳಿದರು. ಅಂದರೆ ಈ ಬಜೆಟ್‌ನಲ್ಲಿ ಏನು ಪ್ರಸ್ತಾಪಿಸಿದ್ದರೋ, ಸಂಪ್ರದಾಯಿಕವಾಗಿಯೂ, ಪಾರದರ್ಶಕವಾಗಿಯೂ ಆಯವ್ಯಯದಲ್ಲಿ ಏನು ಹೇಳಬೇಕಾಗಿತ್ತು, ಯಾವ ಇಲಾಖೆಗೆ ಏನೇನು ಕಾರ್ಯಕ್ರಮಗಳನ್ನು ಏನೇನು ಕೊಟ್ಟಿದ್ದಾರೋ, ಅದ್ಯಾವುದೂ ಕಾರ್ಯಕ್ರಮಗಳನ್ನು ಕೂಡ ಈ ಬಜೆಟ್‌ನಲ್ಲಿ ಮಂಡನೆ ಮಾಡಿಲ್ಲ. ಈ ತರಹ ಸುಳ್ಳು ಮಾಹಿತಿಯನ್ನು ಇದರಲ್ಲಿ ಏಕೆ ಕೊಟ್ಟಿದ್ದಾರೆ? GSDP ಶೇಕಡಾ 2.6 ರಷ್ಟು ಕಡಿಮೆಯಾಗಿದೆ ಎಂದು ಹೇಳುತ್ತಾರೆ. ದೇಶದ GDP ಶೇಕಡಾ 7 ರಷ್ಟು ಕಡಿಮೆಯಾಗಿದೆ. ಇದು ಇರುವಾಗ, GDP ಮುಂದಿನ ವರ್ಷದಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವಲ್ಲಿ ಜಾಸ್ತಿ ಮಾಡುತ್ತೇವೆಂದು ಹೇಳುವುದು ನನ್ನ ಪ್ರಕಾರ ಅವಾಸ್ತವಿಕ ವಿಚಾರ. ಅವರು ಈ ತರಹ ಸುಳ್ಳುಗಳನ್ನು ಈ ಬಜೆಟ್‌ನಲ್ಲಿ ಹೇಳಿ, ನಮ್ಮ ರಾಜ್ಯದ ಜನರನ್ನು ಸಾಕಷ್ಟು ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ಇನ್ನೊಂದು ಈ ಬಜೆಟ್‌ನ ಪ್ರಾರಂಭದಲ್ಲಿ ಏನು ಹೇಳುತ್ತಾರೆಂದರೆ, 'To achieve inclusive growth, special attention has been given to scheduled castes and tribes, backward classes, minorities,

women and children, senior citizens and the specially abled.' ಬಜೆಟ್‌ನ ಆಯವ್ಯಯದಲ್ಲಿ ಏನು ಮಂಡನೆ ಮಾಡಿದ್ದಾರೆ. 2020ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸುಮಾರು 4635 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಈ ಬಾರಿ ಅಂದರೆ 2020-21ನೇ ಸಾಲಿನಲ್ಲಿ 4507 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗೆ ಕಡಿಮೆ ಅನುದಾನ ಕೊಟ್ಟಿದ್ದಾರೆ. 2020-21ನೇ ಸಾಲಿನಲ್ಲಿ ಎಸ್.ಸಿ. ಕಲ್ಯಾಣ ಕಾರ್ಯಕ್ರಮಗಳಿಗೆ ಸುಮಾರು 3989 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಈ ಬಾರಿ 3750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ನಮ್ಮ ಕಾಂಗ್ರೆಸ್ಸಿನ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವಿದ್ದಾಗ 2018-19ನೇ ಸಾಲಿನಲ್ಲಿ ಸುಮಾರು 6522 ಕೋಟಿ ರೂಪಾಯಿಗಳನ್ನು ಎಸ್.ಸಿ. ಕಲ್ಯಾಣಕ್ಕಾಗಿ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. 2020-21 ನೇ ಸಾಲಿನಲ್ಲಿ ಎಸ್.ಟಿ. ಕಲ್ಯಾಣಕ್ಕಾಗಿ ಸುಮಾರು 1490 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, 2021-22ನೇ ಸಾಲಿನಲ್ಲಿ ಇದರಲ್ಲಿ ಸುಮಾರು 1396 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 2020-21ನೇ ಸಾಲಿನ ಬಜೆಟ್‌ನಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ ಸುಮಾರು 1876 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, 2021-22 ನೇ ಸಾಲಿನಲ್ಲಿ ಸುಮಾರು 1336 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರವಿದ್ದಾಗ 2018-19ರಲ್ಲಿ ಸುಮಾರು 2281 ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಈ ತರಹ ಬಜೆಟ್‌ನಲ್ಲಿ ಎಲ್ಲ ಕಡಿಮೆ ಮಾಡಿ ನಾವು ಎಸ್.ಸಿ., ಎಸ್.ಟಿ., ಅಲ್ಪಸಂಖ್ಯಾತರು, ಮಹಿಳೆಯರಿಗೆ ಎಲ್ಲಾ inclusive growth ಎಂದು ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ನಾನು ಭಾವಿಸುತ್ತಿದ್ದೇನೆ. ನಾನು ಈಗಾಗಲೇ ಹೇಳಿರುವಂತೆ, ಇದೊಂದು ಸುಳ್ಳಿನ ಕಂತೆಯ ಬಜೆಟ್. 'ಅಳ್ಳೆದೆ ಅವನತಿಯ ದಾರಿ ಆತ್ಮವಿಶ್ವಾಸ ಯಶಸ್ಸಿನ ಪರಿ' ಎಂದು ಇದು ಒಂದು ಅನುಭವದ ವಾಣಿಯಲ್ಲಿ ಹೇಳುತ್ತಾರೆ. 'Cowardness is path to degeneration. Confidence is the key to success.' ಎಂದು ಹೇಳುತ್ತಾರೆ. ನನ್ನ ಪ್ರಕಾರ ಮೊದಲನೇ ಅಂಕೆ ಏನು ಹೇಳುತ್ತಾರೋ, 'Cowardness is path to degeneration.' This Budget is a cowardly Budget which will degenerate the growth of the State. ಈ ತರಹ ಅನುಭವದ ಮಾತುಗಳನ್ನು ಹೇಳಿ ಮತ್ತು ಅದರಲ್ಲಿ ಸುಳ್ಳು ಹೇಳಿರುವುದನ್ನು ನಾವು ನೋಡುತ್ತಿದ್ದೇವೆ. ಈ ತರಹ ಹಲವಾರು ಸುಳ್ಳುಗಳನ್ನು ಹೇಳಿ, ಈ ಒಂದು ಬಜೆಟ್‌ನಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು

ಕೊಡಬೇಕಾಗಿರುವುದನ್ನು ಬಿಟ್ಟು, ಇವರು ಸುಮ್ಮನೆ ಮುಚ್ಚು ಮರೆಯ ಒಂದು ಸರ್ಕಾರ ನಡೆಸುತ್ತಿದ್ದಾರೆ ಎಂದು ನಾನು ಭಾವಿಸಿದ್ದೇನೆ.

**(ಮುಂದು)**

**(590) 23.03.2021, 4.00, ಟಿಸಿಹೆಚ್-ಬಿಎಸ್ಎಸ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):-**

ಈ ಸರ್ಕಾರದಲ್ಲಿ ಮುಚ್ಚಿಟ್ಟಿದ್ದೇ ಜಾಸ್ತಿ, ಬಿಚ್ಚಿಟ್ಟಿದ್ದು ಕಡಿಮೆ ಎಂದು ನಾನು ಭಾವಿಸಿದ್ದೇನೆ.

ಮಾನ್ಯ ಸಭಾಪತಿಯವರೇ, ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಒಟ್ಟು 1231 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ವಲಯಕ್ಕೆ 9,443 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಆರ್ಥಿಕ ಅಭಿವೃದ್ಧಿ ಪ್ರಚೋದನೆ ವಲಯಕ್ಕೆ 3203 ಕೋಟಿ ರೂಪಾಯಿಗಳು, ಬೆಂಗಳೂರು ಸದೃಢ ಅಭಿವೃದ್ಧಿಗೆ 997 ಕೋಟಿ ರೂಪಾಯಿಗಳು, ಸಂಸ್ಕೃತಿ ಪರಂಪರೆ ಹಾಗೂ ನೈಸರ್ಗಿಕ ಸಂಪನ್ಮೂಲ ವಲಯಕ್ಕೆ 1907 ಕೋಟಿ ರೂಪಾಯಿಗಳ ಕಡಿಮೆ ಅನುದಾನವನ್ನು ನಿಗದಿಪಡಿಸಿದ್ದಾರೆ. ಹಿಂದಿನ ಬಜೆಟ್‌ಗಿಂತ ಇಷ್ಟು ಪ್ರಮಾಣದಲ್ಲಿ ಕಡಿಮೆ ಕೊಟ್ಟಿದ್ದಾರೆ. ಆದರೆ ಆಡಳಿತ ಸುಧಾರಣೆಗಾಗಿ 42,325 ಕೋಟಿ ರೂಪಾಯಿಗಳ ಹೆಚ್ಚಿನ ಹಣವನ್ನು ಮೀಸಲಿಟ್ಟಿದ್ದಾರೆ. ಇವತ್ತಿನ ದಿವಸ ಸಂಕಷ್ಟದಲ್ಲಿ ನಮ್ಮ ರೈತರು ದೇಶಾದ್ಯಂತ ಪ್ರತಿಭಟನೆ ಮಾಡುತ್ತಿದ್ದಾರೆ. ಆ ಮೂರು ಕಾಯ್ದೆಗಳನ್ನು ಜಾರಿಗೆ ತಂದು ರೈತರಿಗೆ ಅನಾನುಕೂಲ ಆಗಬೇಕು, ರೈತರನ್ನು ದಿವಾಳಿ ಮಾಡಬೇಕು ಎಂದು ರೈತರಿಗೆ ಯಾವುದೇ ರೀತಿಯಲ್ಲಿ ಸ್ಪಂದಿಸದೇ ಸನ್ಮಾನ್ಯ ಯಡಿಯೂರಪ್ಪನವರು ಸುಳ್ಳನ್ನು ಬಜೆಟ್‌ನಲ್ಲಿ ಹೇಳಿದ್ದಾರೆ. ಕೃಷಿ ಕ್ಷೇತ್ರಕ್ಕೆ ಹಣ ಕಡಿಮೆ ಮಾಡಿದ್ದಾರೆ, ನೀರಾವರಿಗೆ ಕಡಿಮೆ ಮಾಡಿದ್ದಾರೆ, ಕೃಷಿಗೆ ಹಣವನ್ನು ಕಡಿಮೆ ಮಾಡಿದ್ದಾರೆ. ನಾನು inclusive budget ಕೊಟ್ಟಿದ್ದೇನೆ ಎಂದು ನಮ್ಮ ಜನರ ಮುಂದೆ ಸುಳ್ಳನ್ನು ಹೇಳಿದ್ದಾರೆ. ಮತ್ತೆ ಒಂದು ವಿಪರ್ಯಾಸವೇನೆಂದರೆ, ವಿಶೇಷವಾಗಿ ನಮ್ಮ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಹೇಳುವುದಾದರೆ, ನಾನು ಕೂಡ ಪರಿಶಿಷ್ಟ ಜಾತಿಯ ಲಂಬಾಣಿ ಸಮಾಜದಿಂದ ಬಂದವನು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತು. 2020-21ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ 26,930 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿತ್ತು. ಆದರೆ, ಈ ಬಾರಿ 26,005 ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

ನಮ್ಮ ಸಮುದಾಯಕ್ಕೂ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಮತ್ತೆ SCP-TSP ಯ ಬಗ್ಗೆ ಹೇಳುವುದಾದರೆ, 2013–14ರಲ್ಲಿ ಬಜೆಟ್ ಗಾತ್ರ 1,21,611 ಕೋಟಿ ರೂಪಾಯಿಗಳು ಇತ್ತು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 22,000 ಕೋಟಿ ರೂಪಾಯಿಗಳು ಇತ್ತು. ಆಗ ನಾವು SCP-TSP ಗೆ 6153 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಆದರೆ, ಇವತ್ತಿನ ದಿವಸ ಬಜೆಟ್‌ನ ಗಾತ್ರ 2,46,207 ಕೋಟಿ ರೂಪಾಯಿಗಳು ಇದ್ದಾಗ, ಕೇವಲ SCP-TSP ಗೆ 26,005 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಬಜೆಟ್‌ನ ಗಾತ್ರದಲ್ಲಿ ಕಡಿಮೆ ಮಾಡಿ ನಮ್ಮ ಜನಾಂಗಕ್ಕೆ ಒಂದು ದೊಡ್ಡ ಅನ್ಯಾಯವನ್ನು ಮಾಡಿದ್ದಾರೆಂದು ನಾನು ಭಾವಿಸಿದ್ದೇನೆ. ವಿಶೇಷವಾಗಿ ವೀರಶೈವ ಲಿಂಗಾಯಿತ ಮತ್ತು ಒಕ್ಕಲಿಗ ಸಮುದಾಯದ ಅಭಿವೃದ್ಧಿ ನಿಗಮಗಳಿಗೆ ತಲಾ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ, ನಾವೆಲ್ಲರೂ ಅದಕ್ಕೆ ಸ್ವಾಗತ ಮಾಡೋಣ. ಅದು ಒಳ್ಳೆಯ ಬೆಳವಣಿಗೆ ಎಂದು ನಾವು ಭಾವಿಸೋಣ. ಆದರೆ, ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಆದಿ ಜಾಂಬವ ಅಭಿವೃದ್ಧಿ ನಿಗಮ, ಬೋವಿ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಕಾಡುಗೊಲ್ಲರು, ಅಂಬಿಗರ ಚೌಡಯ್ಯ, ಸವಿತಾ ಸಮಾಜ, ಹಿಂದುಳಿದ ವರ್ಗ ಮತ್ತು ತಾಂಡ ಅಭಿವೃದ್ಧಿ ನಿಗಮಗಳಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಲ್ಲಿ ಒಟ್ಟು 17 ನಿಗಮಗಳೇನಿವೆ, ಈ ಎಲ್ಲಾ ಸಮುದಾಯಗಳಿಗೆ ಕೇವಲ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿಂದಿನ ಬಜೆಟ್‌ನಲ್ಲಿ ಅವರು ನಮ್ಮ ಲಂಬಾಣಿ ಜನಾಂಗದ ಅಭಿವೃದ್ಧಿಗೆ 50 ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದರು. ಆದರೆ ಅದರಲ್ಲಿ ಕೇವಲ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಆ 25 ಲಕ್ಷ ರೂಪಾಯಿಗಳನ್ನೂ ಕೂಡ ವಾಪಸ್ಸು ತೆಗೆದುಕೊಂಡಿದ್ದಾರೆ. ವಿಶೇಷವಾಗಿ ಇವತ್ತು ಯಾವ ರೀತಿ ತಾರತಮ್ಯವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾಡುತ್ತಿದ್ದಾರೆಂದು ತಾವು ನೋಡಬೇಕಿದೆ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ.

ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಪ್ರಶ್ನೆ ಕೇಳಿದ್ದೆವು. ಆಗ ಕೂಡ ಈ ಸದನದಲ್ಲೇ ಇದ್ದರು. ಲಂಬಾಣಿ ಜನಾಂಗಕ್ಕೆ 200 ಕೋಟಿ ರೂಪಾಯಿಗಳು ಆರ್ಥಿಕ ಇಲಾಖೆಯಲ್ಲಿದೆ, ನಾನು ಬಜೆಟ್‌ಗಿಂತ ಮೊದಲೇ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಇದೇ ಸದನದಲ್ಲಿ ಹೇಳಿದ್ದರು. ಆದರೆ ಆ 200 ಕೋಟಿ ರೂಪಾಯಿಗಳನ್ನೂ ಕೂಡ ಕೊಡಲಿಲ್ಲ. 50 ಲಕ್ಷ ರೂಪಾಯಿಗಳು ಕೊಟ್ಟಿದ್ದರಲ್ಲಿ,

25 ಲಕ್ಷ ರೂಪಾಯಿಗಳನ್ನು ಕೂಡ ವಾಪಸ್ಸು ತೆಗೆದುಕೊಂಡರು. ಈ ರೀತಿಯಾದರೆ ನಮ್ಮ ಸಮಾಜ ಯಾವ ರೀತಿ ಅಭಿವೃದ್ಧಿಯಾಗಬೇಕು? 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. 200 ಕೋಟಿ ರೂಪಾಯಿಗಳು ಎಲ್ಲಿ, 25 ಲಕ್ಷ ರೂಪಾಯಿಗಳು ಎಲ್ಲಿ. ತಾವು ಯಾವುದೇ ರೀತಿಯ ಅಭಿವೃದ್ದಿ ಕೆಲಸಕ್ಕೂ ಹಣವನ್ನು ಬಿಡುಗಡೆ ಮಾಡಲಿಲ್ಲ. SCP-TSP ಯಲ್ಲಿ ಕಡಿಮೆ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಏನು ನಿಗಮಗಳಿವೆ, ಅದರಲ್ಲೂ ಕೂಡ ಕಡಿಮೆ ಮಾಡಿದ್ದಾರೆ. ಮತ್ತೆ ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಒಳ್ಳೆಯದು ಮಾಡುವುದಕ್ಕೆ ನಾವು inclusive budget ನ್ನು ಕೊಡುತ್ತೇವೆಂದು ಈ ರಾಜ್ಯದ ಜನರಿಗೆ ಸುಳ್ಳು ಹೇಳುತ್ತಿದ್ದಾರೆ. "ಅವರು ಹೇಳುವುದು ಒಂದು, ಮಾಡುವುದು ಇನ್ನೊಂದು" ಎಂದು ನಾನು ಇವತ್ತು ಬಹಳ ದುಃಖದಿಂದ ಹೇಳುತ್ತಿದ್ದೇನೆ.

ಮತ್ತೆ ನಮ್ಮ ರಾಜ್ಯದಲ್ಲಿ ಬದ್ಧ ವೆಚ್ಚಗಳು ಅಂದರೆ, committed expenditure ಏನಿವೆ, ಅದನ್ನು ತಾವು ನೋಡಿದ್ದೀರಿ. 2014-15 ರಲ್ಲಿ ಶೇ.81 ಇತ್ತು. ಆದರೆ ಇವತ್ತು 2020-21ರ ಬಜೆಟ್‌ನಲ್ಲಿ ಶೇ.102 ಇದೆ. ಅಂದರೆ ನಮ್ಮ ಸರ್ಕಾರದಲ್ಲಿ ಬದ್ಧ ವೆಚ್ಚವನ್ನು ಶೇ.80 ಇಟ್ಟಿದ್ದರೆ, ಇವತ್ತು ಅದನ್ನು ಶೇ.102 ಇಟ್ಟಿದ್ದಾರೆ. ಇಷ್ಟೊಂದು committed expenditure ಇದ್ದರೆ, ಅಭಿವೃದ್ಧಿ ಕೆಲಸ ಯಾವ ರೀತಿ ಮಾಡುತ್ತೀರಿ? ಯಾವ ರೀತಿ ಘೋಷಣೆಗಳನ್ನು ಮಾಡುತ್ತೀರಿ? ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 953 ಯೋಜನೆಗಳನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಯಾವುದೇ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತಂದಿಲ್ಲ. Child ಬಜೆಟ್ ಎಂದು ಕೊಟ್ಟಿದ್ದಾರೆ, ಅದಕ್ಕೆ ಪ್ರಚಾರವನ್ನು ತೆಗೆದುಕೊಳ್ಳುತ್ತಾರೆ. ಆದರೆ ಅದಕ್ಕೆ 250 ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆದರೆ ಒಂದೇ ಒಂದು ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 4000 ಕೋಟಿಗಿಂತ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇಂದಿನ ಬಜೆಟ್‌ನಲ್ಲಿ ಇಷ್ಟೊಂದು ಹಣವನ್ನು ಕೊಟ್ಟಿದ್ದೇವೆಂದು ಸುಳ್ಳು ಹೇಳಿ, ಮತ್ತೆ ಇವತ್ತು ಇಷ್ಟೊಂದು ಕಾರ್ಯಕ್ರಮಗಳನ್ನು ಕೊಟ್ಟಿದ್ದೀರಿ. ಅದು ಯಾವುದಾದರೂ ಅನುಷ್ಠಾನಕ್ಕೆ ಬರುವಂಥ ಸಾಧ್ಯತೆ ಇದೆಯೇ? ಇಂತಹ ಸುಳ್ಳು ಮಾತುಗಳನ್ನು ಹೇಳಿ, ನಮ್ಮ ರಾಜ್ಯದ ಜನರಿಗೆ ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದು ನಾನು ಭಾವಿಸಿದ್ದೇನೆ.

ವಿಶೇಷವಾಗಿ ನಮ್ಮ ರಾಜ್ಯದ್ದು ಈ ವರ್ಷದ ಸಾಲ 71,463 ಕೋಟಿ ರೂಪಾಯಿಗಳು ಇದೆ. ಅಂದರೆ ಜಿಎಸ್‌ಡಿಪಿಯ ಶೇ.26.9 ಸಾಲ ಮಾಡಬೇಕೆಂದು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರೇ, ನಾವು ಹೇಳುತ್ತಿರುವುದು ಇಷ್ಟೇ. ಇವತ್ತು ಅವರು ಬಜೆಟ್‌ಗೆ ಸಾಲವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರೇಕೆ ಸಾಲವನ್ನು ಪಡೆದುಕೊಳ್ಳುತ್ತಿದ್ದಾರೆ? ಅವರು ಕೇವಲ ಕೋವಿಡ್ ಬಂದಿರುವುದರಿಂದ ಸಾಲ ಮಾಡುತ್ತಿಲ್ಲ, ಕೇಂದ್ರ ಸರ್ಕಾರ ನಮಗೆ ಮಾಡಿರುವಂಥ ಅನ್ಯಾಯ. ಜಿಎಸ್‌ಟಿ ತೆರಿಗೆ ಪಾಲು ಏನು ನಮ್ಮ ರಾಜ್ಯಕ್ಕೆ ಬರಬೇಕಾಗಿತ್ತು, ಅದನ್ನು ಕೊಟ್ಟಿಲ್ಲ. ಈ ವರ್ಷ ನಮಗೆ 22-23ರಲ್ಲಿ ಜಿಎಸ್‌ಟಿ ಪಾಲು ಕೇಂದ್ರ ಸರ್ಕಾರದಿಂದ ಬರುತ್ತಿಲ್ಲ. ಕೊರತೆ ಏನಿದೆ, ಅದಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ನಮ್ಮ ರಾಜ್ಯಕ್ಕೆ ಮಾಡಿದೆ. ಇವತ್ತು ಅವರು ಅದನ್ನು ಮುಚ್ಚಿಡುವುದಕ್ಕೆ 2002ರಲ್ಲಿ Fiscal Responsibility Act ನಲ್ಲಿ ಶೇ.2.5 ಏನಿತ್ತು ಅದನ್ನು ಬದಿಗಿಟ್ಟು, ಅವರು ಶೇ.4 ಮಾಡಿದ್ದಾರೆ. ಇಷ್ಟು ಸಾಲದ ಹೊರೆಯನ್ನು ನಮ್ಮ ರಾಜ್ಯದ ಜನಕ್ಕೆ ಹೊರಿಸಿದ್ದಾರೆ. ಈಗಾಗಲೇ ಸಾಕಷ್ಟು ಜನ ಹೇಳಿದ್ದಾರೆ. ಅಂದರೆ, ಕರ್ನಾಟಕದ ಪ್ರತಿಯೊಬ್ಬ ಪ್ರಜೆಗೆ ಅವರು 70,000 ರೂಪಾಯಿಗಳಷ್ಟು ಸಾಲದ ಹೊರೆಯನ್ನು ತಲೆಮೇಲೆ ಹಾಕಿ, ರಾಜ್ಯ ಸರ್ಕಾರವನ್ನು ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ನಾವು ಎಲ್ಲ ಸಮುದಾಯದವರಿಗೂ ಅಭಿವೃದ್ಧಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು ಇಂತಹ ಸುಳ್ಳುಗಳನ್ನು ಹೇಳುವುದನ್ನು ನಿಲ್ಲಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಿದ್ದೇನೆ. ನಾನು ಅವರಿಗೆ ಹೇಳುವುದೇನೆಂದರೆ, This is a black budget. ಬ್ಲಾಕ್ ಬಜೆಟ್ ಎಂದರೆ ಏನು ಅರ್ಥ? ಈ ಬ್ಲಾಕ್ ಬಜೆಟ್ ಎಂದರೆ, ತಾವು ಯಾವಾಗ ಒಂದು ಡೆಫಿಸಿಟ್ ಬಜೆಟ್‌ನ್ನು ಕೊಡುತ್ತೀರಿ, ಆ ಬಜೆಟ್‌ಗೆ ಏನಾದರೂ ಹೇಳುತ್ತಾರೆಂದರೆ, that is a black budget. ಈ ವರ್ಷ 2021-22ರಲ್ಲಿ 15,136 ಕೋಟಿ ರೂಪಾಯಿಗಳ ಕೊರತೆಯ ಬಜೆಟ್‌ನ್ನು ಮಂಡಿಸಿದ್ದಾರೆ. ಆದರೆ, 2020-21ರಲ್ಲಿ ವಾಸ್ತವಿಕವಾಗಿ ಕೋವಿಡ್‌ನಿಂದ ಸಂಪನ್ಮೂಲವನ್ನು ಕ್ರೋಢೀಕರಿಸುವುದಕ್ಕೆ ತಮಗೆ ಹಣದ ಕೊರತೆಯಾಯಿತು. ವಾಸ್ತವಿಕವಾಗಿ ತಾವೆಲ್ಲ ಹೇಳಿದಂತೆ, 19,486 ಕೋಟಿ ರೂಪಾಯಿಗಳು ಕೊರತೆ ಇದೆ. ಅಂದರೆ 2020-21 ಮತ್ತು 2021-22ನ್ನು ನೋಡಿದಾಗ, 2022-23ರಲ್ಲಿ ನಮ್ಮ ರಾಜ್ಯದ ಬಜೆಟ್ ರಾಜಸ್ವದ ಕೊರತೆ ಏನಿದೆ, ಅದು 28,078 ಕೋಟಿ ರೂಪಾಯಿಗಳು ಆಗುವಂಥ ಸಾಧ್ಯತೆ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಮುಂದು)**

**(591)23.3.2021/4.10/ಎಂ.ಎಂ-ಎಂ.ಡಿ** **(ಮಾನ್ಯ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

2023-2024ನೇ ಸಾಲಿನಲ್ಲಿ 47,062 ಕೋಟಿ ರೂಪಾಯಿಗಳ ಕೊರತೆಯಾಗುತ್ತದೆ. 2024-2025ನೇ ಸಾಲಿನಲ್ಲಿ 57,993 ಕೋಟಿಯ ಕೊರತೆಯನ್ನು ಈ ರಾಜ್ಯದ ಜನರಿಗೆ ಇನ್ನು ಮುಂದಿನ 4-5 ವರ್ಷಗಳಲ್ಲಿ

ಮಾಡುತ್ತೀರಿ. ಇಂತಹ ಬಜೆಟನ್ನು ಕೊಟ್ಟು ತಾವು ಒಂದು inclusive budget ಕೊಟ್ಟಿದ್ದೇನೆ, ಎಲ್ಲರಿಗೂ ಒಳ್ಳೆಯದು ಮಾಡುವಂತಹ ಬಜೆಟನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೀರಿ. ಇಷ್ಟೊಂದು ಬಜೆಟ್‌ನ ಕೊರತೆ ಇದ್ದಾಗ, ತಮ್ಮ committed expenditure ಇಷ್ಟು ಜಾಸ್ತಿ ಇದ್ದಾಗ ಯಾವ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತೀರಿ? ಯಾವ ಕಾರ್ಯಕ್ರಮಗಳನ್ನು ತಾವು ಅನುಷ್ಠಾನಕ್ಕೆ ತರುತ್ತೀರಿ? ಇದಕ್ಕೆ ನಮ್ಮ ರಾಜ್ಯದ ಜನರಿಗೆ ಉತ್ತರ ಬೇಕಾಗಿದೆ. ನಾನು ಆಗಲೇ ಹೇಳಿದೆ. ಕೇಂದ್ರಸರ್ಕಾರದಿಂದ ನಮಗೆ ಬರಬೇಕಾದ ಹಣದ ಕೊರತೆ ಇದೆ. ನಮಗೆ ಬರಬೇಕಾದ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಡುತ್ತಾ ಇಲ್ಲ. ಅದರ ಅಂಕಿ-ಅಂಶಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಕೇಂದ್ರದಿಂದ ತೆರಿಗೆ ಪಾಲು ಮತ್ತು ಮತ್ತಿತರ ಅಂಶಗಳಿಂದ ಸ್ವೀಕರಿಸಿದ ಮೊತ್ತ ಆಯವ್ಯಯ ಅಂದಾಜು ರೂ. 28,591/- ಕೋಟಿಯಲ್ಲಿ ಜನವರಿ ಅಂತ್ಯದವರೆಗೆ ಇಲ್ಲಿಯವರೆಗೂ ನಮಗೆ ಕೇವಲ ರೂ. 14,907 ಕೋಟಿ ಮಾತ್ರ ಬಂದಿದೆ. ಕೇಂದ್ರ ಸರ್ಕಾರದಿಂದ ನಮಗೆ ಏನು ತೆರಿಗೆ ಹಣ ಬರಬೇಕಾಗಿತ್ತು ಅದು ಕೇವಲ ಶೇ.52 ರಷ್ಟು ಬಂದಿದೆ. ಆಯವ್ಯಯದಲ್ಲಿ ಸಹಾಯಧನ ರೂ. 15,454 ಕೋಟಿ ಅಂದಾಜಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರದಿಂದ ಜನವರಿ ಅಂತ್ಯದವರೆಗೆ ಕೇವಲ ರೂ. 12,140 ಕೋಟಿ ಬಂದಿದೆ. ಅಂದರೆ ಶೇ.78ರಷ್ಟು ಸಹಾಯಧನ ಬಂದಿದೆ. ಜಿ.ಎಸ್.ಟಿ.ಯ ಪರಿಹಾರ ರೂ. 16,116 ಕೋಟಿ ಬರಬೇಕಾಗಿತ್ತು ಆದರೆ ಜನವರಿ ಅಂತ್ಯದವರೆಗೆ ನಮಗೆ ಕೇವಲ ರೂ. 10,819 ಕೋಟಿ ಬಂದಿದ್ದು, ಜಿ.ಎಸ್.ಟಿ ಪರಿಹಾರ ಒದಗಿಸಲು ಕೇಂದ್ರದಿಂದ ಸಾಲ ಆಯವ್ಯಯದಲ್ಲಿ ರೂ. 12,407 ಕೋಟಿ ಕೊಟ್ಟಿದ್ದರೆ, ಜನವರಿವರೆಗೂ ಕೇವಲ ರೂ. 9,721 ಕೋಟಿ ಬಂದಿದೆ. ಕೇಂದ್ರದಿಂದ ಒಟ್ಟಾರೆ ನಮಗೆ ರೂ. 72,588 ಕೋಟಿಯನ್ನು ನಿರೀಕ್ಷೆ ಮಾಡಲಾಗಿದ್ದು, ಆದರೆ ಜನವರಿ ಅಂತ್ಯದವರೆಗೆ ಕೇವಲ ರೂ. 47,587 ಕೋಟಿ ಮಾತ್ರ ನಮಗೆ ಬಂದಿದೆ. ಇನ್ನುಳಿದ ಹಣ ಕೇಂದ್ರ ಸರ್ಕಾರದಿಂದ ನಮಗೆ ಕೊಡಬೇಕೆಂದು ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಬಿ.ಜೆ.ಪಿ., ಸರ್ಕಾರದ ಲೋಕಸಭಾ ಸದಸ್ಯರಿದ್ದಾರೆ, ರಾಜ್ಯಸಭೆ ಸದಸ್ಯರಿದ್ದಾರೆ, ರಾಜ್ಯದ ಎಲ್ಲಾ ಶಾಸಕರು, ವಿರೋಧಪಕ್ಷದ ಶಾಸಕರೆಲ್ಲರೂ ನಿಮ್ಮ ಜೊತೆ ಬರುತ್ತೇವೆ, ನಿಮ್ಮ ಜೊತೆ ನಿಲ್ಲುತ್ತೇವೆ. ಆದರೆ ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ನಮಗೆ ಕೊಡಬೇಕಾಗಿರುವ ಹಣವನ್ನು ಧೈರ್ಯದಿಂದ ಕೇಳುವ ಶಕ್ತಿ ನಿಮಗೆ ಇರಬೇಕು. ನಮಗೆ ಬಹಳ ನೋವಾಗುತ್ತದೆ. ಬಿ.ಜೆ.ಪಿ.ಯ 25 ಲೋಕಸಭಾ ಸದಸ್ಯರಿದ್ದಾರೆ, ಸರ್ಕಾರ ಅವರದ್ದೇ ಇದೆ, ಆದರೆ ಕೇಂದ್ರ ಸರ್ಕಾರಕ್ಕೆ ಹೋಗಿ ಧೈರ್ಯದಿಂದ ಕೇಳುವುದಕ್ಕೆ; ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಯವರು ಬಂದಾಗ ಒಂದು ದಿವಸ ಮಾತ್ರ ನಮಗೆ ಕೇಂದ್ರ ಸರ್ಕಾರದಿಂದ ಹಣ ಬರಬೇಕಾಗಿತ್ತು ಎಂದು ಹೇಳಿದರು. ನಾವೆಲ್ಲರೂ ನಿಮ್ಮ ಜೊತೆ ಬರುವುದಕ್ಕೆ ತಯಾರಿದ್ದೇವೆ, ಆದರೆ ನೀವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮನ್ನು ಕರೆದುಕೊಂಡು ಹೋಗುವುದಕ್ಕೆ ತಯಾರಿಲ್ಲ. ಹೋಗಲಿ ನೀವಾದರೂ ತರುತ್ತೀರಾ ಅದನ್ನೂ ಮಾಡುತ್ತಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಕೊಡಬೇಕಾಗಿರುವ ಹಣವನ್ನು ತರುವುದಕ್ಕೆ ನಿಮಗ್ಯಾರಿಗೂ ಧೈರ್ಯವಿಲ್ಲವೇ? ತಮಗೆ ಅಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲವೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಏನು *Karnataka* Fiscal Responsibility *Act* ಪಾಸ್ ಮಾಡಿದ್ದೇವೆ ಅದನ್ನು ಶೇ.2.5ಕ್ಕಿಂತ ಜಾಸ್ತಿ ತೆಗೆದುಕೊಂಡು ಹೋಗಿ ಮುಂದಿನ ದಿನಗಳಲ್ಲಿ ನಾವು ಬಹಳಷ್ಟು ಕಷ್ಟವನ್ನು ಎದುರಿಸಬೇಕಾಗಿದೆಯೆಂದು ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ನಾನು ಬಹಳ ನೋವಿನಿಂದ ಹೇಳಬೇಕಾಗಿದೆ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು 2021–22ರಲ್ಲಿ ಜಿ.ಡಿ.ಪಿ.ಯಲ್ಲಿ ಶೇ.11ರಷ್ಟು ಬೆಳವಣಿಗೆಯಾಗಿದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ರಾಜ್ಯದ ಸ್ವಂತ ತೆರಿಗೆ ಸಂಗ್ರಹ ಗುರಿ 2020–21ರ ಮೂಲ ಬಜೆಟ್‌ಗೆ ಹೋಲಿಸಿದರೆ ಶೇ. 3.2ರಷ್ಟು ಕಡಿಮೆಯಾಗಿದೆ. ಕೇಂದ್ರದ ತೆರಿಗೆ ಪಾಲು 2020–21ರಲ್ಲಿ ರೂ. 28,591 ಕೋಟಿ ನಿರೀಕ್ಷೆ ಮಾಡಲಾಗಿತ್ತು. 2021–22ರಲ್ಲಿ ರೂ. 24,273 ಕೋಟಿಯನ್ನು ನಿರೀಕ್ಷೆ ಮಾಡಲಾಗಿತ್ತು. ರೂ. 4,312 ಕೋಟಿಗಳಷ್ಟು ಕಡಿಮೆಯಾಗಿದೆ. ಅಂದರೆ ಶೇ.15ರಷ್ಟು ನಮಗೆ ಬರಬೇಕಾಗಿರುವ ಹಣ ಕಡಿಮೆಯಾಗಿದೆ. ಜಿ.ಡಿ.ಪಿ. ಶೇ.11ಕ್ಕೂ ಹೆಚ್ಚು ಪ್ರಗತಿಯಾಗುವುದಾದರೆ ನಮಗೆ ನೀಡಬೇಕಾಗಿರುವ ತೆರಿಗೆ ಹಂಚಿಕೆಯು ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗಬೇಕಾಗಿತ್ತು, ಆದರೆ ಅದು ಕಡಿಮೆಯಾಗಿದೆ. ನನ್ನ ಪ್ರಕಾರ ರಾಜ್ಯ ಸರ್ಕಾರವು ರಾಜ್ಯದ ಜನರಿಗೆ ಟೋಪಿ ಹಾಕುವಂತಹ ಕೆಲಸ ಮಾಡುತ್ತಿದೆ ಎಂದು ಭಾವಿಸಿದ್ದೇನೆ.

ಇನ್ನು SCP (Special Component Plan) ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ ಇಲಾಖೆವಾರು ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಿದ್ದಾರೆ ಎಂದು ಅದರ ಅಂಕಿ–ಸಂಖ್ಯೆ ಕೊಡಬಹುದು. ಆದರೆ ಈಗಾಗಲೇ ಸಾಕಷ್ಟು ಅಂಕಿ–ಸಂಖ್ಯೆಯನ್ನು ಕೊಟ್ಟಿರುವುದರಿಂದ ವಸತಿ ಇಲಾಖೆಯಲ್ಲಿ ವೆಚ್ಚ ಮಾಡಿರುವುದು SCP ಅಡಿಯಲ್ಲಿ ಏನು ಅನುದಾನವನ್ನು ಅವರು ಕೊಡಬೇಕಾಗಿತ್ತು, ಜನವರಿವರೆಗೆ ಕೇವಲ ಶೇ.40ರಷ್ಟು ಮಾತ್ರ ವೆಚ್ಚ ಮಾಡಿದ್ದಾರೆ. ಉನ್ನತ ಶಿಕ್ಷಣದಲ್ಲಿ ಶೇ.40ರಷ್ಟು ಮಾತ್ರ, ವೈದ್ಯಕೀಯ ಶಿಕ್ಷಣದಲ್ಲಿ ಕೇವಲ ಶೇ.44ರಷ್ಟು ಮಾತ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಶೇ.44ರಷ್ಟು ಮಾತ್ರ, ಕಾರ್ಮಿಕ ಇಲಾಖೆಯಲ್ಲಿ ಶೇ.50ರಷ್ಟು ಮಾತ್ರ ಮತ್ತು ಸಹಕಾರಿ ಇಲಾಖೆಯಲ್ಲಿ ಶೇ.44ರಷ್ಟು, ಸಾರಿಗೆ ಇಲಾಖೆಯಲ್ಲಿ ಶೇ.41ರಷ್ಟು, ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ಶೇ.43ರಷ್ಟು ಮತ್ತು ಕಂದಾಯ ಇಲಾಖೆಯಲ್ಲಿ ಶೇ.59ರಷ್ಟು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಯಲ್ಲಿ ಶೇ.55ರಷ್ಟು ವಿಶೇಷವಾಗಿ ಹಿಂದುಳಿದ ವರ್ಗದಲ್ಲಿ ತಾವು 2020–21ರ ಪರಿಷ್ಕೃತ ಅಂದಾಜು ರೂ. 73.94 ಕೋಟಿಗಳಿದ್ದರೆ ಬಿಡುಗಡೆಯಾಗಿರುವುದು ಕೇವಲ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂ. 24.09 ಕೋಟಿ. ಅಂದರೆ, ಶೇ.24ರಷ್ಟು ಮಾತ್ರ ಬಿಡುಗಡೆಯಾಗಿದೆ. ಹಿಂದುಳಿದ ವರ್ಗಗಳಿಗೆ ದೊಡ್ಡ ಅನ್ಯಾಯವಾಗಿದೆ. ಅವರು ಹೇಳಿರುವುದರಲ್ಲಿ ಕೇವಲ ಶೇ.24ರಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ. ಕೃಷಿ ಇಲಾಖೆಯಲ್ಲಿ ಶೇ.50ರಷ್ಟು ಆಗಿದೆ, ನಗರಾಭಿವೃದ್ಧಿ ಇಲಾಖೆಯಲ್ಲಿ ಶೇ.45ರಷ್ಟು ಆಗಿದೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಶೇ.29ರಷ್ಟು, ಲೋಕೋಪಯೋಗಿ ಇಲಾಖೆಯಲ್ಲಿ ಶೇ.47ರಷ್ಟು ಆಗಿದೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಶೇ.43ರಷ್ಟು ಆಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಶೇ.47ರಷ್ಟು ಆಗಿದೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಶೇ.44ರಷ್ಟು ಆಗಿದೆ. ವಿಶೇಷವಾಗಿ, ಈ ಸರ್ಕಾರ ರೈತರಿಗೆ ದೊಡ್ಡ ಅನ್ಯಾಯ ಮಾಡಿದೆ ಎಂದು ಹೇಳುತ್ತೇನೆ. ಈ ಸರ್ಕಾರದಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ ಜನವರಿ 2020-21ರವರೆಗೂ ಕೇವಲ ಶೇ. 38.8ರಷ್ಟು ಮಾತ್ರ ಖರ್ಚು ಮಾಡಿದ್ದಾರೆ. ಅದೇ ರೀತಿ ಜಲಸಂಪನ್ಮೂಲ ಇಲಾಖೆಯಲ್ಲಿ ಶೇ.38ರಷ್ಟು, ತೋಟಗಾರಿಕೆ ಇಲಾಖೆಯಲ್ಲಿ ಶೇ.41ರಷ್ಟು, ಮೀನುಗಾರಿಕೆ ಇಲಾಖೆಯಲ್ಲಿ; ಮಾನ್ಯ ಸಭಾನಾಯಕರ ಭಾಗದಲ್ಲಿ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮೀನುಗಾರಿಕೆ ಮಂತ್ರಿಗಳು ಇದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-**ಮಾನ್ಯ ಸಭಾಪತಿಯವರೇ, ನಾನು ಕೂಡ ಮೀನುಗಾರಿಕೆಯಲ್ಲಿದ್ದೇನೆ, ನಮ್ಮ ತಂದೆ ಕೂಡ ಮೀನುಗಾರಿಕೆ ಸಚಿವರಾಗಿದ್ದರು. ಆದರೆ ಮೀನುಗಾರಿಕೆ ಇಲಾಖೆಗೆ ನೀವು ಬಿಡುಗಡೆ ಮಾಡಿರುವುದು ಎಷ್ಟೆಂದರೆ, ಕೇವಲ 18ರಷ್ಟು. ಜನವರಿ 2021ರವರೆಗೆ ತಾವು ಹೇಳಿರುವ ಅಂದಾಜಿನಲ್ಲಿ ಕೇವಲ ಶೇ.18 ರಷ್ಟು ಖರ್ಚು ಮಾಡಿದ್ದೀರಿ. (ಗೊಂದಲ) ಬಿಜಾಪುರದ ಆಲಮಟ್ಟಿ ಕೆರೆಯಲ್ಲಿ ಒಳ್ಳೆಯ ಮೀನು ಸಿಗುತ್ತದೆ ಗೊತ್ತಾ? ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ನಾವೆಲ್ಲರೂ ಕನ್ನಡಾಭಿಮಾನಿಗಳು. ಕನ್ನಡಕ್ಕೆ ಪ್ರಾತಿನಿಧ್ಯ ಕೊಡಬೇಕು. ನಾವು ಕನ್ನಡದಲ್ಲಿ ಮಾತನಾಡಬೇಕು. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ 2020-21ರ ಜನವರಿವರೆಗೂ ಕೇವಲ ಶೇ.4ರಷ್ಟು ಖರ್ಚು ಮಾಡಿದ್ದೀರಿ. ನಾವು ಕನ್ನಡಿಗರಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿದ್ದೇವೆ? ಯಾವ ರೀತಿ ನಮ್ಮ ಕನ್ನಡಿಗರಿಗೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆ? ಇವರು ಹೇಳುವುದೊಂದು, ಮಾಡುವುದು ಮತ್ತೊಂದು ಆಗಿದೆ. ಇವತ್ತು ಬಹಳ ದುಃಖದಿಂದ ಹೇಳಬೇಕಾಗಿದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(592) 23–03–2021/ 04–20/ ಕೆಹೆಚ್–ಜಿಆರ್ (ಎಂಡಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):–**

ತಾವು ಈ ರೀತಿಯಲ್ಲಿ ಏನು ಬಜೆಟ್ ಅನ್ನು ಕೊಟ್ಟಿದ್ದೀರಿ. ಬಜೆಟ್‌ನ ಮಹತ್ವ ಏನಿದೆ, ಆ ಬಜೆಟ್‌ನ ಮಹತ್ವವನ್ನು ಕಳೆಯುತ್ತಿದ್ದೀರಿ. ತಾವು ಹೇಳುತ್ತಿರುವುದೇ ಒಂದು, ಮಾಡುತ್ತಿರುವುದೇ ಒಂದು. ಈ ರೀತಿ ಮಾಡಿ ಸರ್ಕಾರದವರು ನಮ್ಮ ರಾಜ್ಯದ ಜನರನ್ನು ಸಾಕಷ್ಟು ತೊಂದರೆಯಲ್ಲಿ ಸಿಲುಕಿಸುತ್ತಿದ್ದಾರೆ. SCP-TSP (Special Component Plan and Tribal Sub-Plan) ಯ ಬಗ್ಗೆ ಅಂಕಿ–ಅಂಶಗಳು ಇವೆ. ಅದನ್ನೆಲ್ಲಾ ನಾನು ಪರಿಶೀಲನೆ ಮಾಡುವುದಿಲ್ಲ. ಒಟ್ಟಾರೆಯಾಗಿ SCP-TSP ಯಲ್ಲಿ ವೆಚ್ಚ ಕಡಿಮೆ ಮಾಡಿದ್ದಾರೆ. ಅಂದರೆ, SCP-TSP ಯಡಿ ಇಲ್ಲಿಯವರೆಗೂ ಕೊಟ್ಟಿರುವಂತಹ ಅನುದಾನದಲ್ಲಿ ವಸತಿ ಇಲಾಖೆಗೆ ಶೇಕಡಾ 38 ರಷ್ಟು, ಉನ್ನತ ಶಿಕ್ಷಣ ಇಲಾಖೆಗೆ ಶೇಕಡಾ 26 ರಷ್ಟು, ಕಾರ್ಮಿಕ ಇಲಾಖೆಗೆ ಶೇಕಡಾ 50 ರಷ್ಟು, ಸಹಕಾರ ಇಲಾಖೆಗೆ ಶೇಕಡಾ 44 ರಷ್ಟು, ವೈದ್ಯಕೀಯ ಶಿಕ್ಷಣ ಇಲಾಖೆಗೆ ಶೇಕಡಾ 47 ರಷ್ಟು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಶೇಕಡಾ 42 ರಷ್ಟು, ಕೌಶಲ್ಯಾಭಿವೃದ್ಧಿ ಇಲಾಖೆಗೆ ಶೇಕಡಾ 34.94 ರಷ್ಟು, ಮೀನುಗಾರಿಕೆಗೆ ಶೇಕಡಾ 18 ರಷ್ಟು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಶೇಕಡಾ 11 ರಷ್ಟು ಮತ್ತು ಕಂದಾಯ ಇಲಾಖೆಗೆ ಶೇಕಡಾ 2.6 ರಷ್ಟು ವೆಚ್ಚ ಮಾಡಿದ್ದಾರೆ. ಈ ರೀತಿಯಲ್ಲಿ ನಾವು ಹೇಳುತ್ತಾ ಹೋದರೆ ಬಹಳ ಇದೆ. SCP-TSP ಯಲ್ಲಿ ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಖರ್ಚು ಮಾಡಬೇಕಾಗಿತ್ತು. ಅದರಲ್ಲಿ ಶೇಕಡಾ 40 ರಿಂದ 50 ರಷ್ಟು ಸಹ ಖರ್ಚು ಮಾಡಿಲ್ಲ. ಕೆಲವು ಇಲಾಖೆಗಳಲ್ಲಿ ಶೇಕಡಾ 2 ರಿಂದ ಶೇಕಡಾ 11 ರಷ್ಟು ಖರ್ಚು ಮಾಡಿದ್ದಾರೆ. ಇದನ್ನು ನೋಡಿದರೆ ನಮಗೆಲ್ಲಾ ನಾಚಿಕೆಯಾಗುತ್ತದೆ. ಸಾವಿರಾರು ವರ್ಷಗಳಿಂದ ಶೋಷಣೆಯಾಗಿ ಮುಖ್ಯ ವಾಹಿನಿಗೆ ಬರಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದರೆ, ಇವತ್ತು ನಮಗೆ ಬರಬೇಕಾದಂತಹ ಹಣ ಇಲ್ಲಿಯವರೆಗೂ ಬರುತ್ತಿಲ್ಲ. ಇವರು ನಮ್ಮ ಜನಾಂಗಕ್ಕೆ ದೊಡ್ಡ ಅನ್ಯಾಯವನ್ನು ಮಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ.

ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ಮಾತನಾಡಬೇಕಾದರೆ, ಇವರು ನಮ್ಮ ಮೇಲೆ ಎಷ್ಟು ತಾರತಮ್ಯ ಮಾಡುತ್ತಿದ್ದಾರೆ ಎಂದು ಅಂಕಿ–ಅಂಶಗಳನ್ನು ನೋಡಿದರೆ ನಮಗೆ ಗಾಬರಿಯಾಗುತ್ತದೆ. ಕೇಂದ್ರ ಪರಿಷ್ಕೃತ ಯೋಜನೆಯಲ್ಲಿ ಕಾರ್ಯಕ್ರಮಗಳು ಇವೆ. ಅದರಲ್ಲಿ ರಾಜ್ಯದ ಅನುದಾನ 11,978 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಬೇಕಾಗಿದ್ದ 18,091

ಕೋಟಿ ರೂಪಾಯಿಗಳಲ್ಲಿ 13,010 ಕೋಟಿ ರೂಪಾಯಿಗಳಷ್ಟು ಮಾತ್ರ ಬಿಡುಗಡೆ ಮಾಡಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಎರಡು ಅನುದಾನಗಳು ಸೇರಿ ಒಟ್ಟು 24,988.30 ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಆದರೆ, ಇವರು ಬಿಡುಗಡೆ ಮಾಡಿರುವಂತಹ ಹಣ 37,161 ಕೋಟಿ ರೂಪಾಯಿಗಳಷ್ಟು ಇದೆ. ಇಷ್ಟು ಅಂತರ ಇದೆ. ಒಟ್ಟು ಅನುದಾನದ ವೆಚ್ಚ 5090.02 ಕೋಟಿ ರೂಪಾಯಿಗಳು ಮಾತ್ರ ಜನವರಿವರೆಗೂ ಬಿಡುಗಡೆ ಮಾಡಿದ್ದಾರೆ. ಈ ಯೋಜನೆಯಲ್ಲಿ ಪ್ರಧಾನ ಮಂತ್ರಿಯವರಾದ ಮಾನ್ಯ ನರೇಂದ್ರ ಮೋದಿಯವರು 'ಬೇಟಿ ಬಚಾವೋ, ಬೇಟಿ ಪಡಾವೋ' ಎಂದು ಘೋಷಣೆ ಮಾಡಿ ವಿಶ್ವವ್ಯಾಪ್ಯಂತ ಪ್ರಚಾರವನ್ನು ತೆಗೆದುಕೊಂಡರು. ಆದರೆ ಈ ಯೋಜನೆಯಲ್ಲಿ ಕೇಂದ್ರ ಸರ್ಕಾರ ಒಂದು ನಯಾಪೈಸೆ ಕೂಡ ನೀಡಿಲ್ಲ. ಈ ಕಾರ್ಯಕ್ರಮ ಬಿ.ಜೆ.ಪಿ.,ಯವರ ಒಂದು ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು, ಪ್ರಧಾನ ಮಂತ್ರಿಯವರಾದ ಮಾನ್ಯ ನರೇಂದ್ರ ಮೋದಿಯವರು ಅಷ್ಟೊಂದು ಪ್ರಚಾರ ಮಾಡಿದಂತಹ ಕಾರ್ಯಕ್ರಮ. ಕರ್ನಾಟಕಕ್ಕೆ ಮಲತಾಯಿ ಧೋರಣೆ ಎಷ್ಟು ಮಾಡಿದ್ದಾರೆ ಎಂದರೆ, ಒಂದು ಪೈಸೆ ಕೂಡ ಬಿಡುಗಡೆ ಮಾಡಿಲ್ಲ. ನಮ್ಮ ಜನಾಂಗಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಕೇಂದ್ರ ಸರ್ಕಾರದ ಯೋಜನೆಯನ್ನು ವಿಮರ್ಶೆ ಮಾಡುತ್ತಿದ್ದಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾನಾಯಕರೇ, ಇದು ನಮಗೆ ಬರಬೇಕಾಗಿರುವುದಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ನಾನು ಹೇಳುವುದನ್ನು ಕೇಳಿ. ಯಾವುದೇ ಕೇಂದ್ರ ಸರ್ಕಾರದ ಯೋಜನೆಗಳಿಂದ ಕಾಲಕಾಲಕ್ಕೆ ನಮಗೆ ಅನುದಾನ ಬಿಡುಗಡೆ ಮಾಡಿದೆ. ಅದರ ಖರ್ಚಿನ ಆಧಾರದ ಮೇಲೆ ಮತ್ತೆ ಅನುದಾನ ಬಿಡುಗಡೆ ಮಾಡುತ್ತಾರೆ. ಅದರಲ್ಲಿ ಒಂದು ಪೈಸೆ ಎಂದು ತೆಗೆದಿಡುವುದಿಲ್ಲ. 'ಕಿಸಾನ್ ಸಮ್ಮಾನ್' ಯೋಜನೆಯಲ್ಲಿ ಕೇಂದ್ರ ಸರ್ಕಾರ ರೈತರ ಖಾತೆಗೆ 6 ಸಾವಿರ ರೂಪಾಯಿಗಳನ್ನು ಹಾಕುತ್ತದೆ. ಹಾಗೆಯೇ, ರಾಜ್ಯ ಸರ್ಕಾರ 4 ಸಾವಿರ ರೂಪಾಯಿಗಳನ್ನು ಹಾಕುತ್ತದೆ. ಇದು ಸರಿಯಾದ ಕ್ರಮವಾಗಿದ್ದು, ಇದರ ಪ್ರಕಾರ ಕೇಂದ್ರ ಸರ್ಕಾರದಿಂದ ಪ್ರತಿ ಮೂರು ತಿಂಗಳಿಗೊಮ್ಮೆ ನೇರವಾಗಿ ರೈತರ ಖಾತೆಗೆ ಬರುವಂತಹ ಹಣವಾಗಿದೆ. ಹಾಗೆಯೇ, ಒಂದೊಂದು ಯೋಜನೆಗೆ ಎಂದು ಏನು ಇಲ್ಲ. ಆರ್ಥಿಕ ಇಲಾಖೆಯ ಖರ್ಚು-ವೆಚ್ಚಗಳನ್ನು ಸರಿದೂಗಿಸಿ ನಾವು ಕೊಟ್ಟಾಗ ಬಿಡುಗಡೆಯಾಗುವಂತಹ ಒಂದು ಕ್ರಮ ಇದೆ. ಮೊದಲು ತಮ್ಮಲ್ಲೂ ಕೂಡ ಕೇಂದ್ರ ಸರ್ಕಾರ ಅಧಿಕಾರದಲ್ಲಿ

ಇತ್ತು. ರಾಜ್ಯ ಸರ್ಕಾರದಲ್ಲಿ ತಮ್ಮದೇ ಪಕ್ಷ ಇತ್ತು. ಆಗ ನಾವು ಕೂಡ ಈ ರೀತಿ ಹೇಳಿದಾಗ ಇವರು ಇದೇ ರೀತಿಯ ಉತ್ತರವನ್ನು ಕೊಡುತ್ತಿದ್ದರು. ವಿರೋಧ ಪಕ್ಷದವರ ನೆನೆಪಿಗೋಸ್ಕರ ನಾನು ಈ ಮಾತನ್ನು ಹೇಳಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ನೇರವಾಗಿ ಖಾತೆಗೆ ಬರುತ್ತದೆ. ನೇರವಾಗಿ ಹೋಗುತ್ತದೆ ಎಂದು ಹೇಳಿದರು. ನಾನು ಅದರ ಬಗ್ಗೆ ಹೇಳುತ್ತಿಲ್ಲ. 'ಬೇಟಿ ಬಚಾವೋ, ಬೇಟಿ ಪಡಾವೋ' ಎಂದರೆ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡುವುದು ಮತ್ತು ಓದುವುದಕ್ಕೆ ಅನುಕೂಲ ಮಾಡಿಕೊಡುವುದು. ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಖಾಂತರ 953 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, you have presented a child budget, 37 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಅದರಲ್ಲಿ 4 ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ 2800 ಕೋಟಿ ರೂಪಾಯಿಗಳು salaryಗೆ ಹೋಗುತ್ತದೆ. 1200 ಕೋಟಿ ರೂಪಾಯಿಗಳು ಅಂಗನವಾಡಿ ಕಾರ್ಯಕರ್ತೆಯರಿಗೆ ಹೋಗುತ್ತದೆ. ತಮ್ಮ ಹತ್ತಿರ ಮಾಹಿತಿ ಇದ್ದರೆ ನಂತರ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾವುದೇ ಇಲಾಖೆಗಳಿಗಾಗಲಿ 8 ಸಾವಿರ, 10 ಸಾವಿರ, 12 ಸಾವಿರದಲ್ಲಿ 1.50 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ಇರುತ್ತದೆಯಲ್ಲವೇ, ಅದರಲ್ಲಿ ಶೇಕಡಾ 50 ರಷ್ಟು ಸಿಬ್ಬಂದಿಗಳ ವೆಚ್ಚಕ್ಕೆ ಹೋಗುತ್ತದೆ. ಯಾವುದೇ ಸರ್ಕಾರ ಬಂದಾಗಲೂ ಕೂಡ ಈ ರೀತಿ ಆಗುತ್ತದೆ. 'ತಮ್ಮ ಸರ್ಕಾರ ಇದ್ದಾಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಎಷ್ಟು ಯೋಜನೆಗಳು ಇದ್ದವು, ಆ ಯೋಜನೆಗಳನ್ನು ಹೆಚ್ಚು ಮಾಡಿರುವುದಿಲ್ಲ. ಎಲ್ಲೋ 'ಭಾಗ್ಯಲಕ್ಷ್ಮಿ ಯೋಜನೆ'ಯಂತಹ ಒಂದು-ಎರಡು ಹೊಸ ಯೋಜನೆಗಳಾಗಿರಬಹುದು. ಅದು ಬಿಟ್ಟರೆ ತಾವೇ ಮಾಡಿರುವಂತಹ'... ಎಂದರೆ, ಅದು ವ್ಯಕ್ತಿಯಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕೂಡ ಇಂತಹ ಯೋಜನೆಗಳು ಇದ್ದವು. ಸಾಮಾನ್ಯ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವುದಕ್ಕೆ ಯೋಜನೆಯನ್ನು ಮಾಡುತ್ತಾರೆ. ಆದರೆ ಹಣಕಾಸಿನ ಕೊರತೆಯಿಂದ ಈ ಯೋಜನೆಯ ಅನುಷ್ಠಾನದಲ್ಲಿ ಕುಂಠಿತವಾಗುತ್ತದೆ. ಈಗ ಮಾನ್ಯ ಸದಸ್ಯರು ಮಾತನಾಡಲಿ, ನಾನು ಮಧ್ಯಪ್ರವೇಶ ಮಾಡುವುದಿಲ್ಲ. ನಾನು ಅವರ ನೆನಪಿಗೋಸ್ಕರ ಹೇಳಿದೆ ಅಷ್ಟೇ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಖಾಂತರ 953 ಕಾರ್ಯಕ್ರಮಗಳನ್ನು ಕೊಟ್ಟು, ಅದರಲ್ಲಿ

10-20 ಕಾರ್ಯಕ್ರಮಗಳು, 100 ಕಾರ್ಯಕ್ರಮಗಳು ಅನುಷ್ಠಾನವಾಗಲಿಲ್ಲವೆಂದರೆ ಸರಿ. ಇವರು ಏನು ಮಾಡಿಲ್ಲ. ಈಗ ನಾವೆಲ್ಲಾ ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ. ನಮಗೆ ಕೇಂದ್ರ ಸರ್ಕಾರದಿಂದ ಹಣ ಬರಬೇಕು. ನಮಗೆ ಬರಬೇಕಾಗಿರುವುದರ ಬಗ್ಗೆ ಪ್ರಚಾರ ತೆಗೆದುಕೊಂಡಿದ್ದಾರೆ. 'ಬೇಟಿ ಬಚಾವೋ, ಬೇಟಿ ಪಡಾವೋ' ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಒಂದು ಪೈಸೆ ಕೊಟ್ಟಿಲ್ಲ. ಇದರಲ್ಲಿ ಮಲತಾಯಿ ಧೋರಣೆ ಆಗಿಲ್ಲವೇ? ನಮ್ಮ ರಾಜ್ಯಕ್ಕೆ ಅನ್ಯಾಯವಾಗಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ನಾವು ಉತ್ತರವನ್ನು ಕೊಡುವಾಗ ಇದರ ಬಗ್ಗೆ ಮಾಹಿತಿಯನ್ನು ಕೊಟ್ಟು ಹೇಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಗ ತಾವು ಹೇಳಿ. ಇದರ ಬಗ್ಗೆ ಈಗ ಏಕೆ ಹೇಳುತ್ತೀರಿ?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾನಾಯಕರೇ, ಈಗ ವಿವರಗಳನ್ನು ಕೊಡಿ. ನಾನು ಕೊಟ್ಟಿರುವಂತಹ ಮಾಹಿತಿಯಲ್ಲಿ ಏನಾದರೂ ತಪ್ಪಿದ್ದರೆ, ಅದರ ಬಗ್ಗೆ ಕೇಳುವ ಪೂರ್ಣ ಹಕ್ಕು ತಮಗೆ ಇದೆ. ತಾವು ಕೊಟ್ಟಿದ್ದೀರಿ ಎಂದರೆ, ಅದಕ್ಕೆ ನಾನು ತಲೆಬಾಗುತ್ತೇನೆ. ಆದರೆ, ತಾವು ಕೊಟ್ಟಿಲ್ಲ ಎನ್ನುವುದು ನನಗೆ ಖಚಿತವಾಗಿ ಗೊತ್ತಿದೆ. ಏಕೆಂದರೆ, ಇದು ತಮ್ಮ ಇಲಾಖೆಯಿಂದಲೇ ತೆಗೆದುಕೊಂಡಿರುವಂತಹ ಮಾಹಿತಿ ಆಗಿದೆ. ನಾನು ಈ ಮಾಹಿತಿಯನ್ನು ಹೊರಗಡೆಯಿಂದ ತೆಗೆದುಕೊಂಡಿಲ್ಲ; ತಮ್ಮ ಇಲಾಖೆಗಳಿಂದಲೇ ತೆಗೆದುಕೊಂಡಿರುವ ಕಾರ್ಯಕ್ರಮಗಳಾಗಿವೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಈ ಕಡೆ ನೋಡಿ ಮಾತನಾಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, 'ಸ್ವಚ್ಛ ಭಾರತ್ ಅಭಿಯಾನ' ಯೋಜನೆಯ ಮುಖಾಂತರ ನಗರಾಭಿವೃದ್ಧಿ ಇಲಾಖೆಗೆ 120 ಕೋಟಿ ರೂಪಾಯಿಗಳನ್ನು ನೀಡುತ್ತೇವೆ ಎಂದು ಹೇಳಿದರು. ಇಲ್ಲಿಯವರೆಗೂ 'ಸ್ವಚ್ಛ ಭಾರತ್ ಅಭಿಯಾನ' ಯೋಜನೆಗೆ ಒಂದು ನಯಾಪೈಸೆ ನೀಡಿಲ್ಲ ಎನ್ನುವಂತಹದ್ದು ನನ್ನ ಹತ್ತಿರ ಇರುವಂತಹ ಮಾಹಿತಿಯಾಗಿದೆ. ಉನ್ನತ ಶಿಕ್ಷಣ ಇಲಾಖೆಗೆ RUSA (*Rashtriya Uchchatar Shiksha Abhiyan*) ಯೋಜನೆಗೆ 50 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ, ಇವರು ನೀಡಿರುವುದು ಮಾತ್ರ 'ಸೊನ್ನೆ'. ರಾಷ್ಟ್ರೀಯ ಆಯುಷ್ ಯೋಜನೆ ಅಭಿಯಾನಕ್ಕೆ 36.41 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ, ಇವರು ಕೇವಲ 9 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. 'ಪ್ರಧಾನ ಮಂತ್ರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆವಾಸ್' ಯೋಜನೆಯಡಿ ಮನೆ ನಿರ್ಮಿಸಲು ಕೇಂದ್ರ ಸರ್ಕಾರದವರು 515 ಕೋಟಿ ರೂಪಾಯಿಗಳನ್ನು ನೀಡುತ್ತೇವೆ ಎಂದು ಹೇಳಿದರು. ಆದರೆ, ಕೇವಲ 13.49 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ನಾವು ಎಲ್ಲರಿಗೂ ಮನೆ ಕೊಡುತ್ತೇವೆ ಎಂದು ಪ್ರಚಾರ ತೆಗೆದುಕೊಂಡರು. ಕೇವಲ 13.49 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. 'ಪ್ರಧಾನ ಮಂತ್ರಿ ಗ್ರಾಮೀಣ ಅವಾಸ್' ಯೋಜನೆಯಡಿ 300 ಕೋಟಿ ರೂಪಾಯಿಗಳನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ, ಇವರು ಒಂದು ಪೈಸೆ ಕೂಡ ನೀಡಿಲ್ಲ. ಪರಿಶಿಷ್ಟ ಪಂಗಡ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವೇತನ 18.01 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಇಲ್ಲಿಯವರೆಗೂ ಒಂದು ನಯಾಪೈಸೆ ಕೂಡ ಬಂದಿಲ್ಲ. ಇದು ಇವರು ಪರಿಶಿಷ್ಟ ಪಂಗಡಕ್ಕೆ ಮಾಡುತ್ತಿರುವಂತಹ ಘೋರ ಅನ್ಯಾಯ ಎಂದು ನಾನು ಭಾವಿಸುತ್ತೇನೆ. ನಾನು ಮೊದಲಿನಿಂದಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವರ್ಗಕ್ಕೆ ಈ ಸರ್ಕಾರದಿಂದ ಸಾಕಷ್ಟು ಅನ್ಯಾಯವಾಗಿದೆ ಎಂದು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇನ್ನೂ ಸಾಕಷ್ಟು ವಿಚಾರಗಳ ಬಗ್ಗೆ ಹೇಳಬೇಕಾಗಿದೆ.

ಕರೋನಾ ನಿಯಂತ್ರಣಕ್ಕೆ 5700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಆಯವ್ಯಯದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ನನ್ನ ಹತ್ತಿರ ಇರುವ ಮಾಹಿತಿ ಮತ್ತು ತಮ್ಮ ಇಲಾಖೆಯಲ್ಲಿರುವಂತಹ ಮಾಹಿತಿಯ ಪ್ರಕಾರ ನಮ್ಮ ರಾಜ್ಯ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 1942 ಕೋಟಿ ರೂಪಾಯಿಗಳು, ವೈದ್ಯಕೀಯ ಶಿಕ್ಷಣ ಇಲಾಖೆಗೆ 293 ಕೋಟಿ ರೂಪಾಯಿಗಳು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ 787 ಕೋಟಿ ರೂಪಾಯಿಗಳು, ಕೃಷಿ ಇಲಾಖೆಗೆ 500 ಕೋಟಿ ರೂಪಾಯಿಗಳು, ತೋಟಗಾರಿಕೆ ಇಲಾಖೆಗೆ 126 ಕೋಟಿ ರೂಪಾಯಿಗಳು, ರೇಷ್ಮೆ ಇಲಾಖೆಗೆ 65 ಕೋಟಿ ರೂಪಾಯಿಗಳು, ಕಾರ್ಮಿಕ ಇಲಾಖೆಗೆ 70 ಕೋಟಿ ರೂಪಾಯಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ 174 ಕೋಟಿ ರೂಪಾಯಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆಗೆ 144 ಕೋಟಿ ರೂಪಾಯಿಗಳು, ಸಾರಿಗೆ ಇಲಾಖೆಗೆ 175 ಕೋಟಿ ರೂಪಾಯಿಗಳು, ಕಾರಾಗೃಹ ಇಲಾಖೆಗೆ 9 ಕೋಟಿ ರೂಪಾಯಿಗಳು, ಅರಣ್ಯ ಇಲಾಖೆಗೆ 35 ಕೋಟಿ ರೂಪಾಯಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 7 ಕೋಟಿ ರೂಪಾಯಿಗಳು. ನಮ್ಮ ಮಾಹಿತಿಯ ಪ್ರಕಾರ ಕೇವಲ 4330 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರು ಬಜೆಟ್‌ನಲ್ಲಿ ಸುಳ್ಳು ಹೇಳುತ್ತಿದ್ದಾರೆ ಮತ್ತು ಬಜೆಟ್‌ನಲ್ಲಿ ತಪ್ಪು ಅಂಕಿಗಳನ್ನು ಕೊಡುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. 4330 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ನಾವು 5700 ಕೋಟಿ ರೂಪಾಯಿಗಳಷ್ಟು ಖರ್ಚು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಪ್ರತಿಕ್ರಿಯೆ ನಂತರ ಕೊಡಬಹುದೆಂದು ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

**(ಮುಂದು)**

**(593) 23/03/2021/ಎಸ್‌ಪಿಆರ್/ಎಂಡಿ/4:30**

**(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಶ್ರೀ ಕೆ.ಸಿ.ಕೊಂಡಯ್ಯರವರು ಸಭಾ ಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ.ರಾಥೋಡ್(ಮುಂದು):-**

ಕರೋನಾ ನಿಯಂತ್ರಣ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ಸಹಾಯದ ಬಗ್ಗೆ ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತದೆ. ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ಕೋವಿಡ್ ಸೋಂಕು ತಡೆಯಲು ಕೇವಲ 791 ಕೋಟಿ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ'ಯಡಿ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯ ಫಲಾನುಭವಿಗಳಿಗೆ ಎರಡು ತಿಂಗಳಿನ ಎಕ್ಸ್‌ಗ್ರೇಷಿಯಾ ಮೊತ್ತದಲ್ಲಿ ಪ್ರತಿ ಫಲಾನುಭವಿಗಳಿಗೆ ಒಂದು ಸಾವಿರದಂತೆ ಒಟ್ಟು 139.84 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದೆ. ಅಂತರ ರಾಜ್ಯ ಆಹಾರ ಸಾಮಗ್ರಿಗಳ ಪೂರೈಕೆಗೆ 61.9 ಕೋಟಿ ರೂಪಾಯಿಗಳ ಅನುದಾನ ನೀಡಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೋವಿಡ್ ನಿಯಂತ್ರಿಸಲು ಆಶಾ ಕಾರ್ಯಕರ್ತರುಗಳಿಗೆ ಸಹಾಯಧನ ಒದಗಿಸಲು, ಟೆಸ್ಟ್ ಕಿಟ್ ಮತ್ತಿತರೆ ಉಪಕರಣಗಳ ಖರೀದಿ ಮತ್ತು ಇತರೆ ವೆಚ್ಚಗಳಿಗಾಗಿ 'ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆ'ಯಡಿ 313 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಎಕ್ಸ್‌ಗ್ರೇಷಿಯಾದ ಒಟ್ಟು ಮೊತ್ತ ಸೇರಿ ಒಟ್ಟಾರೆಯಾಗಿ ಕೇವಲ 514.67 ಕೋಟಿ ರೂಪಾಯಿಗಳನ್ನು ಮಾತ್ರವೇ ಸರ್ಕಾರವು ಬಿಡುಗಡೆ ಮಾಡಿದೆ. ಕೋವಿಡ್‌ನ ಸಂದರ್ಭದಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಕೇವಲ 514 ಕೋಟಿ ರೂಪಾಯಿಗಳು ಮಾತ್ರವೇ ಬಿಡುಗಡೆಯಾಗಿದೆ.

ನಮ್ಮ ರಾಜ್ಯದಿಂದ PM CARES (Prime Minister's Citizen Assistance and Relief in Emergency Situations) ನಿಧಿಗೆ ಎಷ್ಟು ಹಣ ಹೋಯಿತು ಎನ್ನುವ ಮಾಹಿತಿಯು ನನಗೆ ಲಭ್ಯವಾಗಿಲ್ಲ. PM CARES ನಿಧಿಯಿಂದ ಕೇಂದ್ರ ಸರ್ಕಾರವು ನೀಡುವ ಹಣ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು ಇದೆ ಎಂಬ ಬಗ್ಗೆಯೂ ಸಹ ಆರ್ಥಿಕ ಇಲಾಖೆಯಲ್ಲಿ ಮಾಹಿತಿಯು ಲಭ್ಯವಿಲ್ಲ. ಕೇಂದ್ರ ಸರ್ಕಾರವು ಘೋಷಿಸಿದ 'ಆತ್ಮ ನಿರ್ಭರ' ಯೋಜನೆಯು ಎಲ್ಲಿ ಹೋಯಿತು? ಪ್ರಸಕ್ತ ಸಾಲಿನ ಆಯವ್ಯಯ ಪುಸ್ತಕದ ಮೊದಲನೆ ಪುಟದಲ್ಲಿ *"The announcement of 'Atma Nirbhar Bharat Abhiyan' by Prime Minister Narendra Modiji has come handy in fighting this invisible enemy."* ಎಂದು ಹೇಳಲಾಗಿದೆ. ಆದರೆ ಇಲ್ಲಿ ಕೇವಲ 514 ಕೋಟಿ ರೂಪಾಯಿಗಳನ್ನು ಮಾತ್ರವೇ ನೀಡುವುದರ ಮೂಲಕ ಇದರಲ್ಲಿ ತಾರತಮ್ಯ ಮಾಡಲಾಗಿದೆ. ನಮ್ಮ ರಾಜ್ಯ ಸರ್ಕಾರದಿಂದ 4,330 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ನೀಡಿದ್ದೇವೆ. ಆದರೆ ಕೇಂದ್ರ ಸರ್ಕಾರವು ಕೇವಲ 514 ಕೋಟಿ ರೂಪಾಯಿಗಳನ್ನು ಮಾತ್ರವೇ ನಮಗೆ ಕೊಟ್ಟಿದೆ. ನಮ್ಮ ರಾಜ್ಯಕ್ಕೆ 'ಆತ್ಮ ನಿರ್ಭರ' ಯೋಜನೆಯ ಹಣ ಇನ್ನೊಂದು ಸುಳ್ಳು ಆಗಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು 'it has come in handy' ಎಂದು ಹೇಳಿದ್ದಾರೆ. Where has it come in handy? ಇದನ್ನು ಹೇಳುವುದಕ್ಕೆ ನನಗೆ ಬಹಳಷ್ಟು ನೋವಾಗುತ್ತದೆ. ನಾನು ನನ್ನ ಬಳಿ ಲಭ್ಯವಿರುವ ಸಾಕಷ್ಟು ಮಾಹಿತಿಯನ್ನು ಹೇಳಿದ್ದೇನೆ. ಪ್ರಸಕ್ತ ಸಾಲಿನಲ್ಲಿ ಮಂಡಿಸಿರುವ ಆಯವ್ಯಯದ ಬಗ್ಗೆ ನಾನು ಇಲ್ಲಿಯವರೆಗೆ ಮಾತನಾಡಿದ್ದೇನೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ 8 ಆಯವ್ಯಯಗಳನ್ನು ಮಂಡಿಸುವ ಸಮಯದಲ್ಲಿ ಇಷ್ಟೊಂದು ಸುಳ್ಳಿನ ಕಂತೆಗಳನ್ನು ಹೇಳಿದ್ದಾರೆಂದು ನಾನು ವಿವರವಾಗಿ ಇಲ್ಲಿ ಹೇಳಿದ್ದೇನೆ.

ಮತ್ತೊಂದು ವಿಚಾರದ ಬಗ್ಗೆ ನಾನು ಹೇಳುವುದೇನೆಂದರೆ, ವಿಶೇಷವಾಗಿ ನಾನೊಬ್ಬ ಕೀಡ್ರಾಪಟುವಾಗಿದ್ದೇನೆ. ಸರ್ಕಾರವು ಕ್ರೀಡೆಗೆ ಪ್ರೋತ್ಸಾಹ ನೀಡಬೇಕು. ಕ್ರೀಡೆಗೆ ಮತ್ತು ಯುವಕರಿಗಾಗಿ ಸಾಕಷ್ಟು ಯೋಜನೆಗಳು ಬರಬೇಕು. ಹಿಂದಿನ ಸಾಲಿನ ಆಯವ್ಯಯದಲ್ಲಿ ಕ್ರೀಡೆಗಾಗಿ 200 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು ಆದರೆ, ಪ್ರಸಕ್ತ ಸಾಲಿಗೆ ಮಂಡಿಸಿರುವ ಆಯವ್ಯಯದಲ್ಲಿ ಹಿಂದೆ ನೀಡಿದ್ದಕ್ಕಿಂತ 50 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಲಾಗಿದೆ. ಇದನ್ನು ನೋಡಿದರೆ, ಪ್ರಾಯಶಃ ಕ್ರೀಡಾಪಟುಗಳಿಗೆ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿಲ್ಲವೆಂದು ನಾನು ಹೇಳುತ್ತೇನೆ. ರಾಜ್ಯದ ಯುವಕರಿಗೆ ಕ್ರೀಡೆಯಲ್ಲಿ ಕೊಡಬೇಕಾದ ಪ್ರೋತ್ಸಾಹವನ್ನು ಸರ್ಕಾರವು ನೀಡಿಲ್ಲ. ಇವತ್ತಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಮಕ್ಕಳು ಕಂಪ್ಯೂಟರ್ ಮತ್ತು ಮೊಬೈಲ್‌ನಲ್ಲಿ ಸಾಕಷ್ಟು ಸಮಯವನ್ನು ಕಳೆಯುತ್ತಿದ್ದಾರೆ. ಹೀಗಾಗಿ ಮಕ್ಕಳು ಸ್ವಸ್ಥ ಮತ್ತು ಆರೋಗ್ಯಕರವಾಗಿರಬೇಕೆಂದರೆ, ನಾವು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು. ಆದರೆ ಆ ರೀತಿಯಾಗಿ ಮಾಡಿಲ್ಲವೆಂದು ನಾನು ಬಹಳ ನೋವಿನಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿದ್ದೇನೆ. ಸರ್ಕಾರದ ಯಾವುದೇ ಯೋಜನೆಯಲ್ಲಿ ಯುವಕರಿಗೆ ಮತ್ತು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಮ್ಮ ರಾಷ್ಟ್ರದ ಮತ್ತೊಂದು ಪ್ರಮುಖ ಕ್ರೀಡೆ – ಕಬ್ಬಡ್ಡಿ. ಕಬ್ಬಡ್ಡಿ ಕ್ರೀಡೆಗೂ ಸಹ ಯಾವುದೇ ರೀತಿಯ ಪ್ರೋತ್ಸಾಹವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನೀಡಿರುವುದಿಲ್ಲ. ನಮ್ಮ ರಾಜ್ಯದ ವಿಜಯಪುರ ಜಿಲ್ಲೆಯಲ್ಲಿ ಅಂತರಾಷ್ಟ್ರೀಯ ಮಟ್ಟದ ಪ್ರತಿಭಾವಂತ ಸೈಕ್ಲಿಂಗ್ ಕ್ರೀಡಾಪಟುಗಳಿದ್ದಾರೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಇವರಿಗೂ ಸಹ ಯಾವುದಾದರೂ ಯೋಜನೆಗಳನ್ನು ಸರ್ಕಾರವು ನೀಡಬೇಕಾಗಿತ್ತು. ವಿಜಯಪುರ ಜಿಲ್ಲೆಯಲ್ಲಿ Velodrome Project for Cyclist ಮಾಡುತ್ತಿದ್ದು, ಇದುವರೆವಿಗೂ ಸಹ ಇದರ ನಿರ್ಮಾಣ ಪೂರ್ಣಗೊಳಿಸಿರುವುದಿಲ್ಲ. ಹೀಗಾಗಿ ಅದರ ನಿರ್ಮಾಣಕ್ಕೆ ನಾವು ನಮ್ಮ ಕ್ಷೇತ್ರಾಭಿವೃದ್ಧಿ ನಿಧಿಗಳಿಂದ ಹಣ ನೀಡುತ್ತಿದ್ದೇವೆ. ಆದರೂ ಸಹ ಇಂದಿನವರೆಗೆ ಅದನ್ನು ಪೂರ್ಣಗೊಳಿಸಿರುವುದಿಲ್ಲ. ರಾಜ್ಯದ ಮುಖ್ಯಮಂತ್ರಿಗಳು ಕ್ರೀಡಾ ವಿಚಾರದಲ್ಲಿ ಬಹಳಷ್ಟು ತಾರತಮ್ಯವನ್ನು ಮಾಡಿದ್ದಾರೆ. ಕ್ರೀಡೆಗೆ ಬಹಳಷ್ಟು ಅವಕಾಶಗಳನ್ನು ನೀಡುತ್ತಿಲ್ಲವೆಂದು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಚಾರದ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. 'ಮಕ್ಕಳಿಗಾಗಿ ಮಕ್ಕಳ ಆಯವ್ಯಯವನ್ನು ನೀಡಿದ್ದೇವೆ' ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಹಿಂದಿನ ಸಾಲಿನಲ್ಲಿ ಮಂಡಿಸಿದ ಆಯವ್ಯಯವು 'ಮಕ್ಕಳ ಆಯವ್ಯಯ'ವಾಗಿತ್ತು. ಮಹಿಳೆ ಮತ್ತು ಮಕ್ಕಳಿಗಾಗಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವುದೇ ಯೋಜನೆಗಳನ್ನು ಸರ್ಕಾರವು ಘೋಷಿಸಿಲ್ಲ. ಆದರೆ, ಕೇವಲ ಸಿ.ಸಿ.ಟಿವಿ ಕ್ಯಾಮೆರಾಗಳಿಗೆ ಮಾತ್ರವೇ ಹಣವನ್ನು ಮೀಸಲಿಟ್ಟಿರುವುದಾಗಿ ತಿಳಿಸಲಾಗಿದೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಜಾಗ್ರತೆಯನ್ನು ಮೂಡಿಸಬೇಕಾಗಿತ್ತು. ಇದಕ್ಕೆ ಸಂಬಂಧಿತ ಯೋಜನೆಗಳನ್ನು ಘೋಷಿಸಿದ್ದರೆ ಬಹುಶಃ ನಾವೆಲ್ಲರೂ ಬಹಳ ಸಂತೋಷದಿಂದ ರಾಜ್ಯದ ಮಹಿಳೆಯರಿಗೆ ಗೌರವ ಸೂಚಿಸಿದಂತಾಗುತ್ತಿತ್ತು. ಹಿಂದಿನ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಮಕ್ಕಳಿಗಾಗಿ 'ಮಕ್ಕಳ ಆಯವ್ಯಯ'ವನ್ನು ಮಂಡಿಸಿದ್ದಾರೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿನ ಬಹುತೇಕ ಮಹಿಳೆಯು 'ಅನಿಮಿಕ್' ಆಗಿದ್ದಾರೆ. ಅಂದರೆ ಅವರಿಗೆ ರಕ್ತದ ಕೊರತೆಯುಂಟಾಗಿದೆ. ಈ ಕಾರಣಕ್ಕಾಗಿ ಮಹಿಳೆಯರಿಗೆ ಪೌಷ್ಟಿಕತೆಯ ಆಹಾರವನ್ನು ನೀಡುವುದರ ಮೂಲಕ ಅವರಿಗೆ ಅನುಕೂಲ ಮಾಡುವ ಅವಕಾಶಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಮಾಡಬೇಕಾಗಿತ್ತು. ಆದರೆ ಸರ್ಕಾರವು ಕೇವಲ ಅಂಗನವಾಡಿ ಮಹಿಳೆಯರಿಗೆ ಮಾತ್ರವೇ ಪ್ರಸಕ್ತ ಸಾಲಿನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಯವ್ಯಯದಲ್ಲಿ ಅನುಕೂಲ ಮಾಡಿಕೊಟ್ಟಿದೆ. ಅಂಗನವಾಡಿಯಲ್ಲಿನ ಮಕ್ಕಳಿಗಾಗಿ crechesಗಳನ್ನು ಮಾಡುವುದರ ಮೂಲಕ ಅವರಿಗಾಗಿ ಸಾಕಷ್ಟು ಹಣವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರವು ಹೇಳಿದೆ. ಆದರೆ, ಕೇವಲ ಅಂಗನವಾಡಿ ಮಹಿಳೆಯರಿಗೆ ಮಾತ್ರವೇ ಯೋಜನೆಗಳನ್ನು ಮಾಡಿದರೆ ಸಾಲದು, ಗೃಹಸ್ಥ ಮಹಿಳೆಯರಿಗೂ ಸಹ ರಾಜ್ಯ ಸರ್ಕಾರವು ಯೋಜನೆಗಳನ್ನು ರೂಪಿಸಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ನೌಕರಿ ಮಾಡುವ ಮಹಿಳೆಯರೂ ಸಹ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರ ಆರೋಗ್ಯ ಮತ್ತು ಶಿಕ್ಷಣದ ವಿಷಯದಲ್ಲಿ ಸರ್ಕಾರವು ವಿಶೇಷವಾದ ಯೋಜನೆಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂಪಿಸಬೇಕಾಗಿತ್ತು. ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆಯನ್ನು ಮಾಡುವ ಪರಿಸ್ಥಿತಿಯು ನಮ್ಮ ರಾಜ್ಯದಲ್ಲಿದೆ. ಇದನ್ನು ನಿವಾರಣೆ ಮಾಡಲು ಸರ್ಕಾರವು ಯಾವುದಾದರೂ ಯೋಜನೆಯನ್ನು ಪ್ರಸಕ್ತ ವರ್ಷದಲ್ಲಿ ರೂಪಿಸಬೇಕಾಗಿತ್ತು. ಶೇಕಡಾ ನೂರಕ್ಕೆ ಎಷ್ಟು ಪ್ರತಿಶತ ಮಹಿಳೆಯರು ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ? ಅವರಿಗೆ ಉಚಿತ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಉಚಿತ ಹಾಸ್ಟೆಲ್‌ನ ಸೌಲಭ್ಯಗಳನ್ನು ಸರ್ಕಾರವು ಕೊಡಬೇಕಾಗಿತ್ತು. ಮಹಿಳೆಯರ ಸುರಕ್ಷತೆಗೆ ಸರ್ಕಾರವು ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿತ್ತು. ಮಹಿಳೆಯರು ಮತ್ತು ಮಕ್ಕಳ ಮೇಲೆ ಸಾಕಷ್ಟು ಅತ್ಯಾಚಾರವಾಗುವ ಪ್ರಕರಣಗಳನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಅಂತಹವರಿಗೆ ಸರ್ಕಾರವು ವಿಶೇಷವಾದ ಯೋಜನೆಗಳನ್ನು ಘೋಷಿಸಬೇಕಾಗಿತ್ತು. ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಬೆಳೆಯಬೇಕು. "Equal pay for equal work" ಎನ್ನುವಂತೆ ಪುರುಷರಿಗೆ ಎಷ್ಟು ಸಂಬಳವನ್ನು ನೀಡಲಾಗುತ್ತದೆಯೋ ಅಷ್ಟೇ ಸಂಬಳವನ್ನು ಮಹಿಳೆಯರಿಗೂ ಸಹ ನೀಡಬೇಕು. ಆ ರೀತಿಯ ಕಾನೂನನ್ನು ತಂದು ಅಂತಹ ಯೋಜನೆಗಳನ್ನು ಸರ್ಕಾರವು ರೂಪಿಸಬೇಕೆಂದು ತಮ್ಮ ಮುಖಾಂತರ ನಾನು ಕಳಕಳಿಯಿಂದ ವಿನಂತಿಸುತ್ತೇನೆ.

ಮಹಿಳೆಯರಿಗೆ ಲೈಂಗಿಕ ಕಿರುಕುಳ ಇದರ ಬಗ್ಗೆಯೂ ಸಹ ನಾನು ಪ್ರಸ್ತಾಪಿಸ ಬಯಸುತ್ತೇನೆ. ವಿದ್ಯಾವಂತ ಮಹಿಳೆಯರು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಾರೋ ಅಲ್ಲೆಲ್ಲಾ ಅವರ ಮೇಲೆ ಲೈಂಗಿಕ ಕಿರುಕುಳಗಳಾಗುತ್ತಿವೆ. ಇದಕ್ಕೆ ಕಟ್ಟುನಿಟ್ಟಿನ ಯೋಜನೆಗಳನ್ನು ರೂಪಿಸಬೇಕೆಂದು ನಾನು ಹೇಳುತ್ತೇನೆ. ಮಹಿಳೆಯರು ಕರ್ತವ್ಯ ನಿರ್ವಹಿಸುವ ಪ್ರತಿಯೊಂದು ಇಲಾಖೆ, ಕಂಪೆನಿಗಳಲ್ಲಿ ಲೈಂಗಿಕ ಕಿರುಕುಳಗಳಾಗದಂತೆ ಸರ್ಕಾರವು ವಿಶೇಷವಾದ ಆದ್ಯತೆಯನ್ನು ನೀಡಬೇಕು. ಮಹಿಳೆಯರಿಗಾಗಿ ವಿಶೇಷವಾಗಿ 'ರೆಸ್ಟ್‌ರೂಂ' ಅಂದರೆ ಅವರುಗಳು ಎಲ್ಲಿಯಾದರೂ ಸ್ವಲ್ಪ 'ಆರಾಮ'ವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರವು ಅವಕಾಶ ಮಾಡಿಕೊಡಬೇಕು. ಶೌಚಾಲಯಗಳಂತಹ ಮೂಲಭೂತ ವ್ಯವಸ್ಥೆಯನ್ನು

ಮಹಿಳೆಯರಿಗಾಗಿ ಸರ್ಕಾರವು ಮಾಡಿಕೊಡಬೇಕು. ಮಹಿಳೆಯರಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಸರ್ಕಾರವು ಘೋಷಿಸಿದ್ದರೆ, ಬಹುಶಃ ಸರ್ಕಾರವು ಮಹಿಳೆಯರ ಮತ್ತು ಮಕ್ಕಳ ಆಯವ್ಯಯವನ್ನು ಮಂಡಿಸಿದೆ ಎಂದು ನಾವು ಬಹಳ ಸಂತೋಷದಿಂದ ಹೇಳುತ್ತಿದ್ದೇವು. ಇವುಗಳನ್ನು ಹೊರತುಪಡಿಸಿ, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸರ್ಕಾರವು ನೀಡಿರುವ ಸಾಕಷ್ಟು ಕಾರ್ಯಕ್ರಮಗಳ ಬಗ್ಗೆ ನಾನು ಹೇಳಲಿಚ್ಛಿಸುತ್ತೇನೆ.

ಆಯವ್ಯಯವೆಂದರೇನು? ನಮ್ಮ ರಾಜ್ಯದ ಆದಾಯ ಮತ್ತು ವೆಚ್ಚಗಳು, ಇದನ್ನು ಹೇಗೆ ನಿರ್ವಹಣೆ ಮಾಡಲಾಗುತ್ತದೆ ಎನ್ನುವುದರ ಬಗ್ಗೆ ಸರ್ಕಾರವು ತಿಳಿಸಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು 2007 ನೇ ಸಾಲಿನಲ್ಲಿ ಲಿಂಗ ಆಧಾರಿತ ಆಯವ್ಯಯವನ್ನು ಅಂದರೆ 'ಜೆಂಡರ್ ಬಡ್ಜೆಟ್'ನ್ನು ಮತ್ತು ನಂತರದ ವರ್ಷದಲ್ಲಿ 'ಮಕ್ಕಳ ಆಯವ್ಯಯ'ವನ್ನು ಮಂಡಿಸಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಆದರೆ ಶ್ರೀಯುತರು ಒಂದು ಬಾರಿಯಾದರೂ ಸಹ 'ಕೃಷಿ ಆಯವ್ಯಯ'ವನ್ನು ಮಂಡಿಸಿಲ್ಲ. ಆದರೆ ವಾಸ್ತವಿಕವಾಗಿ ಎಂತಹ ಆಯವ್ಯಯವನ್ನು ಸರ್ಕಾರವು ಮಂಡಿಸಬೇಕು? ನಮ್ಮ ರಾಜ್ಯದಲ್ಲಿ ಯಾವ ರೀತಿಯಾದ ಆಯವ್ಯಯ ಇರಬೇಕೆಂದೂ ಹೇಳಿದರೆ, there should be a traditional or general budget, there should be a performance budget, there must be zero-based budget, there must be an outcome budget. ಲಿಂಗ ಆಧಾರಿತ ಅಂದರೆ ಜೆಂಡರ್ ಆಯವ್ಯಯವನ್ನು ಸರ್ಕಾರವು ಈಗಾಗಲೇ ಮಂಡಿಸಿದೆ. ಈ ರೀತಿಯ ನಿರ್ದಿಷ್ಟ ಯೋಜನೆಗಳನ್ನು ಮತ್ತು ಆಯವ್ಯಯವನ್ನು ಸರ್ಕಾರವು ಮಂಡಿಸಬೇಕಾದರೆ, ಇಂತಹ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಶ್ರೀಯುತ ಬಿ.ಎಸ್.ಯಡಿಯೂರಪ್ಪನವರು 8 ಆಯವ್ಯಯಗಳನ್ನು ಮಂಡಿಸಿದ್ದಾರೆ. ಆಯವ್ಯಯವನ್ನು ಮಂಡಿಸುವಾಗ ಮೇಲ್ಕಂಡ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು. ಶ್ರೀ ಪ್ರಣಬ್ ಮುಖರ್ಜಿರವರು ಕೇಂದ್ರ ವಿತ್ತ ಸಚಿವರಾಗಿದ್ದಾಗ 2002ನೇ ಇಸವಿಯಲ್ಲಿ ಆಯವ್ಯಯಗಳನ್ನು ಮಂಡಿಸುವುದಕ್ಕಾಗಿಯೇ ಕೈಪಿಡಿಯೊಂದನ್ನು ಮಾಡಿದ್ದರು. ಅದರಲ್ಲಿ ರಾಜ್ಯ ಸರ್ಕಾರಗಳು ಯಾವ ರೀತಿಯಾಗಿ ಆಯವ್ಯಯಗಳನ್ನು ಮಂಡಿಸಬೇಕೆಂದು ತಿಳಿಸಲಾಗಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(594)/23–3–2021/4–40/ಎಲ್‌ಎಂ/ಎಂಡಿ**

**ಶ್ರೀ ಪ್ರಕಾಶ್ ಕೆ.ರಾಠೋಡ್(ಮುಂದು):–**

ಶ್ರೀ ಪ್ರಣಬ್ ಮುಖರ್ಜಿಯವರು ಹಣಕಾಸು ಮಂತ್ರಿಗಳಾಗಿದ್ದಾಗ 2002ನೇ ಸಾಲಿನಲ್ಲಿ ಯಾವ ರೀತಿ budget present ಮಾಡಬೇಕು, ರಾಜ್ಯ ಸರ್ಕಾರಗಳು ಯಾವ ರೀತಿ ಬಜೆಟ್ ಮಾಡಬೇಕು, ಯಾವ ರೀತಿ ಅದನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಒಂದು manual ತಯಾರು ಮಾಡಿದ್ದಾರೆ. ಆರ್ಥಿಕ ಇಲಾಖೆಯವರು ಆ manual ನ್ನು ಓದಿ ಆ ಪ್ರಕಾರ, ಬಜೆಟ್ ತಯಾರು ಮಾಡಿದರೆ ಅಷ್ಟು ಈ ರೀತಿ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನಾನು child budget ಕೊಡುತ್ತೇನೆ, ಆದರೆ ಮಕ್ಕಳಿಗೆ ಯಾವುದೇ ಕಾರ್ಯಕ್ರಮವಿಲ್ಲ; Gender budget ಕೊಡುತ್ತೇನೆ, ಆದರೆ gender based ಯಾವುದೆ ಕಾರ್ಯಕ್ರಮವಿಲ್ಲ ಎನ್ನುವಂತಹ ರೀತಿಯಲ್ಲಿ ಈ ಬಜೆಟ್ ಮಂಡಿಸಿದ್ದಾರೆ. ಈ ವರ್ಷ deficit budget ಇರುವುದರಿಂದ ಅದಕ್ಕೆ black budget ನ್ನು ಕೊಟ್ಟಿದೀರಿ. ವಿಶೇಷವಾಗಿ ಕೃಷಿ ಬಜೆಟ್ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಾಗಬೇಕು, 92 ವರ್ಷದಿಂದ ಕೇಂದ್ರದಲ್ಲಿ separate Railway Budget ನ್ನು ಮಂಡಿಸಲಾಗುತ್ತಿತ್ತು. ಬಿಜೆಪಿ ಸರ್ಕಾರ ಬಂದಮೇಲೆ ಮಾನ್ಯ ಅರುಣ್ ಜೇಟ್ಲಿಯವರು ಕೇಂದ್ರ ಹಣಕಾಸು ಮಂತ್ರಿಗಳಾಗಿದ್ದಾಗ ರೇಲ್ವೆ ಬಜೆಟ್ ಮತ್ತು ಸಾಮಾನ್ಯ ಬಜೆಟ್ ಎರಡನ್ನು ಒಂದೇ ಬಜೆಟ್ ಆಗಿ ಮಾಡಿ ಕೊಟ್ಟಿದ್ದಾರೆ. ಹಲವಾರು ಕೇಂದ್ರ ಹಣಕಾಸು ಮಂತ್ರಿಗಳು ಹಲವಾರು ರೀತಿಯಲ್ಲಿ ಬಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ. ಇಲ್ಲಿ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ, ನಮ್ಮ ಭಾರತ ದೇಶದಲ್ಲಿ ಮೊಟ್ಟಮೊದಲನೆಯ ಬ್ರಿಟಿಷ್ ಹಣಕಾಸು ಮಂತ್ರಿಗಳಾಗಿದ್ದ James Wilson ಎನ್ನುವವರು 1860 ರಲ್ಲಿ ಬಜೆಟ್‌ನ್ನು ಮಂಡಿಸಿದ್ದಾರೆ. ಆಗ ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಷ್ ಗವರ್ನರ್‌ರವರು ಆಳ್ವಿಕೆ ಮಾಡುತ್ತಿದರು. ಮೊದಲನೆಯ ಬಾರಿಗೆ ಭಾರತ ದೇಶದ ಬಜೆಟ್ ಮಂಡನೆ ಮಾಡಿದ್ದು 26 ನವೆಂಬರ್ 1947ರಲ್ಲಿ Sri R.K.Shanmukham Chetty ಎನ್ನುವವರು ಮಂಡನೆ ಮಾಡಿದರು. ನಂತರ first budget presented by the then Prime Minister Sri Jawaharlal Nehru in 1958-59, first hindi budget was presented in the year 1955-56, our former Prime Minister Sri Morarji Desai holds the record of presenting the maximum number of 10 budgets in the history of the country. Sri P.Chidambaram

presented 9 budgets, Sri Pranab Mukherji, Sri Yeshwanth Sinha and Sri Manmohan Singh each of them have presented 8 budgets. First women budget was presented by our former Prime Minister Smt. Indira Gandhi, first black budget was presented by the Finance Minister Sri Yeshwanth Rao Chauhan in the year 1973-74. Fiscal deficit ಆಗ 550 ಕೋಟಿ ಇತ್ತು. 'Epochal budget' or historically significant budget was presented by the then Finance Minister Sri Manmohan Singh in the year 1991, as it marked the beginning of economic liberalization. ಶ್ರೀ ಪಿ.ವಿ.ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಗ ಮಂಡನೆ ಮಾಡಿದರು. Dream budget was presented by Sri P.Chidambaram in the year 1977-78. He lowered the tax slabs of personal income tax as well as corporate taxes, which won the hearts of the common people. ಅದೇ ತರಹ merger ಮಾಡಿದರು. ನಾನು ಈಗಾಗಲೇ ಹೇಳಿದ ಹಾಗೆ 2017ರಲ್ಲಿ ಶ್ರೀ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಶ್ರೀ ಅರುಣ್ ಜೇಟ್ಲಿಯವರು ಹಣಕಾಸು ಮಂತ್ರಿಗಳಾಗಿದ್ದಾಗ ರೇಲ್ವೆ ಮತ್ತು ಸಾಮಾನ್ಯ ಎರಡು ಬಜೆಟ್‌ಗಳನ್ನು ಸೇರಿಸಿ ಮಂಡನೆ ಮಾಡಿದರು. ಶ್ರೀಮತಿ ನಿರ್ಮಲಾ ಸೀತಾರಾಮನ್ ರವರು ಮೊದಲ ಮಹಿಳಾ ಹಣಕಾಸು ಸಚಿವರಾಗಿ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಯುವ ನಾಯಕರಾದ ಶ್ರೀ ರಾಥೋಡ್‌ರವರು ಹಿಂದಿನ ಎಲ್ಲ ಬಜೆಟ್‌ಗಳ ವಿವರಣೆಗಳನ್ನು ಕೊಡುತ್ತಿದ್ದಾರೆ. Yes, I must be thankful to him. ತಾವು ಸಂಗ್ರಹ ಮಾಡಿರುವ data ಗಳನ್ನು ನೋಡಿದರೆ good. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಇಡೀ ಜಾಗತಿಕ ಜಗತ್ತು ಕೊರೋನಾದಿಂದ ನರಳುತ್ತಿರುವ ಸಂದರ್ಭದಲ್ಲಿ ಜಗತ್ತಿನ ಎಲ್ಲಾ ದೇಶಗಳು ಕೂಡಾ ಮುಂದಿನ 5 ವರ್ಷಗಳು ಸೇರಿದ ಹಾಗೆ ಈ ಕೊರೋನಾದಲ್ಲಿ ಜರ್ಜರಿತವಾಗಿವೆ, ಇಡೀ ಬದುಕೇ ನಾಶವಾಗಿ ಹೋಗಿದೆ. ಅದರಲ್ಲಿಯು ಯಾವ ಜನ ಶ್ರಮದ ಬೇವರಿನಿಂದ ಅನ್ನ ತಿನ್ನುತಿದ್ದರು, ಬೆಳಗ್ಗೆ ಎದ್ದು ಮನೆಯಲ್ಲಿಯೇ ಏನಾದರೂ ತಿಂದು ವಾಪಸ್ ಮನೆಗೆ ಬರಬೇಕಾದರೆ ತಮ್ಮ ಬೆವರನ್ನೆ ಅನ್ನ ಮಾಡಿಕೊಂಡು ಬರುತ್ತಿದ್ದ ಜನರ ಗತಿ ಏನು? ಇದೆಲ್ಲವನ್ನು

ನೋಡಿ ಬಜೆಟ್ ಮಾಡಲಾಗಿದೆಯ್ದೆಂದರೆ, ಇಲ್ಲ. ಕೊರೋನಾ ಬಜೆಟ್ ಆಗಬೇಕಾಗಿತ್ತು, ಸದಸ್ಯರು ಹೇಳಿದ ಹಾಗೆ ಮಕ್ಕಳ ಬಜೆಟ್, ಕೃಷಿ ಬಜೆಟ್‌ನ ಹಾಗೆಯೇ ಕೊರೋನಾ ಬಜೆಟ್ ಆಗಬೇಕಾಗಿತ್ತು. I don't know why our officers have not proved their prudency in weaving this Budget.

**Sri PRAKASH K RATHOD:-** I agree with you sir.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಆದ್ದರಿಂದ ಸರ್ಕಾರವು supplementary budget ತರುವ ಸಂದರ್ಭದಲ್ಲಿ .. ಆಟೋದವರಿಗೆ 2000 ರೂಪಾಯಿಗಳನ್ನು ಕೊಡಲಾಯಿತು. Yes, I must be thankful to the Central Government also. But what is the future? ನಮ್ಮ ಬಜೆಟ್‌ನಲ್ಲಿ ಅದು ಎಲ್ಲಿಯು reflect ಆಗಲೇ ಇಲ್ಲ. Our budget has not reflected the corona, ಭವಿಷ್ಯದಲ್ಲಿ ಏನು ಮಾಡಬಹುದು, ಏನು ಆಗಬೇಕು ಎನ್ನುವುದನ್ನು ಮಾನ್ಯ ಹಣಕಾಸು ಸಚಿವರು ಆಗಿರುವ ಮುಖ್ಯಮಂತ್ರಿಗಳಿಗೆ ನಮ್ಮ supplementary budget ನಲ್ಲಿ ಕರೋನಾದ ಬಗ್ಗೆ reflect ಆಗಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ, ನನಗೆ ಬಹಳ ಆತ್ಮೀಯರಾದ ಮಾನ್ಯ ವಿಶ್ವನಾಥ್‌ರವರು ಬಹಳ ಸೂಕ್ತವಾದ ವಿಷಯವನ್ನು ಹೇಳಿದ್ದಾರೆ. This should have been a 'Corona Budget'. ಈ ದೇಶ ಮಾತ್ರವಲ್ಲ, ಪ್ರಪಂಚವೇ ತತ್ತರಿಸುವಂತಹ ಸಮಯದಲ್ಲಿ, ಈಗ ಮತ್ತೆ ಕೊರೋನಾ ಎರಡನೆಯ ಅಲೆ ಎದುರಾಗುವ ಸಂದರ್ಭದಲ್ಲಿ ಕೊರೋನಾ ಬಜೆಟ್ ಕೊಟ್ಟಿದರೆ ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪರವರನ್ನು ಮೆಚ್ಚುತ್ತಿದ್ದೆವು. ಕರೋನಾ ನಿಯಂತ್ರಣ ಮಾಡಲು ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುತ್ತಾರೆ ಎಂದು ನಾವೆಲ್ಲ ತಿಳಿದುಕೊಂಡಿದ್ದೆವು, ಆದರೆ ಅದು ಯಾವುದನ್ನೂ ಮಾಡಲಿಲ್ಲ. ಕೆಲವು ಕಡೆ ಭ್ರಷ್ಟಾಚಾರದ ವಾಸನೆ ಬರುತ್ತಿದೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೂ ...

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಕಾಂಗ್ರೆಸ್‌ನವರು ಭ್ರಷ್ಟಾಚಾರದ ಬಗ್ಗೆ ಮಾತನಾಡಬಾರದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಗಳೆ, ಮಾನ್ಯ ವಿಶ್ವನಾಥ್‌ರವರು 'ಕಾಂಗ್ರೆಸ್‌ನವರು ಭ್ರಷ್ಟಾಚಾರದ ಬಗ್ಗೆ ಮಾತನಾಡಬಾರದು' ಎಂದು ಹೇಳಿದ್ದಾರೆ. ಬಹಳಷ್ಟು ವರ್ಷಗಳ ಕಾಲ ಅವರು ನಮ್ಮ ಜೊತೆಯಲ್ಲಿಯೇ ಇದ್ದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**:- ಅದಕ್ಕೆ ಬೇಸತ್ತು ಅವರು ಈ ಕಡೆಗೆ ಬಂದಿದ್ದಾರೆ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ವಿಶ್ವನಾಥ್‌ರವರು ಹೇಳಿರುವುದು,... party with difference, ಇವತ್ತು difference ಕಾಣುತ್ತಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಗಳೆ, ನಾನು ಮಾನ್ಯ ವಿಶ್ವನಾಥ್ ಸಾಹೇಬರಿಗೆ ನೀವೆ ಆತ್ಮಾವಲೋಕನ ಮಾಡಿಕೊಳ್ಳಿ ಎಂದು ಹೇಳಬಯಸುತ್ತೇನೆ. ತಾವು ಈ ಭಾಗದಲ್ಲಿ ಇದ್ದಾಗ ಅಥವಾ ಆ ಭಾಗದಲ್ಲಿ ಇದ್ದಾಗ ಉತ್ತಮವಾದ ರಾಜಕಾರಣ ಮಾಡಿಕೊಂಡು ಬಂದವರು. ನಮ್ಮ ತಂದೆಯವರ ಕಾಲದಿಂದಲೂ ತಾವು ರಾಜಕೀಯದಲ್ಲಿ ಇದ್ದೀರಿ. ನಿಮಗೆ ಎಲ್ಲವೂ ಗೊತ್ತಿದೆ. ಹೀಗಾಗಿ ಯಾರು ಎಷ್ಟು ಭ್ರಷ್ಟರು ಎನ್ನುವುದನ್ನು ತೀರ್ಮಾನ ಮಾಡಲು ತಮಗೆ ಬಿಡುತ್ತೇನೆ.

ಕೊನೆಯದಾಗಿ, ನಾನು ಬಿಜಾಪೂರ ಜಿಲ್ಲೆಯಿಂದ ಬಂದವನು. ಬಿಜಾಪೂರ ಬರಪೀಡಿತ ಜಿಲ್ಲೆ. ನಾನು ಹಲವಾರು ಬಾರಿ ಸರ್ಕಾರದವರಲ್ಲಿ ನಮಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇನೆ. ಕುಡಿಯುವ ನೀರಿನ ವ್ಯವಸ್ಥೆಗೆ ಸುಮಾರು 70 ವರ್ಷಗಳಿಂದ ಕಾಮಗಾರಿಯನ್ನು ನಡೆಸಿದ್ದಾರೆ. ನಮ್ಮ ಜಿಲ್ಲೆಗೆ 'ಬರ ಪೀಡಿತ ಜಿಲ್ಲೆ' ಎನ್ನುವ ಹಣೆಪಟ್ಟಿಯನ್ನು ಕಟ್ಟಿಬಿಟ್ಟಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ಆಲಮಟ್ಟಿ ಆಣೆಕಟ್ಟಿನ ಮೂರನೇ ಹಂತದ ಕಾಮಗಾರಿಯನ್ನು 5 ವರ್ಷಗಳಲ್ಲಿ ಪೂರ್ಣಗೊಳಿಸಬೇಕು. ಮೊನ್ನೆ ಉಪ ಮುಖ್ಯಮಂತ್ರಿಗಳಾದ ಮಾನ್ಯ ಕಾರಜೋಳ ಸಾಹೇಬರು 5 ವರ್ಷಗಳಲ್ಲಿ ಆಲಮಟ್ಟಿ ಡ್ಯಾಂನ ಮೂರನೇ ಹಂತದ ಕಾಮಗಾರಿಯನ್ನು ಸಂಪೂರ್ಣಗೊಳಿಸುತ್ತೇವೆ ಎಂದು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ದಯಮಾಡಿ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆಲಮಟ್ಟಿ ಮೂರನೇ ಹಂತದ ಕಾಮಗಾರಿಯನ್ನು ಏನು ತೆಗೆದುಕೊಂಡಿದ್ದೀರಿ, ಅದನ್ನು ಆದಷ್ಟು ಬೇಗ ಮುಕ್ತಾಯಗೊಳಿಸಬೇಕು. ಶ್ರೀ ಬ್ರಜೇಶ್ ಮಿಶ್ರಾರವರ ವರದಿ ಪ್ರಕಾರ ವಿಶೇಷವಾಗಿ ಬಿಜಾಪೂರ ಜಿಲ್ಲೆಗೆ 90% ಅನುಕೂಲವಾಗುತ್ತದೆ. ಆ ಯೋಜನೆಯನ್ನು ಸಂಪೂರ್ಣ ಮಾಡಿ ನಮಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಕೊಡಲು ವಿಶೇಷವಾಗಿ ಬಿಜಾಪೂರ ನಗರಕ್ಕೆ ಅನುಕೂಲ ಮಾಡಿಕೊಡಬೇಕು. ಬಿಜಾಪೂರ ನಗರದಲ್ಲಿ 15 ದಿವಸಕ್ಕೆ ಒಮ್ಮೆ ಕುಡಿಯುವ ನೀರನ್ನು ಬಿಡಲಾಗುತ್ತಿದೆ.

ಕುಡಿಯುವ ನೀರಿಗಾಗಿ ಬಿಜಾಪೂರ ನಗರದ ಜನರು ತತ್ತರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಯಾವ ರೀತಿ ತಾರತಮ್ಯ ಮಾಡಿದೆ, ಅದೇ ರೀತಿ ರಾಜ್ಯ ಸರ್ಕಾರ ಸಹ ನಮ್ಮ ಬಿಜಾಪೂರ ಜಿಲ್ಲೆಗೆ ತಾರತಮ್ಯ ಮಾಡಿದೆ. ನಮ್ಮ ಜಿಲ್ಲೆಗೆ ಒಬ್ಬ ಮಂತ್ರಿಯನ್ನು ಕೊಟ್ಟಿರುವುದಿಲ್ಲ, ಯಾವುದೇ ಯೋಜನೆಗಳನ್ನು ಕೊಟ್ಟಿಲ್ಲ, ಒಂದು ಫುಡ್‌ಪಾರ್ಕ್ ಯೋಜನೆ ಮಾಡಿದ್ದಾರೆ. ಬೇರೆ ಯೋಜನೆಗಳಂತೆ ಅದು ಕೂಡಾ ಪುಢ್ ಪಾರ್ಕ್ ಹೋಗಿ ಪೂಟ್‌ಪಾತ್ ಆಗಬಾರದು. ಹಾಗಾಗಿ ಬಹಳ ಗಂಭೀರವಾಗಿ ತೆಗೆದುಕೊಂಡು ಫುಡ್ ಪಾರ್ಕ್‌ನ್ನು ಮಾಡಬೇಕು. ಇದರ ಜೊತೆಗೆ Cold Storage ನ ಅವಶ್ಯಕತೆ ಬಹಳ ಇದೆ. ವಿಶ್ವದಲ್ಲಿಯೇ ಅತಿ ರುಚಿಯಾದ ದ್ರಾಕ್ಷಿಯನ್ನು ನಾವು ಬೆಳೆಯುತ್ತೇವೆ. (ಮುಂದು)

**(595)23–03–2021(04–50)ಬಿಎಸ್‌ಡಿ–ಎಕೆ**

**ಶ್ರೀ ಪ್ರಕಾಶ್ ಕೆ. ರಾಥೋಡ್(ಮುಂದು):–**

ದ್ರಾಕ್ಷಿಯನ್ನು ರಫ್ತು ಮಾಡುವುದಕ್ಕೆ cold storage ನ facility ಬಿಜಾಪುರ ಜಿಲ್ಲೆಗೆ ಬೇಕು. ಅವರು airport ಅನ್ನು ನಿರ್ಮಾಣ ಮಾಡುವ ಬಗ್ಗೆ ಹೇಳಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ರೂ.380 ಕೋಟಿಗಳನ್ನು ಬಿಡುಗಡೆ ಮಾಡಿ, ಬಿಜಾಪುರ ಜಿಲ್ಲೆಗೆ ತಾರತಮ್ಯ ಮಾಡಿ ಕಡಿಮೆ ಹಣವನ್ನು ಮೀಸಲಿಟ್ಟಿದ್ದಾರೆ. ಬಿಜಾಪುರ ಜಿಲ್ಲೆಗೆ ವಿಮಾನ ನಿಲ್ದಾಣದ ಅವಶ್ಯಕತೆ ಇದ್ದು ವಿಶೇಷವಾಗಿ cargo ವಿಮಾನ ನಿಲ್ದಾಣದ ಅವಶ್ಯಕತೆ ಇದೆ. 7 ವಿಮಾನ ನಿಲ್ದಾಣಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದು, ಅಲ್ಲಿ ಕೇವಲ ಸಣ್ಣ ವಿಮಾನ land ಆಗುವಂತಹ ಅವಶ್ಯಕತೆಗೆ ಅನುಗುಣವಾಗಿ ಮಾಡುತ್ತಿದ್ದಾರೆ. ನಮಗೆ cargo plane ಗಳು ಅಲ್ಲಿಗೆ ಬರಬೇಕು, ನಮ್ಮಲ್ಲಿ ದೊರೆಯುವ ರುಚಿಯಾದ ದ್ರಾಕ್ಷಿ, ದಾಳಿಂಬೆ, ನಿಂಬೆಹಣ್ಣು ಬೇರೆ ದೇಶಗಳಿಗೆ ರಫ್ತಾಗಿ ನಮ್ಮ ಜನರಿಗೆ ಅನುಕೂಲವಾಗುವಂತಹ ವಾತಾವರಣ ಸೃಷ್ಟಿಯಾಗಬೇಕು. ಅತೀ ಹಿಂದುಳಿದ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲೆಯು ಒಂದಾಗಿದ್ದು, ಅದಕ್ಕೆ ವಿಶೇಷವಾದ package ಕೊಡಬೇಕು. ಆಲಮಟ್ಟಿ ಯೋಜನೆಯನ್ನು complete ಮಾಡಬೇಕು. ಪುನರ್ವಸತಿಯ ಕೆಲಸ ಆಗಬೇಕು, 22 ಹಳ್ಳಿಗಳು ಮುಳುಗಡೆಯಾಗುತ್ತವೆ. ಅದಕ್ಕೆ ವ್ಯವಸ್ಥೆ ಆಗಬೇಕು. ಅದರ ಜೊತೆಗೆ ನಿರ್ಮಾಣ ಮಾಡಿರುವ ಕಾಲುವೆಗಳ ಉಪಯೋಗ ಆಗಬೇಕು, ಕಾಲುವೆಗಳು ಹಾಳಾಗಬಾರದು. ಯುದ್ಧೋಪಾದಿಯಲ್ಲಿ ಆಲಮಟ್ಟಿ ಅಥವಾ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಅಣೆಕಟ್ಟನ್ನು ಶೀಘ್ರದಲ್ಲಿ ಸಂಪೂರ್ಣಗೊಳಿಸಿ, ಬಿಜಾಪುರ ಜಿಲ್ಲೆಗೆ ಕುಡಿಯುವ ನೀರು ಮತ್ತು ನೀರಾವರಿ ವ್ಯವಸ್ಥೆಯನ್ನು ದೊರಕಿಸಿಕೊಡಬೇಕು ಹಾಗೂ ಇದೇ ವರ್ಷದಲ್ಲಿ ವಿಮಾನ ನಿಲ್ದಾಣವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣಗೊಳಿಸಬೇಕು. ಶಿವಮೊಗ್ಗದಲ್ಲಿ ಮಾಡುತ್ತಿರುವಂತೆ ಬಿಜಾಪುರದಲ್ಲಿಯೂ ದೊಡ್ಡ ವಿಮಾನಗಳು land ಆಗಲು ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ನೀರಿಗೆ ಬಹಳಷ್ಟು ಹಾಹಾಕಾರ ಇದೆ. ಬಿಜಾಪುರದ ಒಳ್ಳೆಯ ಜಾಗದಲ್ಲಿ velodrome ನಿರ್ಮಿಸಬೇಕು. ಕ್ರೀಡೆಯಲ್ಲಿ ಬಹಳ ಪ್ರತಿಭಾವಂತರಿದ್ದು, international ಪ್ರಶಸ್ತಿ ಪಡೆದ cyclist ಗಳಿದ್ದಾರೆ. ಅವರೆಲ್ಲರೂ road ಮೇಲೆ training ತೆಗೆದುಕೊಳ್ಳುತ್ತಿದ್ದಾರೆ. Velodrome complete ಆಗಬೇಕು. ಅದನ್ನು ಪೂರ್ಣ ಮಾಡುವುದಕ್ಕೆ ರಾಜ್ಯ ಸರ್ಕಾರವು ಕ್ರೀಡಾ ಇಲಾಖೆಯಿಂದ ಶೀಘ್ರವಾಗಿ ಹಣ ಬಿಡುಗಡೆ ಮಾಡಬೇಕು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರದಲ್ಲಿ ಯಾವ ಕೆಲಸಗಳು ಆಗಿಲ್ಲ, ಅಂದರೆ airport ಕೆಲಸ ಆಗಿಲ್ಲ, ಅದನ್ನು ಈ ಸರ್ಕಾರದ ಅವಧಿಯಲ್ಲಿ ಮಾಡುವುದಕ್ಕೆ ಹೇಳುತ್ತಿದ್ದಾರೆ, ಆ ಕೆಲಸ ಮಾಡಬೇಕೆಂಬುದು ನಮ್ಮ ಆಸೆಯಾಗಿದೆ. ಅವರ ಸರ್ಕಾರ ಇದ್ದಾಗ ಮಾಡಲಿಲ್ಲ. ದ್ರಾಕ್ಷಿಯನ್ನು ಬಿಜಾಪುರದಲ್ಲಿ ಇವತ್ತು ಬೆಳೆಯಲಿಲ್ಲ, ಸುಮಾರು 20-30 ವರ್ಷಗಳಿಂದ ಬೆಳೆಯುತ್ತಿದ್ಧಾರೆ. ಆದರೂ ಅಲ್ಲಿ ಒಂದು airport ಇಲ್ಲ. ನಮ್ಮ ಸರ್ಕಾರದವರು airport ಮಾಡಲು ಪ್ರಾರಂಭಿಸಿದ್ದಾರೆ. ಶಿವಮೊಗ್ಗದಲ್ಲಿ ಮಾತ್ರವಲ್ಲದೇ ಬಿಜಾಪುರದಲ್ಲಿಯೂ ಆಗಬೇಕೆಂಬ ಆಸೆ ಇದೆ. ಯಾವ್ಯಾವ ಕೆಲಸಗಳು ಅವರ ಸರ್ಕಾರ ಇದ್ದಾಗ ಆಗಲಿಲ್ಲ, ಅದನ್ನು ಮಾನ್ಯ ಯಡಿಯೂರಪ್ಪನವರು ಮಾಡುತ್ತಾರೆಂಬ ನಂಬಿಕೆ ಇದೆ, ಅದರಿಂದ ಆ ಕೆಲಸ ಮಾಡಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವರಿಗೆ ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದರು, ನಾವು ಮಾಡದೇ ಇರುವುದನ್ನು ಅವರು ಮಾಡುತ್ತಿದ್ದಾರೆ, ಅವರು ಮಾಡಿರುವುದೆಲ್ಲವನ್ನೂ ಈಗಾಗಲೇ ಹೇಳಿದ್ದೇನೆ. ಸ್ತ್ರೀ ಮಹಿಳೆಯರಿಗೆ ಇರುವ 953 scheme ಬಗ್ಗೆ ಹೇಳಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಅದನ್ನು budget ಭಾಷಣದ ಮೇಲಿನ ಚರ್ಚೆಯಲ್ಲಿ ನಾನು ಮಾತನಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** 2020-21ನೇ ಸಾಲಿನ budget ನಲ್ಲಿ ನಾನು ನೋಡಿದ್ದೇನೆ. 2007-08ನೇ ಸಾಲಿನ ಆಯವ್ಯಯದಲ್ಲಿಯೂ ನೋಡಿದ್ದೇನೆ. ಮುಂದಿನ budget ನಲ್ಲಿ ಮತ್ತೆ ನಾನು ಮಾತನಾಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಶ್ರೀಮತಿ ಭಾರತಿಶೆಟ್ಟಿಯವರು ಯಾವಾಗ ಭರವಸೆ ಸಚಿವರಾದರು?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ಭಾರತಿ ಶೆಟ್ಟಿ:–** ನಾನು ಭರವಸೆ ಕೊಡುವವಳಲ್ಲ, ಸರ್ಕಾರವು ಭರವಸೆ ಕೊಡುತ್ತದೆ. ನಾನು ಸರ್ಕಾರದ ಪರವಾಗಿ ಮಾತನಾಡಿದ್ದೇನೆ. ಅವರು ಹಿರಿಯರಿದ್ದು ನಾನು last bench ನವಳಾಗಿದ್ದು, ಅವರು first bench ನವರಾಗಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಭಾರತಿ ಶೆಟ್ಟಿಯವರು ದಕ್ಷಿಣ ಕನ್ನಡದ coastal belt ಕಡೆಯವರಾಗಿದ್ದು, ನಾವು ಬರಗಾಲ ಪೀಡಿತ ಜಿಲ್ಲೆಯವರಾಗಿದ್ದೇವೆ. ನಮ್ಮ ಸರ್ಕಾರ ಇದ್ದಾಗಲೂ ಸಾಕಷ್ಟು ಕೆಲಸ ಮಾಡಿದ್ದಾರೆ. ಈ ಅಣೆಕಟ್ಟು ಬರಬೇಕಾದರೆ ನಮ್ಮ ಸರ್ಕಾರ ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ದೇವೇಗೌಡರ ನೇತೃತ್ವದ ಜೆಡಿ(ಎಸ್) ಪಕ್ಷದ ಸರ್ಕಾರ ಇದ್ದ ಸಮಯದಲ್ಲಿ ಸಾಕಷ್ಟು ಹಣ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಮಾಡಿದ್ದಾರೆ. Airport ಗಾಗಿ 2–3 ಸಾವಿರ ಎಕರೆ ಜಾಗವನ್ನು ಕಾಂಗ್ರೆಸ್ ಸರ್ಕಾರ ಇದ್ದಾಗಲೇ ತೆಗೆದುಕೊಂಡಿದ್ದಾರೆ. ಅದನ್ನು ಬಿಜೆಪಿ ಪಕ್ಷದವರು ಮಾಡಿಲ್ಲ. ಈಗ ಬಿಡುಗಡೆ ಮಾಡುತ್ತಿರುವ ಹಣದ ಬಗ್ಗೆ ಹೇಳಬೇಕೆಂದರೆ, ಆ contractor ಓಡಿ ಹೋಗಿದ್ದನು. ಆ contractor ನನ್ನು ಹಿಡಿದು ತಂದು, ಬೇರೆಯವರಿಗೆ ಗುತ್ತಿಗೆಯನ್ನು ಕೊಟ್ಟು PWD (Public Works Department) ಇಲಾಖೆಯಿಂದ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಅದನ್ನು ಪ್ರಾರಂಭ ಮಾಡಿರುವುದೇ ಕಾಂಗ್ರೆಸ್ ಸರ್ಕಾರವಾಗಿದೆ. ಈಗ ಮಾಡುತ್ತಿರುವುದು ಈ ಸರ್ಕಾರದವರಾಗಿದ್ದಾರೆ. ಇದಕ್ಕೆ ಅವರಿಗೆ ಅಭಿನಂದನೆ ಹೇಳೋಣ. ನಾನು ಇಲ್ಲಿ ರಾಜಕೀಯ ಮಾಡುತ್ತಿಲ್ಲ. ನಮ್ಮ ಬರಗಾಲ ಪೀಡಿತ ಜಿಲ್ಲೆಗೆ ಸಾಕಷ್ಟು ಅನುದಾನ ಬಂದು, ಮುಂದೆ ಬೆಳವಣಿಗೆ ಆಗಬೇಕೆಂದು ಹೇಳಿದ್ದೇನೆ. ಅವರು ಇದಕ್ಕೆ ಸಂಪೂರ್ಣ ಸಹಕಾರ ಕೊಡುತ್ತಾರೆಂಬ ವಿಶ್ವಾಸ ನನಗಿದೆ. ಇಲ್ಲಿಯವರೆಗೂ ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪಿಸಿದ್ದು, ಬಿಜಾಪುರದ ಅವಶ್ಯಕತೆ ಬಗ್ಗೆ ಹೇಳಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಬಗ್ಗೆ ಹೇಳಿದ್ದೇನೆ. ವಿಶೇಷವಾಗಿ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಕ್ಕೆ ನಿಗಮ ಮಾಡಿರುವುದನ್ನೂ ಸ್ವಾಗತ ಮಾಡಿದ್ದೇನೆ. ನಾನು ಹೇಳುವುದೇನೆಂದರೆ, ನಮ್ಮ ರಾಜ್ಯ ಅಭಿವೃದ್ಧಿ ಆಗಬೇಕು. ಅವರು ಹೇಳಿದ್ದನ್ನು ಮಾಡಬೇಕು. ನಮ್ಮ ಪ್ರಣಾಳಿಕೆಯಲ್ಲಿ ನಾವು ಹೇಳಿದ್ದನ್ನು ಮಾಡಿದ್ದೇವೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಒಂದು ಲಕ್ಷ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡುವ ಬಗ್ಗೆ ಪ್ರಣಾಳಿಕೆಯಲ್ಲಿ ಹೇಳಿದ್ದರು. ಎರಡು ವರ್ಷಗಳು ಕಳೆದರೂ ರೈತರ ಒಂದು

ಪೈಸೆ ಸಾಲವನ್ನು ಮನ್ನಾ ಮಾಡಿದ್ದಾರೆಯೇ? ಇದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದನ್ನು ನಾನು ಹೇಳಿಲ್ಲ, ಅವರ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಅವರ ಪ್ರಣಾಳಿಕೆಯಲ್ಲಿ ಅವರ ಸರ್ಕಾರ ಬಂದರೆ ಒಂದು ಲಕ್ಷ ರೂಪಾಯಿ ಸಾಲ ಮನ್ನಾ ಮಾಡುವುದಾಗಿ ಹೇಳಿ, ಆ ಕೆಲಸವನ್ನು ಮಾಡಿದ್ದಾರೆಯೇ? ಈಗಾಗಲೇ ಎರಡು ವರ್ಷಗಳು ಕಳೆದಿವೆ. ಇವತ್ತಾದರೂ ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ, ಮುಂದಿನ budget ನಲ್ಲಿ ರೈತರ ಸಾಲವನ್ನು ಮನ್ನಾ ಮಾಡಿಸಲಿ. ಅವರ ಜೊತೆಗೆ ನಾವಿದ್ದೇವೆ. ರೈತರು ಸಂಕಷ್ಟದಲ್ಲಿರುವಾಗ ಅನುಕೂಲ ಮಾಡಿಕೊಡುವ ಜವಾಬ್ದಾರಿ ನಮ್ಮೆಲ್ಲರಿಗೂ ಇದೆ. ಆದ್ದರಿಂದ ರೈತರ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**10. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 23-03-2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಸೊಸೈಟಿಗಳ ನೋಂದಣಿ (ತಿದ್ದುಪಡಿ) ವಿಧೇಯಕ, 2021

2) ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ವಿಧೇಯಕ, 2021

**11. ಸದನದಲ್ಲಿ ಹಾಜರಿರಬೇಕಾದ ಸಚಿವರ ಅನುಪಸ್ಥಿತಿ ಬಗ್ಗೆ**

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳಲ್ಲಿ ಮಾನ್ಯ ಎಸ್.ಆರ್. ಪಾಟೀಲರು ವಿಷಯವನ್ನು ಪ್ರಸ್ತಾಪಿಸಿ,

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನನಗೆ ಬೆಳಗ್ಗೆ ಆಯವ್ಯಯದ ಬಗ್ಗೆ ಮಾತನಾಡಲು ತಿಳಿಸಿದಿರಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಆಯವ್ಯಯದ ಮೇಲಿನ ಚರ್ಚೆ ಸಂಜೆ 5 ಗಂಟೆಗೆ ಮುಗಿಯುತ್ತದೆ. ನಂತರ ಇಲ್ಲ.

**ಶ್ರೀ ಪಿ.ಆರ್. ರಮೇಶ್:-** ತಾವು ನನಗೆ ನಾಳೆ ಅವಕಾಶ ಕೊಡುತ್ತೀರಾ?

**ಸಭಾಪತಿಯವರು:-** ಮೊದಲು ಬಿಜೆಪಿ ಪಕ್ಷದವರು ಒಬ್ಬರು ಮಾತನಾಡಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲ, ನಂತರ ಎಂ. ನಾರಾಯಣಸ್ವಾಮಿ, ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ರವರುಗಳು ಸಹ ಇಲ್ಲ. ನಂತರ ಶ್ರೀ ಶಶೀಲ್ ಜಿ. ನಮೋಶಿಯವರು ನಿಯಮ 330ರ ವಿಷಯವನ್ನು ಪ್ರಸ್ತಾಪಿಸಿ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲದಿರುವ ಕಾರಣ ದಯಮಾಡಿ ಈ ವಿಷಯವನ್ನು ನಾಳೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರುಃ-** ಇಲ್ಲ.

**Sri K.T. SRIKANTEGOWDA:-** Sir, Education Minister ಇಲ್ಲ. ಮಾನ್ಯ ಮಂತ್ರಿಗಳನ್ನು ಸದನಕ್ಕೆ ಕರೆಸಿರಿ.

**ಸಭಾಪತಿಯವರು:-** ಅವರು ಇಲ್ಲ, ಸಚಿವರೂ ಇಲ್ಲ ಎಂದರೆ ಸಭೆ ಹೇಗೆ ನಡೆಸಬೇಕು?

**ಶ್ರೀ ಶಶೀಲ್ ಜಿ. ನಮೋಶಿ:-** ನಾಳೆ ತೆಗೆದುಕೊಳ್ಳಿ.

**ಸಭಾಪತಿಯವರು:-** ಇವತ್ತಿನ ವಿಷಯ ಇವತ್ತು ಮುಗಿಸೋಣ, ನಾಳೆ ಇಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾನಾಯಕರು slip ಕಳುಹಿಸಿ ಮಂತ್ರಿಗಳನ್ನು ಕರೆಸಬೇಕು.

**ಸಭಾಪತಿಯವರುಃ-** ಕೆಳಗಿನ ಸದನ adjourn ಆಗಿದೆ, ಈ ಸದನಕ್ಕೆ ಬರಲು ಏನು ತೊಂದರೆ? ಕರೆಸಿ. ನಂತರ ಶ್ರೀಮತಿ ವೀಣಾ ಅಚ್ಚಯ್ಯನವರು ನಿಯಮ 330ರ ವಿಷಯವನ್ನು ಪ್ರಸ್ತಾಪ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೆಳಗಿನ ಮನೆಯ ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡುತ್ತಿದ್ದಾರೆ. ತಾವು ಒಂದಿಬ್ಬರಿಗೆ budget ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ನಮ್ಮ ಕಡೆ ಹಾಗೂ ಆ ಕಡೆಯೂ ಮಾತನಾಡುವವರಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ......

**ಸಭಾಪತಿಯವರುಃ-** ಮಾನ್ಯ ಸಭಾನಾಯಕರೇ, ಈ ರೀತಿ ಆದರೆ ಸದನವನ್ನು ಹೇಗೆ ನಡೆಸುವುದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎರಡೂ ಸದನಗಳ ವಿರೋಧ ಪಕ್ಷದ ನಾಯಕರು ಚರ್ಚೆಯಲ್ಲಿರುವುದರಿಂದ ಇಬ್ಬರು-ಮೂವರು ಸದಸ್ಯರಿಗೆ ಆಯವ್ಯಯದ ಮೇಲೆ ಮಾತನಾಡಲು ತಾವೀಗ ಅವಕಾಶ ಕೊಟ್ಟರೆ, agenda ದಲ್ಲಿರುವ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ.

**ಸಭಾಪತಿಯವರು:-** ಇವತ್ತು ಅವರು ಮಾತನಾಡದಿದ್ದರೆ ನಾನು ಸದನ ನಡೆಸಲು ಆಗುವುದಿಲ್ಲ. ಇವತ್ತಿನ agenda ಇವತ್ತು ಮುಗಿಯಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಮಯ ಎಷ್ಟಾದರೂ ಅಡ್ಡಿಯಿಲ್ಲ.

**ಸಭಾಪತಿಯವರು:-** ಇವತ್ತಿನ agenda ಇವತ್ತು ಮುಗಿಯಬೇಕು.

**ಶ್ರೀ ಗೋವಿಂದ ರಾಜುಃ-** ಮಾನ್ಯ ಸಭಾಪತಿಯವರೇ, ನನ್ನ ಅರ್ಧ ಗಂಟೆ ಚರ್ಚೆಯ ವಿಷಯ ಇದೆ.

**ಸಭಾಪತಿಯವರು:-** ನಾನು ಇವತ್ತಿನ agenda ದಂತೆ ನಡೆಸಬೇಕು. ಅವರು ಮಾತನಾಡಿದ ನಂತರ ತೆಗೆದುಕೊಳ್ಳೋಣವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಮ್ಮದೇನೂ problem ಇಲ್ಲ, ಬೇರೆ ಮಂತ್ರಿಗಳನ್ನು ಕರೆಯುತ್ತೇನೆ. ಪ್ರಶ್ನೆ ಕೇಳಲು ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲ.

**ಸಭಾಪತಿಯವರು:-** ಕರೆಯಿರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ನಾಳೆ ಆದರೂ ಮಾತನಾಡುತ್ತಾರೆ, ಈಗ ಇವರಿಗೆ ಅವಕಾಶ ಕೊಡಿ. ನಾನು ಮಂತ್ರಿಯವರನ್ನು ಕರೆಸುತ್ತೇನೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇಲ್ಲ, ಯಾವುದೋ ಚರ್ಚೆಯಲ್ಲಿದ್ದಾರೆ. ಆದ್ದರಿಂದ ಒಂದಿಬ್ಬರಿಗೆ ತಾವು ಆಯವ್ಯವದ ಮೇಲೆ ಮಾತನಾಡಲು ಅವಕಾಶ ಕೊಟ್ಟರೆ ಅಷ್ಟರಲ್ಲಿ ನಾನು ಮಂತ್ರಿಗಳನ್ನು ಕರೆಸುತ್ತೇನೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(596)/23.03.2021/5.00/ಹೆಚ್‌ವಿ:ಎಕೆ**

**ಶ್ರೀ ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾನು ಆಯವ್ಯಯದ ಮೇಲೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸಂಜೆ 5 ಗಂಟೆ ನಂತರ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶವಿಲ್ಲವೆಂದು ತಾವು ಹೇಳಿ, ನನ್ನ ಮಾತುಗಳನ್ನು ಮೊಟಕುಗೊಳಿಸಿದ್ದೀರಿ. ಈಗ ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

**ಸಭಾಪತಿಯವರುಃ–** ಮಾನ್ಯ ಗೋವಿಂದರಾಜುರವರೇ, ಪರಿಸ್ಥಿತಿ ಯಾವ ರೀತಿಯಲ್ಲಿದೆ ಎನ್ನುವುದನ್ನು ನೋಡಿ, ಸದನದಲ್ಲಿ ಸಭಾನಾಯಕರಿಲ್ಲ, ವಿರೋಧ ಪಕ್ಷದ ನಾಯಕರಿಲ್ಲ, ಸಚಿವರುಗಳು ಇಲ್ಲ ನಾನು ಏನು ಮಾಡುವುದು?

**ಶ್ರೀ ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ನಾನು ಅಷ್ಟು ತಮ್ಮಲ್ಲಿ ಬಹಳ ಮನವಿ ಮಾಡಿ ‘ಎ.ಪಿ.ಎಂ.ಸಿ. ಬಗ್ಗೆ ಮಾತನಾಡುವುದಕ್ಕೆ 5 ನಿಮಿಷಗಳ ಅವಕಾಶವನ್ನು ಕೊಡಿ’ ಎಂದು ಕೇಳಿದ್ದೆ ತಾವು ಕೊಡಲಿಲ್ಲ. ಅರ್ಧಗಂಟೆ ಕಾಲಾವಧಿಯಡಿಯಲ್ಲಿ ನನ್ನದೊಂದು ವಿಚಾರವಿದೆ. ಮಾನ್ಯ ಮಂತ್ರಿಗಳನ್ನು ಕರೆದು ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರುಃ–** ಯಾರೂ ಮಂತ್ರಿಗಳು ಇಲ್ಲದಿದ್ದರೆ ನಾನೇನು ಮಾಡಲಿ?

**12. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಕಳೆದ ಮೂರ್ನಾಲ್ಕು ದಿನಗಳಿಂದ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಸಿಗಬಹುದೆಂದು ಕಾಯುತ್ತಿದ್ದೆ, ಈಗ ಕಡೆ ಘಳಿಗೆಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ಧನ್ಯವಾದಗಳು.

**ಸಭಾಪತಿಯವರು:–** ಅನಿವಾರ್ಯವಾಗಿ ಅವಕಾಶವನ್ನು ನೀಡಬೇಕಾದಂತಹ ಪರಿಸ್ಥಿತಿ ಬಂದಿದೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಬಿ.ಎಸ್.ಯಡಿಯೂರಪ್ಪನವರು 2021–22ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ. ಅವರು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಂಡಿಸಿರುವ ಆಯವ್ಯಯ ಪುಸ್ತಕದಲ್ಲಿನ ಪ್ರಪ್ರಥಮ ವಾಕ್ಯವೆಂದರೆ, 'ನಾನು ಕರ್ನಾಟಕ ಸರ್ಕಾರದ 2021–22ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ.' ಎಂದು ಇದೆ. ಹರ್ಷ ವ್ಯಕ್ತಪಡಿಸುತ್ತಿರುವುದಕ್ಕೆ ಕಾರಣವೇನೆಂಬುದು ನನಗೆ ತಿಳಿಯುತ್ತಿಲ್ಲ. ಸಾಲ ಮಾಡಿ ಈ ಆಯವ್ಯಯವನ್ನು ಮಂಡಿಸುತ್ತಿರುವುದಕ್ಕೆ ಅವರಿಗೆ ಹರ್ಷವಾಗುತ್ತಿದೆಯೇ? ಕೊರೋನಾ ಬಂದು ಜನರು ಸಂಕಷ್ಟದಲ್ಲಿದ್ದಾರೆ ಎಂದು ಹರ್ಷವೇ? ಆರ್ಥಿಕ ಹಿಂಜರಿತ ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಇದೆ ಎನ್ನುವ ಕಾರಣಕ್ಕೆ ಹರ್ಷವೇ? ನಿರುದ್ಯೋಗ ತಾಂಡವವಾಡುತ್ತಿದೆಯೆಂದು ಹರ್ಷವೇ? ಬಡತನದ ದರ ಹೆಚ್ಚಾಗುತ್ತಿದೆಯೆಂದು ಹರ್ಷವೇ? ಬೆಲೆ ಏರಿಕೆ ಆಗುತ್ತಿರುವುದಕ್ಕೆ ಹರ್ಷವಾಗುತ್ತಿದೆಯೇ? ಏತಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಹರ್ಷವನ್ನು ವ್ಯಕ್ತಪಡಿಸಿದ್ದಾರೆ ಎನ್ನುವುದರ ಬಗ್ಗೆ ಉತ್ತರ ಕೊಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದಲ್ಲಿ 'ಸಮಗ್ರ ಅಭಿವೃದ್ಧಿ ನಮ್ಮ ಆದ್ಯತೆ' ಎಂದು ಹೇಳಿದ್ದಾರೆ. ಸಮಗ್ರ ಅಭಿವೃದ್ಧಿ ಎಂದರೇನು ಮತ್ತು inclusive growth ಎಂದರೇನು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕಾಗಿದೆ. ಸಮಗ್ರ ಅಭಿವೃದ್ಧಿ ಮತ್ತು inclusive growth ಎನ್ನುವುದಕ್ಕೆ ಬಹಳ ಅರ್ಥಗಳಿವೆ. ಆ ಅರ್ಥದಲ್ಲಿ ಈ ಆಯವ್ಯಯ ಇದೆಯೇ ಎನ್ನುವುದು ಪ್ರಶ್ನಾತೀತವಾಗಿರುವ ವಿಷಯವಾಗಿದೆ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬರಬೇಕಾಗಿರುವ ಜಿ.ಎಸ್.ಟಿ ಭಾಗವಾಗಿರಬಹುದು ಅಥವಾ ಬೇರೆ ಯಾವುದೇ ಅನುದಾನವಾಗಿರಬಹುದು ಅದು ಸರಿಯಾಗಿ ಬರುತ್ತಿಲ್ಲ. ಎರಡನೆಯದಾಗಿ, ನಮ್ಮ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ನಿಟ್ಟಿನಲ್ಲಿ ನಾವು ಸರಿಯಾದ ರೀತಿಯಲ್ಲಿ ರೂಪುರೇಷೆಗಳನ್ನು ಹಾಕಿಕೊಳ್ಳದೇ ಇರಬಹುದು. ಇಂತಹ ಪರಿಸ್ಥಿತಿಯಲ್ಲಿ, 'ಪರಿಶಿಷ್ಟ ಜಾತಿ ಮತ್ತು ಪಂಗಡದವರು, ಹಿಂದುಳಿದವರು, ಅಲ್ಪ ಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳು, ಹಿರಿಯ ನಾಗರಿಕರು ಹಾಗೂ ವಿಕಲಚೇತನರ ಅಭ್ಯುದಯಕ್ಕೆ ಮುಂಗಡಪತ್ರದಲ್ಲಿ ಒತ್ತು ನೀಡಲಾಗಿದೆ' ಎಂದು ಆಯವ್ಯಯದಲ್ಲಿ ಹೇಳಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಯಾವುದಕ್ಕೆ ಒತ್ತು ಕೊಟ್ಟಿದ್ದಾರೆ, ಒತ್ತು ಕೊಡುವ ನಿಟ್ಟಿನಲ್ಲಿ ಯಾವ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ಆಯವ್ಯಯ ಪುಸ್ತಕದಲ್ಲಿರುವ ಪ್ರತಿ ಕಂಡಿಕೆಯಲ್ಲಿಯೂ ಕೊರೋನಾ...ಕೊರೋನಾ ಎಂದು ಕೊರೋನಾವನ್ನೇ ಉಲ್ಲೇಖಿಸಿದ್ದಾರೆ. ಮಾನ್ಯ ಹೆಚ್.ವಿಶ್ವನಾಥ್‌ರವರು ಮಾತನಾಡುತ್ತಾ, 'ಕೊರೋನಾಗೋಸ್ಕರ ಆಯವ್ಯಯವನ್ನು ಮಾಡಬೇಕಾಗಿತ್ತು' ಎಂದು ಹೇಳಿದ್ದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಹೊಸದಾಗಿ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. 2002ನೇ ಇಸವಿಯಲ್ಲಿ Karnataka Fiscal Responsibility Act ನ್ನು ಜಾರಿಗೊಳಿಸಲಾಯಿತು. The object of this Act is,

“The Fiscal Responsibility Bill among other things provides for the following:

i) requiring the State Government to lay in each financial year before both the Houses of the State Legislature a medium term fiscal plan along with the annual budget which will set forth four years rolling target for the prescribed fiscal indicators.”

ಈ ಆಕ್ಟ್ 2006ರವರೆಗೆ ಅಸ್ತಿತ್ವದಲ್ಲಿರುವಂತೆ ಜಾರಿಗೊಳಿಸಲಾಗಿತ್ತು. 2002 ರಿಂದ 2006ರವರೆಗೆ ಒಟ್ಟು 04 ವರ್ಷಗಳಲ್ಲಿ fiscal responsibility, ಆರ್ಥಿಕತೆಯಲ್ಲಿ ಶಿಸ್ತು ತರಬೇಕೆನ್ನುವ ಹಿನ್ನೆಲೆಯಲ್ಲಿ ಈ ಆಕ್ಟ್‌ನ್ನು ವಿಶೇಷವಾಗಿ ತರಲಾಗಿತ್ತು. ಇಡೀ ದೇಶದಲ್ಲಿ ಪ್ರಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಈ ಆಕ್ಟ್‌ನ್ನು ಜಾರಿಗೊಳಿಸಲಾಯಿತು. ಈ ಆಕ್ಟ್‌ನ್ನು ಈ ಕೆಳಕಂಡ ಕಾರಣಕ್ಕಾಗಿ ಜಾರಿಗೊಳಿಸಲಾಯಿತು. ಅದೇನೆಂದರೆ;

“ii) specifying fiscal management principles to guide the State Government.

iii) requiring the State Government to take appropriate measures to eliminate revenue deficit and containing the Fiscal deficit to 3% of GSDP by 31st March 2006.”

ಅಂದರೆ, 2002ರಿಂದ 2006ರವರೆಗೆ revenue deficit ಗರಿಷ್ಠ ಶೇಕಡಾ 3ಕ್ಕಿಂತ ಕಡಿಮೆಯಿರಬೇಕೆನ್ನುವುದು ಇದರ ಉದ್ದೇಶವಾಗಿತ್ತು. 2006ರವರೆಗೆ ಮಾತ್ರ ಜಾರಿಯಲ್ಲಿದ್ದ ಈ ಆಕ್ಟ್‌ಗೆ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮತ್ತೇಮತ್ತೇ ತಿದ್ದುಪಡಿ ತರಲಾಗುತ್ತಿದೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಈ ಆಕ್ಟ್‌ಗೆ ತಿದ್ದುಪಡಿಯನ್ನು ತರಲಾಯಿತು. Revenue deficit ಗರಿಷ್ಠ ಶೇಕಡಾ 3ಕ್ಕಿಂತ ಕಡಿಮೆ ಇರಬೇಕು ಎನ್ನುವುದನ್ನು ಶೇಕಡಾ 5ರಷ್ಟು ಇರಬೇಕೆಂದು ತಿದ್ದುಪಡಿ ಮಾಡಿಕೊಳ್ಳಲಾಯಿತು. ಈ ರೀತಿ ತಿದ್ದುಪಡಿ ಮಾಡಿಕೊಂಡಿರುವುದರಿಂದ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳುವುದಕ್ಕೆ ಸಹಾಯಕವಾಯಿತು. ಯಾವ ಕಾರಣಕ್ಕಾಗಿ ಹೆಚ್ಚಿನ ಸಾಲವನ್ನು ಪಡೆದುಕೊಳ್ಳಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತೆಂದರೆ, ಕೇಂದ್ರ ಸರ್ಕಾರದವರು 'ನಿಮ್ಮ ರಾಜ್ಯಕ್ಕೆ ಕೊಡಬೇಕಾಗಿರುವ ಜಿ.ಎಸ್.ಟಿ. ಭಾಗವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೀವು ಸಾಲವನ್ನು ಪಡೆದುಕೊಳ್ಳಿ' ಎಂದು ಹೇಳಿದ ಹಿನ್ನೆಲೆಯಲ್ಲಿ Karnataka Fiscal Responsibility Act ಗೆ ತಿದ್ದುಪಡಿಯನ್ನು ತರುವ ಮೂಲಕ ಸಡಿಲಗೊಳಿಸಲಾಯಿತು. ಕಳೆದ ವರ್ಷ ಈ ಆಕ್ಟ್‌ಗೆ relaxation ತಂದು ಸಾಲವನ್ನು ತೆಗೆದುಕೊಳ್ಳಲಾಯಿತು. ಪುನಃ ಈ ವರ್ಷ 71 ಸಾವಿರ ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಳ್ಳಲು ಆಕ್ಟ್‌ಗೆ ತಿದ್ದುಪಡಿಯನ್ನು ತರಲಾಗುತ್ತದೆಂದು ಆಯವ್ಯಯದಲ್ಲಿಯೇ ಉಲ್ಲೇಖ ಮಾಡಿದ್ದಾರೆ. ಇದು ಬಹಳ ವಿಚಿತ್ರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೊರೋನಾ ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಇದರ ಜೊತೆಗೆ ಸಂಪನ್ಮೂಲ ಕ್ರೋಢೀಕರಣವನ್ನು ಮಾಡಿಲ್ಲ ಮತ್ತು ನಮಗೆ ಬರಬೇಕಾಗಿರುವ ವರಮಾನವೂ ಬರುತ್ತಿಲ್ಲ. ಆಡಳಿತ ಸುಧಾರಣೆಯಡಿಯಲ್ಲಿ ಆಡಳಿತ ವೆಚ್ಚವನ್ನು ಕಡಿಮೆ ಮಾಡುವ ಬಗ್ಗೆ ಮತ್ತು ಆಡಳಿತಾತ್ಮಕ ಲೋಪಗಳನ್ನು ಸರಿಪಡಿಸುವ ಬಗ್ಗೆ ಈ ಆಯವ್ಯಯದಲ್ಲಿ ಯಾವುದೇ ಯೋಜನೆಗಳನ್ನು ಮಾಡಿಲ್ಲ. ಕಳೆದ ವರ್ಷದ ಮಾರ್ಚ್ ತಿಂಗಳಿನಿಂದ ಇಲ್ಲಿಯವರೆಗೆ ನಾವು ಕೊರೋನಾ ಸಾಂಕ್ರಾಮಿಕ ರೋಗದಿಂದಾಗಿ ಆರ್ಥಿಕ ಸಂಕಷ್ಟವನ್ನು ಎದುರಿಸಿದ್ದೇವೆ. ಈಗ ಕೊರೋನಾ 2ನೇ ಅಲೆ ಪ್ರಾರಂಭವಾಗಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಇದಕ್ಕೊಂದು Management Action Plan ಮಾಡುವುದಕ್ಕೆ ಸರ್ಕಾರ ರೂಪುರೇಷೆಗಳನ್ನು ಏತಕ್ಕೋಸ್ಕರ ರಚಿಸಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊರೋನಾ ಕಾರಣದಿಂದಾಗಿ ನಮಗೆ ಬರಬೇಕಾಗಿರುವ ವರಮಾನ ಬರದೇ ಇರುವುದರಿಂದ ನಾನು ಆರ್ಥಿಕ ನಷ್ಟವನ್ನು ಎದುರಿಸುತ್ತಿದ್ದೇವೆ ಎನ್ನುವ ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆಡಳಿತ ವೆಚ್ಚವನ್ನು ತಗ್ಗಿಸುವ ನಿಟ್ಟಿನಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪ್ರತಿದಿನ ಡೀಸೆಲ್ ಮತ್ತು ಪೆಟ್ರೋಲ್ ದರ ಹೆಚ್ಚಾಗುತ್ತಿದೆಯೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಕಳೆದ ವರ್ಷ ಪೆಟ್ರೋಲ್‌ಗೆ ಶೇಕಡಾ 35ರಷ್ಟು ಮತ್ತು ಡೀಸೆಲ್‌ಗೆ ಶೇಕಡಾ 24ರಷ್ಟು ತೆರಿಗೆಯನ್ನು ವಿಧಿಸಲಾಗಿದೆ. ಈ ತಿಂಗಳ 18ನೇ ತಾರೀಖಿನಂದು ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು, 'ಇವತ್ತಿನ ಪೆಟ್ರೋಲ್‌ನ ಮೂಲ ಬೆಲೆ 33 ರೂಪಾಯಿ 93 ಪೈಸೆಯಾಗಿದೆ. ಡೀಸೆಲ್‌ನ ಮೂಲ ಬೆಲೆ 35 ರೂಪಾಯಿ 64 ಪೈಸೆಗಳಾಗಿವೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇದರ ಜತೆಗೆ ಕೇಂದ್ರ ಸರ್ಕಾರದ additional Excise Duty ಅನ್ನು ಸೇರಿಸುತ್ತಾರೆ. ಪೆಟ್ರೋಲ್‌ಗೆ 33 ರೂಪಾಯಿ 65 ಪೈಸೆಗಳಷ್ಟು Excise Duty ಎಂದು ಹಾಕುತ್ತಿದ್ದಾರೆ. ಇದು ಹೆಚ್ಚು ಕಡಿಮೆ ಮೂಲ ಬೆಲೆಯಷ್ಟೇ ಇದೆ. ಡಿಸೆಲ್‌ಗೆ 31 ರೂಪಾಯಿ 80 ಪೈಸೆಗಳಷ್ಟು Excise Duty ಹಾಕಿದ್ದಾರೆ. **(ಮುಂದು)**

**(597) 23.3.2021 5.10 ಪಿಕೆ:ಆರ್‌ಎನ್**

**ಶ್ರೀ ಪಿ.ಆರ್.ರಮೇಶ್(ಮುಂದು):-**

ಇವೆರಡನ್ನು ಕೂಡಿದರೆ, ಮತ್ತೆ transportation charges ಹಾಕಿದರೆ ಪೆಟ್ರೋಲ್ ಬೆಲೆ 67.25 ರೂ ಆಗುತ್ತದೆ, ಡೀಸೆಲ್ 67.85 ರೂ.ಆಗುತ್ತದೆ. 35 ಪರ್ಸೆಂಟ್ landing product ಮೇಲೆ ಹಾಕುತ್ತೀರಿ. ರಾಜ್ಯಕ್ಕೆ ಬರುವಂಥದ್ದು 67.25 ರೂ.ಗಳು. ಅಂದರೆ real charge ಅಥವಾ real cost 33.93 ರೂಪಾಯಿ. ಇದರ ಮೇಲೆ 35 ಪರ್ಸೆಂಟ್ ಹಾಕಿದರೆ ಕೇವಲ 11.00 ರೂಪಾಯಿ ಅಥವಾ 12.00 ರೂಪಾಯಿ ಬೀಳುತ್ತದೆ. ಆದರೆ ನಿಮಗೆ ಕೇಂದ್ರ ಸರ್ಕಾರದವರು Excise Duty ಹೆಚ್ಚಿಸುತ್ತಾ, ಅದು ಸೇರಿಕೊಂಡು ಮತ್ತೆ ಏನು Oil price fluctuation ಆಗುತ್ತಿರುತ್ತದೆ. ಅದನ್ನೂ ಸೇರಿಸಿಕೊಂಡರೆ ಈ ಎರಡು ಸೇರಿ 35 ಪರ್ಸೆಂಟ್ ಪೆಟ್ರೋಲ್ ಮೇಲೆ ಹಾಕುತ್ತೀರಿ ಮತ್ತು ಡೀಸೆಲ್ ಮೇಲೆ 24 ಪರ್ಸೆಂಟ್ ಹಾಕುತ್ತೀರಿ. ಹೀಗಾಗಿ ನಮ್ಮ ರಾಜ್ಯದಲ್ಲಿ ಕಮೀಷನ್ ಎಲ್ಲಾ ಹಾಕಿ 18ನೇ ದಿನಾಂಕದಂದು ಪೆಟ್ರೋಲ್ ಬೆಲೆ ಒಂದು ಲೀಟರ್‌ಗೆ 94.21 ರೂಪಾಯಿ ಇತ್ತು. ಡೀಸೆಲ್ ಬೆಲೆ 86.35 ರೂಪಾಯಿ ಇತ್ತು. ಕೇಂದ್ರ ಸರ್ಕಾರದವರೇನು Excise Duty ಹಾಕುತ್ತಿದ್ದಾರೋ, ನೀವು 35 ಪರ್ಸೆಂಟ್ ಎಂದು ಏನು ಹೇಳುತ್ತಿದ್ದೀರೋ ಅದನ್ನು ಕನಿಷ್ಠ 30 ಪರ್ಸೆಂಟ್‌ಗೆ ಏಕೆ ತರಬಾರದು? ನಮ್ಮ ರಾಜ್ಯದ ಜನರಿಗೆ relaxation ಮಾಡಿ ಸಹಾಯ ಮಾಡಬೇಕು ಎಂದರೆ 30 ಪರ್ಸೆಂಟ್ ಹಾಕಿ. ಆಗ ಅವರಿಗೆ ನೆಮ್ಮದಿ ಸಿಗುತ್ತದೆ. ಇವತ್ತು ಅವರು ತಮ್ಮ ಜೀವನದಲ್ಲಿ ಕಷ್ಟಪಡತಕ್ಕ ಸನ್ನಿವೇಶ ಬಂದಿದೆ. ಇಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಬದುಕಿನ ವೆಚ್ಚಗಳನ್ನು ಹೆಚ್ಚಿಗೆ ಮಾಡುತ್ತಾ ಹೋದರೆ ಜನ ಬದುಕುವುದಕ್ಕೆ ಆಗದೇ ಇರುವಂತಹ ಸನ್ನಿವೇಶ ಸೃಷ್ಟಿ ಮಾಡಿದಂತಾಗುತ್ತದೆ.

ಮಾನ್ಯ ಸಭಾಪತಿಯವರೇ, ಬಜೆಟ್ ಪುಸ್ತಕವನ್ನು ಓದಿದಾಗ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟಿದೆ ಎನ್ನುವುದು ಗೊತ್ತಾಗುತ್ತದೆ. ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮಕ್ಕೆ ಸೀಮಿತವಾಗಿ ಕೆಲವು ವಿಷಯಗಳನ್ನು, ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಸಮಾಜಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳಿದ್ದೀರಿ. ಸರ್ಕಾರದಿಂದ ಈ ಬಜೆಟ್ ಪುಸ್ತಕವನ್ನು ಕೊಟ್ಟಿದ್ದಾರೆ. ಅರ್ಥ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು ಏನು ಬಜೆಟ್ ಮಂಡಿಸುತ್ತಾರೋ ಅದಕ್ಕನುಗುಣವಾಗಿ ಬಜೆಟ್ ಎಸ್ಟಿಮೇಟ್ ಇರುತ್ತದೆ. ಬಜೆಟ್ ಎಸ್ಟಿಮೇಟ್‌ನಲ್ಲೇನಿರುತ್ತದೆಯೋ ಅದನ್ನು ನೋಡಿಯೇ ನಮ್ಮ ಆರ್ಥಿಕ ಇಲಾಖೆಯವರು ಅಪ್ರೂವಲ್ ಕೊಡುತ್ತಾರೆ. 2019-20ರಲ್ಲಿ 143.27 ಕೋಟಿ ಹಣವನ್ನು ದೇವರಾಜ ಅರಸು ಅಭಿವೃದ್ಧಿ ನಿಗಮಕ್ಕೆ ಕೊಟ್ಟಿದ್ದಾರೆ. ಹೋದ ವರ್ಷ 80 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಈ ವರ್ಷ 60 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. Karnataka Veerashaiva Lingayatha Development Corporation ಗೆ Head of Account ನಲ್ಲಿ ಕೊಟ್ಟಿರುವುದು ಕೇವಲ 1 ಲಕ್ಷ ರೂ.ಗಳು. ಇದನ್ನು ಯಾರು ಬೇಕಾದರೂ ನೋಡಬಹುದು. ನೀವು ಓದಿರುವುದು 500 ಕೋಟಿ ರೂ.ಗಳು. ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಕೇವಲ 1 ಲಕ್ಷ ರೂ.ಗಳನ್ನು ತೋರಿಸಲಾಗಿದೆ. ಇದು ನಾನು ಪ್ರಿಂಟ್ ಮಾಡಿಲ್ಲ, ಸರ್ಕಾರದವರು ಪ್ರಿಂಟ್ ಮಾಡಿದ್ದಾರೆ. ಓದಿರುವ ಮೊತ್ತ ಬೇರೆ ಇರಬಹುದು. ಆದರೆ ಇದನ್ನು ನೋಡಿಕೊಂಡು ಆರ್ಥಿಕ ಇಲಾಖೆಯವರು ಹಣ ರಿಲೀಸ್ ಮಾಡುತ್ತಾರೆ. [illegible], 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ, ಅದು ಇಲ್ಲಿ ರಿಫ್ಲೆಕ್ಟ್ ಆಗಬೇಕಾಗಿತ್ತು. ಏಕೆ ಆಗಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಆರ್ಥಿಕ ಇಲಾಖೆಯವರೇ ಇದನ್ನು ಬಿಟ್ಟಿದ್ದಾರೆಯೇ ಅಥವಾ ಅಲಕ್ಷವೇ? ಮುಖ್ಯಮಂತ್ರಿಗಳು ಓದಿದರೂ ಸಹ ಇದರಲ್ಲಿ ಏಕೆ ಹಾಕಿಲ್ಲ? ಕನಿಷ್ಠ ಪಕ್ಷ Head of Account ನಲ್ಲಿ ವೀರಶೈವ ಲಿಂಗಾಯಿತರು ಎರಡೂ ತೋರಿಸಲಾಗಿದೆ. ಆದರೆ ಒಕ್ಕಲಿಗರದ್ದು ತೋರಿಸಲೇ ಇಲ್ಲ. ಬ್ರಾಹ್ಮಣ ಸಮಾಜಕ್ಕೆ 50 ಕೋಟಿ ರೂ. ಕೊಟ್ಟಿದ್ದೀರಿ, ಅದನ್ನೂ ತೋರಿಸಿಲ್ಲ. ಆರ್ಯವೈಶ್ಯ ಸಮಾಜಕ್ಕೆ ತಾವು ಕೊಟ್ಟಿರುವುದನ್ನು ಮಿಕ್ಸ್ ಮಾಡಿ 500 ಕೋಟಿ ರೂ.ಗಳಲ್ಲಿ ಕೊಟ್ಟಿದ್ದೀರಿ. ಅದೂ ಕೂಡ ಇದರಲ್ಲಿ ಇಲ್ಲ. ಇನ್ನೂ ಕೆಲವು ಜಾತಿಗಳನ್ನು ಬಿಟ್ಟೇ ಬಿಟ್ಟಿದ್ದಾರೆ. ಅದರಲ್ಲಿ ಆರ್ಯವೈಶ್ಯ, ಮರಾಠ ಅಭಿವೃದ್ಧಿ ನಿಗಮ ಇಲ್ಲ, ಕಾಡುಗೊಲ್ಲರು ಇಲ್ಲ ಮತ್ತು ಸವಿತಾ ಸಮಾಜ ಇವು ಈ ಪುಸ್ತಕದಲ್ಲಿ ಇಲ್ಲ. ಮುಖ್ಯಮಂತ್ರಿಗಳು ಓದಿರುವುದರಲ್ಲಿದೆ. ಬಜೆಟ್ ಎಸ್ಟಿಮೇಟ್

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪುಸ್ತಕದಲ್ಲಿ ಇಲ್ಲದೇ ಇರುವುದು ದಿಗ್ಭ್ರಮೆಯಾಗಿದೆ. ಮುಖ್ಯಮಂತ್ರಿ ಹೇಳಿರುವಂಥದ್ದು ನಿಜವೇ, ಇಲ್ಲವೇ, ಅದು ಆಗುತ್ತದೆಯೋ ಇಲ್ಲವೋ ಎನ್ನುವ ಸಂಶಯ ನಮ್ಮೆಲ್ಲರಿಗೂ ಕಾಡುತ್ತಿದೆ. ಇದರ ಬಗ್ಗೆ ನನಗೆ ಉತ್ತರ ಕೊಡಬೇಕು.

ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಒತ್ತನ್ನು ಕೊಟ್ಟಿರುವ ರೀತಿಯಲ್ಲಿ ಬಜೆಟ್‌ನಲ್ಲಿ ಬಿಂಬಿಸಲಾಗಿದೆ. 3 ತಿಂಗಳ ಹಿಂದೆ 'ಬೆಂಗಳೂರು ಮಿಷನ್-22' ಎಂದು ಒಂದು ಕಾರ್ಯಕ್ರಮ ಮಾಡಿದಿರಿ. ಇದಕ್ಕೆ ಯಾವುದೇ ಹಣಕಾಸು ಕೊಟ್ಟಿಲ್ಲ. ಇರತಕ್ಕಂಥ ಹಣಕಾಸಿನ ವ್ಯವಸ್ಥೆಯಲ್ಲೇ ರೂಪು-ರೇಷೆಗಳನ್ನು ಮಾಡಿ, 'ಸುಗಮ ಸಂಚಾರ', ಸ್ವಚ್ಛ ಬೆಂಗಳೂರು', 'ಹಸಿರು ಬೆಂಗಳೂರು' ಮತ್ತು 'ಜನಸಂಪರ್ಕ' ಎಂದು ಮಾಡಿದಿರಿ. ಆದರೆ ಇದಕ್ಕೆ ಯಾವುದೇ ಅನುದಾನ ಕೊಟ್ಟಿಲ್ಲ. 'ಸ್ಮಾರ್ಟ್ ಸಿಟಿ' ಎಂದು ಹೆಸರು ಕೊಟ್ಟಿದ್ದೀರಿ. ಕೇಂದ್ರ ಸರ್ಕಾರದವರು 100 ಕೋಟಿ ಕೊಡುತ್ತಾರೆ, ನೀವು 400 ಕೋಟಿ ಕೊಡಬೇಕು. ಸ್ಮಾರ್ಟ್ ಸಿಟಿ ಅಡಿ ಎಷ್ಟು ಯೋಜನೆಗಳಿವೆ, ಅದು ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ಪಾರದರ್ಶಕತೆ ಇಲ್ಲ. ಬೆಂಗಳೂರು ಮಿಷನ್‌ನಲ್ಲಿ ಜನರಿಗೆ ಏನೊಂದು ಅವಕಾಶ ಕೊಟ್ಟಿದ್ದೀರೋ ಆ ಕುರಿತು ಸರಿಯಾದ ರೀತಿಯಲ್ಲಿ ನಮಗೆ ಉತ್ತರ ಸಿಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ HAL, HMT, BEL and BEML ಹೀಗೆ ಹಲವಾರು ಸಾರ್ವಜನಿಕ ಉದ್ಯಮಗಳು ಇತ್ತು. ಈ public sector ಗಳು ಉತ್ತಮವಾದ ಕೆಲಸಗಳನ್ನು ಮಾಡಿ, ಈ ನಗರದ ಗುರುತನ್ನು ಹೆಚ್ಚು ಮಾಡಿತ್ತು. ಬೆಂಗಳೂರು ಒಂದು product ಆಗಿ, ಒಂದು model ಆಗಿ ನಮ್ಮ ಇಡೀ ಪ್ರಪಂಚಕ್ಕೆ ಒಂದು brand ಆಗಿದೆ. ಇವತ್ತು Cosmopolitan ಎಂದು ಹೇಳುತ್ತೇವೆ, Metropolitan ಎಂದು ಹೇಳುತ್ತೇವೆ. ಆದರೆ ಬೆಂಗಳೂರಿಗೆ Technopolis ಎನ್ನುವ ವಿಶೇಷ ಹೆಸರಿದೆ. Technopolis ಎಂದು ಇಡೀ ಪ್ರಪಂಚ ಬೆಂಗಳೂರನ್ನು ಗುರುತಿಸುತ್ತದೆ. ಈ ಗುರುತನ್ನು ಉಳಿಸಿಕೊಳ್ಳಬೇಕು ಮತ್ತು ಬೆಳೆಸಬೇಕು ಎಂದರೆ ಬೆಂಗಳೂರಿಗೆ ಸರಿಯಾದ ರೂಪು-ರೇಷೆಗಳನ್ನು ಕೊಡಬೇಕು. ಉತ್ತಮವಾದಂತಹ ಯೋಜನೆಗಳನ್ನು ಕೊಡಬೇಕಾಗುತ್ತದೆ. Master Plan ಎಂಬುದಿದೆ. ಹಿಂದೆ 1971ರಲ್ಲಿ Outline Development Plan ಎಂದಿತ್ತು. ODP ಎಂದರೆ, ಬೆಂಗಳೂರಿನಲ್ಲಿ land use ಮತ್ತು ರಸ್ತೆಗಳು ಯಾವರೀತಿ ಇರಬೇಕು ಎಂದು ಮಾನ್ಯ ದೇವರಾಜ ಅರಸು ಇದ್ದಾಗ ರೂಪು-ರೇಷೆಗಳನ್ನು ಕೊಟ್ಟಿದ್ದರು. ಈ ರೂಪು-ರೇಷೆಗಳು ಕೊಟ್ಟ ನಂತರ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು 1984ರಲ್ಲಿ CDP

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(Comprehensive Development Plan) ಎಂದು ಮಾಡಿದರು. ಅದನ್ನು ಗ್ರೀನ್ ಬೆಲ್ಟ್ ಎಂದು ಹಾಕಿದರು. ಬೆಂಗಳೂರು ಸುತ್ತ ಗ್ರೀನ್ ಬೆಲ್ಟ್ ಎಂದು ಗುರುತು ಮಾಡಲಾಗಿತ್ತು. ಇವತ್ತು ಈ ಗೀನ್ ಬೆಲ್ಟ್ ಎಲ್ಲೂ ಇಲ್ಲ. ಎಲ್ಲಾ ಕಾಂಕ್ರೀಟ್ ಬೆಲ್ಟ್ ಆಗಿ ಹೋಗಿದೆ. Rapid Urbanization ಆಗಿದೆ, Unplanned Urbanization ಆಗಿದೆ, ಯಥೇಚ್ಛವಾಗಿ ಜನಸಂಖ್ಯೆ, density of population ಜಾಸ್ತಿಯಾಗಿದೆ. ಅವರಿಗೆ ನಾವು ಸರಿಯಾದ ಸವಲತ್ತು ಕೊಡುವುದಕ್ಕಾಗುತ್ತಿಲ್ಲ. ಯಾವುದೇ ರೀತಿಯ ನಿರ್ದಿಷ್ಟವಾದ ಯೋಜನೆಗಳನ್ನು ರೂಪಿಸುವುದಕ್ಕಾಗುತ್ತಿಲ್ಲ. ಕಣ್ಣುಕಟ್ಟಿದಾಗ ಹೇಗೆಂದರೆ ಹಾಗೆ ಓಡುವ ಮಾದರಿಯಲ್ಲಿ ಎಲ್ಲವೂ ಆಗುತ್ತಿದ್ದು, ಅದರ ಹಿಂದೆ ನಾವು ಓಡುತ್ತಿದ್ದೇವೆ. ಬೆಂಗಳೂರಿಗೆ CDP ಆದಮೇಲೆ revised CDP ಬಂತು. ಆ revised CDP ಆದಮೇಲೆ 2017ರಲ್ಲಿ Master Plan ಬಂತು.

(ಮುಂದು)

**(598) 23-03-2021 5.20 ಡಿಎಸ್-ಆರ್ಎನ್**

**ಶ್ರೀ ಪಿ.ಆರ್.ರಮೇಶ್(ಮುಂದು):-**

ಅಂದರೆ, 2017ಕ್ಕೆ ಈ ಮಾಸ್ಟರ್ ಪ್ಲಾನ್ ಮುಗಿಯುತ್ತದೆ. ತದನಂತರ revised Master Plan ಮಾಡಬೇಕು. Revised Master Plan ಗೆ ಇವತ್ತಿನವರೆಗೂ ನೋಟಿಫೈ ಮಾಡಿಲ್ಲ. ಬಿಡಿಎ ರವರು ಪ್ರಿಪೇರ್ ಮಾಡಿಕೊಂಡಿದ್ದಾರೆ. ಕಳೆದ ವರ್ಷ Vision Document ಎಂದು ಮಾಡಿದರು. ಆದರೆ ಈ ವರ್ಷದ Vision Document ಇಲ್ಲ. ಬೆಂಗಳೂರಿಗೆ visionless plans ನಡೆಯುತ್ತಿದೆ. ಯಾವುದೂ ನಿರ್ದಿಷ್ಟವಾಗಿಲ್ಲ. Mission ಎಂದು ಮಾಡಿ 2022 ಎರಡು ವರ್ಷಕ್ಕೆ ಕೊಟ್ಟಿದ್ದಾರೆ. It is not a vision. ಮಾಡತಕ್ಕಂಥ ಕೆಲಸಕ್ಕೆ ವೇಗವನ್ನು ಕೊಟ್ಟಿದ್ದಾರೆ ಅಷ್ಟೆ. ಯಾವುದೇ grant ಇಲ್ಲ, ಏನು ಕೆಲಸಗಳನ್ನು ಮಾಡುತ್ತಿದ್ದಾರೆ ಅದಕ್ಕೆ ವೇಗವನ್ನು ಕೊಡುವುದಕ್ಕೆ ಒಂದು ರೀತಿಯಲ್ಲಿ political gimmick ಎಂದು ಹೇಳಬಹುದು. ಆದರೆ ಆ ಗಿಮಿಕ್‌ನಿಂದ ಕೆಲಸ ಆಗಬೇಕಲ್ಲವೇ? ಆ ಗಿಮಿಕ್‌ನಿಂದ ಕೆಲಸ ಆಗಬೇಕಾದರೆ ಅಡ್ಮಿನಿಸ್ಟ್ರೇಷನ್‌ಗೆ ಸರಿಯಾದ ರೀತಿಯಲ್ಲಿ ಅನುವು ಮಾಡಿಕೊಡಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿರುವಂತಹ ಸಮಸ್ಯೆಗಳು ಬಹಳ ದೊಡ್ಡದಾಗಿ ಕಾಣುತ್ತಿದೆ. ಆ ದೊಡ್ಡದಾಗಿರುವುದನ್ನು ಯಾವ ರೀತಿ ಕಡಿಮೆ ಮಾಡಬೇಕೆಂದರೆ, ನಾವು ಸರಿಯಾದಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಗಳನ್ನು ರೂಪಿಸಿ ಸರಿಯಾದಂತಹ ಕೆಲಸಗಳನ್ನು ಮಾಡದಿದ್ದರೆ ಖಂಡಿತ ಬೆಂಗಳೂರಿನಲ್ಲಿ ಸಮಸ್ಯೆಗಳು ಹೆಚ್ಚಾಗುತ್ತದೆ. ಬೆಂಗಳೂರಿನಲ್ಲಿ ಇವತ್ತಿನ ಜನಸಂಖ್ಯೆ ಒಂದು ಕೋಟಿ ಇಪ್ಪತ್ತು ಲಕ್ಷಕ್ಕೂ ದಾಟಿರುವಂಥದ್ದಾಗಿದೆ. ಈ ಜನಸಂಖ್ಯೆಗೆ ತಕ್ಕಂತೆ ನಾವು ಸವಲತ್ತುಗಳನ್ನು ಕೊಡದಿದ್ದರೆ ಸರ್ಕಾರವನ್ನು ಬೈಯ್ದುಕೊಂಡು ಜನರು ಓಡಾಡುತ್ತಾರೆ. ಈ ಸರ್ಕಾರ ಬೆಂಗಳೂರಿಗೆ ಸರಿಯಾದಂತಹ ರೀತಿಯಲ್ಲಿ ಸವಲತ್ತುಗಳನ್ನು ಕೊಡಬೇಕಾಗಿದೆ. ಬೆಂಗಳೂರಿನ ಸುತ್ತ ಹೊಸದಾಗಿ ಸೇರಿದೆ ಆ ಹೊಸದ್ದಾಗಿ ಸೇರಿರುವಂಥದ್ದಕ್ಕೆ UGD (Under Ground Drainage) ಕೊಟ್ಟಿದ್ದಾರೆ, ನೀರು ಕೊಟ್ಟಿದ್ದಾರೆ, ಎಲ್ಲಾ ವ್ಯವಸ್ಥೆಯನ್ನು ಕೊಟ್ಟಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್ ಆದ ಮಾನ್ಯ ಕೆ.ಸಿ.ಕೊಂಡಯ್ಯ ರವರು ಸಭಾಪೀಠವನ್ನಲಂಕರಿಸಿದರು)**

ಆದರೆ, ಆ UGD connection ಕೊಟ್ಟ ಮೇಲೆ ಅದರದ್ದು ಎಲ್ಲಿಗೆ ಹೋಗಿ ಸೇರುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಅದು ಎಲ್ಲಿ ಹೋಗಿ ಸೇರುತ್ತದೆ? ಹಳ್ಳಗಳು, ಕೆರೆಕುಂಟೆಗಳಿಗೆ ಹೋಗಿ ಸೇರುತ್ತಿದೆ. ಅಲ್ಲಿ ಹೋಗಿ ಶೇಖರಣೆಯಾಗಿ ground water percolation ಆಗುತ್ತಾ ಹೋಗುತ್ತದೆ. Percolation ಆಗುತ್ತಾ ಹೋದಾಗ ಖಂಡಿತವಾಗಿಯೂ ಬೆಂಗಳೂರಿನಲ್ಲಿರುವಂತಹ under ground water ಸಾಕಷ್ಟು ಕಲುಷಿತವಾಗುತ್ತದೆ. Contaminate ಆಗುತ್ತದೆ. Contaminate ಆದಾಗ automatically recharge ಆಗುವುದು contaminate water ನಿಂದ ಕೊಳವೆ ಬಾವಿಗಳು ಹಾಳಾಗುತ್ತದೆ. ಹಾಳಾಗಿರುವಂತಹ ಕೊಳವೆ ಬಾವಿಯಿಂದ ನೀರು ಕುಡಿದರೆ ರೋಗ-ರುಜಿನಗಳು ಬರುವಂಥದ್ದು ಜಾಸ್ತಿ ಇವೆ. ಹಾಗಾಗಿ ಇದಕ್ಕೆ ಕಡಿವಾಣ ಹಾಕುವಂಥದ್ದಕ್ಕೆ ಸರ್ಕಾರದಿಂದಾಗಲಿ, ಪರಿಸರ ಮಾಲಿನ್ಯ ಮಂಡಳಿಯಿಂದಾಗಲಿ, BWSSB ಯಿಂದಾಗಲಿ ಯಾವುದೇ ಯೋಜನೆ ಇಲ್ಲ. ಇವತ್ತು STPs (Sewage Treatment Plants) ಕಟ್ಟಬೇಕು. STPs ಎಷ್ಟು ಜನ ಕಟ್ಟಿದ್ದಾರೆ? ಯಾವುದೇ ಯೋಜನೆಯನ್ನು ಮಾಡಬೇಕಾದರೆ downstream ನಲ್ಲಿ ಮೊದಲು ಕೆಲಸ ಮಾಡಬೇಕು. Downstream ನಲ್ಲಿ ಕೆಲಸ ಮಾಡದೆ upstream ಕೆಲಸ ಮಾಡಿ ಆಮೇಲೆ ನೀರು ಎಲ್ಲಿ ಹೋಗುತ್ತದೆ? ಪೈಪ್‌ಲೈನ್ ಎಲ್ಲಾ ಹಾಕಿ ಪೂರ್ತಿ ಕೆಲಸವನ್ನು ಮಾಡಿದ್ದಾರೆ. ನೀರು ಹೋಗಿ ಎಲ್ಲಿ ಸೇರುತ್ತದೆ? STP ಇಲ್ಲ. ಕೆರೆಕುಂಟೆಗೆ ಹೋಗಿ ಸೇರುತ್ತದೆ. ಕೆರೆಕುಂಟೆಗೆ ಹೋಗಿರುವ ನೀರು 56000 ಜನಸಂಖ್ಯೆ ಇರುವ ಪಾಯಿಖಾನೆಗಳ ಎಲ್ಲಾ ನೀರು ಸೇರಿದಾಗ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

entire location contaminate ಆಗುತ್ತದೆ. Automatically, ground water ಸಿಕ್ಕಾಪಟ್ಟೆ spoil ಆಗುತ್ತದೆ. ಕೊಳವೆ ಬಾವಿಯಲ್ಲಿ contaminate water ಬರುತ್ತದೆ. Contaminate water ಬಂದಾಗ ಆ ನೀರು ಕುಡಿಯುವುದರಿಂದ ಮಕ್ಕಳಿಗಾಗಲಿ, ಯಾರೇ ಆಗಲಿ, ಕೊರೋನಾಕ್ಕಿಂತ ಭಯಂಕರವಾದಂತಹ ಕಾಯಿಲೆಗಳು ಬರುತ್ತದೆ. ಬೆಂಗಳೂರಿನಲ್ಲಿ ನಾವು ವಾಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇಂತಹ ಒಂದು ಸನ್ನಿವೇಶ ಇವತ್ತು ಆಗಿದೆ.

ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಂತ್ರಿಗಳು ಯಾರು ಇದ್ದ ಹಾಗೆ ಕಾಣುತ್ತಿಲ್ಲ. ಏಕೆಂದರೆ, ಇದರಲ್ಲಿ ನಗರಾಭಿವೃದ್ಧಿ ಇಲಾಖೆಯ ಸಚಿವರು ಮತ್ತು ಕಂದಾಯ ಇಲಾಖೆಯ ಸಚಿವರು ಸದನದಲ್ಲಿರಬೇಕಾಗುತ್ತದೆ. ಆ ಇಲಾಖೆಗಳಿಗೆ ಸಂಬಂಧಪಟ್ಟ ಕಾರ್ಯದರ್ಶಿಗಳು ಇಲ್ಲ. Deputy Secretaries ಇಲ್ಲ, ಇನ್ನು ನಾವು ಯಾರಿಗೋಸ್ಕರ ಮಾತನಾಡಬೇಕು? ನನಗೋಸ್ಕರವೇ ಅಥವಾ ನಿಮಗೋಸ್ಕರವೇ ಅಥವಾ ಇವರಿಗೋಸ್ಕರವೇ? ಬಜೆಟ್ ಪುಸ್ತಕದಲ್ಲಿ ಏನಿದೆ ಅದನ್ನು ನಾವು reflect ಮಾಡಬೇಕು. ಅದು ಸರಿಯಿಲ್ಲವೆಂದರೆ ನಮಗೆ ಅವರು ಉತ್ತರ ಕೊಡಬೇಕಾಗುತ್ತದೆ. ನಮಗೆ ಹೇಳತಕ್ಕಂಥವರು ಯಾರು ಇಲ್ಲವೆಂದರೆ ನಾವು ಯಾರಿಗೆ ಹೇಳಬೇಕು?

**ವೈಸ್‌ಛೇರ್ಮನ್:-** ಸದನದಲ್ಲಿ ಇಬ್ಬರು ಸಚಿವರಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಅವರು ತೋಟಗಾರಿಕೆಯ ಸಚಿವರಾಗಿದ್ದಾರೆ.

**ವೈಸ್‌ಛೇರ್ಮನ್:-** ಮಂತ್ರಿಗಳು ಸಭೆ ಇದೆ ಎಂದು ಹೋಗಿದ್ದಾರೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಸಭಾಪತಿಯವರು ಸದನದಲ್ಲಿ ಯಾವ್ಯಾವ ಅಧಿಕಾರಿಗಳಿರಬೇಕೆಂದು ಪಟ್ಟಿಯನ್ನು ಓದಿದರು. ದಯವಿಟ್ಟು ಅದರಲ್ಲಿ ಎಷ್ಟು ಜನರಿದ್ದಾರೆಂದು ಪರಿಶೀಲನೆ ಮಾಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ವಿಸ್ತೀರ್ಣ 1,91,000 ಚದರ ಕಿ.ಮೀ. ಆಗುತ್ತದೆ. ಅದರಲ್ಲಿ ನಾವು cultivate ಮಾಡತಕ್ಕಂಥದ್ದು ಸುಮಾರು 65 ಪರ್ಸೆಂಟ್ cultivate ಮಾಡುತ್ತೇವೆ. 1,23,000 ಚದರ ಕಿ.ಮೀ. ಇವತ್ತು cultivate ಮಾಡುತ್ತೇವೆ. ಅಂದರೆ ಬೆಳೆಗಳನ್ನು ಬೆಳೆಯುತ್ತೇವೆ, ತೋಟ ಮಾಡುತ್ತೇವೆ ಮತ್ತು ಬೇರೆ ಬೇರೆ ಬೆಳೆಗಳಿಗೆ ನಾವು agricultural sector ಉಪಯೋಗಿಸುತ್ತೇವೆ. ಇಂತಹ ಒಂದು ಸನ್ನಿವೇಶದಲ್ಲಿ ನಾವು ಗ್ರಾಮೀಣ ಪ್ರದೇಶಕ್ಕೆ ಒತ್ತನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕೆಂದು Rural Local Bodies; ಅದು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಇರಬಹುದು, ಇವುಗಳಿಗೆ ರಾಜ್ಯ ಹಣಕಾಸು ಆಯೋಗದಿಂದ ಶಿಫಾರಸ್ಸು ಆಗಿದೆ. ಆ ಶಿಫಾರಸ್ಸನ್ನು ನಮ್ಮ ರಾಜ್ಯ ಸರ್ಕಾರ ನೋಟಿಫಿಕೇಶನ್ ಮಾಡಿದೆ. ಅದೇನೆಂದರೆ, Urban Local Bodies ಗೆ 12 ಪರ್ಸೆಂಟ್ ಕೊಡಬೇಕು. 277 Urban Local Bodies ಇವೆ. ನಮ್ಮಲ್ಲಿ ಒಟ್ಟು 29,500 ಹಳ್ಳಿಗಳಿವೆ. ಸುಮಾರು 6,300 ಗ್ರಾಮ ಪಂಚಾಯಿತಿಗಳಿವೆ. 12 ಪರ್ಸೆಂಟ್ Urban Local Bodies ಬರಬೇಕು ಮತ್ತು 35 ಪರ್ಸೆಂಟ್ Rural Local Bodies ಬರಬೇಕು. ಅಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ. ಸ್ಥಳೀಯ ಸಂಸ್ಥೆಗಳು ಎಂದರೆ ಕಾರ್ಪೋರೇಷನ್, ಸಿಟಿ ಮುನ್ಸಿಪಾಲಿಟಿ, ಟೌನ್ ಮುನ್ಸಿಪಾಲಿಟಿ ಮತ್ತು ಪಟ್ಟಣ ಪಂಚಾಯಿತಿ. ಈ ರೀತಿಯ ವ್ಯವಸ್ಥೆಗೆ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ 12 ಪರ್ಸೆಂಟ್ ನಗರ ಸ್ಥಳೀಯ ಸಂಸ್ಥೆಗಳಿಗೆ ಬರಬೇಕು. Rural Local Bodies ಗೆ 35 ಪರ್ಸೆಂಟ್ ಬರಬೇಕು. ಇನ್ನು 1 ಪರ್ಸೆಂಟ್ ವಿಶೇಷವಾಗಿ ಅವರು ಬೆಂಗಳೂರಿಗೆ ಕೊಟ್ಟಿದ್ದಾರೆ. In addition to this, ಅಂದರೆ 12 ಪರ್ಸೆಂಟ್‌ನಲ್ಲಿ ಬೆಂಗಳೂರಿಗೆ ಕೊಡಬೇಕು. 1 ಪರ್ಸೆಂಟ್ ಬೆಂಗಳೂರಿಗೆ ವಿಶೇಷವಾಗಿ ಕೊಡಬೇಕು. Because it is an economical upliftment zone ಎಂದು. ಇಲ್ಲಿ ಬಹಳಷ್ಟು ಉತ್ಪತ್ತಿಯಾಗುತ್ತದೆ. ಇದನ್ನು ಸರ್ಕಾರ ನೋಟಿಫೈ ಮಾಡಿರುವಂಥದ್ದಾಗಿದೆ. ಇವತ್ತು ಬೆಂಗಳೂರಿಗೆ ಎಷ್ಟು ಪರ್ಸೆಂಟ್ ಕೊಡುತ್ತಿದ್ದಾರೆ? ಗ್ರಾಮೀಣ ಪ್ರದೇಶಕ್ಕೆ ಎಷ್ಟು ಪರ್ಸೆಂಟ್ ಕೊಡುತ್ತಿದ್ದಾರೆ? ಸ್ಥಳೀಯ ಸಂಸ್ಥೆಗಳಿಗೆ ಅವರ ಷೇರುಗಳನ್ನು ಇದರ ಪ್ರಕಾರ ಕಳುಹಿಸಬೇಕು. ಆ ರೀತಿಯಲ್ಲಿ ಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸನ್ನು ಒದಗಿಸುತ್ತಿಲ್ಲ. ನಿಮಗಿರುವಂಥದ್ದು receipts ನ ಶೇಕಡಾ 48 ರಷ್ಟು. Revenue ಉತ್ಪತ್ತಿ ಇದೆ. ಆ revenue receipts ಉತ್ಪತ್ತಿಯಲ್ಲಿ ಸರ್ಕಾರ 48 ಪರ್ಸೆಂಟ್ ಈ ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕು. ಆದರೆ ಸರ್ಕಾರ 48 ಪರ್ಸೆಂಟ್ ಕೊಡುತ್ತಿಲ್ಲ. ಕೇವಲ 30-35 ಪರ್ಸೆಂಟ್ ಕೊಡುತ್ತಿದ್ದಾರೆ. ಬೆಂಗಳೂರಿಗೆ 1 ಪರ್ಸೆಂಟ್ ವಿಶೇಷವಾಗಿ ಕೊಡಬೇಕು. ಅದನ್ನು ಕೊಡುತ್ತಿಲ್ಲ. ಅಲ್ಲಿ ಕೊಡುತ್ತೇವೆ, ಇಲ್ಲಿ ಕೊಡುತ್ತೇವೆಂದು ಬೇರೆ ಬೇರೆ ಲೆಕ್ಕದಲ್ಲಿ ತೋರಿಸುತ್ತಿದ್ದಾರೆ. ಆದರೆ ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕೆಂದು ಇದೆ. ಏಕೆಂದರೆ, ಸರ್ಕಾರದವರು ಈ ವ್ಯವಸ್ಥೆಯನ್ನು ಕಲ್ಪಿಸಿದಾಗ ವ್ಯವಸ್ಥೆಯಲ್ಲಿ ಆಯಾಯ ಸ್ಥಳೀಯ ಸಂಸ್ಥೆಗಳು execution ಮಾಡತಕ್ಕಂಥ ಅಧಿಕಾರ ಅಥವಾ execute ಮಾಡತಕ್ಕಂಥ ಏಜೆನ್ಸಿ. ಸರ್ಕಾರ ಏನಿದ್ದರು policies ಮಾಡಬೇಕು ಮತ್ತು ಅವರಿಗೆ

ಎಲ್ಲಾ ರೀತಿಯ ಕಾನೂನು ಸಪೋರ್ಟ್ ಕೊಡಬೇಕು. ಅವರಿಗೆ ಏನೆಲ್ಲಾ ಹಂಚುವುದಿದೆ ಅದನ್ನು ಹಂಚಬೇಕು. ಆದರೆ ಸರ್ಕಾರದವರು ಇವತ್ತಿನವರೆಗೂ ಆ ರೀತಿಯಲ್ಲಿ ಶಿಫಾರಸ್ಸನ್ನು ನೂರು ಪರ್ಸೆಂಟ್ ತರದಿರುವಂಥದ್ದು ಏಕೆ? ಅವರನ್ನು ಏಕೆ ಕಡೆಗಣಿಸುತ್ತಿದ್ದಾರೆ? ಅದರ ಬಗ್ಗೆ ಉತ್ತರ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ತಮಗೆ ಚೆನ್ನಾಗಿ ಗೊತ್ತಿದೆ. National Law School of India University ಎಂದು ಇದೆ.

**(ಮುಂದು)**

(599) 23-03-2021/5-30- bkp-vk **(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ.ಪಿ.ಆರ್.ರಮೇಶ್(ಮುಂದು):-**

ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯುಕ್ತರು ಒಂದು ಕಚೇರಿ ಆದೇಶ ಹೊರಡಿಸಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದು ಏನೆಂದರೆ, 2020-21ನೇ ಸಾಲಿನಲ್ಲಿ ಕೋವಿಡ್ ಇರುವುದರಿಂದ ಇನ್ನು ಮುಂದೆ ಯಾವುದೇ ಒಂದು contract ತೆಗೆದುಕೊಳ್ಳಬೇಕಾದರೆ ಆ contractor select ಆದರೆ, ಅವರು 200 ರೂಪಾಯಿಗಳ ಒಂದು ಛಾಪಾ ಕಾಗದದಲ್ಲಿ ಬರೆದುಕೊಡಬೇಕು, ಏನೆಂದು ಬರೆದುಕೊಡಬೇಕೆಂದರೆ; ನಾನು ಈ ಕೆಲಸವನ್ನು ನಿರ್ವಹಿಸಿದ ಮೇಲೆ ಎರಡು ವರ್ಷಗಳಿಂದ ಮೂರು ವರ್ಷಗಳವರೆವಿಗೂ ಬಿಲ್ ಅನ್ನು ತೆಗೆದುಕೊಳ್ಳುವುದಿಲ್ಲ. ಯಾವ ಕಾನೂನು ಅಂದರೆ ಯಾವ transparency Act ನಲ್ಲಿ ಇದಕ್ಕೆ ನಿಮಗೆ ಅವಕಾಶ ಕೊಡುತ್ತದೆ? ನಮಗೆ ಗೊತ್ತಿಲ್ಲದ ಹಾಗೆ ಸರ್ಕಾರವೇ ಏನಾದರೂ Special Act ಮಾಡಿದ್ದಾರೆಯೇ? ಅದು ನನಗೆ ಗೊತ್ತಿಲ್ಲ. ಈ ರೀತಿಯ ಒಂದು ಸುತ್ತೋಲೆ ಅಥವಾ ಕಚೇರಿ ಆದೇಶ ಹೊರಡಿಸುವುದಕ್ಕೆ ಆಯುಕ್ತರಿಗೆ ಆ ಅಧಿಕಾರ ಕೊಟ್ಟವರು ಯಾರು? ಕೌನ್ಸಿಲ್ ಅಧಿಕಾರ ಕೊಟ್ಟಿತಾ? ಅಂದರೆ ಕಾರ್ಪೊರೇಷನ್ ಅಧಿಕಾರ ಕೊಟ್ಟಿತಾ? ಅಥವಾ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಕೊಟ್ಟರಾ? ಅಥವಾ ಯಾವುದಾದರೂ State Government ನವರು Order ಮಾಡಿದ್ದಾರಾ? ಇದು ಒಂದು ರೀತಿಯಲ್ಲಿ ಇವರು ಮೊಘಲ್ ದೊರೆಮೊಹಮ್ಮದ್ ಬಿನ್ ತುಘಲಕ್‌ನ ಆಡಳಿತದ ರೀತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾರೆ. 2-3 ವರ್ಷಗಳಿಗೆ ಬಿಲ್ ಅನ್ನು ಕೊಡುವುದು ಯಾರಾದರೂ ನಿಮಗೆ ಅಂದರೆ, ನಿಮಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಕಾನೂನಿನಲ್ಲಿ ಅದಕ್ಕೆ ಅವಕಾಶವಿದೆ? ಅಥವಾ ಇದನ್ನು ಬಹಳ ಗಂಭೀರವಾಗಿ ತಾವು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಯವರು):** ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ. ಕಮೀಷನರ್‌ರವರಿಗೆ ತಕ್ಷಣವೇ instruction ಕೊಟ್ಟು ಅದನ್ನು withdraw ಮಾಡುವುದಕ್ಕೆ ಹೇಳುತ್ತೇನೆ. ತಾವು ಈಗ ಹೇಳುತಿರುವ ವಿಚಾರ ನನ್ನ ಗಮನಕ್ಕೂ ಬಂದಿಲ್ಲ. ಅದನ್ನು ಮಾಡಿರುವುದು ಸರಿಯಲ್ಲ. ತಕ್ಷಣವೇ ಅದನ್ನು withdraw ಮಾಡುವುದಕ್ಕೆ ಹೇಳುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ತಮಗೆ ಬರೆದಿರುವ ಪತ್ರದ ಆಧಾರದ ಮೇಲೆ ತಾವು ನಮಗೆಲ್ಲಾ ಒಂದು ಸುತ್ತೋಲೆ ಕಳುಹಿಸಿಕೊಟ್ಟಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:** ನೀವು ಹೀಗೆ ಮಾತನಾಡುತ್ತಿದ್ದರೆ ಹೇಗೆ? ನಮ್ಮದು ಒಂದು ನಿಯಮ 72ರದ ಅಡಿಯಲ್ಲಿನ ಒಂದು ಗಮನಸೆಳೆಯುವ ಸೂಚನೆ ಇದೆ. 10 ನಿಮಿಷ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಹೇಳಬೇಕು. ಇದರ ಸಲುವಾಗಿ ನಿನ್ನೆ ಆ ವಿಷಯವನ್ನು ಮುಂದೆ ಹಾಕಿಸಿದ್ದೇವೆ. ನಾನು 10 ನಿಮಿಷಗಳಲ್ಲಿ ಅದನ್ನು ಪ್ರಸ್ತಾಪಿಸಿಬಿಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೆ, ನಾನು ಬೇಗ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮಗೆ ಒಂದು ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ ಏನಿದೆ ಎಂದರೆ, '2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದ ಎಲ್ಲಾ ವಿಧಾನಸಭಾ ಸದಸ್ಯರುಗಳು ತಮ್ಮ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮೂರು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು ಅವಕಾಶವನ್ನು ಕಲ್ಪಿಸಲಾಗಿದೆ' ಎಂದು ತಿಳಿಸಿದ್ದು, ಅದರ ಪ್ರಕಾರ ತಾವು ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಎಲ್ಲಾ ಎಂ.ಎಲ್.ಸಿ.ಗಳಿಗೂ ಹಾಗೂ ಎಂ.ಎಲ್.ಎ.ಗಳಿಗೂ ಇದು circulate ಆಗಿದೆ ಎಂದು ನಾನು ಭಾವಿಸುತ್ತೇನೆ. ಅದರ ಮೇಲೆ ಸಭಾಪತಿಗಳಾದ ತಾವು ನಮಗೆಲ್ಲಾ ಒಂದು ಪತ್ರ ಬರೆದಿದ್ದು, ಅದರಲ್ಲಿ ತಮ್ಮ ಕ್ಷೇತ್ರಾಭಿವೃದ್ಧಿ ಕಾರ್ಯವನ್ನು ಮಾಡಿ ಎಂದು ಒಂದು request ಮಾಡಿದ್ದಾರೆ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ.

ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇವತ್ತು ಒಂದು ವಿಚಾರವನ್ನು ತರುತ್ತೇನೆ. ನಮಗೆ ಕೊಡತಕ್ಕಂತಹ ವಾರ್ಷಿಕ ಕ್ಷೇತ್ರಾಭಿವೃದ್ಧಿ ಮೊತ್ತ ರೂ.2 ಕೋಟಿಗಳು. ಆದರೆ, ಇವತ್ತು ತೆಲಂಗಾಣ ರಾಜ್ಯದಲ್ಲಿ ರೂ.2 ಕೋಟಿ ಇದ್ದುದನ್ನು ಈಗ ಅದನ್ನು ರೂ.3 ಕೋಟಿಗಳಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚಿಸಿದ್ದರು. ಮಾಡಿದರು. ಈಗ 3 ದಿವಸಗಳ ಹಿಂದೆ ಪ್ರತಿ ಜನಪ್ರತಿನಿಧಿಗೂ ರೂ.5 ಕೋಟಿಗಳನ್ನು ಕೊಟ್ಟಿದ್ದಾರೆ. ತಾವು ನಮಗೂ ರೂ.5 ಕೋಟಿಗಳನ್ನು ಕೊಟ್ಟರೆ ಖಂಡಿತವಾಗಿಯೂ 3 ಶಾಲೆಗಳನ್ನಲ್ಲ, ಖಂಡಿತವಾಗಿಯೂ 5 ಶಾಲೆಗಳನ್ನು ನಾವು ದತ್ತು ತೆಗೆದುಕೊಳ್ಳುವುದರಲ್ಲಿ ನಾವು ಯಾವುದೇ hesitation ಮಾಡುವುದಿಲ್ಲ. ಆದ್ದರಿಂದ ತಾವು ಕ್ಷೇತ್ರಾಭಿವೃದ್ಧಿಗೆ ಏನು ಹಣ ಕೊಡುತ್ತೀರಿ, ದಯವಿಟ್ಟು ಅದನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವಂತಹ ಚಿಂತನೆಯನ್ನು ನೀವು ಮಾಡಿದರೆ ಖಂಡಿತವಾಗಿಯೂ ನಾವು ತಮ್ಮ ಆಜ್ಞೆ ಅಥವಾ ಆದೇಶವೇನಿದೆ ಅದನ್ನು ಪಾಲಿಸತಕ್ಕಂತಹದ್ದಕ್ಕೆ ನಮ್ಮದು ಎರಡನೇ ಮಾತೇ ಇಲ್ಲ. ದಯವಿಟ್ಟು ಅದನ್ನು ತಾವು ಹೆಚ್ಚು ಮಾಡಿಕೊಡಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಉಪಸ್ಥಿತರಾದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:** ಮಾನ್ಯ ಸಭಾಪತಿಯವರೇ, ನಮ್ಮ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹೆಚ್ಚಿಸುವ ಬಗ್ಗೆ ಮಾನ್ಯ ರಮೇಶ್‌ರವರು ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ನಾನು ಈ ವಿಚಾರವನ್ನು ಕೇಳಬಯಸುತ್ತಿದ್ದೇನೆ. ಈಗಾಗಲೇ ನಮಗೆ ಪ್ರತಿವರ್ಷ ರೂ.2 ಕೋಟಿಗಳಿಗೆ ಸರ್ಕಾರ ಮಾತು ಕೊಟ್ಟಿದೆ.

**ಸಭಾಪತಿಯವರು:** ನಿಮಗೆ ಈಗ ಏನಾಗಬೇಕೆಂಬುದನ್ನು ಹೇಳಿಬಿಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:** ಬಾಕಿ ಕೇಳುವುದು ಇದೆ. ನಮ್ಮ ಶಾಸಕರ ನಿಧಿಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನಮಗೆ ಅವರು ರೂ.5 ಕೋಟಿಗಳನ್ನು ಹೆಚ್ಚುವರಿ ಮಾಡಿ ಎಂದರು. ಈಗ allocation ನಲ್ಲಿರುವ ಸ್ವಲ್ಪ ಕೊರತೆ ಬಗ್ಗೆ ಕೇಳುತ್ತೇವೆ, ಕೊಡಬೇಕಾಗಿರುವುದನ್ನು ಕೇಳುತ್ತೇವೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದು ಇಷ್ಟೆ. 2018-19ನೇ ಸಾಲಿಗೆ ರೂ. 1 ಕೋಟಿ 64 ಲಕ್ಷವನ್ನು ಬಿಡುಗಡೆ ಮಾಡಿದ್ದೀರಿ. 2020ನೇ ಸಾಲಿನಲ್ಲಿ ರೂ.65 ಲಕ್ಷವನ್ನು ಬಿಡುಗಡೆ ಮಾಡಿದ್ದೀರಿ. 2020-21ನೇ ಸಾಲಿನಲ್ಲಿ ರೂ.2 ಕೋಟಿಗಳನ್ನು ಬಿಡುಗಡೆ ಮಾಡಿದ್ದೀರಿ. ಒಟ್ಟಿನಲ್ಲಿ ತಾವು ಪ್ರತಿ ವರ್ಷ ರೂ.2 ಕೋಟಿಗಳ ಕಾರ್ಯಕ್ರಮವನ್ನು ಮಾಡಿಸಿಬಿಟ್ಟಿದ್ದೀರಿ. ಮೂರು ವರ್ಷಕ್ಕೆ ಈಗ ನಮಗೆ ಕೊಡಬೇಕಾಗಿರುವ ಹಳೆಯ ಬಾಕಿ 1 ಕೋಟಿ 71 ಲಕ್ಷಗಳು. Programme is approved, ಕಾಮಗಾರಿ ಆಗಿಬಿಟ್ಟಿದೆ, ಪ್ರತಿ ದಿವಸ ಅಲೆಯುತ್ತಾರೆ, ಅವರಿಗೆ ಹಣ ಹೋಗಿಲ್ಲ. ಮೂರು ವರ್ಷಗಳಲ್ಲಿ ತಲಾ ರೂ.2 ಕೋಟಿಗಳಂತೆ ಒಟ್ಟು ರೂ. 6 ಕೋಟಿಗಳಲ್ಲಿ ತಾವು ಇನ್ನು 1 ಕೋಟಿ 71 ಲಕ್ಷ ರೂಪಾಯಿಗಳ ಹಳೆಯ ಬಾಕಿಯನ್ನು ಕೊಡಬೇಕಾಗಿದೆ. ದಯಮಾಡಿ ಈ 31ರೊಳಗೆ ಆ ಮೊತ್ತವನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈಗ ನಾವು ಶಾಲೆ ಹಾಗೂ ಕಾಲೇಜುಗಳನ್ನು ದತ್ತು ತೆಗೆದುಕೊಂಡುಬಿಟ್ಟಿದ್ದೇವೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಮಗಾರಿಗಳು ಮುಗಿದು ಹೋಗಿವೆ. ತಾವು ದಯಮಾಡಿ, ಹೆಚ್ಚುವರಿ ಮಾಡಿರುವ ಕೆಲವು ಬೇಡಿಕೆಗಳು ಚೆನ್ನಾಗಿವೆ. ಆದರೆ, ಈ ಹಳೆಯ ಬಾಕಿ ರೂ.1 ಕೋಟಿ 71 ಲಕ್ಷಗಳನ್ನು ಬಿಡುಗಡೆ ಮಾಡಿಕೊಡಬೇಕೆಂದು ಎಲ್ಲಾ ಶಾಸಕರ ಪರವಾಗಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಕೇಳುತ್ತೇನೆ.

**ಶ್ರೀ ಎಸ್. ರವಿ:** ಮಾನ್ಯ ಸಭಾಪತಿಯವರೇ, 2021-22ನೇ ಸಾಲಿಗೆ ಶಾಸಕರುಗಳಿಗೆ ಕೊಡುತ್ತಾರೋ ಕೊಡುವುದಿಲ್ಲವೋ ಎಂಬುದನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ಹೇಳಿಬಿಡಲಿ.

**ಶ್ರೀಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೇ, ಇನ್ನೂ ಎರಡು ವಿಷಯಗಳಿವೆ.

**ಸಭಾಪತಿಯವರು:** ನಿಮಗೆ ನಾಳೆ ಅವಕಾಶ ಕೊಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:** ಮಾನ್ಯ ಸಭಾಪತಿಯವರೇ, ಒಂದು important ವಿಷಯ ಇದೆ.ಆದರೆ, ಆ ವಿಚಾರದ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಜಾಸ್ತಿಯಿಲ್ಲ ಈಗ ನಮ್ಮ ಬೆಂಗಳೂರಿನಲ್ಲಿರುವ National Law School of India University (NLSIU), ಇದು ಇಡೀ ನಮ್ಮ ದೇಶದಲ್ಲಿಯೇ ಬಹಳ ಪ್ರಮುಖವಾದ ಒಂದು ಕಾನೂನು ಮಹಾ ವಿದ್ಯಾಲಯ ಆಗಿದೆ. ನಮ್ಮ ಸರ್ಕಾರದಿಂದ ಪ್ರತಿ ವರ್ಷ ರೂ.12 ಕೋಟಿ ರೂ.ಗಳನ್ನು ಇದರ ನಿರ್ವಹಣೆಗೆ ಕೊಡುತ್ತೇವೆ. ಅದರಲ್ಲಿ 25% ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುತ್ತಿದ್ದರು. ಈಗ ಸುಮಾರು 15-20 ದಿವಸಗಳ ಹಿಂದೆ ನ್ಯಾಯಾಲಯದಲ್ಲಿ ಒಂದು ಆದೇಶವನ್ನು ಮಾಡಿಬಿಟ್ಟರು. ಅದರ ಪ್ರಕಾರ 25 ಸೀಟುಗಳನ್ನು ನಮ್ಮ ರಾಜ್ಯದವರಿಗೆ ಅವರು ಕೊಡುವ ಹಾಗಿಲ್ಲ ಎಂಬಂತಾಯಿತು. ಆ 25 ಸೀಟುಗಳನ್ನು ಅವರು ನಮಗೆ ಕೊಡುವುದಿಲ್ಲವೆಂದರೆ . .

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಿಂದ ನಿರ್ಗಮಿಸಿದರು)**

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ಸಭಾತ್ಯಾಗ ಮಾಡಿದಂತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ತುರ್ತು ಕೆಲಸದ ಮೇಲೆ ಹೋಗಿದ್ದಾರೆ, ಮಾನ್ಯ ಸದಸ್ಯರು ಈ ರೀತಿ ಹೇಳುವುದು ಉಚಿತವಲ್ಲ.

**ಶ್ರೀ ಪಿ.ಆರ್. ರಮೇಶ್:** ಈ ಒಂದು ಸ್ಕೂಲ್‌ಗೆ ಸರ್ಕಾರ ಕೊಡುವ ರೂ.12 ಕೋಟಿ ರೂ.ಗಳನ್ನು ನಿಲಿಸಬೇಕಾಗುತ್ತದೆ. ಇವತ್ತು ಏನು ನೀವು 25% ಸೀಟುಗಳನ್ನು ನಮಗೆ ಕೊಡಬೇಕಾಗಿತ್ತು,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಕೋರ್ಟ್ ಆದೇಶ ಮಾಡಿ ನಿಲ್ಲಿಸಿದ್ದಾರೆ ಎಂದ ಮೇಲೆ ನಾವು ಏಕೆ ಅವರಿಗೆ ರೂ.12 ಕೋಟಿಗಳನ್ನು ಕೊಡಬೇಕು? ಜಾಗ ಕೊಟ್ಟಿದ್ದೇವೆ, ಬಿಲ್ಡಿಂಗ್ ಕಟ್ಟಿ ಕೊಟ್ಟಿದ್ದೇವೆ. ಎಲ್ಲಾ public money. ಅಂದರೆ, ಸಾರ್ವಜನಿಕರ ಹಣ ಉಪಯೋಗವಾಗಿದೆ. ರಾಜ್ಯಕ್ಕೆ 25% ಸ್ಥಾನಗಳನ್ನು ಕೊಡುವುದಕ್ಕೆ ಇವರಿಗೆ ಹೊರೆಯಾಗಿದೆ ಎಂದರೆ, ಅರ್ಥವೇನು?

**ಸಭಾಪತಿಯವರು**: ನಮ್ಮಲ್ಲಿ IIT (Indian Institutes of Technology) ಯೋ ಹಾಗೆಯೇ ಇದೆ. ಇದು ಹಾಗೆಯೇ ಇದೆ.

**ಶ್ರೀ ಪಿ.ಆರ್. ರಮೇಶ್**:: ಆದರೂ ಸಹಿತ ನಮ್ಮ ಮಕ್ಕಳಿಗೆ 25% ಸ್ಥಾನಗಳನ್ನು ಕೊಡಬೇಕೋ ಬೇಡವೋ? ಆದರೆ ಕೋರ್ಟ್‌ನ ಯಾವುದೋ ಪೀಠವೊಂದು ಅದನ್ನೂ ತೆಗೆದು ಈ ರೀತಿ ಆರ್ಡರ್ ಮಾಡಿದೆ. ದಯವಿಟ್ಟು ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ನಾನು ಈ ಬಗ್ಗೆ ನಾಳೆ ಮಾತನಾಡುತ್ತೇನೆ.

**ಸಭಾಪತಿಯವರು:** ಆಯಿತು, ನಾಳೆ ನಾನು ತಮಗೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ. ಈಗ ಮಾನ್ಯ ಎಸ್.ಆರ್.ಪಾಟೀಲ್, ವಿರೋಧ ಪಕ್ಷದ ನಾಯಕರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

**13. ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟ ಗಮನ ಸೆಳೆಯುವ ಸೂಚನೆಗೆ ಮುಖ್ಯಮಂತ್ರಿಗಳಿಂದಲೇ ಉತ್ತರ ಕೊಡಿಸಬೇಕೆಂದು ಒತ್ತಾಯ**

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಸರ್ಕಾರದ ಗಮನ ಸೆಳೆಯುವುದಿಲ್ಲ.

**ಸಭಾಪತಿಯವರು:** ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಎಂ.ನಾರಾಯಣಸ್ವಾಮಿಯವರು ಪ್ರಸ್ತಾಪಿಸಬಯಸಿರುವ ಗಮನಸೆಳೆಯುವ ಸೂಚನೆ ಬಗ್ಗೆ ಯಾರಾದರೊಬ್ಬರು ಸರ್ಕಾರದ ಗಮನವನ್ನು ಸೆಳೆಯಿರಿ. ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದಲೇ ಉತ್ತರ ಬೇಕೆಂಬ ಕಾರಣಕ್ಕಾಗಿ ನಿನ್ನೆ postpone ಮಾಡಲು ನಾವು ವಿನಂತಿಸಿದ್ದೆವು. ಮಾನ್ಯ ಸಭಾನಾಯಕರೆ, ಅವರು ಎಲ್ಲಿಗೆ ಹೋದರು?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಪ್ರಸ್ತಾಪ ಮಾಡಲಿ. ಅಟರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೂ ಬರಬಹುದು.

**ಶ್ರೀ ಎಸ್.ಆರ್.ಪಾಟೀಲ್:** ಅವರಿಗೋಸ್ಕರ ನಾನು ನಿನ್ನೆಯಿಂದ ಕಾಯುತ್ತಿದ್ದೇನೆ. ನಾನು. ಪ್ರತಿಪಕ್ಷದ ನಾಯಕ ಇದು ಗಮನ ಸೆಳೆಯುವ ಸೂಚನೆ. ಅವರು ಏತಕ್ಕೆ ಹೋಗಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಕೆಲಸಗಳು ಇರುತ್ತವೆ.'.

**ಶ್ರೀ ಎಸ್.ಆರ್.ಪಾಟೀಲ್:** ಅದನ್ನು ಏಕೆ ಇಲ್ಲಿ ಇಟ್ಟಿದ್ದೀರಿ? ಅದನ್ನು ತೆಗೆದುಬಿಡಿ. ನಾನು ಸದನ ಚಾಲು ಆದಾಗಿನಿಂದ ಕೇಳಿಲ್ಲ. ಬಾಯಿ ಕಟ್ಟಿಕೊಂಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ನೀವು ಒಂದು ರೀತಿ 'ಚಿರಂಜೀವಿ' ಇದ್ದ ಹಾಗೆ.

**ಶ್ರೀ ಎಸ್.ಆರ್.ಪಾಟೀಲ್:** ಹಾಗಾದರೆ ನಾವು ಮನುಷ್ಯರಲ್ಲ ಅಲ್ಲದ ಹಾಗೆ ಆಯಿತಲ್ಲಾ?

**ಸಭಾಪತಿಯವರು:** ಸಭಾನಾಯಕರೆ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಕಾಲ್ ಮಾಡಿ ಕರೆಯಿರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ನೀವು ಒಂದು ರೀತಿ 'ಚಿರಂಜೀವಿ' ಇದ್ದ ಹಾಗೆ ನಿಮಗೆ ಏನೂ ಆಗುವುದಿಲ್ಲ. ಯಾವುದೇ ಆತಂಕ ಬೇಡ.

**(ಗೊಂದಲ)**

**Sri S.R. PATIL:-** "Man is Mortal" ಯಾರೂ ಚಿರಂಜೀವಿಯಲ್ಲ.

**ಸಭಾಪತಿಯವರು:** ಸಭಾನಾಯಕರೆ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಕಾಲ್ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:** ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಮಾತ್ರ ಅದಕ್ಕೆ ಸರಿಯಾಗಿ ನ್ಯಾಯ ಸಿಗುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ. ಇವರು ನ್ಯಾಯ ಕೊಡುತ್ತಾರೆಯೇ? Financial involvement ಇರಬೇಕಾಗುತ್ತದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(600) 23.03.2021 05.40 ಎಸ್‌ವಿ-ವಿಕೆ** **(ಮಾನ್ಯ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿದ್ದಾಗ ಮಾನ್ಯ ಎಸ್.ಆರ್.ಪಾಟೀಲರಿಂದ ನನಗೆ ನ್ಯಾಯ ಸಿಕ್ಕಿದೆ. ಈಗ ಅವರು ನನ್ನ ಕಡೆಯಿಂದ ನ್ಯಾಯವನ್ನು ನಿರೀಕ್ಷಿಸಬಹುದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾನಾಯಕರೇ, you don't take it lightly. This is a very serious matter. Why I am insisting for the presence of the Hon'ble Chief Minister. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇರಬೇಕೆಂದು ನಾನು ನಿನ್ನೆಯಿಂದಲೂ ಸತತವಾಗಿ ಹೇಳುತ್ತಿದ್ದೇನೆ. ಅವರು ಇಲ್ಲಿ ಕುಳಿತಿದ್ದಾಗ ನಾನು ಮಾನ್ಯ ಪಿ.ಆರ್.ರಮೇಶ್ ಅವರಿಗೆ ಮನವಿಯನ್ನು ಮಾಡಿಕೊಂಡೆನು.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ಈ ವಿಷಯವನ್ನು ಈಗ ಮುಂದಕ್ಕೆ ಹಾಕುವುದೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಈಗ ಪುನಃ ಬರುವರೇನು?

**ಸಭಾಪತಿಯವರು:-** ನನಗೆ ತಿಳಿದಿಲ್ಲ. ಮಾನ್ಯ ಸಭಾನಾಯಕರೇ, ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ತುರ್ತು ಕೆಲಸವಿದೆಯೆಂದು ಹೋಗಿದ್ದಾರೆ. ಅವರು ಬರುವುದಿಲ್ಲ. ನಾನೇ ಉತ್ತರ ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಂದ ನನಗೆ ಉತ್ತರ ಸಿಗುವುದಿಲ್ಲ. ಕೆಳಮನೆಯೂ ಮುಂದೂಡಲ್ಪಟ್ಟಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರನ್ನು ಕರೆಸುವುದಕ್ಕೆ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ತುರ್ತಾಗಿ ಕೆಲಸ ಇದೆಯೆಂದು ಹೋಗಿದ್ದಾರೆ. ಈಗ ಪುನಃ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳಿದ್ದೇನೆ. ಅಲ್ಲದೆ ಅವರಿಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕರೆಸುವಂತೆ ಎರಡು ಬಾರಿ ಚೀಟಿಯನ್ನೂ ಕಳುಹಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆಸುತ್ತೇವೆಂದು ಹೇಳಿದರು. ಈಗ ಅವರು ತಾವೇ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈಗೇನು ಮಾಡುವುದು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಏನು ಹೇಳಬೇಕೆಂದು ನನಗೆ ದಿಕ್ಕು ತೋಚದಂತಾಗಿದೆ. ತಮಗೂ ನಾನು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ತಾವೂ ಹೇಳಬೇಕಲ್ಲವೆ?

**ಸಭಾಪತಿಯವರು:-** ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಅವರಿಗೆ ಸಂಬಂಧಪಟ್ಟ ವಿಷಯವಾಗಿದೆ. ಆಗಲೂ ಅವರು ಇರುವುದಿಲ್ಲ ಎಂದರೆ ಇದು ಹೇಗೆ? ಈ ರೀತಿ ವ್ಯವಸ್ಥೆಯನ್ನು ನಾನು ನೋಡಿಲ್ಲ. ಮಾನ್ಯ ಸಭಾನಾಯಕರೇ, ಮಾನ್ಯ ಮುಖ್ಯಮಂತ್ರಿಯವರನ್ನು ಕರೆಯಿಸಿ. ನಾನು ಕಾಯುತ್ತೇನೆ. ಅದುವರೆವಿಗೆ ಬೇರೆಯ ವಿಷಯವನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಂದು ನಾನು ಉತ್ತರ ಕೊಡುತ್ತೇನೆ. ಈಗ ಅವರು ವಾಪಸ್ ಬರುವುದಿಲ್ಲ. ತುರ್ತು ಕೆಲಸದ ನಿಮಿತ್ತ ಹೋಗಿದ್ದಾರೆ.

**ಸಭಾಪತಿಯವರು:-** ಈಗ ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಲಾಗುವ ವಿಷಯಗಳನ್ನು ತೆಗೆದುಕೊಳ್ಳಲಾಗುವುದು. ಶ್ರೀಮತಿ ವೀಣಾ ಅಚ್ಚಯ್ಯ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಸೈನಿಕರು ಹಾಗೂ ಅವಲಂಬಿತರಿಗೆ ಸರ್ಕಾರದಿಂದ ನಿವೇಶನ ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ವೀಣಾ ಅಚ್ಚಯ್ಯ ಅವರೇ, ಒಂದು ನಿಮಿಷ...

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್ ಅವರೇ, ನೀವೇಕೆ ಎದ್ದಿರಿ? ಕುಳಿತುಕೊಳ್ಳಿ. ಅವರು ಮಾತನಾಡಲಿ. ನಾನು ಅವರ ಹೆಸರನ್ನು ಕರೆದಿದ್ದೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರುವ ವಿಷಯದ ಬಗ್ಗೆ ಒಂದು ತೀರ್ಮಾನವನ್ನು ಕೊಡಬೇಕಲ್ಲವೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್ ಅವರೇ, ನಾನು allow ಮಾಡುವುದಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನೀವು ಅಜೆಂಡಾ ನೋಡಿಕೊಂಡು ಶ್ರೀಮತಿ ವೀಣಾ ಅಚ್ಚಯ್ಯ ಎಂದು ಕರೆದಿದ್ದೀರಿ. ಮೊದಲು ಅದರ ಬಗ್ಗೆ ಒಂದು ತೀರ್ಮಾನ ಕೊಡಿ. ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆಯೇ? ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ನೋವಿನಿಂದ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ತಾವು ಗಮನ ಕೊಡಬೇಕಲ್ಲವೆ?

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್ ಅವರೇ, ಅದು ನಿಮಗೇಕೆ ಬೇಕು? ನಾನು ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಮಾತನಾಡಿದ್ದೇನೆ. ಅವರು ಕೇಳುವುದಕ್ಕೆ ಸಮಯವನ್ನು ಕೊಡಿ ಎಂದು ಕೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷಕ್ಕೆ ಏನು ಗೌರವವೇ ಇಲ್ಲ ಎಂದು ನನಗನ್ನಿಸುತ್ತದೆ. ವಿಷಯ ಇದ್ದಾಗಲೂ ಮಾನ್ಯ ಮುಖ್ಯಮಂತ್ರಿಯವರು ಇರುವುದಿಲ್ಲ ಎಂದರೆ ಹೇಗೆ? ಏನಾದರೂ ಉತ್ತರವನ್ನು ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಮುಂದೆ ಇರುವ ಕಾಗದ ಪತ್ರಗಳಿಗೆ ಮತ್ತು ಪ್ರಶ್ನೆಗಳಿಗೆ ಸಾಮಾನ್ಯವಾಗಿ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ನಾವು ನಿನ್ನೆಯಿಂದಲೂ ಪರಿತಪಿಸುತ್ತಿದ್ದೇವೆ. ನಿನ್ನೆಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಬರಲಿ ಎನ್ನುವ ಉದ್ದೇಶಕ್ಕಾಗಿ ತಮ್ಮಿಂದ ಉತ್ತರ ಬೇಡ ಎಂದು ಹೇಳಿದ್ದೇನೆ. ಅದು ಕೃಷಿಗೆ ಸಂಬಂಧಿಸಿದಂತಹ ಇಲಾಖೆ. ಅವರು ಏನೇ ಉತ್ತರವನ್ನು ಕೊಡಲಿ. ಇಲ್ಲಿ ಇರಬೇಕೆಂದು ನಾನು insist ಮಾಡಿದ್ದೇನೆ. ಮಾನ್ಯ ಸಭಾಪತಿಯವರಲ್ಲಿಯೂ ಮನವಿ ಮಾಡಿಕೊಂಡಿದ್ದೇನೆ. ಇದುವರೆಗೆ ಇಲ್ಲಿ ಬಂದು ಕುಳಿತಿದ್ದರು. ಅವರಿಗೆ ನೆನಪು ಮಾಡುವುದು ನಿಮ್ಮ ಕರ್ತವ್ಯವಲ್ಲವೇ? ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಲು ತಾವೇನಾದರೂ ಹಿಂದೆ ಮುಂದೆ ನೋಡುವಿರಾ? ಅವರ ಬಗ್ಗೆ hesitation ಇದೆಯೇ? ಏನಾದರೂ ಅಂಜಿದ್ದೀರಾ? ತಮ್ಮ ವಿಷಯವಿದೆ, ದಯಮಾಡಿ ಕುಳಿತುಕೊಳ್ಳಿ ಎಂದು ತಾವು ಅವರಿಗೆ ಹೇಳಬೇಕು. ನಾನು ಆ ಕುರ್ಚಿಯ ಮೇಲೆ ಕುಳಿತಿದ್ದಾಗ ಅದೇ ರೀತಿ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆವಿಗೂ ಮಾನ್ಯ ಮುಖ್ಯಮಂತ್ರಿಯವರನ್ನು ಯಾರೂ ನಿರ್ಬಂಧಿಸಿರುವುದಿಲ್ಲ. ಅವರು ತುರ್ತಾದ ಕೆಲಸದ ಮೇಲೆ ಹೋಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ನಿರ್ಬಂಧಿಸುವುದಲ್ಲ. ವಿಷಯ ಇದೆ ಎಂದು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತುರ್ತು ಕೆಲಸವಿದೆ ಎಂದು ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ನಿರ್ಬಂಧಿಸುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೇರೆ ಕೆಲಸವಿದ್ದು ಹೋಗಿದ್ದರೆ ಪ್ರಶ್ನೆಯಿಲ್ಲ. ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರೇ ಉತ್ತರವನ್ನು ಕೊಡಬೇಕು. ಇದು ಅವರ ಇಲಾಖೆಗೆ ಸಂಬಂಧಿಸಿದಂತಹ ವಿಚಾರ. ನಿನ್ನೆಯಿಂದ ಇಲ್ಲಿಯವರೆಗೂ ನಾನು ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅವರಿಗೆ ತಿಳಿಸಬೇಕಾದುದು ಮಾನ್ಯ ಸಭಾನಾಯಕರ ಕರ್ತವ್ಯವಲ್ಲವೇ? ನಿಮ್ಮ ಇಲಾಖೆಗೆ ಸಂಬಂಧಿಸಿದ ಗಮನ ಸೆಳೆಯುವ ಸೂಚನೆಯಿದ್ದು, ನಿಮ್ಮ ಸಲುವಾಗಿಯೇ ಒಂದು ದಿನ ಮುಂದೆ ಹೋಗಿದ್ದು, ನೀವು ಉತ್ತರ ಕೊಡಬೇಕೆಂದು ಅವರಿಗೆ ಹೇಳಬೇಕು. ನಾನು ಸಭಾನಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ನಿರೀಕ್ಷಿಸುವುದು ಸರಿಯಿದೆ. ಆದರೆ ಕೆಲವು ತುರ್ತು ಕಾರಣಗಳಿಂದಾಗಿ ಅವರ ಅನುಪಸ್ಥಿತಿಯಲ್ಲಿ ಸಭಾನಾಯಕರು ಉತ್ತರವನ್ನು ಕೊಡುವ ರೂಢಿಯಿದೆ. ಇದರ ಬಗ್ಗೆ ವಿನಾಕಾರಣ ಚರ್ಚೆ ಮಾಡದೆ, ನನಗೆ ಉತ್ತರವನ್ನು ನೀಡಲು ಅವಕಾಶ ನೀಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ರೂಢಿ ಅಲ್ಲ. When I am particularly insisting for the presence of the Hon'ble Chief Minister... ಏಕೆಂದರೆ ಅದು ಅಷ್ಟು ಮಹತ್ವದ ವಿಚಾರವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆಲವು ನಿರ್ದಿಷ್ಟವಾದ ವಿಚಾರಗಳಿರುತ್ತವೆ. ಇಲ್ಲವೆಂದು ಹೇಳುವುದಿಲ್ಲ. ಈ ಹಿಂದೆಯೂ ಕೂಡ ಹೀಗಾಗಿದೆ. ನಾನು ಉತ್ತರ ಕೊಡಲಿಕ್ಕೆ ಸಿದ್ಧನಿದ್ದೇನೆ. ದಯವಿಟ್ಟು ಅವಕಾಶ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಏನು ಉತ್ತರವನ್ನು ಕೊಡುತ್ತೀರಿ? ನೀವು financial implication decision ತೆಗೆದುಕೊಳ್ಳುವಿರೇನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಸಭಾನಾಯಕರಾಗಿದ್ದಾಗ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಟ್ಟಿದ್ದೀರಿ. ಇಂತಹ ಅನೇಕ ವಿಷಯಗಳಿಗೆ ಉತ್ತರವನ್ನು ಕೊಟ್ಟಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ನಾನು ನಿಮಗೆ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ನ್ಯಾಯ ಒದಗಿಸುವುದಕ್ಕಾಗುವುದಿಲ್ಲ. ನೀವು ಅಸಹಾಯಕರೆಂದು ನೇರವಾಗಿ ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಸಹಾಯಕರೋ ಅಥವಾ ಅಸಹಾಯಕರೋ ಎನ್ನುವುದನ್ನು ಪ್ರಶ್ನೆಗೆ ಉತ್ತರ ಸಿಕ್ಕಿದ ನಂತರ ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಮಾನ್ಯ ಮುಖ್ಯಮಂತ್ರಿಯವರಿದ್ದರೆ ಅದರ ಮೇಲೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಚರ್ಚೆಯಾದ ನಂತರ ಅವರು ತಮ್ಮದೇ ಆದಂತಹ ನಿರ್ಣಯವನ್ನು ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಅವರ ಮುಖ್ಯಮಂತ್ರಿಗಳಿದ್ದಾಗ ಎಷ್ಟು ಬಾರಿ ಬಂದಿದ್ದಾರೆಂಬುದನ್ನು ಹೇಳಲಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕೇವಲ ವಿರೋಧ ಪಕ್ಷದ ನಾಯಕರಷ್ಟೇ ಅಲ್ಲ. ಬಹಳ ಹಿರಿಯರಿದ್ದೀರಿ ಎಂದು ಗೌರವ ಕೊಟ್ಟು ಮಾತನಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ನಾನು ನಿಮಗೆ ಗೌರವ ಕೊಟ್ಟಿಲ್ಲವೇ? ಸಭಾನಾಯಕರಿಗೆ ಏನು ಗೌರವವನ್ನು ಕೊಡಬೇಕೋ ಅದನ್ನು ನಾನು ಕೊಡುತ್ತೇನೆ. ಆ ವಿಚಾರದಲ್ಲಿ ನಾನು ಎಂದೂ ಹಿಂದು-ಮುಂದು ನೋಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಮುಖ್ಯಮಂತ್ರಿಯವರು ಬಂದಾಗ ಅವರಿಗೆ ಉತ್ತರ ಕೊಡುವಂತೆ ತಿಳಿಸಲು ಹೇಳಿದ್ದೇನೆ. ಅವರು ನಾನೇ ಉತ್ತರ ಕೊಡುತ್ತೇನೆಂದು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಗೆ ನಮ್ಮ ಭಾಷೆ ಅರ್ಥವಾಗುವುದಿಲ್ಲವೇ?

**ಸಭಾಪತಿಯವರು:-** ಆಯಿತು. ಈಗ ನಮಗೆ ಅನಿವಾರ್ಯವಾಗಿದೆ. ಸಭೆಯನ್ನು ನಡೆಸುವುದು ಹೇಗೆ? ಯಾರೇ ಮಂತ್ರಿ ಇರದಿದ್ದರೂ ಸಭಾನಾಯಕರು ಉತ್ತರ ಕೊಡುವ ಪದ್ಧತಿಯಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಏಕೆ ಹೇಳುತ್ತೇನೆಂದರೆ...

**ಸಭಾಪತಿಯವರು:-** ತಮ್ಮ ಮಾತನ್ನು ನಾನು ಒಪ್ಪುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅತ್ಯಂತ ಹಿರಿಯರು, ಅನುಭವಿಗಳಿದ್ದೀರಿ. ಇದು ಬಹಳ ಮಹತ್ವದ ವಿಷಯವಾಗಿದ್ದು, ಜ್ವಲಂತ ಸಮಸ್ಯೆಯಿದೆ. ಮಾನ್ಯ ಮುಖ್ಯಮಂತ್ರಿಯವರಿದ್ದರೆ ಇದಕ್ಕೇನಾದರೂ ಪರಿಹಾರ ಸಿಗುವ chance ಇದೆ. ಉತ್ತರ ಕರ್ನಾಟಕವೇ ಅಳಿದು ಹೋಗುವಂತಹ ಸ್ಥಿತಿ ಬಂದಿದೆ. ಇಷ್ಟು ಮಹತ್ವದ ವಿಚಾರವಿರುವುದರಿಂದ ನಿನ್ನೆಯಿಂದಲೂ ನಾನು ಮಾನ್ಯ ಮುಖ್ಯಮಂತ್ರಿಗಳು ಬರಲಿ ಎಂದು ಹೇಳುತ್ತಿದ್ದೇನೆ. ನಿನ್ನೆಯಿಂದ ಇಂದಿಗೆ postpone ಆಯಿತು. ಇಂದು ಬಂದಿದ್ದಂತಹ ಮುಖ್ಯಮಂತ್ರಿಗಳಿಗೆ ಸ್ವಲ್ಪ ಕಾಣುವಂತೆ ತಿಳಿಸಬೇಕಲ್ಲವೆ? ಮಾನ್ಯ ರಮೇಶ್ ಅವರಿಗೆ ಮಧ್ಯದಲ್ಲಿ ನಿಲ್ಲಿಸುವಂತೆ ನಾನು ಮನವಿ ಮಾಡಿಕೊಂಡೆನು. ನಾನು ಮುಖ್ಯಮಂತ್ರಿಯವರ ಗಮನ ಸೆಳೆಯಬೇಕು ಎಂದು ಹೇಳಿದೆನು. ನನ್ನದೇನು ತಪ್ಪಿದೆ? ಪ್ರತಿಪಕ್ಷದ ನಾಯಕನಾಗಿ ನಾನು ಹೇಗೆ ಕೆಲಸ ಮಾಡಬೇಕೆಂಬುದಾದರೂ ಹೇಳಿ. ಈ ಸದನಕ್ಕೆ ಬರುವುದಕ್ಕೆ ಮನಸ್ಸಾಗುವುದಿಲ್ಲ ಎನ್ನುವ ನಿರ್ಣಯಕ್ಕೆ ನಾನು ಬಂದಿದ್ದೇನೆ.

**ಸಭಾಪತಿಯವರು:-** ಮಾನ್ಯ ಉಪ ಮುಖ್ಯಮಂತ್ರಿಯವರು ಎದ್ದಿದ್ದಾರೆ. ಏನು ಹೇಳುತ್ತಾರೆ ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳುವುದಕ್ಕೂ ಗೌರವವಿಲ್ಲ. ತಾವು ಪೀಠದಲ್ಲಿ ಕುಳಿತು ಹೇಳುವುದಕ್ಕೂ ಗೌರವವಿಲ್ಲ ಎಂದರೆ ಹೇಗೆ?

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನಿಮಗೆ ನಂತರ ಅವಕಾಶ ಕೊಡುತ್ತೇನೆ. ಈಗ ಉಪ ಮುಖ್ಯಮಂತ್ರಿಯವರು ಏನು ಹೇಳುತ್ತಾರೆಂಬುದನ್ನು ಕೇಳಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಸರ್ಕಾರದ ಪರವಾಗಿ ಮಂತ್ರಿಮಂಡಲದ ಯಾವುದೇ ಸದಸ್ಯರು ಉತ್ತರ ಕೊಟ್ಟರೂ ಅದು ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಂತೆ. ಆ ಉತ್ತರ ಅವರಿಗೆ ಸರಿಯೆನ್ನಿಸದಿದ್ದರೆ ಅಥವಾ ಅವರದ್ದೇನಾದರೂ ಆಕ್ಷೇಪಣೆಯಿದ್ದರೆ ಖಂಡಿತವಾಗಿಯೂ ಅವರು ಸ್ಪಷ್ಟೀಕರಣ ಕೇಳಬಹುದು. ಅಂತಹ ಜರೂರು ವಿಷಯವೇ ಆಗಿದ್ದರೆ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಸದನಕ್ಕೆ ಬರುತ್ತಾರೆ. ಬಂದಾಗ ಅದಕ್ಕೆ ಉತ್ತರ ಹೇಳಿಸಬಹುದು. ಈ ಮನೆಯಲ್ಲಿ ಇಂತಹ ವಿಷಯಗಳ ಬಗ್ಗೆ ಅನೇಕ ಬಾರಿ ಚರ್ಚೆಗಳಾಗಿವೆ. ನಾನು 25 ವರ್ಷಗಳಿಂದಲೂ ನೋಡುತ್ತಿದ್ದೇನೆ. ಅವರೇ ಉತ್ತರ ಕೊಡಬೇಕು, ಇನ್ಯಾರೋ ಉತ್ತರ ಕೊಡಬೇಕೆನ್ನುವುದು ಸಂಪ್ರದಾಯವಲ್ಲ. ಸಚಿವ ಸಂಪುಟದ ಯಾವುದೇ ಸದಸ್ಯರು ಯಾವುದೇ ಇಲಾಖೆಯ ಮಂತ್ರಿಯ ಪರವಾಗಿ ಉತ್ತರ ಕೊಟ್ಟಿರುವ ಸಾಕಷ್ಟು ಉದಾಹರಣೆಗಳಿವೆ. ಇದನ್ನು ಬಹಳ ದೊಡ್ಡ ವಿಷಯವಾಗಿ ಚರ್ಚೆ ಮಾಡುವುದು ಬೇಡವೆಂದು ನಾನು ಪ್ರತಿಪಕ್ಷದ ನಾಯಕರಲ್ಲಿ ಮತ್ತು ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ಸಭಾನಾಯಕರು ಉತ್ತರ ಹೇಳಲಿ. ನಿಮಗೆ ಆ ಉತ್ತರದಿಂದ satisfaction ಆಗದಿದ್ದರೆ ಆಮೇಲೆ ಆಲೋಚನೆ ಮಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಮಾತನಾಡಬೇಕೆಂದು ಹೇಳಿದ್ದರು. ನಾನು ಕೂಡ ಇದರಲ್ಲಿ signatory ಆಗಿದ್ದು, ಮಾತನಾಡುವಂತೆ ಹೇಳಿದರು. ವಿಷಯ ಬಹಳಷ್ಟು ಗಂಭೀರವಾಗಿದೆ. ಸಭಾನಾಯಕರು ಉತ್ತರ ಕೊಡುವುದು ಬೇಡ. ಮುಖ್ಯಮಂತ್ರಿಗಳು ಇವತ್ತಾಗಲೀ ಅಥವಾ ನಾಳೆಯಾಗಲೀ ಬಂದು ಉತ್ತರವನ್ನು ಕೊಡಲಿ ಎಂದು ಹೇಳಿದ್ದಕ್ಕೆ ತಾವು ಒಪ್ಪಿಕೊಂಡಿರಿ ಹಾಗೂ ತಾವು ಆದೇಶವನ್ನು ಮಾಡಿದಿರಿ.

**ಸಭಾಪತಿಯವರು:-** ಹೌದು.

**ಶ್ರೀ ಎಂ.ನಾರಾಯಣಸ್ವಾಮಿ:-** ಇಂದು ಮಾನ್ಯ ಮುಖ್ಯಮಂತ್ರಿಯವರು ಬಂದು ಅಲ್ಲಿ ಕುಳಿತಿದ್ದರು. ಮಾನ್ಯ ರಮೇಶ್ ಅವರು ಆಯವ್ಯಯದ ಕುರಿತು ಮಾತನಾಡುತ್ತಿದ್ದಾಗ ಮಾನ್ಯ ವಿರೋಧಪಕ್ಷದ ನಾಯಕರು ಅವರಿಗೆ ಸ್ವಲ್ಪ ಕುಳಿತುಕೊಳ್ಳಿ. ಇದು ಪ್ರಮುಖವಾದ ವಿಷಯವಾಗಿದ್ದು, ನಾನು ಮಾತನಾಡುತ್ತೇನೆಂದು ಹೇಳಿದರು. ಪಕ್ಕದಲ್ಲಿ ಕುಳಿತಿದ್ದ ಸಭಾನಾಯಕರು 10 ನಿಮಿಷಗಳ ಕಾಲ ಮುಖ್ಯಮಂತ್ರಿಯವರಿಗೆ ಕುಳಿತುಕೊಳ್ಳುವಂತೆ ಹೇಳಬಹುದಾಗಿತ್ತು. ಕೆಳಮನೆ ಕೂಡ adjourn ಆಗಿದೆ. ಬೇರೆ ಕೆಲಸ ಇರಲಿಲ್ಲ. ಇಲ್ಲಿ ನಮ್ಮ ವಿರೋಧಪಕ್ಷದ ನಾಯಕರು ಮನವಿ ಮಾಡಿಕೊಂಡರೆ ಅದಕ್ಕೂ ಗೌರವವಿಲ್ಲ. ತಾವು ಪೀಠದಲ್ಲಿ

ಕುಳಿತು ಹೇಳಿರುವುದಕ್ಕೂ ಗೌರವವಿಲ್ಲ. ಸಂಪುಟದ ಯಾವುದೇ ಸಚಿವರು ಉತ್ತರವನ್ನು ಕೊಡಬಹುದು ಎಂದು ಈಗ ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದರು.

**ಸಭಾಪತಿಯವರು:–** ನಿಯಮ ಇದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಈ ಸಂಪುಟದ ಸದಸ್ಯರು ಯಾವ ರೀತಿ ಉತ್ತರ ಕೊಡುತ್ತಾರೆಂದು ನಾವು ನೋಡುತ್ತಿದ್ದೇವೆ. ಅ ಅಂದರೆ ಉ ಎನ್ನುವುದಕ್ಕೆ ಬರುವುದಿಲ್ಲ. ಉ ಅಂದರೆ ಅ ಎನ್ನುವುದಕ್ಕೆ ಬರುವುದಿಲ್ಲ.

**(ಮುಂದು)**

## (601) 23.03.2021, 5 .50 KG.BNS

**ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು. ಮಾನ್ಯ ಸದಸ್ಯರು ‘ಅ’ ಅಂದರೆ ‘ಉ’ ಎನ್ನುವುದಕ್ಕೆ ಬರುವುದಿಲ್ಲವೆಂದು ಹೇಳಬಾರದು. ನಾವು ಅವರ ಸರ್ಕಾರ ಇದ್ದಾಗ ಬಹಳಷ್ಟು ಸಚಿವರನ್ನು ನೋಡಿದ್ದೇವೆ.,

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ನೋಡುತ್ತಿದ್ದೇವೆ. ನಾನು ಇವತ್ತಿನ ‘ಈ ಸಂಜೆ’ ಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ನೋಡಿ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್ (ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾತನಾಡುವುದರಲ್ಲಿ ಸ್ವಲ್ಪ ಹಿಡಿತವಿರಲಿ..

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 'ಅ' ಅಂದರೆ, 'ಉ' ಅನ್ನುವುದಕ್ಕೆ ಬರುವುದಿಲ್ಲವೆಂದು ಮಾತನಾಡಬಾರದು, ಇದು ಸದನಕ್ಕೆ ಶೋಭೆ ತರುವಂಥದ್ದಲ್ಲ. ಅವರು ಸರ್ವಜ್ಞರಲ್ಲ..

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಇವತ್ತಿನ 'ಈ ಸಂಜೆ' ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನೋಡಿ ಹೇಳುತ್ತಿದ್ದೇನೆ..

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಕೆಲವು ಸಲ ಮಾಹಿತಿ ಕೊರತೆಯಿಂದ ಈ ರೀತಿ ಹೆಚ್ಚು ಕಡಿಮೆ ಆಗುತ್ತದೆ. ಆದರೆ, ಅವರು ಸರ್ವಜ್ಞರ ತರಹ ಮಾತನಾಡಬಾರದು. ಒಂದು ವೇಳೆ ಅವರಿಗೆ ಉತ್ತರದಿಂದ satisfaction ಆಗದಿದ್ದರೆ, ಮತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ. ಅದೇರೀತಿ ಮತ್ತೆ ಉತ್ತರ ಕೊಡಿಸುವುದಕ್ಕೂ ಅವಕಾಶ ಇದೆ. ದಯವಿಟ್ಟು ಅವರು ಸಹಕರಿಸಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ. ಎಲ್ಲರೂ ಸುಮ್ಮನೆ ಇರಿ. ಸದನಕ್ಕೆ ಚುನಾಯಿತರಾಗಿ ಬಂದವರಿಗೆ, ಶಾಸಕರಾದವರಿಗೆ ಮತ್ತು ಮಂತ್ರಿಯಾಗಿ ಬಂದವರಿಗೆ 'ಅ' ಅಂದರೆ, 'ಉ' ಎನ್ನುವುದಕ್ಕೆ ಬರುವುದಿಲ್ಲವೆಂದು ಹೇಳುವುದು ಸರಿಯಲ್ಲ. ನನ್ನ ಅನುಭವವನ್ನು ಕೇಳಿ. ಹೊಸದಾಗಿ ಬಂದಾಗ, ಈ ರೀತಿ ಸಚಿವರಿಗೆ ಆಗುತ್ತದೆ. ಕೆಲವರಿಗೆ experience ಇರುವುದಿಲ್ಲ. ಅದಕ್ಕೆ ಆ ರೀತಿ ಹೇಳುವುದು, it is not in a good taste. ಇಷ್ಟೇ ಬೇರೆ ಏನು ಇರುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಮತ್ತು ನಾವು ಸಾಕಷ್ಟು ಕಮಿಟಿಗಳಲ್ಲಿ ಕೆಲಸ ಮಾಡಿದ್ದೇವೆ. ಪ್ರತಿಯೊಂದಕ್ಕೂ ಆವೇಶದಲ್ಲಿ ಮತ್ತು ಆವೇಗದಲ್ಲಿ ಮಾತನಾಡುವುದು ಮಾನ್ಯ ಸದಸ್ಯರಂತಹ ಕಿರಿಯ ವಯಸ್ಸಿನವರಿಗೆ ಶೋಭೆ ತರುವುದಿಲ್ಲ. 'ಅ' ಅನ್ನುವುದಕ್ಕೆ ಬರುವುದಿಲ್ಲ, 'ಉ' ಅನ್ನುವುದಕ್ಕೆ ಬರುವುದಿಲ್ಲ .,

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು ನಾನು ಹೇಳುತ್ತಿಲ್ಲ. ಇವತ್ತಿನ 'ಈ ಸಂಜೆ' ಪತ್ರಿಕೆಯಲ್ಲಿ 'ಪ್ರಶ್ನೋತರ ಅವಧಿಯಲ್ಲಿ ಉತ್ತರಿಸುವ ವೇಳೆ ಸಚಿವರು ತಬ್ಬಿಬ್ಬು' ಎಂದು ವರದಿಯಾಗಿದೆ..

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಪ್ರಶ್ನೆ ಕೇಳುತ್ತಾರೆ. ಉಪ ಪ್ರಶ್ನೆ ಕೇಳುತ್ತಾರೆ. ಸುದೀರ್ಘವಾದಂತಹ ಪ್ರಶ್ನೆ ಕೇಳುತ್ತಾರೆ. ಯಾವುದೇ ಸಚಿವರು ಸರ್ವಜ್ಞರಲ್ಲ. ಅಂತಹ ಸಂದರ್ಭದಲ್ಲಿ ಸಚಿವರಾದವರು ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು ಉತ್ತರ ಕೊಡಬೇಕಾಗುತ್ತದೆ. Homework ಮಾಡಿಕೊಂಡು ಬಂದಿರುತ್ತೇವೆ; ಆದರೂ ಪ್ರಶ್ನೆ, ಉಪ ಪ್ರಶ್ನೆ ನಮ್ಮ ನಿರೀಕ್ಷೆ ಮಟ್ಟವನ್ನು ಮೀರಿ ಬಂದಂತಹ ಸಂದರ್ಭದಲ್ಲಿ ಅಧಿಕಾರಿಗಳಿಂದ ಉತ್ತರ ಪಡೆಯಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಯಾವ ಮಟ್ಟಕ್ಕೆ ಇದೆ ಎಂದರೆ, ನಾವು ಕೇಳುವ ಪ್ರಶ್ನೆ ಒಂದು. ಅದಕ್ಕೆ ಅವರು ಉತ್ತರ ಕೊಡುವುದು ಇನ್ನೊಂದು, ಆ ರೀತಿ ಆಗಿದೆ..

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ನಾನು ಹೇಳಿದ್ದೇನೆ ಅಲ್ಲವೇ, ಸಾಕುಬಿಡಿ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಮೇಲೆ ಆಯಿತು ಬಿಡಿ. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಕುಳಿತಿದ್ದರು. ಮಾನ್ಯ ಸದಸ್ಯರಾದ ಎನ್.ಆರ್.ರಮೇಶ್‌ರವರು ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಗ್ಗೆ ಮಾತನಾಡಿದರು. ಆಗ ಮಾನ್ಯ ಮುಖ್ಯಮಂತ್ರಿಯವರು Immediate ಆಗಿ ಎದ್ದು ನಿಂತು ಅದನ್ನು ಸರಿಮಾಡುತ್ತೇನೆ ಎಂದು ಉತ್ತರ ಕೊಟ್ಟರು. ಅದೇರೀತಿ ಈಗ ಮಾನ್ಯ ಮುಖ್ಯ ಮಂತ್ರಿಯವರು ಸದನದಲ್ಲಿ ಇದ್ದಿದರೆ ನಮ್ಮ ವಿರೋಧ ಪಕ್ಷದ ನಾಯಕರ ಪ್ರಶ್ನೆಗೆ immediately ಉತ್ತರ ಸಿಗುತ್ತಿತ್ತು. ಸಭಾನಾಯಕರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿ ಚರ್ಚೆ ಮಾಡಿ ಇದಕ್ಕೆ ಒಂದು ಪರಿಹಾರ ಕೊಡುತ್ತೇವೆ ಎಂದು ಉತ್ತರ ಕೊಡುತ್ತಿದ್ದರು. ಮಾನ್ಯ ಸಭಾನಾಯಕರು ಇಷ್ಟೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಕುಳಿತಿದ್ದರೆ, immediately ಇದಕ್ಕೆ ಉತ್ತರ ಸಿಗುತ್ತಿತು. ಇದು ನಮ್ಮ ಕಾಳಜಿ. ಸದನದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಿದರೆ, ಮಾನ್ಯ ಮುಖ್ಯಮಂತ್ರಿಯವರಿಗೆ ಎಷ್ಟು ಗೌರವ, ಅಧಿಕಾರ ಇದೆಯೋ ಅಷ್ಟೇ ಗೌರವ, ಅಷ್ಟೇ ಅಧಿಕಾರ ವಿರೋಧ ಪಕ್ಷದ ನಾಯಕರಿಗೂ ಇರುತ್ತದೆ. ಅದಕ್ಕೆ ಪೀಠ ಅವರನ್ನು ಗಂಭೀರವಾಗಿ ಪರಿಗಣಿಸಿ ಅವರನ್ನು ಸಹಕರಿಸಬೇಕೆಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ವಿರೋಧ ಪಕ್ಷದ ನಾಯಕರು ಎಂದರೆ, he is a shadow of the Chief Minister. ಅದಕ್ಕೆ ನಮ್ಮ ತಕರಾರು ಇಲ್ಲ. ಅವರಿಗೆ ಗೌರವ ಕೊಡಬೇಕೆಂದು ಹೇಳಿದ್ದೇನೆ. ಮಾನ್ಯ ಸಭಾನಾಯಕರೇ, ತಾವು ಇನ್ನೊಂದು ಬಾರಿ ನಾಳೆಗೆ ಪ್ರಯತ್ನ ಮಾಡಿ. ನಾನು ಹೇಳಬೇಕೆಂದಿದ್ದರೆ, ಹೇಳುತ್ತೇನೆ. ಮಾನ್ಯ ಪಾಟೀಲ್‌ರವರೇ, ನಾಳೆಗೆ ತೆಗೆದುಕೊಳ್ಳೋಣವೆ?

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸಭಾನಾಯಕರ ಬಗ್ಗೆ ಅಪಾರವಾದ ಗೌರವ ಇದೆ. ಅವರು ಒಳ್ಳೆಯ ಸಭಾನಾಯಕರು ಮತ್ತು ಸಚಿವರು. ನಾನು ಅವರಿಗೆ ಸಾಮರ್ಥ್ಯ ಇಲ್ಲವೆಂದು ಹೇಳುವುದಿಲ್ಲ. ಅವರಿಗೆ ಸಾಮರ್ಥ್ಯ ಇರಬಹುದು, ಕೆಲವು policy decisions ಇರುತ್ತವೆ, ಅವುಗಳನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. He may be Leader of the House and he may be representing the Government. In spite of this fact, ಕೆಲವು ವಿಚಾರದಲ್ಲಿ, financial involvement, policy matter ಬಂದಂತಹ ಸಂದರ್ಭದಲ್ಲಿ ಅವರು ಮತ್ತೆ ಮಾನ್ಯ ಮುಖ್ಯಮಂತ್ರಿಯವರನ್ನು consult ಮಾಡಿ ಹೇಳುತ್ತೇನೆಂದು ಹೇಳಬೇಕಾಗುತ್ತದೆ. ಅದರ ಅರ್ಥ, ನಾನು ಮಾನ್ಯ ಸಭಾನಾಯಕರಿಂದ ಉತ್ತರ ಅಪೇಕ್ಷೆ ಮಾಡುವುದಿಲ್ಲ ಮತ್ತು ಅವರನ್ನು ಗೌಣವಾಗಿ ಕಾಣುತ್ತೇನೆಂದು ಅನ್ಯಥಾ ಭಾವಿಸಬಾರದು. I have got my own respect and regards for you. ಆದರೆ, ಇದು ಬಹಳ ಮಹತ್ವದ ಪ್ರಶ್ನೆ ಇದೆ. ಉತ್ತರ ಕರ್ನಾಟಕ ಭಾಗದ ಕಬ್ಬು ಬೆಳೆಗಾರರ ಗಂಭೀರವಾದ ಪ್ರಶ್ನೆ. ಅಲ್ಲಿ ಸಕ್ಕರೆ ಕಾರ್ಖಾನೆಗಳು ಎಲ್ಲವೂ ಸ್ಥಗಿತವಾಗುವಂತಹ ಪರಿಸ್ಥಿತಿ ಇದೆ. ಅದಕ್ಕೆ ನಾಳೆಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕರೆಸಬೇಕು. ಅವರು ಆಗುವುದಿಲ್ಲವೆಂದರೆ ಹೇಳಲಿ, ಅದಕ್ಕೆ ಬೇರೆ ದಾರಿಗಳಿವೆ. ತಾವು ಸಹ ಮಾನ್ಯ ಮುಖ್ಯಮಂತ್ರಿಯವರಿಗೆ ವಿಶೇಷವಾಗಿ ಹೇಳಿ. ಇದಕ್ಕೆ ನಾನು ತಮ್ಮಲ್ಲಿ ಮನವಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇನೆ. ಇದನ್ನು ನಿನ್ನೆಯಿಂದ ಹೇಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಗೆ ಬಂದಿದ್ದಾರೆಂದು ಬಹಳ ಸಂತೋಷದಿಂದ ಶ್ರೀ ರಮೇಶ್ ಗೌಡರವರಿಗೆ ಮನವಿ ಮಾಡಿಕೊಂಡೆ. ಅವರು ಮಾತನಾಡುವುದನ್ನು ಮಧ್ಯದಲ್ಲಿಯೇ ನಿಲ್ಲಿಸಿದರು. ಮಾನ್ಯ ಮುಖ್ಯಮಂತ್ರಿಯವರು ಸದನದಿಂದ ಎದ್ದು ಹೋದರು. ಅಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಅವರಿಗೆ ಹೇಳುವುದಿಲ್ಲವೆಂದರೆ.,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಸಹ ಸಭಾನಾಯಕರಾಗಿ ಕೆಲಸ ಮಾಡಿದ್ದೀರಿ. ತಾವೇ ಬಹಳಷ್ಟು ಬಾರಿ ಉತ್ತರವನ್ನು ಕೊಟ್ಟಿದ್ದೀರಿ. ಒಂದೊಂದು ಬಾರಿ ಆಕಸ್ಮಿಕವಾಗಿ ಇಂತಹ ಪರಿಸ್ಥಿತಿ ನಿರ್ಮಾಣವಾದಂತಹ ಸಂದರ್ಭದಲ್ಲಿ ತಾವೇ ಉತ್ತರ ಕೊಟ್ಟಿದ್ದೀರಿ. ಒಂದೊಂದು ಬಾರಿ ಮಾನ್ಯ ಮುಖ್ಯಮಂತ್ರಿಯವರು ಬಂದಾಗ ಉತ್ತರ ಕೊಡಿಸಿದ್ದೀರಿ. ಅದಕ್ಕೆ ಮಾನ್ಯ ಸಭಾನಾಯಕರೇ, ನಾಳೆಗೆ ಸಾಧ್ಯವಾದರೆ ಮುಖ್ಯಮಂತ್ರಿಯವರನ್ನು ಕರೆಸಿ. ಏಕೆಂದರೆ, ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಕಳಕಳಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಸಭಾನಾಯಕನಾಗಿದ್ದಂತಹ ಸಂದರ್ಭದಲ್ಲಿ ಒಂದು ಬಾರಿ ಇಂತಹ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ನನ್ನ ಸಮೀಪದಲ್ಲಿಯೂ ಸಹ ಇರಲಿಲ್ಲ. ಚರ್ಚೆ ಮಾಡುವುದಕ್ಕೆ ಆಗಲಿಲ್ಲ. I took my own decision and announced on the floor of the House.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನೋಡೋಣ ಬಿಡಿ. ಈಗ ಅವರೇ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ನೋಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರೇ ಕೊಡಲಿ. ಮಾನ್ಯ ಮುಖ್ಯ ಮಂತ್ರಿಯವರು ಬಂದ ತಕ್ಷಣವೇ ನಾವು ಸಹಕಾರ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರ ವಿಚಾರವನ್ನು ತಿಳಿದುಕೊಳ್ಳಿ, ನಾಳೆಗೆ ಸಾಧ್ಯವಾದರೆ, ಮಾನ್ಯ ಮುಖ್ಯಮಂತ್ರಿಯವರಿಗೆ convince ಮಾಡಿ. ರಮೇಶ್ ಗೌಡರವರೇ ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಬಹಳ ಹಿರಿಯರು ಇದ್ದಾರೆ. ಅವರು ಸಭಾನಾಯಕರು ಯಾರ ಪರವಾಗಿಯಾದರೂ ಸಹ ಉತ್ತರವನ್ನು ಕೊಡಬಹುದು ಎಂದು ಹೇಳಿದರು.

**ಸಭಾಪತಿಯವರು:-** ಸದಸ್ಯರೇ, ಆ ರೀತಿ ಕಾನೂನಿದೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಸಭಾನಾಯಕರು ವಿರೋಧ ಪಕ್ಷದ ನಾಯಕರಾಗಿದ್ದರು, ಅವರು ಅಧಿಕಾರಿಗಳು ಮತ್ತು ಸಚಿವರು ಬಂದಿಲ್ಲವೆಂದು ಹೇಳಿ ಆಕಾಶ ಮತ್ತು ಭೂಮಿಯನ್ನು ಒಂದು ಮಾಡಿದರು. ಅವರೇ ಯಾರ್ಯಾರು ಸದನಕ್ಕೆ ಬಂದಿದ್ದಾರೆಂದು ಪಟ್ಟಿಯನ್ನು ಬರೆದುಕೊಂಡು ಓದಿದರು. ಅಂದು ಬಹಳ ಗಲಾಟೆ ಆಯಿತು. ಅಂದು ವಿರೋಧ ಪಕ್ಷದ ನಾಯಕರು 'ಈ ಸದನವನ್ನು ನಡೆಸುವುದು ನಮಗೆ ಗೊತ್ತಿದೆ' ಎಂದು ಹೇಳಿ ದೊಡ್ಡ ಗಲಾಟೆಯನ್ನು ಮಾಡಿದರು. ಅಂದು ಅವರೇ ಮಾಡಿರುವಂತಹ ಪದ್ಧತಿ. ಅದನ್ನೇ ಇಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ಮಾನ್ಯ ಸಭಾನಾಯಕರು ಉತ್ತರ ಕೊಡಬಹುದು. ಆದರೆ, ಅದನ್ನು implement ಮಾಡುವುದಕ್ಕೆ ಆಗುವುದಿಲ್ಲ. ನಾಳೆಯ ಕಾರ್ಯಕಲಾಪದ ಪಟ್ಟಿಯಲ್ಲಿ ಎಷ್ಟೋ ವಿಷಯಗಳು ಇರುತ್ತವೆ. ತಮಗೂ ಸಹ ಸಮಯದ ಅಭಾವ ಇದೆ. ಹಾಗಾಗಿ, ಮತ್ತೆ ಇದನ್ನು ಕೇಳುವುದಕ್ಕೆ ಅವಕಾಶ ಇರುವುದಿಲ್ಲ. ಕೆಳಮನೆಯಲ್ಲಿಯೂ ಈಗ ಸದನ ನಡೆಯುತ್ತಿಲ್ಲ. ಹಾಗಾಗಿ, ಸಚಿವರು ಇಲ್ಲಿಗೆ ಬರಬೇಕಲ್ಲವೇ? ಮಾನ್ಯ ಉಪ ಮುಖ್ಯಮಂತ್ರಿಯವರು ಈ ರೀತಿ ಹೇಳುವುದು ಸರಿಯಲ್ಲ.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ತಾವು ಒಂದು ನಿಮಿಷ ಮಾತನಾಡಿ. ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದ್ದರಿಂದ, ಎಲ್ಲರೂ ಒಟ್ಟಿಗೆ ಮಾತನಾಡಬೇಡಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ಸಭಾನಾಯಕರಿಗೆ ಉತ್ತರ ಕೊಡಬೇಕೆಂದು ಹೇಳಿದ್ದೀರಿ. Opposition leader is shadow of the Chief Minister ಎಂದು ಹೇಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, yes, it is a fact.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, he got up and requested that, 'ತಾವು ಒಂದು ನಿಮಿಷ ಇರಿ; ಮಾನ್ಯ ಮುಖ್ಯಮಂತ್ರಿಯವರಿಂದ ನಾನು ಉತ್ತರವನ್ನು ಅಪೇಕ್ಷೆ ಪಡುತ್ತಿದ್ದೇನೆ, ಹಾಗಾಗಿ, ಅವರು ಉತ್ತರ ಕೊಡಲಿ' ಎಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಬಹುದಾಗಿತ್ತು. ಅದು ಕೊಡಲೇ 5-10 ನಿಮಿಷಗಳಲ್ಲಿ ಆಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದರೂ ಸಹ, ಅವರು ಕೂಡಲೇ react ಮಾಡುತ್ತಾರೆ. ಕೂಡಲೇ react ಮಾಡಿ, ಅದಕ್ಕೆ ಆಯಿತು ಮಾಡುತ್ತೇನೆ, ಇಲ್ಲವೆಂದರೆ, ಮಾಡುವುದಿಲ್ಲವೆಂದು react ಮಾಡುತ್ತಾರೆ. ನಮ್ಮ ವಿರೋಧ ಪಕ್ಷದ ನಾಯಕರು ಆ ರೀತಿ ಆಪೇಕ್ಷೆ ಪಡುತ್ತಿದ್ದರು. ಆ ಒಂದು opportunity miss ಆಯಿತು ಎಂದು ಅವರು ಕೇಳುತ್ತಿದ್ದಾರೆ. ಅದಕ್ಕೆ ದಯವಿಟ್ಟು ಅದನ್ನು ಸರಿಪಡಿಸಿ.

**ಸಭಾಪತಿಯವರು:-** ಈಗ ನಿಯಮ 330ರ ಮೇಲೆ ಶ್ರೀಮತಿ ಎಸ್.ವೀಣಾ ಅಚ್ಚಯ್ಯರವರೇ, ಮಾತನಾಡಿ. ಇದಕ್ಕೆ ಯಾರಾದರೂ ಉತ್ತರ ಹೇಳಬಹುದು. ಮಾನ್ಯ ಸಭಾನಾಯಕರು ಉತ್ತರ ಹೇಳಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿ ಹೋಗಿದೆ. ಹಾಗಾಗಿ, ಉತ್ತರ ಬರುವುದು ತಡವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವೇ ಉತ್ತರ ಹೇಳಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನೇ ಉತ್ತರವನ್ನು ಹೇಳುತ್ತಿದ್ದೆ; ಆದರೆ, ಇಲಾಖೆಯಿಂದ ಇನ್ನೂ ಉತ್ತರ ಬಂದಿಲ್ಲ. ನಾನು ಈಗಾಗಲೇ ಅಧಿಕಾರಿಗಳನ್ನು ಕರೆದು ಕೇಳಿದ್ದೇನೆ.

**ಸಭಾಪತಿಯವರು;-** ಮಾನ್ಯ ಸಭಾನಾಯಕರೇ, ತಾವು ಒಮ್ಮೆ ಆ ರೀತಿ ಹೇಳುತ್ತೀರಿ, ಇನ್ನೊಮ್ಮೆ ಈ ರೀತಿ ಹೇಳುತ್ತೀರಿ. ಆಯಿತು ಬಿಡಿ. ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಇದಕ್ಕೂ ವರ್ಗಾವಣೆಯಂತೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಉತ್ತರ ಹೇಳುತ್ತೀರೋ ಅಥವಾ ಇಲ್ಲವೋ ಹೇಳಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು. ಉತ್ತರ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**14. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

ವಿಷಯ: ಕೊಡಗು ಜಿಲ್ಲೆಯಲ್ಲಿ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರಿಗೆ ನಿವೇಶನ ಮಂಜೂರಾತಿ ಮಾಡುವಲ್ಲಿ ವಿಳಂಬವಾಗುತ್ತಿರುವ ಕುರಿತು.

– – –

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಸುಮಾರು 10 ಸಾವಿರದಿಂದ 15 ಸಾವಿರದವರೆಗೆ ಮಾಜಿ ಸೈನಿಕರು, ವಿಧವೆಯರು ಮತ್ತು ಸೈನಿಕರ ಅವಲಂಬಿತರು ವಾಸವಾಗಿದ್ದಾರೆ. ಇದರಲ್ಲಿ ಮಾಜಿ ಸೈನಿಕರು ಕನಿಷ್ಠ ಪಕ್ಷ 15 ವರ್ಷಗಳಿಂದ 40 ವರ್ಷಗಳವರೆಗೆ ಸೇವೆ ಸಲ್ಲಿಸಿ ಬಂದು ಜಿಲ್ಲೆಯಲ್ಲಿ ನೆಲೆಸಿರುತ್ತಾರೆ. ಇವರು ಸರ್ಕಾರಿ ಜಾಗ ಮಂಜೂರಾತಿ ವಿಷಯದಲ್ಲಿ ಕೊಡಗು ಜಿಲ್ಲೆಯ ಮಾಜಿ ಸೈನಿಕರು 2001ನೇ ಸಾಲಿನಿಂದ ಇಲ್ಲಿಯವರೆಗೆ ಸಲ್ಲಿಸಲಾದ ಸುಮಾರು 300 ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಇರುತ್ತವೆ. ಜಿಲ್ಲಾಡಳಿತದವರು ಮತ್ತು ಸರ್ಕಾರದವರು ಯಾವುದೇ ನಿಲವು ತೆಗೆದುಕೊಳ್ಳದಿರುವುದರಿಂದ ಮಾಜಿ ಸೈನಿಕರಿಗೆ ಜಾಗ ಮಂಜೂರಾತಿ ಆಗಿರುವುದಿಲ್ಲ. ಸುಮಾರು 10 ರಿಂದ 15 ವರ್ಷಗಳಿಂದ ಜಾಗವನ್ನು ಆಕ್ರಮಿಸಿಕೊಂಡು ವ್ಯವಸಾಯ ಮಾಡಿ ಅವರ ಸ್ವಾಧೀನದಲ್ಲಿರುವ ಜಾಗವನ್ನು ಏಕಾಏಕಿ ಜಿಲ್ಲಾಡಳಿತದ ಆದೇಶದಂತೆ ಕಂದಾಯ ಇಲಾಖೆಯವರು ತೆರವುಗೊಳಿಸುವ ಕಾರ್ಯಾಚರಣೆಯಲ್ಲಿ ಮುಂದಾಗಿದ್ದಾರೆ. ಕೊಡಗಿನಲ್ಲಿ ನೆಲೆಸಿರುವ ಮಾಜಿ ಸೈನಿಕರಿಗೆ ಇವತ್ತಿನವರೆಗೆ ಯಾವುದೇ ಜಾಗ ಮಂಜೂರಾತಿ ಆಗುತ್ತಿಲ್ಲ. ಕೊಡಗಿನಲ್ಲಿರುವ ಸರ್ಕಾರಿ ಜಾಗವನ್ನು ಹೊರಗಿನ ಇತರೆ ರಾಜ್ಯಗಳಿಂದ ಬಂದವರಿಗೆ ಮಂಜೂರಾತಿ ಮಾಡುವಲ್ಲಿ ಮೊದಲ ಆದ್ಯತೆ ನೀಡುತ್ತಿದ್ದಾರೆ. ಆದ್ದರಿಂದ, ಬೇಗ ವಿಲೇವಾರಿ ಮಾಡುವಂತೆ ಜಿಲ್ಲಾಡಳಿತಕ್ಕೆ ಆದೇಶ ಮಾಡುವಂತೆ ಈ ಮೂಲಕ ಮನವಿ ಮಾಡಲಾಗಿದೆ. ಸರ್ಕಾರದಿಂದ 2019 ರಲ್ಲಿ ಆದೇಶವಾಗಿದೆ.

**(ಮುಂದು)**

**(602) 23–03–2021(6–00)ಎಂವಿ–ಬಿಎನ್ಎಸ್**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ಮುಂದು):–**

ಹಾಗಾಗಿ ಮಾಜಿ ಸೈನಿಕರಿಗೆ ಕಂದಾಯ ಕಟ್ಟುವುದರಲ್ಲಿ ಇರುವ ಶೇಕಡಾ 50ರಷ್ಟು ರಿಯಾಯಿತಿಯನ್ನು ಶೇಕಡಾ 100ರಷ್ಟು ರಿಯಾಯಿತಿ ಕೊಡಬೇಕು. ಮಾಜಿ ಸೈನಿಕರ ಆಸ್ತಿ ತೆರಿಗೆಗೆ ಸಂಪೂರ್ಣ ರಿಯಾಯಿತಿ ನೀಡಬೇಕು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಸುತ್ತೋಲೆ ಹೊರಡಿಸಬೇಕೆಂದು ತಮ್ಮ ಮುಖಾಂತರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿಕೊಳ್ಳುತ್ತೇನೆ. ಜೊತೆಗೆ ಕನಿಷ್ಟಪಕ್ಷ ಮೂರು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾ ಸೈನಿಕ ಕಲ್ಯಾಣಾಧಿಕಾರಿಗಳ ಉಪಸ್ಥಿತಿಯಲ್ಲಿ ಸೈನಿಕ ಅದಾಲತ್ ಸಂಪರ್ಕ ಸಭೆಯನ್ನು ನಡೆಸಬೇಕು. ಕಳೆದ ಎರಡು ವರ್ಷಗಳಿಂದ ಯಾವುದೇ ರೀತಿಯ ಅದಾಲತ್ ಸಂಪರ್ಕ ಸಭೆ ನಡೆದಿರುವುದಿಲ್ಲ. ಆದುದರಿಂದ ದಯಮಾಡಿ ಇದನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಪೌರಾಡಳಿತ ಮತ್ತು ಸಕ್ಕರೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಆದಾಗಿಯೂ ಕೂಡ ಶ್ರೀಮತಿ ಎಸ್.ವೀಣಾ ಅಚ್ಚಯ್ಯನವರು ಉಲ್ಲೇಖ ಮಾಡಿರುವಂತೆ ಅರ್ಜಿಗಳ ಅಂಕಿಸಂಖ್ಯೆಗಳ ಮಾಹಿತಿ ಇದ್ದು ಅದನ್ನು ಒದಗಿಸಿದರೆ, ಅಲ್ಲಿಯ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ, ಮಾಜಿ ಸೈನಿಕರಿಗೆ ನಿವೇಶನ ಮತ್ತು ಜಮೀನು ಹಂಚಿಕೆಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಮತ್ತೆ ಮೂರು ತಿಂಗಳಿಗೊಮ್ಮೆ ನಿವೃತ್ತ ಸೈನಿಕರು ಮತ್ತು ಜಿಲ್ಲಾಧಿಕಾರಿಗಳ ಸಭೆ ಕರೆಯಬೇಕು ಮತ್ತು ನಿವೃತ್ತ ಸೈನಿಕರ ಸಮಸ್ಯೆಗಳನ್ನು ಕೇಳಬೇಕೆಂದು ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಹೇಳಿದ್ದಾರೆ.  ಆ ಸೂಚನೆಯನ್ನು ಜಿಲ್ಲಾಧಿಕಾರಿಗಳಿಗೆ ನೀಡುತ್ತೇವೆ.  ಅವರ ಮುಖ್ಯವಾದ ಪ್ರಶ್ನೆ ಇರುವುದು, ನಿವೃತ್ತ ಮಾಜಿ ಸೈನಿಕರಿಗೆ ಜಮೀನು ಕೊಡುವುದರ ಬಗ್ಗೆ ಇದೆ.  ಕೊಟ್ಟಿರುವಂತಹ ಅರ್ಜಿಗಳ ಅಂಕಿಸಂಖ್ಯೆಗಳಲ್ಲಿ ಇರುವುದು ಒಂದು ಅರ್ಜಿ ಮಾತ್ರವೆಂದು ಹೇಳಿದ್ದಾರೆ. ಏನಾದರೂ ಮಾನ್ಯ ಸದಸ್ಯರಿಗೆ ಮಾಹಿತಿ ಇದ್ದರೆ, ಆ ಎಲ್ಲಾ ವಿವರಗಳನ್ನು ನೀಡಿದರೆ, ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ, ಮಾಜಿ ಸೈನಿಕರಿಗೆ ಜಮೀನು ಕೊಡುವುದರ ಬಗ್ಗೆ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾಜಿ ಸೈನಿಕರು ಅಲ್ಲಿರುವಂತಹ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಇತ್ತೀಚೆಗೆ ಆ ಜಾಗವನ್ನು ಬಿಡಬೇಕೆಂದು ಜಿಲ್ಲಾಧಿಕಾರಿಗಳಿಂದ ಒಂದು ಸುತ್ತೋಲೆ ಬಂದಿರುವುದಕ್ಕೆ ಈ ರೀತಿಯ ಗೊಂದಲವಾಗಿದೆ.  ಹಾಗಾಗಿ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕೊಡಬೇಕು, ಅದರ ಜೊತೆಗೆ ಆ ಸೈನಿಕರನ್ನು ಸೇರಿಸಿಕೊಂಡು ಒಂದು ಸಭೆಯನ್ನು ಏರ್ಪಾಡು ಮಾಡುವುದಕ್ಕೆ ತಿಳಿಸಿ, ಅಲ್ಲಿನ ಸ್ಥಳೀಯ ಎಂ.ಎಲ್.ಎ.ಗಳನ್ನು ಕರೆಯಿಸಬೇಕೆಂದು ತಾವು ಆದೇಶ ನೀಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರು ಅಲ್ಲಿ ಸರ್ಕಾರಿ ಜಮೀನು ಇದೆ, ಅದನ್ನು ಕೊಡಬೇಕೆಂದು ಕೇಳುತ್ತಿದ್ದಾರೆ.  ಅದನ್ನು ಕೊಡಿಸಿ, ಅದರಲ್ಲಿ ಏನು ತಪ್ಪಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾಜಿ ಸೈನಿಕರು ಈಗಾಗಲೇ ಅತಿಕ್ರಮಣ ಮಾಡಿಕೊಂಡಿದ್ದಾರೆ. ಈಗ ಅತಿಕ್ರಮಣ ಮಾಡಿಕೊಂಡಿರುವಂತಹ ಜಾಗವನ್ನು ಮಂಜೂರಾತಿ ಮಾಡಬೇಕೆಂದು ಅವರು ಕೇಳಿದ್ದಾರೆ. ಜಿಲ್ಲಾಧಿಕಾರಿಗಳು, ಅಲ್ಲಿನ ಶಾಸಕರು ಮತ್ತು ನಿವೃತ್ತ ಮಾಜಿ ಸೈನಿಕರ ಸಭೆಯನ್ನು ಕರೆಯಬೇಕೆಂದು ಕೇಳಿದ್ದಾರೆ. ಈ ಸದನ ಮುಗಿಯುತ್ತಿದ್ದಂತೆ ಸಭೆ ಕರೆದು, ಜಮೀನು ಮಂಜೂರಾತಿಯ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದು grant.

**(ಗೊಂದಲ)**

**ಸಭಾಪತಿಯವರು:-** ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ, ಅದನ್ನು ಬಗೆಹರಿಸುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯನವರು ನಿಯಮ 330ರ ಅಡಿಯಲ್ಲಿ ಬಹಳ ಗಂಭೀರವಾದ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಸುಮಾರು 15-20 ವರ್ಷ ಸೇವೆ ಮಾಡಿಕೊಂಡು ಬಂದಂತಹ ಈ ನಾಡಿನ ಸೈನಿಕರಿಗೆ ಕೊಡತಕ್ಕಂಥ ಜಾಗದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ dispute ಇದೆ. ಆದರೆ, ವಿಷಯವೇನೆಂದರೆ, ಮಾನ್ಯ ಸಭಾನಾಯಕರು ಹಿರಿಯರು ಆದರೆ ನಾವು ಅವರಿಂದ ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ. ಏಕೆಂದರೆ, ಮಾನ್ಯ ಸಭಾನಾಯಕರು ಹೇಳಿದಂತೆ, ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಜಾಗದ ಮಾಹಿತಿ ನೀಡಿ ಎಂದರೆ, ಸರ್ಕಾರಿ ಅಧಿಕಾರಿಗಳಾದ ತಹಶೀಲ್ದಾರ್ ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಏಕೆ ಇದ್ದಾರೆ? ಅವರ ಬಳಿ ಇಲ್ಲದಂತಹ ಮಾಹಿತಿ ಸದಸ್ಯರ ಬಳಿಯಲ್ಲಿ ಇರುತ್ತದೆಯೇ?

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರು ಒಂದು ನಿಮಿಷ ನನ್ನ ಮಾತನ್ನು ಕೇಳಿ. ಜಿಲ್ಲಾಧಿಕಾರಿ ಮತ್ತು ಸ್ಥಳೀಯ ಎಂ.ಎಲ್.ಎ.ಯವರನ್ನು ಹಾಗೂ ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರನ್ನು ಕರೆದು ಸಭೆ ಮಾಡಿ ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದಾರೆ. ಸಭೆ ಕರೆಯುವುದರ ಬಗ್ಗೆ ದಿನಾಂಕವನ್ನು ತಿಳಿಸಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರಿಗೆ ಸ್ಪಷ್ಟಪಡಿಸುವುದೇನೆಂದರೆ,...

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೆ ಅವರನ್ನು ಒಕ್ಕಲೆಬ್ಬಿಸುವುದು ಬೇಡ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ ಈಗ ತಾವು ಸಲಹೆ ನೀಡಿದ್ದೀರಿ. ಈಗ ಏನು ಮಾಡಬೇಕು ಅನ್ನುತ್ತೀರಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆ ಎಂದರೆ, ಒಬ್ಬ ಸಾಮಾನ್ಯ ಪ್ರಜೆ ಶ್ರೀರಾಮನ ಮುಂದೆ ಹೋಗಿ, ನನ್ನ ಹೆಂಡತಿ ಕಳೆದು ಹೋಗಿ ಮೂರು ದಿವಸವಾಗಿದೆ, ನನ್ನ ಹೆಂಡತಿಯನ್ನು ಹುಡುಕಿಕೊಡಿ ಎಂದು ಕೇಳಿದಾಗ, ಶ್ರೀರಾಮ ಹೇಳಿದರಂತೆ ನನ್ನ ಹೆಂಡತಿಯೂ ಸಹ ಕಳೆದು ಹೋಗಿದ್ದಾರೆ ನನ್ನ ಹೆಂಡತಿಯನ್ನು ಹುಡುಕಿಕೊಡು ಎಂದು ಹೇಳಿದಂತೆ ಇದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಭೋಜೇಗೌಡರೆ ತಮ್ಮದು ಜಾಸ್ತಿಯಾಯಿತು. ಈಗ ಒಬ್ಬೊಬ್ಬರು ಮಾತನಾಡಿ. ಮಾನ್ಯ ಸಭಾನಾಯಕರೆ ಅದು ಮಾನ್ಯ ಭೋಜೇಗೌಡರ ಕ್ಷೇತ್ರದಲ್ಲಿ ಇದ್ದರೆ, ಅವರನ್ನು ಸಹ ಸಭೆಗೆ ಕರೆಯಿರಿ. ಒಬ್ಬರು ಮಾತನಾಡುವಾಗ ಮತ್ತೊಬ್ಬರು ಮಾತನಾಡಬಾರದು. ಈಗ ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ಮಾತನಾಡುವುದು.

**ಆ) ವಿಷಯ:-** ರಾಜ್ಯದಲ್ಲಿರುವ ಖಾಸಗಿ ಬ್ಯಾಂಕುಗಳು ನಾಗರಿಕರಿಗೆ ಸಾಲ ಮರುಪಾವತಿ ಮಾಡಲು ಅನಗತ್ಯ ಕಿರುಕುಳ ನೀಡುತ್ತಿರುವ ಬಗ್ಗೆ.

- - -

**ಶ್ರೀ ಹೆಚ್.ಎಂ.ರಮೇಶ್‌ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇವತ್ತು ಬ್ಯಾಂಕುಗಳು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವುದರ ಬಗ್ಗೆ ನಿಯಮ 330ರ ಅಡಿಯಲ್ಲಿ ಈ ವಿಷಯವನ್ನು ತಮ್ಮ ಮುಂದೆ ತೆಗೆದುಕೊಂಡು ಬಂದಿದ್ದೇನೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಬ್ಯಾಂಕುಗಳು ಸಾರ್ವಜನಿಕರಿಗೆ ಸಾಲ ಕೊಡಬೇಕಾದರೆ ಸುಮಾರು 100 ರಿಂದ 150 ಪೇಜ್ ಇರುವಂತಹ ಒಂದು ಪುಸ್ತಕಕ್ಕೆ ಸಹಿ ಮಾಡಿಸಿಕೊಳ್ಳುತ್ತಾರೆ. ಯಾರೂ ಸಹ ಆ ಪುಸ್ತಕವನ್ನು ಓದಿ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಂದರೆ, ಅವರು terms and conditions ನಲ್ಲಿ ಸಹಿ ಮಾಡಿಸಿಕೊಳ್ಳುತ್ತಾರೆ. ಅದಾದ ನಂತರ, ಇವತ್ತು ಸಿ.ಎಂ.ಹೆಚ್. ರಸ್ತೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಂದಿರಾನಗರದಲ್ಲಿ ಒಂದು ತಿಂಗಳಿನಿಂದ ಸತತವಾಗಿ ಧರಣಿಯನ್ನು ನಡೆಸುತ್ತಿದ್ದಾರೆ. ಆ ಧರಣಿಯನ್ನು ಏಕೆ ನಡೆಸುತ್ತಿದ್ದಾರೆಂದರೆ, ಸಾಲ ಕೊಡುವಾಗ ನೀವು ಆರು ತಿಂಗಳು, ಏಳು ತಿಂಗಳು ತೆಗೆದುಕೊಳ್ಳಿ, ದಾಖಲೆ ಮತ್ತೊಂದು ಎಂದು ಹೇಳುತ್ತಾರೆ. ಏನು ಬ್ಯಾಂಕ್‌ನಲ್ಲಿ ಸಾಲವನ್ನು ತೆಗೆದುಕೊಂಡಿರುತ್ತಾರೆ, ಆ ಸಾಲವನ್ನು ಮತ್ತೆ ವಾಪಸ್ಸು ಕಟ್ಟಬೇಕಾದರೆ, ಅಂದರೆ ಆ ಸಾಲವನ್ನು pre-closure ಮಾಡಬೇಕು ಎಂದರೆ, ಬ್ಯಾಂಕ್‌ನವರು ಹಣವನ್ನು ಕಟ್ಟಿಸಿಕೊಳ್ಳುವುದಿಲ್ಲ. ಅವರು ಏನು ಹೇಳುತ್ತಾರೆಂದರೆ, ನಮಗೆ ಒಂದು ಅರ್ಜಿಯನ್ನು ನೀಡಿ ಅಥವಾ ಇ-ಮೇಲ್ ಮಾಡಿ, ಅದಾದ ಮೇಲೆ ಒಂದು ತಿಂಗಳು ನಂತರ ಅದಕ್ಕೆ ಅಪ್ರೂವಲ್ ಕೊಡುತ್ತೇವೆ. ನಾವು ಅಪ್ರೂವಲ್ ಕೊಟ್ಟು ಆದಮೇಲೆ ನೀವು ಬಂದು ಸಾಲವನ್ನು close ಮಾಡಿ ಎಂದು ಹೇಳುತ್ತಾರೆ. ಆದರೆ, ಅದಕ್ಕೆ ಆರ್.ಬಿ.ಐ. ಗೈಡ್‌ಲೈನ್ಸ್ ಇದೆ. ಅದು ಏನೆಂದರೆ, ತೆಗೆದುಕೊಂಡಿರುವಂತಹ ಸಾಲವನ್ನು pre-closure ಮಾಡಬೇಕಾದರೆ, ಆರ್.ಬಿ.ಐ. ಗೈಡ್‌ಲೈನ್ಸ್ ಪ್ರಕಾರ ಅದಕ್ಕೆ ಶೇಕಡಾ 2ರಷ್ಟು ಚಾರ್ಜ್ ಹಾಕುತ್ತಾರೆ. ಮತ್ತೆ ಶೇಕಡಾ 1ರಷ್ಟು ಜಿ.ಎಸ್.ಟಿ. ಎಂದು ಹಾಕುತ್ತಾರೆ. ಸಿ.ಎಂ.ಹೆಚ್. ರಸ್ತೆಯಲ್ಲಿ ಈ ರೀತಿ ಅವ್ಯವಹಾರ ಆಗುತ್ತಿದೆ ಎಂದು ಅಲ್ಲಿನ ಇಬ್ಬರು ಪೊಲೀಸ್ ಅಧಿಕಾರಿಗಳ ಜೊತೆ ಸಹ ಮಾತನಾಡಿದ್ದೆ. ಅದಕ್ಕೆ ಅವರು 'ಆ ಬ್ಯಾಂಕ್‌ನವರು ಹಣೆಬರಹವೇ ಇಷ್ಟು, ಏನು ಮಾಡುವುದಕ್ಕೆ ಆಗುವುದಿಲ್ಲ' ಎಂದರು. ಮತ್ತೆ ಆ ಬ್ಯಾಂಕ್‌ನಲ್ಲಿ ಒಬ್ಬರೇ ಒಬ್ಬರು ಕನ್ನಡಿಗರು ಸಹ ಇಲ್ಲ. ಉದಾಹರಣೆಗೆ; ಬ್ಯಾಂಕ್‌ನಲ್ಲಿ ನನ್ನದು ಒಂದು ಸಾಲವಿತ್ತು. ಅದನ್ನು pre-closure ಮಾಡುವುದಕ್ಕೆ ನಮ್ಮ ಶಾಲೆಯಿಂದ ಒಬ್ಬ Administrator ನವರು ಹೋಗಿ, ಈ ಸಾಲವನ್ನು pre-closure ಮಾಡುತ್ತಿದ್ದೇವೆ. ದಯಮಾಡಿ ತಕ್ಷಣ ಇದನ್ನು ತೆಗೆದುಕೊಳ್ಳಿ ಎಂದರೆ, ಅವರು ತೆಗೆದುಕೊಳ್ಳುವುದಿಲ್ಲ ಎನ್ನುತ್ತಾರೆ. ಕಾರಣ ಅವರ ಉದ್ದೇಶ ಏನೆಂದರೆ, ನಮ್ಮ ಸಾಲದ ಕಂತು ಬಂದು 12, 18 ಅಥವಾ 20ನೇ ತಾರೀಖಿನಂದು ಕಟ್ಟಬೇಕಾಗುತ್ತದೆ. ನಾವು ಸುಮಾರು 5-6 ಕೋಟಿ ಸಾಲವನ್ನು ತೆಗೆದುಕೊಂಡಿದ್ದರೆ, ಪ್ರತಿ ತಿಂಗಳು ಸುಮಾರು 18 ರಿಂದ 19 ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಅವರು ಆ ಒಂದು ತಿಂಗಳು ಏಕೆ ತಡ ಮಾಡುತ್ತಾರೆಂದರೆ, ಮತ್ತೆ ಅವರಿಗೆ ಅದರಿಂದ ಬಡ್ಡಿ ಸಿಗುತ್ತದೆ ಎಂದು. ಅವರಿಗೆ ಒಂದು ಕಂತು ಸಿಕ್ಕಿದರೆ ಅದರಲ್ಲಿ ಬಡ್ಡಿ ಸಿಗುತ್ತದೆ. ನಾನು ಸಿ.ಎಂ.ಹೆಚ್.ರಸ್ತೆಗೆ ಹೋದಾಗ ಅಲ್ಲಿನ ಬ್ಯಾಂಕ್‌ನಲ್ಲಿ ಶಿಕ್ಷಣ ಇಲಾಖೆಯ ಒಬ್ಬ ನಿವೃತ್ತ ಅಧಿಕಾರಿಯೊಬ್ಬರು ತಮ್ಮ ಮಗಳ ವಿದ್ಯಾಭ್ಯಾಸಕ್ಕೆಂದು ಸಾಲ ಪಡೆದುಕೊಂಡಿದ್ದಾರೆ. ಅವರು ಅದನ್ನು close ಮಾಡುವುದಕ್ಕೆ ಬಂದರೆ, 10 ಲಕ್ಷ ರೂಪಾಯಿ ಸಾಲಕ್ಕೆ 98 ಸಾವಿರ ರೂಪಾಯಿ pre-closure charges ಹಾಕಿದ್ದಾರೆ. ಅಂದರೆ, ಶೇಕಡಾ 3ರಷ್ಟು ಚಾರ್ಜ್ ಹಾಕಿದ್ದಾರೆ. ಅವರು ನಮ್ಮ ಮುಂದೆಯೇ ಕೇಳುತ್ತಿದ್ದಾರೆ. ಆದರೆ, ಅಲ್ಲಿನ ಬ್ಯಾಂಕ್‌ನವರು ಒಬ್ಬರು ಸಹ

ಅವರ ಮಾತನ್ನು ಕೇಳುವುದಕ್ಕೆ ರೆಡಿ ಇಲ್ಲ. ಅಲ್ಲಿ ಒಬ್ಬರೂ ಸಹ ಕನ್ನಡಿಗರು ಇಲ್ಲ. ಇವತ್ತು ರಾಷ್ಟ್ರೀಕೃತ ಬ್ಯಾಂಕುಗಳನ್ನು ಕೇಂದ್ರ ಸರ್ಕಾರದವರು ಮರ್ಜ್ ಮಾಡುವುದಕ್ಕೆ ಹೊರಟ್ಟಿದ್ದಾರೆ. ನಿಜಕ್ಕೂ ಸಹ ನಾವು ಕರ್ನಾಟಕ ರಾಜ್ಯದಲ್ಲಿ ಬದುಕುತ್ತಿದ್ದೇವೆಯೋ ಅಥವಾ ಬೇರೆ ಯಾವುದೋ ರಾಜ್ಯದಲ್ಲಿ ಬದುಕುತ್ತಿದ್ದೇವೆಯೋ ಎಂದು ನಮಗೆ ಆಶ್ಚರ್ಯವಾಗುತ್ತದೆ.

(ಮುಂದು)

**(603) 06.10 23.03.2021 ಎಲ್‌ಎಲ್/ಜಿಆರ್**

**ಶ್ರೀ ಹೆಚ್.ಎಂ. ರಮೇಶ್‌ಗೌಡ(ಮುಂದು):-**

ಸಹಕಾರ ನಗರದ ಸಿ.ಎಂ.ಹೆಚ್. ರಸ್ತೆಯಲ್ಲಿ ಸಾರ್ವಜನಿಕರು ಕಳೆದ ಒಂದು ತಿಂಗಳಿನಿಂದ ಪ್ರತಿ ದಿನ ಸತತವಾಗಿ ಮುಷ್ಕರ ಮಾಡುತ್ತಿದ್ದಾರೆ. ಅಲ್ಲಿರುವಂತಹ ಬ್ಯಾಂಕಿನಲ್ಲಿ ಗೈಡ್‌ಲೈನ್ಸ್ ಬಗ್ಗೆ ಒಂದೇ ಒಂದು ಬೋರ್ಡ್ ಸಹ ಇರುವುದಿಲ್ಲ. ಅಂದರೆ, ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವಾಗ ಆ ಸಾಲದ ಮೇಲೆ ಶೇಕಡ ಇಷ್ಟು ಬಡ್ಡಿ ಅಥವಾ ಸಕಾಲದಲ್ಲಿ ಮರುಪಾವತಿ ಮಾಡಬೇಕಾದರೆ ಶೇಕಡ ಇಷ್ಟು ಬಡ್ಡಿ ಎನ್ನುವ ಬಗ್ಗೆ ಬೋರ್ಡ್‌ಗಳು ಇರುವುದಿಲ್ಲ. ಅಲ್ಲಿರತಕ್ಕಂತಹ ಪೊಲೀಸ್ ಅಧಿಕಾರಿಗಳು ಬ್ಯಾಂಕ್‌ಗಳಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಆ ಬೋರ್ಡ್ ಇಲ್ಲದಿರುವುದನ್ನು ಗಮನಿಸಿ, "ತಮ್ಮ ಬ್ಯಾಂಕಿನಲ್ಲಿ ಗೈಡ್‌ಲೈನ್ಸ್‌ಗಳ ಬಗ್ಗೆ ಬೋರ್ಡ್ ಹಾಕಿಲ್ಲವೆಂದು" ಕೇಳಿದರೆ, ಆ ಬ್ಯಾಂಕಿನವರು, "ಸರ್, ಇನ್ನು ಮುಂದೆ ಆ ಬೋರ್ಡ್‌ಗಳನ್ನು ಅಳವಡಿಸುತ್ತೇವೆ" ಎಂದು ಹೇಳುತ್ತಾರೆ.

ಅಷ್ಟೇ ಅಲ್ಲದೇ, ನನ್ನ ಪತ್ನಿಗೆ ಸೇರಿದಂತಹ ಸುಮಾರು 5 ಕೋಟಿ 75 ಲಕ್ಷ ರೂಪಾಯಿ ಸಾಲದ ಮೇಲೆ 48 ಲಕ್ಷ ರೂಪಾಯಿಗಳ ಬಡ್ಡಿ ಹಾಕಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ, ನಾವು ಆ ಬ್ಯಾಂಕ್‌ನ ಅಧಿಕಾರಿಗಳ ವಿರುದ್ಧ ಎಫ್.ಐ.ಆರ್., ಹಾಕಿಸಿದ್ದೇವೆ. ನಮ್ಮಗಳ ಹಾಗೆ ಎಷ್ಟು ಜನರು ಬ್ಯಾಂಕ್‌ನ ಅಧಿಕಾರಿಗಳ ವಿರುದ್ಧ ಎಫ್.ಐ.ಆರ್., ಹಾಕಿಸುವುದಕ್ಕೆ ಸಾಧ್ಯವಿದೆ? ಅದು ಸಾಧ್ಯವೇ ಇಲ್ಲ. ಏಕೆಂದರೆ, ಶಾಸಕರುಗಳಾದ ನಾವುಗಳೇ ಅವರ ವಿರುದ್ಧ ಸುಮಾರು 15-16 ದಿವಸಗಳ ಕಾಲ ಪ್ರತಿನಿತ್ಯ ಜಗಳ ಮಾಡಿ, ಕೊನೆಯದಾಗಿ ಅವರ ವಿರುದ್ಧ ಎಫ್.ಐ.ಆರ್., ಹಾಕಿಸಿದ ನಂತರ ಆ ಬ್ಯಾಂಕ್‌ನವರು ನಮ್ಮ ಸಕಾಲದ ಸಾಲ ಮರುಪಾವತಿ ಮೇಲೆ 48 ಲಕ್ಷ ರೂಪಾಯಿಗಳ ಬಡ್ಡಿ ಏನು ಹಾಕಿದ್ದರು ಅದನ್ನು ಮನ್ನಾ ಮಾಡಿರುತ್ತಾರೆ. ನನ್ನ ಪರಿಸ್ಥಿತಿ ಈ ರೀತಿಯಾಗಿದೆ. ಇದರ ಜೊತೆಗೆ, ಶ್ರೀ ನಾರಾಯಣಪ್ಪನವರ ಪರಿಸ್ಥಿತಿಯನ್ನು ಸಹ ನಾನು ಈಗಾಗಲೇ ಹೇಳಿರುತ್ತೇನೆ. ಆದುದರಿಂದ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ಒಂದು ವೇಳೆ ನಾವು ಬ್ಯಾಂಕಿನಿಂದ ಪಡೆದಂತಹ ಸಾಲವನ್ನು ಸಕಾಲದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರು ಪಾವತಿ ಮಾಡಿದರೆ ಆರ್.ಬಿ.ಐ., ಗೈಡ್‌ಲೈನ್ಸ್ ಪ್ರಕಾರ ಒಂದು ರೂಪಾಯಿ ಸಹ ಬಡ್ಡಿ ಪಡೆಯುವಂತಿಲ್ಲ. ಅಲ್ಲದೇ, ಸಾಲ ತೆಗೆದುಕೊಳ್ಳುವಾಗ ನಾವು ಸಹಿ ಮಾಡಿ ನೀಡಿದಂತಹ ಅರ್ಜಿಯಲ್ಲಿಯೂ ಸಹ ಅದೇ ಅಂಶ ಇರುತ್ತದೆ. ಅದರಲ್ಲಿ, ಒಂದು ವೇಳೆ ನಾವು ತೆಗೆದುಕೊಂಡ ಸಾಲದ ಮೇಲೆ 12 ತಿಂಗಳು ಬಡ್ಡಿ ಪಾವತಿಸಿದ್ದರೆ, ಸಕಾಲದಲ್ಲಿ ಮರು ಪಾವತಿ ಮಾಡುವಂತಹ ಸಾಲದ ಮೇಲೆ ಶೇಕಡ 2 ಅಥವಾ 3 ರಷ್ಟು penal interest ಹಾಕುವಂತಿಲ್ಲ ಎಂದು ಇದೆ. ಈ ಯಾವ ನಿಯಮಗಳನ್ನು ಸಹ ಬ್ಯಾಂಕ್‌ನವರು ಕೇರ್ ಮಾಡುವುದಿಲ್ಲ ಮತ್ತು ಅವುಗಳಿಗೆ ಅವರು ಗೌರವ ಸಹ ನೀಡುವುದಿಲ್ಲ. ಆದರೆ, ಅವರೇ ಮಾಡಿರತಕ್ಕಂತಹ ರೂಲ್ಸ್ ಮತ್ತು ರೆಗ್ಯುಲೇಷನ್‌ಗಳಿಗೆ ಅಥವಾ ಅವರೇ ಮಾಡಿರತಕ್ಕಂತಹ ಅಗ್ರಿಮೆಂಟ್ ಹಾಗೂ ಸಹಿಗಳಿಗೆ ಅವರು ಸೊಪ್ಪು ಹಾಕುವುದಿಲ್ಲ. ಹಾಗಾಗಿ, ತಮ್ಮ ಮುಖಾಂತರ ಸರ್ಕಾರವನ್ನು ಆಗ್ರಹ ಮಾಡುವುದೇನೆಂದರೆ, ಕೋವಿಡ್-19 ಬಂದ ನಂತರ ಬ್ಯಾಂಕ್‌ನವರು ಹೊಸದಾಗಿ ರೂಲ್ಸ್ ಮತ್ತು ರೆಗ್ಯುಲೇಷನ್‌ಗಳನ್ನೇನೂ ಮಾಡಿಕೊಂಡಿರುವುದಿಲ್ಲ. ಆರ್.ಬಿ.ಐ., ಗೈಡ್‌ಲೈನ್ಸ್ ಅನ್ನು ಯಾವ ಬ್ಯಾಂಕ್‌ನವರು ಪಾಲನೆ ಮಾಡುತ್ತಿಲ್ಲ, ಆ ಬ್ಯಾಂಕ್‌ಗಳ ವಿರುದ್ಧ ಸೂಕ್ತವಾದ ಕ್ರಮ ಆಗಬೇಕಾಗುತ್ತದೆ. ನಾನು ಹೇಳುತ್ತಿರುವುದು ಒಂದು ಹೆಚ್.ಡಿ.ಎಫ್.ಸಿ., ಬ್ಯಾಂಕಿನ ಕಥೆಯಾಗಿದೆ. ಆದರೆ, ಇವೊತ್ತಿನ ದಿವಸ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಪರಿಸ್ಥಿತಿ ಸಹ ಇದೇ ಆಗಿರುತ್ತದೆ. ಉದಾಹರಣೆಗೆ, ಐ.ಸಿ.ಐ.ಸಿ.ಐ., ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಅಥವಾ ಹೆಚ್.ಡಿ.ಎಫ್.ಸಿ., ಬ್ಯಾಂಕ್ ಇರಬಹುದು, ಈ ಬ್ಯಾಂಕ್‌ಗಳಲ್ಲಿ ಸಾರ್ವಜನಿಕರು ಪ್ರತಿನಿತ್ಯ ಪರದಾಡುತ್ತಿದ್ದಾರೆ ಅಥವಾ ಅವುಗಳಿಂದ ತೊಂದರೆ ಅನುಭವಿಸುತ್ತಿದ್ದಾರೆ. ಅವರು ಯಾವುದೋ ಒಂದು ಕಷ್ಟಗಳಿಗಾಗಿ ಅಂದರೆ, ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಇನ್ನೊಂದು ಅಥವಾ ಮತ್ತೊಂದು ಕಷ್ಟಗಳಿಗಾಗಿ ನೂರಾರು ರೀತಿಯ ಸಾಲ ಪಡೆಯುವುದಕ್ಕೆ ಬಡಜನರು ಬ್ಯಾಂಕ್‌ಗಳಿಗೆ ಹೋಗುತ್ತಾರೆ. ಆದರೆ, ಸಾಲ ತೆಗೆದುಕೊಂಡ ನಂತರ ಆ ಬಡಜನರು ಬ್ಯಾಂಕ್‌ಗಳಿಂದ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ, ಇದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ಜರುಗಿಸಬೇಕು.

ಇವೊತ್ತಿನ ದಿವಸ ಎಲ್ಲಾ ಬ್ಯಾಂಕ್‌ಗಳ ವ್ಯವಹಾರಗಳು ಆನ್‌ಲೈನ್‌ನಲ್ಲಿ ನಡೆಯುತ್ತಿರುತ್ತವೆ. ಹಾಗಾಗಿ, ಸರ್ಕಾರವು ಆ ಮಾಹಿತಿಯನ್ನು ಪಡೆದು, ಅದರಲ್ಲಿ ಯಾವ್ಯಾವ ಬ್ಯಾಂಕ್‌ಗಳಲ್ಲಿ ಎಷ್ಟು ಜನ ತಮ್ಮ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದ್ದಾರೆ, ಆ ಸಾಲಗಳಲ್ಲಿ ಬ್ಯಾಂಕ್‌ನವರು ಆರ್.ಬಿ.ಐ., ಗೈಡ್‌ಲೈನ್ಸ್ ಪಾಲನೆ ಮಾಡದೇ, ಸಾಲ ಮರುಪಾವತಿ ಮಾಡುವಂತಹ ಸಂದರ್ಭದಲ್ಲಿ ಶೇಕಡ 2 ಅಥವಾ 3 ರಷ್ಟು ಬಡ್ಡಿ ಪಡೆದಿರುವುದನ್ನು ಸಂಬಂಧಪಟ್ಟ ಜನರಿಗೆ ವಾಪಸ್ಸು ಕೊಡಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಸರಿಯಾದಂತಹ ಅಥವಾ ಬಿಗಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲದೇ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೊತ್ತಿನ ದಿನ ಇಡೀ ರಾಜ್ಯದಲ್ಲಿ ಯಾವ್ಯಾವ ಬ್ಯಾಂಕ್‌ಗಳು ವಿಲೀನವಾಗಿವೆ..? ಇದಕ್ಕೆ ಮೊದಲು ನಮ್ಮ ರಾಜ್ಯದಲ್ಲಿ 27 ರಾಷ್ಟ್ರೀಕೃತ ಬ್ಯಾಂಕುಗಳಿದ್ದು, ನಂತರ ಅದನ್ನು 14 ಬ್ಯಾಂಕ್‌ಗಳಿಗೆ ಇಳಿಸಿದ್ದು, ಪ್ರಸ್ತುತ ಕೇವಲ 7 ಬ್ಯಾಂಕ್‌ಗಳಿರುತ್ತವೆ. ಆದರೆ, ನಮ್ಮ ರಾಜ್ಯದಲ್ಲಿರುವ ಯಾವುದೇ ಬ್ಯಾಂಕ್‌ಗಳಲ್ಲಿಯೂ ಸಹ ಕರ್ನಾಟಕದ ಯಾವುದೇ ವ್ಯಕ್ತಿಗಳು ಇರುವುದಿಲ್ಲ. ಅಂದರೆ, ಎಲ್ಲಾ ಬ್ಯಾಂಕ್‌ಗಳಲ್ಲಿಯೂ ಸಹ ಹಿಂದಿ ಭಾಷೆ ಮಾತನಾಡುವವರು ಇದ್ದಾರೆ. ಆ ಭಾಷೆ ನಮ್ಮ ಜನರಿಗೆ ಅರ್ಥವಾಗುವುದಿಲ್ಲ. ಅಲ್ಲದೇ, ನಮಗೂ ಸಹ ಹಿಂದಿ ಭಾಷೆ ಮಾತನಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ನಾವುಗಳೇ ಆ ಬ್ಯಾಂಕ್‌ಗಳಿಗೆ ಹೋದರೆ, ಅವರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನೆ ಬರಬೇಕು. ಏಕೆಂದರೆ, ಅವರು ಏನು ಹೇಳುತ್ತಾರೆ, ಅದು ನಮಗೆ ಅರ್ಥವಾಗುವುದಿಲ್ಲ ಮತ್ತು ನಾವು ಹೇಳಿದ್ದು, ಅವರಿಗೆ ಅರ್ಥವಾಗುವುದಿಲ್ಲ. ಹಾಗಾಗಿ, ನಮ್ಮ ರಾಜ್ಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕನ್ನಡಿಗರು ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಅದಕ್ಕಾಗಿ, ಸರಿಯಾದ ಒಂದು ಮಾರ್ಗಸೂಚಿಯನ್ನು ಮಾಡಬೇಕಾಗುತ್ತದೆ ಮತ್ತು ಸರ್ಕಾರ ಈ ಬ್ಯಾಂಕ್‌ಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಆಗಲೇ ನಾನು ಮಾತನಾಡುತ್ತಾ, ಸಿ.ಎಂ.ಹೆಚ್., ಆಸ್ಪತ್ರೆಯಲ್ಲಿ ಕಳೆದ 1 ತಿಂಗಳಿನಿಂದ ಮುಷ್ಕರ ಮಾಡುತ್ತಿದ್ದಾರೆಂದು ಹೇಳಿರುತ್ತೇನೆ. ಸರ್ಕಾರ ಈ ಬಗ್ಗೆ ಅಗತ್ಯವೆನಿಸಿದರೆ ವರದಿಯನ್ನು ಸಹ ಪಡೆಯಬಹುದಾಗಿರುತ್ತದೆ. ಆ ಬ್ಯಾಂಕ್‌ನವರಿಗೆ ಹೇಳುವವರು ಅಥವಾ ಕೇಳುವವರು ಯಾರು ಇರುವುದಿಲ್ಲ. ಒಂದು ವೇಳೆ ಸಾರ್ವಜನಿಕರು ಅಲ್ಲಿ ಸ್ವಲ್ಪ ಅತಿರೇಕದಿಂದ ಮುಷ್ಕರ ಮಾಡಿದರೆ, ಬ್ಯಾಂಕ್‌ನವರು ಪೊಲೀಸ್ ಸಹಾಯವಾಣಿ 100ಕ್ಕೆ ಕರೆ ಮಾಡಿ ಪೊಲೀಸರನ್ನು ಕರೆಸುತ್ತಾರೆ. ಅದರಂತೆ, ಪೊಲೀಸರು ಅಲ್ಲಿ ಮುಷ್ಕರ ಮಾಡುವಂತಹ ಸಾರ್ವಜನಿಕರನ್ನು ಅಲ್ಲಿಂದ ಕಳುಹಿಸುತ್ತಾರೆ. ಆದರೆ, ಅಲ್ಲಿ ನಿಜವಾಗಿಯೂ ತೊಂದರೆ ಆಗುತ್ತಿರುವುದು ಸಾರ್ವಜನಿಕರಿಗೆ ಹೊರತು, ಬ್ಯಾಂಕ್‌ನವರಿಗಲ್ಲ. ಹಾಗಾಗಿ, ಈ ಬಗ್ಗೆ ಸರ್ಕಾರ ಬಿಗಿಯಾದಂತಹ ಕ್ರಮ ವಹಿಸಬೇಕು. ಇದರ ಜೊತೆಗೆ, ಈಗಾಗಲೇ ಆ ಬ್ಯಾಂಕ್‌ನವರ ವಿರುದ್ಧ ಎಫ್.ಐ.ಆರ್. ಆಗಿರುವುದರಿಂದ ಅವರ ವಿರುದ್ಧ ಸಹ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಗೌಡರವರು ಬ್ಯಾಂಕ್‌ಗಳು ಬಡ್ಡಿಯ ಹೆಸರಿನಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ ಎನ್ನುವಂತಹ ವಿಚಾರವನ್ನು ಹಾಗೂ ಸಾರ್ವಜನಿಕರು ಸಕಾಲದಲ್ಲಿ ಸಾಲ ಮರು ಪಾವತಿ ಮಾಡಿದರೂ ಕೂಡ, ಕೆಲವು ಬ್ಯಾಂಕ್‌ಗಳು ಸಾಲ ಪಾವತಿ ಮಾಡಿಕೊಳ್ಳುವುದಕ್ಕೆ ಒಪ್ಪುತ್ತಿಲ್ಲ ಎನ್ನುವಂತಹ ವಿಚಾರಗಳನ್ನು ನಿಯಮ 330ರಡಿಯಲ್ಲಿ ಉಲ್ಲೇಖಿಸಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಮಾನ್ಯ ರಮೇಶ್‌ಗೌಡರವರು ಕೆಲವು ಮಾತುಗಳನ್ನು ಹೇಳಿರುವುದು ನಮಗೆಲ್ಲರಿಗೂ ಅರ್ಥವಾಗಿರುತ್ತದೆ. ಏಕೆಂದರೆ, ಅನೇಕ ಬಾರಿ ನಾವುಗಳು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಹೋದಾಗ, ಆ ಬ್ಯಾಂಕ್‌ನ ಮ್ಯಾನೇಜರ್‌ಗೂ ಸಹ ಕನ್ನಡ ಕೂಡ ಬಾರದಿರುವಂತಹ ಸ್ಥಿತಿ ಇರುವುದನ್ನು ನಾವು ನೋಡಿರುತ್ತೇವೆ. ಇದು ಸತ್ಯ ಇದೆ. ಇದರಲ್ಲಿ ನಮ್ಮ ವಾದ ಇರುವುದಿಲ್ಲ.

ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಸರ್ಕಾರದ ಉತ್ತರವನ್ನು ಮಂಡಿಸುತ್ತೇನೆ. ಆ ನಂತರ ಏನಾದರೂ ವಿಷಯಗಳಿದ್ದರೆ ಅದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದು. ಈ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ:19.03.2021ರಂದು ಸಂಚಾಲಕರು ರಾಜ್ಯ ಮಟ್ಟದ ಬ್ಯಾಂಕ್‌ಗಳ ಸಮಿತಿಯವರ ಗಮನಕ್ಕೆ ತರಲಾಗಿದೆ. ಈ ವಿಷಯದ ಬಗ್ಗೆ ದಿನಾಂಕ:19.03.2021ರಂದು ಬರೆದ ಪತ್ರದಲ್ಲಿ ನಾಗರಿಕರಿಗೆ ಸಾಲ ವಸೂಲಾತಿಯಲ್ಲಿ ಕಿರುಕುಳ ನೀಡಬಾರದೆಂದು ತಿಳಿಸಿರುತ್ತಾರೆ ಹಾಗೂ ಸಾಲವನ್ನು ಮುಂಗಡ ಪಾವತಿ ಮಾಡುವ ಆಯ್ಕೆ ಸಾಲಗಾರರದಾಗಿದ್ದು, ಸಾಲ ಮರುಪಾವತಿಯನ್ನು ನಿರಾಕರಿಸುವುದು ಸ್ವೀಕಾರಾರ್ಹವಲ್ಲ ಎಂದು ತಮ್ಮ ದಿನಾಂಕ:19.03.2021ರ ಪತ್ರದಲ್ಲಿ ಸಂಚಾಲಕರು ರಾಜ್ಯ ಮಟ್ಟದ ಬ್ಯಾಂಕ್‌ಗಳ ಸಮಿತಿಯವರು ಎಚ್.ಡಿ.ಎಫ್.ಸಿ. ಮತ್ತು ಇನ್ನಿತರ ಖಾಸಗಿ ಬ್ಯಾಂಕ್‌ಗಳ ರಾಜ್ಯ ಮಟ್ಟದ ಸಮನ್ವಯ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಈ ಸಂಬಂಧ ರಾಜ್ಯ ಮಟ್ಟದ ಬ್ಯಾಂಕ್‌ಗಳ ಸಮಿತಿಯವರು ಪ್ರಾದೇಶಿಕ ನಿರ್ದೇಶಕರು, ಭಾರತೀಯ ರಿಸರ್ವ್ ಬ್ಯಾಂಕ್‌ರವರಿಗೆ ಸದರಿ ವಿಷಯದಲ್ಲಿ ಪತ್ರ ಬರೆದಿದ್ದು, ಬ್ಯಾಂಕ್‌ಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಮುಂದುವರೆದು, ಮಹಾ ಪ್ರಬಂಧಕರು, ಭಾರತೀಯ ರಿಸರ್ವ್ ಬ್ಯಾಂಕ್‌ರವರು ಸದರಿ ವಿಷಯವನ್ನು ಮುಂದಿನ ಕ್ರಮಕ್ಕಾಗಿ ತಮ್ಮ ಕೇಂದ್ರ ಕಚೇರಿಗೆ ಕಳುಹಿಸಿದ್ದೇವೆ ಎಂದು ತಿಳಿಸಿರುವವರು ಹಾಗೂ ನಿರ್ದಿಷ್ಟ ದೂರುಗಳ ಬಗ್ಗೆ ಮಾಹಿತಿ ನೀಡಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

ಬ್ಯಾಂಕ್‌ಗಳಿಂದ ಸಾರ್ವಜನಿಕರು ಸಾಲ ತೆಗೆದುಕೊಂಡಿದ್ದು, ಅವರು ತಮ್ಮ ಸಾಲವನ್ನು ಮರು ಪಾವತಿ ಮಾಡುತ್ತೇನೆಂದು ಬಂದರೂ ಸಹ, ಬಡ್ಡಿ ಆಸೆಗಾಗಿ ಅವರನ್ನು ಸತಾಯಿಸಿ ಮರು ಪಾವತಿ ಮಾಡಿಕೊಳ್ಳದಿರುವ ಪ್ರಕರಣವೂ ಸೇರಿದಂತೆ, ಎಲ್ಲಾ ಪ್ರಕರಣಗಳ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಿ, ಅವರಿಗೆ ಬೇಕಾದಂತಹ ಸಹಕಾರ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಒಂದು ವೇಳೆ ನಿರ್ದಿಷ್ಟ ಪ್ರಕರಣಗಳು ಇದ್ದರೆ ಆ ಬಗ್ಗೆ ಸರ್ಕಾರಕ್ಕೆ ಮಾಹಿತಿ ಕೊಡಿ. ಮಾನ್ಯ ಸದಸ್ಯರಾದಂತಹ ಶ್ರೀ ರಮೇಶ್‌ಗೌಡರವರು ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಹೇಳಿದ್ದಾರೆ. ಅದು ನೂರಕ್ಕೆ ನೂರರಷ್ಟು ಸರಿ ಇದೆ. ಅದರಲ್ಲಿ ಅವರು ಅನುಭವಿಸಿದಂತಹ ನೋವು ಮತ್ತು ಸಾರ್ವಜನಿಕ ಭಾವನೆಗಳನ್ನು ಅರ್ಥ ಮಾಡಿಕೊಂಡು ಹೇಳಿದ್ದಾರೆ. ಇದರ ಜೊತೆಗೆ, ಮಾನ್ಯ ಸದಸ್ಯರು ನಿರ್ದಿಷ್ಟ ಪ್ರಕರಣಗಳನ್ನು ಹೇಳಿದರೆ, ಅದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಸಂಬಂಧಪಟ್ಟವರ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಪರಿಹರಿಸುತ್ತದೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಈ ವಿಷಯಕ್ಕೆ ಸಂಬಂಧಪಟ್ಟಂತೆ, ನಿರ್ದಿಷ್ಟ ದೂರು ಇದ್ದರೆ ಗಮನಕ್ಕೆ ತರಬೇಕೆಂದು ಹೇಳಿದ್ದಾರೆ. ನಾನು ಈಗಾಗಲೇ ಶ್ರೀ ನಾರಾಯಣ ಎಂಬ ನಾಗರಿಕರ ದೂರಿನ ಉದಾಹರಣೆಯನ್ನು ನೀಡಿರುತ್ತೇನೆ. ಸದರಿಯವರು ಹೆಚ್.ಡಿ.ಎಫ್.ಸಿ., ಬ್ಯಾಂಕ್‌ನಲ್ಲಿ 9 ಲಕ್ಷ ರೂಪಾಯಿಗಳನ್ನು ಸಾಲ ಪಡೆದಿರುತ್ತಾರೆ. ಸಹಕಾರ ನಗರ ಶಾಖೆ ಮತ್ತು ಇಂದಿರಾನಗರ ಶಾಖೆಯಲ್ಲಿರುವ ಹೆಚ್.ಡಿ.ಎಫ್.ಸಿ., ಬ್ಯಾಂಕ್‌ಗೆ ಸ್ವತಃ ನಾನೇ ಹೋದಂತಹ ಸಂದರ್ಭದಲ್ಲಿ ಆ ಶಾಖೆಗಳ ಸಿಬ್ಬಂದಿಗಳು ನನ್ನ ಜೊತೆ ನಡೆದುಕೊಂಡಂತಹ ವರ್ತನೆ ಬಗ್ಗೆ ಸಹ ನಾನು ದೂರು ನೀಡಿರುತ್ತೇನೆ. ಇದರ ಜೊತೆಗೆ, ಆ ಬ್ಯಾಂಕ್‌ಗಳಲ್ಲಿ ಇದುವರೆವಿಗೂ ಸಕಾಲದಲ್ಲಿ ಸಾಲ ಮರುಪಾವತಿ ಮಾಡಿರುವ ದಾಖಲೆಯನ್ನು ಸಹ ಸರ್ಕಾರ ಪರಿಶೀಲಿಸಬೇಕು. ಇನ್ನೊಂದು ವಿಷಯವೇನೆಂದರೆ, ನಾಗರಿಕರು ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡ ನಂತರ ಎರಡು ಅಥವಾ ಎರಡೂವರೆ ವರ್ಷಗಳ ಕಾಲ ನಾವು ಕಟ್ಟಿರುವಂತಹ ಹಣವನ್ನು ಬಹುತೇಕ ಬಡ್ಡಿ ಹಣಕ್ಕೆ ಜಮೆ ಮಾಡಿಕೊಂಡಿರುತ್ತಾರೆ. ಉದಾಹರಣೆಗೆ, ನಾವು 10 ವರ್ಷಗಳ ಅವಧಿಗೆ ಸುಮಾರು 6 ಕೋಟಿ ರೂಪಾಯಿ ಸಾಲ ಪಡೆದುಕೊಂಡು, ಎರಡು ಅಥವಾ ಎರಡೂವರೆ ವರ್ಷಗಳ ಅವಧಿಯಲ್ಲಿ ಪ್ರತಿ ತಿಂಗಳು 19 ಲಕ್ಷ ರೂಪಾಯಿಯಂತೆ ಒಟ್ಟು 2 ಕೋಟಿ 80 ಲಕ್ಷ ರೂಪಾಯಿ ಹಣ ಕಟ್ಟಿದ್ದರೂ ಸಹ, ನಮ್ಮ ಅಸಲು ಹಣದಲ್ಲಿ ಕೇವಲ 47 ರಿಂದ 48

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಲಕ್ಷ ರೂಪಾಯಿ ಹಣ ಜಮೆ ಆಗಿರುತ್ತದೆ. ಉಳಿದ ಹಣವನ್ನು ಅವರು ಬಡ್ಡಿ ಹಣಕ್ಕೆ ಜಮೆ ಮಾಡಿಕೊಂಡಿರುತ್ತಾರೆ. ಆರ್.ಬಿ.ಐ., ಗೈಡ್‌ಲೈನ್ಸ್ ನ ಪ್ರಕಾರ ಶೇಕಡ 6.9 ರಷ್ಟು ಆದ ಮೇಲೆ ಎಷ್ಟು ಹಣಕ್ಕಾದರೂ ಕೊಡಬಹುದೆಂದು ಇದೆ. ಆದರೆ, ಈ ಬ್ಯಾಂಕ್‌ಗಳವರು ನಮಗೆ mortgage loan ಮುಂತಾದವುಗಳನ್ನು ಶೇಕಡ 12 ರಿಂದ 12.5 ರಷ್ಟಕ್ಕೆ ಕೊಡುತ್ತಾರೆ. ಅದರಲ್ಲಿಯೂ co-operative sector ನವರು ಶೇಕಡ 13.5 ರಿಂದ 14 ರಷ್ಟು ಬಡ್ಡಿಗೆ ಕೊಡುತ್ತಾರೆ. ಆದರೆ, ಈ ಬ್ಯಾಂಕ್‌ಗಳ ಸಿಬ್ಬಂದಿಗಳ ವರ್ತನೆ ಸಹಿಸಲಸಾಧ್ಯವಾಗಿರುತ್ತದೆ. ಬಹುಶಃ ಬ್ಯಾಂಕ್‌ಗಳಲ್ಲಿ ಕನ್ನಡಿಗರು ಇದ್ದರೆ, ಅವರ ಬಳಿ ಬಡವರು/ಸಾರ್ವಜನಿಕರು ತಮ್ಮ ಕಷ್ಟ-ಸುಖಗಳನ್ನು ಹೇಳಿಕೊಳ್ಳಬಹುದು. ಆದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕನ್ನಡ ಭಾಷೆ ಬಾರದಿರುವವರು ಇದ್ದು, ಎಲ್ಲರೂ ಹಿಂದಿ ಅಥವಾ ಇಂಗ್ಲೀಷ್ ಭಾಷೆ ಮಾತನಾಡುವವರು ಇದ್ದಾರೆ. ಈ ರೀತಿಯಾದರೆ ಸಾರ್ವಜನಿಕರು ಯಾವರೀತಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಅಥವಾ ಪರಿಹಾರ ಕೇಳಿಕೊಳ್ಳುವುದಕ್ಕೆ ಸಾಧ್ಯವಿದೆ? ಅದಕ್ಕಾಗಿ ಸರ್ಕಾರ ಈ ಬಗ್ಗೆ ಏನಾದರೂ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು.

ಎರಡನೆಯದಾಗಿ, ಈ ಬ್ಯಾಂಕ್‌ಗಳ ಬಗ್ಗೆ ನಿರ್ದಿಷ್ಟವಾದ ಪ್ರಕರಣಗಳು ಇದ್ದರೆ ಸರ್ಕಾರದ ಗಮನಕ್ಕೆ ತನ್ನಿ ಎಂದು ಹೇಳಿದ್ದಾರೆ. ಅದರಂತೆ, ಈಗಾಗಲೇ ಸದರಿ ಬ್ಯಾಂಕ್‌ನ ಸಿಬ್ಬಂದಿಗಳ ವಿರುದ್ಧ ದಿನಾಂಕ:07.03.2021ರಂದು ಎಫ್.ಐ.ಆರ್., ದಾಖಲಾಗಿರುತ್ತದೆ. ಅದರಲ್ಲಿ ಭಾರತ ದಂಡ ಸಂಹಿತೆಯ ಸೆಕ್ಷನ್ 409, 418, 420, 120(ಬಿ) ಮತ್ತು 34 ರಡಿ ಪ್ರಕರಣ ದಾಖಲಾಗಿರುತ್ತದೆ. ಅದರಲ್ಲಿಯೂ ಹೆಚ್.ಡಿ.ಎಫ್.ಸಿ., ಬ್ಯಾಂಕ್‌ನ ಛೇರ್ಮನ್ ವಿರುದ್ಧವೇ ಎಫ್.ಐ.ಆರ್., ದಾಖಲಾಗಿರುತ್ತದೆ. For the first time, ಹೆಚ್.ಡಿ.ಎಫ್.ಸಿ., ಛೇರ್ಮನ್ ವಿರುದ್ಧ ಆಗಿರುವಂಥದ್ದು. ಅದರಂತೆ, ಹೆಚ್.ಡಿ.ಎಫ್.ಸಿ., ಛೇರ್ಮನ್ ಏನು ಇರುತ್ತಾರೆ, ಸರ್ಕಾರ ಮೊದಲು ಅವರನ್ನು ಅರೆಸ್ಟ್ ಮಾಡಿಸಬೇಕು. ಏಕೆಂದರೆ, ಆತ ಎಲ್ಲಿಯೋ ದೂರದ ಬಾಂಬೆಯಲ್ಲಿ ಕುಳಿತುಕೊಂಡು ಇಲ್ಲಿನ ವ್ಯವಹಾರ ನಡೆಸುತ್ತಿರುತ್ತಾನೆ. ಈ ಬ್ಯಾಂಕ್‌ನಲ್ಲಿ 'ಝೋನಲ್ ಆಫೀಸ್' ಎಂದು ಮಾಡಿದ್ದಾರೆ. ಅದರಲ್ಲಿ ಒಂದು ಶಾಖೆ ಸಹಕಾರ ನಗರ, ಮತ್ತೊಂದು ಶಾಖೆ ಇಂದಿರಾನಗರ ಹಾಗೂ ಇನ್ನೊಂದು ಶಾಖೆ ಡಿ.ಜಿ., ಆಫೀಸ್ ಎದುರುಗಡೆ ಇರುತ್ತದೆ. ಒಂದು ವೇಳೆ ಸಾರ್ವಜನಿಕರು ನಮಗೆ ಈ ರೀತಿಯ ತೊಂದರೆಯಾಗಿದೆಯೆಂದು ಅಲ್ಲಿಗೆ ಹೋದರೆ ಅವರು, “ರೀ, ಹೋಗ್ರಿ. ಅಲ್ಲಿ ಝೋನಲ್ ಮ್ಯಾನೇಜರ್ ಇದ್ದಾರೆ. ಅವರ ಬಳಿ ಹೋಗಿ” ಎಂದು ಹೇಳುತ್ತಾರೆ. ಅದರಂತೆ, ಝೋನಲ್ ಆಫೀಸ್‌ಗೆ ಹೋದರೆ, ಅಲ್ಲಿ ಯಾರನ್ನೂ ಸಹ ಒಳಗಡೆ ಬಿಡುವುದಿಲ್ಲ. ಅಷ್ಟೇ ಅಲ್ಲದೇ, ಅಲ್ಲಿರುವಂತಹ ಸೆಕ್ಯೂರಿಟಿ ಗಾರ್ಡ್, “ಏಯ್, ನಿಂತುಕೊಳ್ರಿ” ಎಂದು ಹೇಳುತ್ತಾನೆ. ಇವೊತ್ತಿನ ದಿವಸ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬ್ಯಾಂಕ್‌ಗಳ ಪರಿಸ್ಥಿತಿ ಈ ರೀತಿ ಇದೆ. ಹಾಗಾಗಿ, ಮಾನ್ಯ ಸಭಾನಾಯಕರೇ, ತಾವು ಈ ವಿಷಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆ ನಡೆಸಲು ಒಬ್ಬ ಅಧಿಕಾರಿಯನ್ನು ಕಳುಹಿಸಿ, ಈಗಾಗಲೇ ಇಂದಿರಾನಗರ ಮತ್ತು ಸಹಕಾರ ನಗರದಲ್ಲಿರುವ ಹೆಚ್.ಡಿ.ಎಫ್.ಸಿ., ಬ್ಯಾಂಕ್ ಎದುರು ಮುಷ್ಕರ ನಡೆಯುತ್ತಿದೆ ಅದರ ಮಾಹಿತಿ ಪಡೆಯಬೇಕು.

**(ಮುಂದು)**

**(604) 23.03.2021 6.20 ವೈಎಲ್-ಜಿಆರ್**

**ಶ್ರೀ ಹೆಚ್.ಎಂ.ರಮೇಶ ಗೌಡ (ಮುಂದು):-**

ಯಾವ ರೀತಿ ಜನರಿಗೆ ತೊಂದರೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ತರಿಸಿ ನೋಡಿ. ತುಂಬಾ ದೊಡ್ಡ ಮಟ್ಟದಲ್ಲಿ ತೊಂದರೆ ಮಾಡುತ್ತಿದ್ದಾರೆ. ಇದರಿಂದಾಗಿ ಲೋನ್ ತೆಗೆದುಕೊಳ್ಳುವುದಲ್ಲ, ಲೋನ್ ಕಟ್ಟುವುದಕ್ಕೆ ಹೋದರೆ ಮೆಂಟಲ್ ಆಗಿ, NIMHANS ಆಸ್ಪತ್ರೆಗೆ ಹೋಗುವಂಥ ಪರಿಸ್ಥಿತಿ ಇದೆ. ಈಗಾಗಲೇ Zonal Manager ಒಳಗೊಂಡಂತೆ 7 ಜನರ ಮೇಲೆ ಎಫ್.ಐ.ಆರ್., ದಾಖಲಿಸಲಾಗಿದ್ದು, ಅವರನ್ನು ಅರೆಸ್ಟ್ ಮಾಡಿಸಿ, ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಾಲಗಾರರಿಗೆ ಕಿರಿಕ್ ಕೊಡುವ ವಿಚಾರವಾಗಿ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದರು. ಈ ಹಿಂದೆ ಸಹ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಬಡ್ಡಿ ವಿಚಾರವಾಗಿ ಸಾರ್ವಜನಿಕರಿಗೆ ರಕ್ಷಣೆ ನೀಡಬೇಕೆಂದು ಖಾಸಗಿ ವಿಧೇಯಕವನ್ನು ಜಾರಿಗೆ ತಂದರು. ತಾವು ಸಹ ಗಮನಿಸಿದ ಹಾಗೆ ಹೊಸ ತಿದ್ದುಪಡಿಯನ್ನು ಸರ್ಕಾರ ಜಾರಿಗೆ ತಂದಿದೆ. ಯಾರಾದರೂ ಸಾಲ ಪಡೆದಂಥವರಿಗೆ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಸೇರಿದಂತೆ ವಸೂಲಾತಿ ವಿಚಾರದಲ್ಲಿ ಕಿರುಕುಳ ನೀಡಿ, ನಾಳೆ ದಿವಸ ಆತ್ಮಹತ್ಯೆ ಮಾಡಿಕೊಳ್ಳುವಂಥ ಘಟನೆ ನಡೆಯಬಾರದು ಎನ್ನುವ ವಿಚಾರವಾಗಿ ತಿದ್ದುಪಡಿ ವಿಧೇಯಕ ಬಂದಿರುವುದನ್ನು ಗಮನಿಸಿದ್ದೀರಿ. ಅದೇ ರೀತಿ ಮಾನ್ಯ ರಮೇಶ ಗೌಡರು ಅನೇಕ ವಿಚಾರವನ್ನು ಉಲ್ಲೇಖ ಮಾಡಿದ್ದಾರೆ. ಯಾವ ಬ್ಯಾಂಕ್‌ನವರು ಕಿರುಕುಳ ನೀಡಿದ್ದಾರೆ, ಯಾವ ಬ್ಯಾಂಕ್‌ನ ಮೇಲೆ ಪ್ರಕರಣ ದಾಖಲಾಗಿದೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ಪ್ರತಿಭಟನೆ ಮಾಡುವ ಸ್ಥಳಕ್ಕೆ ರಾಜ್ಯ ಮಟ್ಟದ ಬ್ಯಾಂಕ್‌ನ ಹಿರಿಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳನ್ನು ಕಳುಹಿಸಬೇಕೆಂದು ಹೇಳಿದ್ದು, ಅವೆರಡು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತೇನಾದರೂ ಚರ್ಚೆ ಮಾಡಬೇಕಾದರೆ ಮಾನ್ಯ ರಮೇಶ ಗೌಡರವರನ್ನು ಒಳಗೊಂಡಂತೆ ಈ ವಿಚಾರವಾಗಿ ಚರ್ಚೆ ಮಾಡಿ, ಸಾಲಗಾರರಿಗೆ ತೊಂದರೆಯಾಗದ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ರುದ್ರೇಗೌಡರವರಿಗೆ ಬ್ಯಾಂಕ್‌ನ ಬಗ್ಗೆ ಅನುಭವವಿದ್ದು, ಅವರು ಬ್ಯಾಂಕ್‌ನಲ್ಲಿ ಸರ್ಕಾರದ ಮಹಿಮೆ ಏನೆಂಬುದನ್ನು ತಿಳಿಸುತ್ತಾರೆ.

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಬ್ಯಾಂಕ್‌ನಲ್ಲಿ Ombudsman ನವರು ಇರುತ್ತಾರೆ. ಈ ರೀತಿ ಏನಾದರೂ ಜನರಿಗೆ ತೊಂದರೆಯಾದಲ್ಲಿ Ombudsman ರವರಿಗೆ ದೂರು ನೀಡಿದರೆ ಮಾನ್ಯ ಸದಸ್ಯರು ಏನನ್ನು ನಿರೀಕ್ಷಿಸುತ್ತಿದ್ದಾರೆ, ಅವರು ಆ ಸಮಸ್ಯೆಯನ್ನು ಬಗೆಹರಿಸುತ್ತಾರೆ.

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ 15 ದಿವಸ ಚರ್ಚೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿಗಿಂತ ಕಡಿಮೆ ಇದ್ದರೆ, Ombudsman ರವರಿಗೆ ದೂರು ನೀಡಬಹುದು. ಒಂದು ಕೋಟಿಗಿಂತ ಒಂದು ರೂಪಾಯಿ ಜಾಸ್ತಿಯಾದರೂ Ombudsman ರವರಿಗೆ ದೂರು ನೀಡಲು ಸಾಧ್ಯವಿಲ್ಲ. ಹಾಗಾಗಿ ಎಲ್ಲ ರೀತಿಯಲ್ಲಿ 15 ದಿವಸಗಳಿಂದ ಚರ್ಚೆ ಮಾಡಿ, ಕೊನೆಗೆ ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

**ಸಭಾಪತಿಯವರು:-** ಆಗಲಿ, ಮಾನ್ಯ ಸಭಾನಾಯಕರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ‘ಹಾಲು ಉತ್ಪಾದಿಸುವ ರೈತರಿಗೆ ಉತ್ತಮ ಬೆಲೆ ನೀಡುವ ಸಲುವಾಗಿ ಹಾಲಿನ ಬೆಲೆ ಹೆಚ್ಚಿಸುವ ಬಗ್ಗೆ ದಿನಾಂಕ: 10.03.2021 ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1035ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು ಇವತ್ತಿನವರೆಗೂ ಉತ್ತರವನ್ನು ನೀಡಿಲ್ಲ. ಮತ್ತೆ 10 ದಿವಸ ಕಾಲಾವಕಾಶ ಕೋರಿದ್ದಾರೆ. 10 ದಿವಸಗಳು ಸಭೆ ನಡೆಯುತ್ತದೆಯೇ? ಈ ರೀತಿಯಾದರೆ ಹೇಗೆ? ಸಚಿವರಿಗೆ ಜವಾಬ್ದಾರಿ ಇಲ್ಲವೇ? ಒಬ್ಬ ಸಚಿವರಾಗಿ ಈ ರೀತಿ ಬೇಜವಾಬ್ದಾರಿಯಿಂದ ಉತ್ತರ ನೀಡಿದರೆ ಹೇಗೆ? ಇನ್ನು 8 ದಿವಸ ಮಾತ್ರ ಸಭೆ ನಡೆಯುತ್ತದೆ. ಇದಕ್ಕೆ ಉತ್ತರ ನೀಡಬೇಕಲ್ಲವೇ? ಸದನದ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಕೇಳುತ್ತಿದ್ದು, ಈ ರೀತಿ ಉತ್ತರ ನೀಡಿದರೆ ಹೇಗೆ?

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಮಗೆ ಮಾನ್ಯ ಸಚಿವರು ಕಾಲಾವಕಾಶ ಕೋರಿ ಪತ್ರ ಬರೆದಿದ್ದಾರೆ. ಆದರೆ, ತಾವು 'ಆಗುವುದಿಲ್ಲ, ಕೂಡಲೇ ಉತ್ತರ ನೀಡಿ' ಎಂದು ತಿಳಿಸಿದರೆ ಸಾಕು ಉತ್ತರ ನೀಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ನೀವು ಸಚಿವರಿಗೆ ಹೇಳಬೇಕಲ್ಲವೇ? ದಯವಿಟ್ಟು ತಪ್ಪು ಭಾವಿಸಬೇಡಿ. ನಾನು ಎಲ್ಲಾ ಸದಸ್ಯರನ್ನು ರಕ್ಷಣೆ ಮಾಡಬೇಕಾಗುತ್ತದೆ. ಹಾಗಾಗಿ ತಾವು ಅದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಚಾರವಾಗಿದೆ.

**ಸಭಾಪತಿಯವರು:-** ಈಗಾಗಲೇ ಮಾನ್ಯ ಸಭಾನಾಯಕರಿಗೆ ತಿಳಿಸಿದ್ದೇನೆ. ತಮಗೆ ನಾನು ಹೇಳಿದ್ದು ಅರ್ಥವಾಗಲಿಲ್ಲವೇ?

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, 10 ದಿವಸಗಳು ಸಮಯ ಕೇಳಿದ್ದು, ಅಷ್ಟರೊಳಗೆ ಅಧಿವೇಶನವೇ ಮುಕ್ತಾಯಗೊಳ್ಳುತ್ತದೆ.

**ಸಭಾಪತಿಯವರು:-** ಹೌದು. ಈಗಾಗಲೇ ಮಾನ್ಯ ಸಭಾನಾಯಕರಿಗೆ 'ಆದಷ್ಟು ಬೇಗ ಉತ್ತರ ಒದಗಿಸಿ' ಎಂದು ಹೇಳಿದ್ದೇನೆ ಅಲ್ಲವೇ? ತಾವು ಹೇಳಬೇಕಾದ ವಿಚಾರವನ್ನು ನಾನೇ ಹೇಳಿದ್ದು, ಮತ್ತೆ ಎಷ್ಟು ಸಲ ತಾವು ಹೇಳಿದ ವಿಚಾರವನ್ನೇ ಹೇಳುತ್ತೀರಿ?

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆಗಲಿ.

# 15. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಮುಂದುವರೆದ ಚರ್ಚೆ

**ವಿಷಯ:– ಡೀಸಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಗಳು ಹೆಚ್ಚಾಗಿರುವುದರಿಂದ ದಿನನಿತ್ಯ ಬಳಕೆಯ ವಸ್ತುಗಳು ದುಬಾರಿಯಾಗಿರುವ ಕಾರಣ ಸಾಮಾನ್ಯ ಜನರ ಪರಿಸ್ಥಿತಿ ಚಿಂತಾಜನಕವಾಗಿರುವ ಕುರಿತು.**

****

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಗಳವರೇ, ನಿಯಮ 68ರ ಮೇರೆಗೆ ಪ್ರಸ್ತಾಪಿಸಲಾದ ವಿಷಯದಲ್ಲಿ ಈ ವಿಚಾರ ಕುರಿತಾಗಿ ನಿನ್ನೆ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಎಳೆ–ಎಳೆಯಾಗಿ ಬಿಡಿಸಿ ಹೇಳಿದ್ದಾರೆ. ನಾನು ಅದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುವಂಥ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಈ ಕಚ್ಚಾ ತೈಲ ಬೆಲೆ ಏರಿಕೆ ವಿಚಾರವಾಗಿ ಏನು ಮಾತನಾಡಬೇಕೋ, ಮಾತನಾಡಬಾರದೋ ಎಂಬುದೇ ಅರ್ಥವಾಗುತ್ತಿಲ್ಲ. ಕೇಂದ್ರ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮೊದಲು ಎಲ್ಲಾ ಕಡೆ 'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಯು.ಪಿ.ಎ., ಸರ್ಕಾರ 10 ವರ್ಷಗಳ ಕಾಲ ಈ ದೇಶದಲ್ಲಿ ಆಡಳಿತ ನಡೆಸಿ, ಎಲ್ಲಾ ಬೆಲೆಗಳು ಗಗನಕ್ಕೇರುತ್ತಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಎಲ್ಲವನ್ನೂ ಸಹ ಕಡಿಮೆ ಮಾಡಿ, ಈ ರಾಷ್ಟ್ರದ ಸಾಮಾನ್ಯ ಪ್ರಜೆಗಳು, ಮಧ್ಯಮ ವರ್ಗದವರು, ಬದುಕುವುದಕ್ಕೆ ಏನೆಲ್ಲಾ ಅನುಕೂಲ ಮಾಡಬೇಕು, ಆ ಕೆಲಸವನ್ನು ಮಾಡುತ್ತೇವೆ' ಎಂದು ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೂ ಎಲ್ಲಾ ಸಭೆ–ಸಮಾರಂಭಗಳಲ್ಲಿಯು ಪ್ರಚಾರ' ಮಾಡಿದರು. ತಮ್ಮ ಮೂಲಕ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮುಖ್ಯಮಂತ್ರಿ ಕಾಲದಿಂದ ಪ್ರಧಾನಮಂತ್ರಿ ಕಾಲದವರೆಗೂ ಚುನಾವಣಾ ಪ್ರಚಾರವನ್ನು ಹಿಡಿದು ಇವತ್ತಿನವರೆಗೂ ಈ ರಾಷ್ಟ್ರವನ್ನುದ್ದೇಶಿಸಿ ಏನು ಮಾತನಾಡಿದ್ದಾರೆ, ಏನೆಂದು ಈ ರಾಷ್ಟ್ರದ ಜನತೆಗೆ ಆಶ್ವಾಸನೆ ನೀಡಿದ್ದಾರೆ, ಅದರ ಸಿ.ಡಿ., ಯನ್ನು ಒಂದು ಸಲ ವಾಪಸ್ಸು ಪಡೆದು, ಅವರೇ ಆರಾಮವಾಗಿ ಕುಳಿತಿದ್ದಂಥ ಸಂದರ್ಭದಲ್ಲಿ ಕೇಳಿಸಿಕೊಂಡು, ಏನೆಲ್ಲಾ ಈ ರಾಷ್ಟ್ರದ ಜನತೆಗೆ ವಾಗ್ದಾನ ಮಾಡಿ, ಎಷ್ಟು ಭರವಸೆಗಳನ್ನು ಈಡೇರಿಸಿದ್ದಾರೆ ಎಂಬುದನ್ನು ಅವರೇ ಒಮ್ಮೆ ಆತ್ಮಾವಲೋಕನ ಮಾಡಿಕೊಂಡರೆ ಬಹಳ ಚೆನ್ನಾಗಿರುತ್ತದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಯು.ಪಿ.ಎ., ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ಆರ್ಥಿಕ ತಜ್ಞರಾಗಿ ಈ ದೇಶದ ಪ್ರಧಾನ ಮಂತ್ರಿಯಾಗಿ ಆರ್ಥಿಕ ಶಿಸ್ತು ಯಾವ ರೀತಿ ಇರಬೇಕು, ಬಡ ಜನರಿಗೆ ಹೊರೆಯಾಗಬಾರದು, ಯಾವ ರೀತಿ ಆಡಳಿತ ನಡೆಸಬೇಕೆನ್ನುವುದರ ಬಗ್ಗೆ ಅತ್ಯುತ್ತಮವಾದಂಥ ಕೆಲಸವನ್ನು ಮಾಡಿ, ಇಡೀ ವಿಶ್ವವೇ

ತಿದ್ದುಪಡಿಯಾಗದ ಪ್ರತಿ/ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೆಚ್ಚುವ ರೀತಿಯಲ್ಲಿ ಆಡಳಿತ ನೀಡಿದರು. ಯು.ಪಿ.ಎ., ಸರ್ಕಾರ ಅಧಿಕಾರದಲ್ಲಿದಂತಹ ಸಂದರ್ಭದಲ್ಲಿ ಎಷ್ಟು ಕಷ್ಟ ಇತ್ತೆಂದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರಲ್‌ಗೆ ಕಚ್ಚಾ ತೈಲ ಬೆಲೆಯು 125 ರಿಂದ 140 ಯು.ಎಸ್., ಡಾಲರ್‌ನಷ್ಟಿತ್ತು. ಅಂತಹ ಸಂದರ್ಭದಲ್ಲಿ ಸಹ ಪೆಟ್ರೋಲ್ ಬೆಲೆ 66 ರೂಪಾಯಿಗಿಂತ ಹೆಚ್ಚಿಗೆ ಹಾಗೂ ಡೀಸೆಲ್ ಬೆಲೆ 54 ರೂಪಾಯಿಗಿಂತ ಹೆಚ್ಚಿಗೆ ದಾಟಲಿಲ್ಲ. ಆದರೆ, ಯು.ಪಿ.ಎ., ಸರ್ಕಾರ ಹೋಗಿ ಎನ್.ಡಿ.ಎ., ಸರ್ಕಾರ ಅಧಿಕಾರಕ್ಕೆ ಬಂದಾಗ ಹಂತ-ಹಂತವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕಡಿಮೆಯಾಗುತ್ತಾ ಬಂದಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸಹ ಅದೇ ರೀತಿಯಾಗಿ ಇಳಿಕೆಯಾಗಬೇಕಾಗಿತ್ತು. ಒಂದು ದುರ್ದೈವದ ಸಂದರ್ಭ ಏನೆಂದರೆ, ಕಚ್ಚಾ ತೈಲ ಬೆಲೆ ಜಾಸ್ತಿಯಾಗುತ್ತಾ ಹೋಗಿತ್ತು. ಇವತ್ತು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ century ಭಾರಿಸಿದ್ದೇವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ crude oil ಬೆಲೆ ಬ್ಯಾರಲ್‌ಗೆ 45 ರಿಂದ 50 ರಷ್ಟು ಯು.ಎಸ್., ಡಾಲರ್ ಇದ್ದು, ಅದರ ಬೆಲೆ ಕಡಿಮೆಯಾಗಬೇಕೇ ಅಥವಾ ಜಾಸ್ತಿಯಾಗಬೇಕೇ? ಇವತ್ತು ನಮ್ಮ ಮುಂದೆ ಮಾಜಿ ಕೇಂದ್ರ ಸಚಿವರಾದ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಇಲ್ಲ. ಕೇವಲ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ 10 ಪೈಸೆ, 20 ಪೈಸೆ, ಗರಿಷ್ಠವೆಂದರೆ 50 ಪೈಸೆ ಜಾಸ್ತಿಯಾದಂತಹ ಸಂದರ್ಭದಲ್ಲಿ, ಮಾನ್ಯ ಸುಷ್ಮಾ ಸ್ವರಾಜ್‌ರವರ ಆದಿಯಾಗಿ ಮಾನ್ಯ Smriti Irani ರವರು ಮತ್ತು ಬಿ.ಜೆ.ಪಿ., ನಾಯಕರು ಆರ್ಭಟ ನಡೆಸಿ ಪ್ರತಿಭಟನೆ ಮಾಡಿದರು. ತಲೆಯ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತುಕೊಂಡು ಹೋಗುವುದು, ಎತ್ತಿನ ಗಾಡಿಗೆ ಕಾರನ್ನು ಕಟ್ಟಿ ಎಳೆದುಕೊಂಡು ಹೋಗುವಂಥದು, ತರಕಾರಿ ಮಾಲೆಗಳನ್ನು ಕತ್ತಿಗೆ ನೇತುಹಾಕಿಕೊಳ್ಳುವಂಥದು ಈ ರೀತಿಯಾಗಿ ನಮ್ಮ ರಾಜ್ಯದ ಸದಸ್ಯರಾದ ಮಾನ್ಯ ಶೋಭಾ ಕರಂದ್ಲಾಜೆಯವರು ಪ್ರತಿಭಟನೆ ನಡೆಸಿದ್ದು, ಇವತ್ತು ಅವರುಗಳೆಲ್ಲಾ ಎಲ್ಲಿಗೆ ಹೋಗಿದ್ದಾರೆ? ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಕಚ್ಚಾ ತೈಲದ ಬೆಲೆಯನ್ನು ಲೀಟರ್‌ಗೆ ಕೇವಲ 10 ಪೈಸೆ, 20 ಪೈಸೆ, 30 ಪೈಸೆಯಂತೆ ಜಾಸ್ತಿ ಮಾಡಿದ ಸಂದರ್ಭದಲ್ಲಿ ಇಷ್ಟೆಲ್ಲಾ ಪ್ರತಿಭಟನೆ ನಡೆಸಿದರು. ಇವತ್ತು ಪ್ರತಿ ದಿನ ಕಚ್ಚಾ ತೈಲದ ಬೆಲೆ ರೂಪಾಯಿಗಳಂತೆ ಏರಿಕೆಯಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶೋಭಾ ಕರಂದ್ಲಾಜೆಯವರು ಈ ಸದನದ ಸದಸ್ಯರಲ್ಲ. ಹಾಗಾಗಿ ಅವರು ನಮ್ಮ ಪಕ್ಷದ ಬಗ್ಗೆ ಬೇಕಾದರೆ ಮಾತನಾಡಲಿ, ಅಭ್ಯಂತರವೇನಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರು ಮಾತನಾಡಿದ ವಿಚಾರದಲ್ಲಿ ಏನು ತಪ್ಪಿದೆ? ಅವರು ಟೀಕೆ ಮಾಡಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಂ.ಪಿ., ಯವರ ಹೆಸರನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಈ ಸದನದ ಸದಸ್ಯರಲ್ಲದೇ ಇರುವವರ ಹೆಸರನ್ನು ಉಲ್ಲೇಖಿಸಬಾರದೆಂದು ಹೇಳಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ್ಯಾವ ರೀತಿಯ ಪ್ರತಿಭಟನೆ ನಡೆಸುತ್ತಿದ್ದರು ಎಂಬುದನ್ನು ನಾನು ಉಲ್ಲೇಖಿಸುತ್ತಿದ್ದೇನೆ. ನಾನು ಟೀಕೆ ಮಾಡುತ್ತಿಲ್ಲ. ಪ್ರತಿಭಟನೆ ಬಗ್ಗೆ ಹೇಳುತ್ತಿದ್ದೇನೆ ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಾಗಾದರೆ ಟೀಕೆ ಅಲ್ಲವೇ? ಈ ಶಬ್ದ ಟೀಕೆ ಅಲ್ಲವೆಂದು ಪೀಠ ಹೇಳಿದರೆ, ನಾನು ವಾದ ಮಾಡುವುದಕ್ಕೆ ಹೋಗದೇ ಅವರ ಮಾತನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಒಂದು ಸಮಾಜದಲ್ಲಿ ಬದುಕು ನಡೆಸುತ್ತಿದ್ದು, ಅವೊತ್ತಿನ ದಿವಸ ಒಂದು ನೀತಿ, ಇವೊತ್ತಿನ ದಿವಸ ಒಂದು ನೀತಿಯನ್ನು ಇಟ್ಟುಕೊಳ್ಳುವುದಾದರೆ, ಈ ಪ್ರಜಾಪ್ರಭುತ್ವದಲ್ಲಿ ಏತಕ್ಕಾಗಿ ಬದುಕಬೇಕು? ಅವೊತ್ತಿನ ದಿವಸ 10 ಪೈಸೆ, 20 ಪೈಸೆ ಜಾಸ್ತಿ ಮಾಡಿದ್ದಕ್ಕೆ ಇಷ್ಟರ ಮಟ್ಟಿಗೆ ಹೋರಾಟ ಮಾಡುತ್ತಿದ್ದವರು, ದಿನ ಬೆಳಗಾದರೆ, 1 ರೂಪಾಯಿ, 2 ರೂಪಾಯಿ, 3 ರೂಪಾಯಿ, 5 ರೂಪಾಯಿಗಳಂತೆ ಬೆಲೆ ಏರಿಕೆಯಾಗುತ್ತಿದ್ದರೂ ಅವರು ಸುಮ್ಮನೆ ಕುಳಿತಿರುವಾಗ ನಾವು ಕೇಳಬಾರದೇ?

**(ಮುಂದು)**

**(605) 23.03.2021/6.30/ಎಸ್‌ಕೆ-ಎಂಡಿ**

**ಶ್ರೀ ಎಂ ನಾರಾಯಣಸ್ವಾಮಿ(ಮುಂದು):-**

ಅವೊತ್ತಿನ ದಿವಸ ಪ್ರತಿಭಟನೆ ಅಷ್ಟೊಂದು ಜೋರಾಗಿತ್ತು. ಇವತ್ತು ಏಕೆ ಮಾಡುತ್ತಿಲ್ಲ? ಇವತ್ತು ಏತಕ್ಕೋಸ್ಕರವಾಗಿ ಬಾಯಿ ಮುಚ್ಚಿಕೊಂಡಿದ್ದಾರೆ ಮತ್ತು ಕೈಕಟ್ಟಿ ಕುಳಿತಿದ್ದಾರೆ? ನಾನು ಅದನ್ನು ಕೇಳುತ್ತಿದ್ದೇನೆ ಅಷ್ಟೆ. ಯು.ಪಿ.ಎ. ಸರ್ಕಾರವಿದ್ದಾಗ ಮಾನ್ಯ ಮನಮೋಹನ್ ಸಿಂಗ್‌ರವರು ಆರ್ಥಿಕ ತಜ್ಞರು ಮತ್ತು ಆರ್ಥಿಕ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಸ್ತನ್ನು ಕಾಪಾಡಿಕೊಂಡು ಬಂದಂತಹವರು. ಸಾಮಾನ್ಯ ಪ್ರಜೆ ಈ ನಾಡಿನಲ್ಲಿ ಯಾವ ರೀತಿ ಬದುಕಬೇಕು, ಅವನಿಗೆ ಕಷ್ಟವಾಗಬಾರದು, ಒಂದು ಹೊತ್ತು ದುಡಿದು ತಿನ್ನತಕ್ಕಂತಹ ಒಂದು ಅವಕಾಶ ಸಿಗಬೇಕೆಂದು ಹೇಳಿ ಎಲ್ಲೆಲ್ಲಿ ಸಬ್ಸಿಡಿಗಳು ಕೊಡುವುದಕ್ಕಾಗುತ್ತದೋ ಸರ್ಕಾರಕ್ಕೆ ಅದು ಹೊರೆಯಾದರೂ ಕೂಡ ಜನ ಸಾಮಾನ್ಯರ ಮೇಲೆ ಕಾಳಜಿಯನ್ನಿಟ್ಟುಕೊಂಡು ಹಲವಾರು ಕಾನೂನು ರೀತಿಯ ಕ್ರಮಗಳನ್ನು ಕೈಗೊಂಡು, ಬಡವನಿಗೆ ಕೈಗೆ ಎಟುಕುವ ಬೆಲೆಯಲ್ಲಿ ಎಲ್ಲವೂ ಸಿಗುವ ರೀತಿಯಲ್ಲಿ ಮಾಡಿದರು. ಆದರೆ ಇವತ್ತು ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆ ಜಾಸ್ತಿಯಾಗಿದೆ ಉದಾಹರಣೆಗೆ ಹೇಳಬೇಕೆಂದರೆ, ಮಾನ್ಯ ಮನಮೋಹನ್ ಸಿಂಗ್‌ರವರು ಪ್ರಧಾನಿ ಮಂತ್ರಿಯಾಗಿ ಸ್ಥಾನದಲ್ಲಿ ಇರುವವರೆಗೂ ಅವೊತ್ತಿನ ದಿನ ಒಂದು ಗ್ಯಾಸ್ ಸಿಲಿಂಡರ್ ಬೆಲೆ 344 ರೂಪಾಯಿಗಳು ಇತ್ತು. ಆ 344 ರೂಪಾಯಿ ಗ್ಯಾಸ್ ಸಿಲಿಂಡರ್‌ಗೆ ದರವನ್ನು ಹೆಚ್ಚು ಮಾಡುವುದಕ್ಕೆ ನಾವು ಸುಮಾರು 65 ವರ್ಷಗಳ ಕಾಲ ತೆಗೆದುಕೊಂಡೆವು. ಸ್ವಾತಂತ್ರ್ಯ ಬಂದಾಗಿನಿಂದ ಮಾನ್ಯ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಯ ಹುದ್ದೆಯಿಂದ ಇಳಿಯುವ ತನಕ ಒಂದು ಗ್ಯಾಸ್ ಸಿಲಿಂಡರ್ ಬೆಲೆ 344 ರೂಪಾಯಿ ಮಾಡುವುದಕ್ಕೆ ಸುದೀರ್ಘವಾಗಿ 65 ವರ್ಷಗಳನ್ನು ತೆಗೆದುಕೊಂಡರು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದು ಆರು ವರ್ಷಕ್ಕೆ ಒಂದು ಗ್ಯಾಸ್ ಸಿಲಿಂಡರ್ ಬೆಲೆ 344 ಇದ್ದಿದ್ದನ್ನು, 850 ರೂಪಾಯಿಗಳಿಗೆ ಜಾಸ್ತಿ ಮಾಡಲಾಯಿತು. ಇದೇನಾ 'ಅಚ್ಛೆ ದಿನ್'?

**ಸಭಾಪತಿಯವರು:-** ಮಾನ್ಯ ಶಂಕರ್‌ರವರೇ, ಮಾನ್ಯ ಸದಸ್ಯರನ್ನು ಮಾತನಾಡುವುದನ್ನು ಕೇಳಿ.

**ಶ್ರೀ ಎಂ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಅಚ್ಛೆ ದಿನಾನ? ಒಂದು ಗ್ಯಾಸ್ ಸಿಲಿಂಡರ್ ಬೆಲೆ 344 ರೂಪಾಯಿಗಳನ್ನು ಮಾಡುವುದಕ್ಕೆ ನಾವು 65 ವರ್ಷಗಳನ್ನು ತೆಗೆದುಕೊಂಡೆವು. ಈ ಸರ್ಕಾರ ಬಂದು ಆರು ವರ್ಷಗಳಲ್ಲಿಯೇ ಒಂದು ಗ್ಯಾಸ್ ಸಿಲಿಂಡರ್ ಬೆಲೆ 344 ರೂಪಾಯಿಗಳು ಇದ್ದಿದ್ದನ್ನು, 850 ರೂಪಾಯಿಗೆ ಬೆಲೆ ಜಾಸ್ತಿ ಮಾಡಿದೆ. ಯಾವ ವಿಶ್ವಾಸದ ಮೇಲೆ ಜನರು ಈ ಪಕ್ಷವನ್ನು ಆಯ್ಕೆ ಮಾಡಿ ಕಳುಹಿಸಿದರು, ತಾವು ಈ ರಾಷ್ಟ್ರದ ಜನತೆಗೆ ಏನು ವಾಗ್ದಾನ ಮಾಡಿದ್ದೀರಿ? ಕಾಂಗ್ರೆಸ್‌ನವರು ಕೊಳ್ಳೆ ಹೊಡೆದಿದ್ದಾರೆ. ಸ್ವಾತಂತ್ರ್ಯ ಬಂದು 72 ವರ್ಷಗಳಲ್ಲಿ 58 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಅಧಿಕಾರ ಮಾಡಿದೆ. ಈ ರಾಷ್ಟ್ರವನ್ನು ಸುಲಿಗೆ ಮಾಡಿದ್ದಾರೆ. ಕೊಳ್ಳೆ ಹೊಡೆದಂತಹ ಕಪ್ಪು ಹಣವನ್ನು ತೆಗೆದುಕೊಂಡು ಹೋಗಿ ವಿದೇಶದ ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ನಾನು ಪ್ರಧಾನ ಮಂತ್ರಿಯಾಗಿ ಬಂದು, ಕೇವಲ 100 ದಿನಗಳಲ್ಲಿ ಆ ಕಪ್ಪು ಹಣವನ್ನು ತೆಗೆದುಕೊಂಡು ಬಂದರೆ, ಈ ದೇಶದಲ್ಲಿ ಪ್ರತಿಯೊಬ್ಬರು ಯಾರು ಅಕೌಂಟ್‌ನ್ನು ತೆರೆದಿದ್ದಾರೋ, ಪ್ರತಿಯೊಬ್ಬರ ಅಕೌಂಟ್‌ನೊಳಗೆ 15 ಲಕ್ಷ ರೂಪಾಯಿಗಳನ್ನು ಹಾಕುತ್ತೇವೆ. ಇಲ್ಲದೇ ಹೋದರೆ, ನನ್ನನ್ನು ನೇಣು ಕಂಬಕ್ಕೆ ಏರಿಸಿ ಎಂದು ಹೇಳಿದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, . . . ಇದು ವ್ಯಂಗ್ಯ ಮಾಡುವಂತಹದ್ದಲ್ಲ. . . .

**ಶ್ರೀ ಎಂ ನಾರಾಯಣಸ್ವಾಮಿ:-** ನನ್ನನ್ನು ನೇಣು ಕಂಬಕ್ಕೆ ಏರಿಸಿ ಎಂದು ಹೇಳಿದರು. ಇದನ್ನು ನಾವು ಹೇಳಿದ್ದಲ್ಲ ಸ್ವಾಮಿ. ಇವತ್ತು ಕೂಡ ದಾಖಲೆಗಳನ್ನು ತೆಗೆದು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಾಮಾನ್ಯ ಸದಸ್ಯರಿಗಿಂತ ಭಿನ್ನರಾದವರು ಸನ್ಮಾನ್ಯ ಮುಖ್ಯ ಸಚೇತಕರು. ದೇಶದ ಪ್ರಧಾನ ಮಂತ್ರಿಯವರ ಬಗ್ಗೆ ಇವರು ಮಾತನಾಡುವಾಗ, 'ನನ್ನನ್ನು ನೇಣು ಕಂಬಕ್ಕೆ ಏರಿಸಿ' ಎನ್ನುವಂತಹ ಉದಾಹರಣೆಗಳಿದ್ದರೆ ಹೇಳಬೇಕಲ್ಲ.

**ಶ್ರೀ ಎಂ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಮಾತನ್ನು ನಾನು ಹೇಳುತ್ತಿಲ್ಲ. ಮಾನ್ಯ ಪ್ರಧಾನ ಮಂತ್ರಿಯವರು ಹೇಳಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನೂ ಬೇಕಾದರೂ ಮಾತನಾಡಬಹುದೇ?

**ಶ್ರೀ ಎಂ ನಾರಾಯಣಸ್ವಾಮಿ:-** ಎರಡನೇ ಬಾರಿ ಸಹ ಹೇಳುತ್ತಾರೆ. ಐವತ್ತು ದಿನಗಳ ಕಾಲ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ನಾರಾಯಣಸ್ವಾಮಿಯವರೇ, ಸ್ವಲ್ಪ ಕೇಳಿ. ತಾವು ಕೊನೆಗೆ ಏನು ಹೇಳುತ್ತೀರಾ ಎಂದರೆ, ನಾನು ಹೇಳಿದ್ದಲ್ಲ. ಇದು ಪತ್ರಿಕೆಯಲ್ಲಿ ಬಂದಿದ್ದು ಎಂದು ಹೇಳುತ್ತೀರಿ. ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ತಾವು ಹೇಳುವುದು. ಆದರೆ ಈ ಸದನದಲ್ಲಿ ಹೇಳುತ್ತಿರುವುದು, ಸದನದ ವಿರೋಧ ಪಕ್ಷದ ಮುಖ್ಯ ಸಚೇತಕರೊಬ್ಬ ಹೇಳುತ್ತಿರುವುದು. ತಮ್ಮ ಸ್ಥಾನಕ್ಕೆ ಗುರುತರವಾದ ಜವಾಬ್ದಾರಿ, ಹೊಣೆಗಾರಿಕೆ ಮತ್ತು ಸರಿಯಾಗಿ ಮಾತನಾಡುವಂತಹ ಕರ್ತವ್ಯವೂ ಕೂಡ ತಮಗೆ ಇದೆ. ತಾವು ಇದನ್ನು ಮನಸಿನಲ್ಲಿಟ್ಟುಕೊಂಡು ಮಾತನಾಡಬೇಕಾಗಿ ನನ್ನ ವಿನಂತಿ.

**ಸಭಾಪತಿಯವರು:-** ಈ ದೇಶದ ಸನ್ಮಾನ್ಯ ಪ್ರಧಾನ ಮಂತ್ರಿಗಳು ಎಲ್ಲರಿಗೂ ಪ್ರಧಾನ ಮಂತ್ರಿಗಳೇ.

**ಶ್ರೀ ಎಂ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೂ ಪ್ರಧಾನ ಮಂತ್ರಿಗಳು. ನಾನು ಬಿ.ಜೆ.ಪಿ. ಪ್ರಧಾನ ಮಂತ್ರಿಗಳು ಎಂದು ಹೇಳಲಿಲ್ಲ. ಈ ರಾಷ್ಟ್ರದ ಪ್ರಧಾನ ಮಂತ್ರಿಗಳು ಎಂದು ಹೇಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ ನೋಟ್ ಅಮಾನೀಕರಣವಾದಂತಹ ಸಂದರ್ಭದಲ್ಲಿಯೂ ಸಹ ಈ ರಾಷ್ಟ್ರದ ಪ್ರಜೆಗಳಿಗೆ ಕಷ್ಟವಾದಾಗ, ದಯವಿಟ್ಟು, ನನಗೋಸ್ಕರ adjust ಮಾಡಿಕೊಳ್ಳಿ. ಈ ಆರ್ಥಿಕ ಸ್ಥಿತಿಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

50 ದಿನಗಳಲ್ಲಿ ಇದನ್ನು ಸರಿ ಮಾಡುತ್ತೇನೆ. ಇಲ್ಲದೇ ಹೋದರೆ ಮತ್ತೆ ನನ್ನನ್ನು ನೇಣು ಕಂಬಕ್ಕೆ ಏರಿಸಿ ಎಂದು ಅವೊತ್ತಿನ ದಿನ ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈಗ ಹೇಳಿದ್ದಕ್ಕೆ ಹೇಳಿ.

**ಶ್ರೀ ಎಂ ನಾರಾಯಣಸ್ವಾಮಿ:-** ಇದು ಸುಳ್ಳಲ್ಲ. ದಾಖಲೆ ಮತ್ತು ಪತ್ರಿಕೆಯಲ್ಲಿ ಬಂದಿದ್ದನ್ನು ತೆಗೆದು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೋಟ್ ಅಮಾನೀಕರಣವಾದ್ದರಿಂದ . . .

**ಶ್ರೀ ಎಂ ನಾರಾಯಣಸ್ವಾಮಿ:-** ಇದನ್ನು ನಾನು ಹೇಳುತ್ತಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ದಾಖಲೆ ಮತ್ತು ಪತ್ರಿಕೆಯಲ್ಲಿ ತೆಗೆದು ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ ನಾರಾಯಣಸ್ವಾಮಿ:-** ನೋಡಿ ನಾನು ಸುಮ್ಮನೇ ಇಲ್ಲಿ ಹೇಳುತ್ತಿಲ್ಲ.

**ಶ್ರೀ ಆರ್. ಧರ್ಮಸೇನ:-** ಅವರು ಜವಾಬ್ದಾರಿಯಿಂದ ಹೇಳುತ್ತಿದ್ದಾರೆ.

**ಶ್ರೀ ಎಂ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಪ್ರಧಾನ ಮಂತ್ರಿಯವರು ಈ ದೇಶವನ್ನು ಉದ್ದೇಶಿಸಿ, ಭಾಷಣ ಮಾಡುವಂತಹ ಸಂದರ್ಭದಲ್ಲಿ ಈ ಮಾತನ್ನು ಅವರು ಹೇಳಿರುವಂತಹದ್ದು, ಇದನ್ನು ನಾನು ಹೇಳುತ್ತಿಲ್ಲ. ಮಾನ್ಯ ಸಭಾಪತಿಯವರೇ, ನಾನು ಈ ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಡುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಧರ್ಮಸೇನರವರೇ ಅವರು ಜವಾಬ್ದಾರಿಯಿಂದ ಹೇಳುತ್ತಿದ್ದಾರೆಂದು ನಾನು ಒಪ್ಪುತ್ತೇನೆ. ಅವರು ಜವಾಬ್ದಾರಿಯಿಂದ ಹೇಳಬೇಕಾದರೆ, ಸರಿಯಾಗಿರುವುದನ್ನೇ ಹೇಳಬೇಕಲ್ಲವೆ.

**ಶ್ರೀ ಎಂ ನಾರಾಯಣಸ್ವಾಮಿ:-** ನಾನು ಸುಳ್ಳು ಹೇಳುವುದಿಲ್ಲ. ತಾವು ದಾಖಲೆಯನ್ನು ಬೇಕಾದರೆ ತೆಗೆದು ನೋಡಿ ಸ್ವಾಮಿ.

**ಸಭಾಪತಿಯವರು:-** ಆಯಿತು. ಇದನ್ನು ಆಮೇಲೆ ನೋಡೋಣ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ ನಾರಾಯಣಸ್ವಾಮಿ:–** ಮಾನ್ಯ ಸಭಾ ನಾಯಕರೇ, ತಾವು ಹಿರಿಯರಿದ್ದೀರಿ. ತಮ್ಮ ಮೇಲೆ ನನಗೆ ಅಪಾರವಾದಂತಹ ಗೌರವವಿದೆ. ತಮಗೆ ಎಷ್ಟೊಂದು ಕಾಳಜಿಯಿದೆಯೋ, ಅಷ್ಟೇ ಕಾಳಜಿಯನ್ನು ಶೇಕಡಾ 50 ರಷ್ಟಾದರೂ ನಾನು ಇಟ್ಟುಕೊಂಡಿದ್ದೇನೆ. ನಾವು ಮಾತನಾಡಬೇಕಾದರೆ, ಸತ್ಯವನ್ನು ಮಾತನಾಡಬೇಕು. ಇದು ಕಡತಕ್ಕೆ ಹೋಗಿ ರೆಕಾರ್ಡ್ ಆಗುತ್ತದೆ. ನಾನು ಸುಳ್ಳು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವಂತಹದ್ದನ್ನು ನಾನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಮಾನ್ಯ ಪಿ.ಆರ್. ರಮೇಶ್‌ರವರು ಮಾತನಾಡಬೇಕಾದರೆ, ಹೇಳಿದರು. ಇವತ್ತು ಒಂದು ಲೀಟರ್ ಪೆಟ್ರೋಲ್‌ನ ಬೆಲೆ original price ರೂ.36 ಆಗುತ್ತದೆ. ಅದಕ್ಕೆ central excise duty almost ರೂ.35 ಹಾಕುತ್ತಿದ್ದಾರೆ. Landing price ಜೊತೆಗೆ ನಮ್ಮ ರಾಜ್ಯದ ತೆರಿಗೆ ಸೇರಿ ರೂ.100 ಗಡಿಗೆ ಬಂದುಬಿಟ್ಟಿದ್ದೇವೆ. Landing price ಅಂದರೆ transportation cost ಸೇರಿ ರೂ.100 ಸಮೀಪದಷ್ಟು ಬಂದುಬಿಟ್ಟಿದ್ದೇವೆ. ನಮ್ಮ ಸರ್ಕಾರ ಕೇಂದ್ರದಲ್ಲಿ ಅಧಿಕಾರವಿದ್ದಂತಹ ಸಂದರ್ಭದಲ್ಲಿ excise duty ಕೇವಲ ಮೂರೂವರೆ ರೂಪಾಯಿ ಹಾಕುತ್ತಿದ್ದರು. ಆದರೆ ಇವತ್ತು 35 ರೂಪಾಯಿ ಆಗಿದೆ. ಎಷ್ಟು ವರ್ಷದಲ್ಲಿ ಎಂದರೆ ಕೇವಲ ಆರು ವರ್ಷಗಳಲ್ಲಿ 35 ರೂಪಾಯಿ ಎಲ್ಲಿ? ಮೂರೂವರೆ ರೂಪಾಯಿ ಎಲ್ಲಿ? ಡೀಸೆಲ್, ಪೆಟ್ರೋಲ್ ಬೆಲೆ ಜಾಸ್ತಿಯಾದ ತಕ್ಷಣ transportation cost ಜಾಸ್ತಿಯಾಗಿದ ತಕ್ಷಣ ಎಲ್ಲಾ ದಿನನಿತ್ಯ ಬಳಕೆಯ ವಸ್ತುಗಳು ಕೂಡ automatically ಜಾಸ್ತಿಯಾಗುತ್ತದೆ. ಕೇವಲ ಪೆಟ್ರೋಲ್, ಡೀಸೆಲ್ ಬೆಲೆ ಮಾತ್ರ ಜಾಸ್ತಿಯಾಗುವುದಿಲ್ಲ. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ, ದಕ್ಷಿಣ ಭಾರತದಿಂದ ಉತ್ತರ ಭಾರತಕ್ಕೆ ಸರಕುಗಳನ್ನು ಸಾಗಾಣಿಕೆ ಮಾಡುತ್ತೇವೆ ಆಗ transportation cost ಜಾಸ್ತಿಯಾದ ತಕ್ಷಣ ಎಲ್ಲಾ ದವಸ–ಧಾನ್ಯಗಳು ಬೆಲೆ ಜಾಸ್ತಿಯಾಗುತ್ತದೆ. ತರಕಾರಿ, ಹಣ್ಣುಗಳ ಬೆಲೆ ಜಾಸ್ತಿಯಾಗುತ್ತದೆ. ಇವತ್ತು ಸಾಮಾನ್ಯ ಪ್ರಜೆ ಯಾವ ರೀತಿ ಬದುಕಬೇಕು ಹೇಳಿ ನೋಡೋಣ. ಮೊನ್ನೆ ದಿವಸ ಯಾರೋ ಒಬ್ಬರು ಸಮೀಕ್ಷೆ ಮಾಡಿ, ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾರೆ. ಅದರ ಪ್ರಕಾರ ಮಧ್ಯಮ ವರ್ಗದ ಕುಟುಂಬ ಬೆಂಗಳೂರಿನಂತಹ ಎಂಬ ನಗರ ಪ್ರದೇಶದಲ್ಲಿ ವಾಸ ಮಾಡಬೇಕೆಂದರೆ, ಒಂದು ತಿಂಗಳಿಗೆ ಕನಿಷ್ಠ 14 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಗಂಡ–ಹೆಂಡತಿ ಮತ್ತು ಇಬ್ಬರು ಮಕ್ಕಳು ಇರುವಂತಹ ಒಂದು ಸಣ್ಣ ಕುಟುಂಬಕ್ಕೆ ಕನಿಷ್ಠ ಪಕ್ಷ 4 ಸಾವಿರ ರೂಪಾಯಿ ಮನೆ ಬಾಡಿಗೆ ಎಂದಿಟ್ಟುಕೊಂಡರೆ, ಇಬ್ಬರು ಮಕ್ಕಳು ಶಾಲೆಗೆ ಹೋಗಬೇಕೆಂದರೆ, ಕನಿಷ್ಠ 3 ಸಾವಿರ ರೂಪಾಯಿ fees ಕಟ್ಟಬೇಕಾಗುವಂತಹದ್ದು. ಮನೆಯಲ್ಲಿ ಊಟ–ತಿಂಡಿಗೆ ತಿಂಗಳಿಗೆ ಹೆಣ್ಣು ಮಕ್ಕಳು ಜಾಸ್ತಿಯಿದ್ದರೆ, ಇದು ಎಲ್ಲರಿಗೂ ಅರ್ಥವಾಗಬಹುದು. ದವಸ–ಧಾನ್ಯ ಅಕ್ಕಿ ಬೇಳೆ ಏನೇ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬೇಕಾದರೂ, ಕನಿಷ್ಟ ಪಕ್ಷ 5 ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ತರಕಾರಿ ಹಾಲು ತೆಗೆದುಕೊಳ್ಳವುದಕ್ಕೆ 1 ಸಾವಿರ ರೂಪಾಯಿ ಬೇಕಾಗುತ್ತದೆ. ಅವನು ಕಾರ್ಖಾನೆಗೆ ಹೋಗಿ ಕೆಲಸ ಮಾಡಿಕೊಂಡು ಬರುವುದಕ್ಕೆ ಕನಿಷ್ಟ ಪಕ್ಷ ಪೆಟ್ರೋಲ್‌ಗೆ ತಿಂಗಳಿಗೆ 1 ಸಾವಿರ ರೂಪಾಯಿ ಬೇಕಾಗುತ್ತದೆ. ಆಸ್ಪತ್ರೆ ಖರ್ಚು, hair cut ಇತರೆ ಖರ್ಚುಗಳಿಗಾಗಿ 1 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಇದರ ಒಟ್ಟು ಖರ್ಚು 15 ಸಾವಿರ ರೂಪಾಯಿಗಳಾಗುತ್ತದೆ. ಅವನಿಗೆ ತಿಂಗಳಿಗೆ 15 ಸಾವಿರ ರೂಪಾಯಿ, ಆ ಸಂಬಳಕ್ಕೆ ಅನುಗುಣವಾಗಿ ಯಾವ ರೀತಿ ಸಂಸಾರ ಮಾಡಬೇಕೆಂದು ಹೇಳಿ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಬೆಲೆ ಏರಿಕೆಯಾದ ಮೇಲೆ ತಿಂಗಳಿಗೆ ಆ ಕುಟುಂಬಕ್ಕೆ 4 ಸಾವಿರ ರೂಪಾಯಿ ಹೆಚ್ಚುವರಿ ಖರ್ಚು ಬರುತ್ತಿದೆ. ಆದರೆ ಸಂಬಳ ಜಾಸ್ತಿಯಾಗಲಿಲ್ಲ. ಕೊರೊನಾ ಬಂದಿದ್ದರಿಂದ ಪ್ರತೀ ತಿಂಗಳು ಸರಿಯಾಗಿ ಸಂಬಳವಾಗುತ್ತಿಲ್ಲ. 2-3 ತಿಂಗಳಿಗೊಮ್ಮೆ ಸಂಬಳವನ್ನು ಕೊಡುತ್ತಾರೆ. ಕಾರ್ಖಾನೆ ಮಾಲೀಕರ ಹತ್ತಿರ ಹೋಗಿ ಸಂಬಳ ಕೊಟ್ಟಿಲ್ಲ ಎಂದು ಅವನು ಜೋರು ಮಾಡಿದರೆ, 'ಕೆಲಸ ಬಿಟ್ಟು ಹೋಗಯ್ಯಾ' ಎಂದು ಹೇಳುತ್ತಾರೆ. ಆ 4 ಸಾವಿರ ರೂಪಾಯಿ ಹೆಚ್ಚಿಗೆ ಆಯಿತು ಎಂದರೆ, ಅವನು ಎಲ್ಲಿಂದ ಅದನ್ನು ಭರಿಸುತ್ತಾನೆ. ಆದರೆ ಸಂಬಳ ಜಾಸ್ತಿಯಾಗಲಿಲ್ಲ. ಖರ್ಚು ಜಾಸ್ತಿಯಾಯಿತು. ಆ 4 ಸಾವಿರ ರೂಪಾಯಿ ಭರಿಸಬೇಕೆಂದರೆ, ಸಾಲ ಮಾಡಬೇಕು. ಸಾಲಕ್ಕೆ ಬಡ್ಡಿ ಕಟ್ಟಬೇಕು. ಕೊರೊನಾ ಬಂದಿರುವಂತಹ ಈ ಸಂದರ್ಭದಲ್ಲಿ ಸರ್ಕಾರ ಈ ಜನರ ಅನುಕೂಲಕ್ಕೆ ಕಷ್ಟಕ್ಕೆ ಸಹಾಯ ಮಾಡಬೇಕಾಗಿದೆಯೇ ವಿನಃ ಜನರನ್ನು ದುಸ್ಥಿತಿಗೆ ತರುವಂತಹ ಕೆಲಸವನ್ನು ಮಾಡಬಾರದು. ಉದಾಹರಣೆಗೆ ತೆಲಂಗಾಣ ರಾಜ್ಯ ನಮ್ಮ ರಾಜ್ಯದ ಪಕ್ಕದಲ್ಲಿದೆ. ಆಸ್ತಿ ತೆರಿಗೆ ಕಟ್ಟಬೇಕೆಂದರೆ, ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಆಸ್ತಿಗೆ ತೆರಿಗೆಯನ್ನು ಕಟ್ಟುವಂತಹದ್ದಕ್ಕೆ ಶೇಕಡಾ 50 ರಷ್ಟು ವಿನಾಯಿತಿ ಕೊಟ್ಟಿದ್ದಾರೆ. ಆ ರೀತಿಯಾದರೂ ಕೆಲಸ ಮಾಡಬೇಕಲ್ಲವೇ? ಆದರೆ ದಿನನಿತ್ಯ ಬೆಲೆ ಏರಿಕೆಯಾಗುತ್ತಿದೆ. ನಾನು ಈ ಸಂದರ್ಭದಲ್ಲಿ ಆಡಳಿತ ಪಕ್ಷದವರಿಗೆ ಮನವಿ ಮಾಡುವುದೇನೆಂದರೆ, ಈ ಬಿಸಿ ತಮಗೆ ತಟ್ಟಲಿಲ್ಲವೇ? ನಮಗೆ ಮಾತ್ರ ಬೆಲೆ ಜಾಸ್ತಿಯಾಗಿದೆಯೇ? ನಿಮ್ಮ ಮನೆಯಲ್ಲಿರುವ ಹೆಣ್ಣು ಮಕ್ಕಳು 'ಏನ್ರಿ, ಬೆಲೆ ಗಗನಕ್ಕೆ ಏರುತ್ತಿದೆ' ಎಂದು ನಿಮ್ಮನ್ನು ಕೇಳುತ್ತಿಲ್ಲವೇ?

(ಮುಂದು)

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(606) 23.03.2021, 6.40, ಟಿಸಿಹೆಚ್–ಎಂಡಿ**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):–**

ನಾನು ಮಾಧ್ಯಮದವರಿಗೆ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಕಷ್ಟ ನಿಮಗೆ ಅರಿವಾಗಿಲ್ಲವೇ. ದಿನನಿತ್ಯ ಅಗತ್ಯ ವಸ್ತುಗಳ ಬೆಲೆ ಜಾಸ್ತಿ ಆಗುತ್ತಿದೆ. ಮಾಧ್ಯಮದವರು ಏಕೆ ಇದನ್ನು ತೋರಿಸುತ್ತಿಲ್ಲ? ಅವರು ಕೂಡ ಬೆಳಗ್ಗೆ ಎದ್ದು ಕ್ಯಾಮರಾ ತಗಲಾಕಿಕೊಂಡು ಸ್ಕೂಟರ್ ಅಥವಾ ಕಾರ್‌ನಲ್ಲಿ ಕೆಲಸಕ್ಕೆ ಬರುತ್ತಾರೆ. ಆ ವಾಹನಕ್ಕೆ ಪೆಟ್ರೋಲ್ ತುಂಬಿಸುವಾಗ ನಿಮಗೆ ಅರ್ಥವಾಗುತ್ತಿಲ್ಲವೇ? ಮಾಧ್ಯಮದವರು ದಯಮಾಡಿ ಇದರ ಬಗ್ಗೆ ಬೆಳಕು ಚೆಲ್ಲಬೇಕು. ಜನಸಾಮಾನ್ಯರಿಗೆ ಆಗಿರತಕ್ಕಂಥ ಕಷ್ಟ ಏನೆಂದು ಎತ್ತಿ ತೋರಿಸಬೇಕು. ಮಾಧ್ಯಮದವರು ನಮ್ಮ ಪರವಾಗಿ ಏನೂ ಬರೆಯುವುದು ಬೇಡ. ಆದರೆ ಸತ್ಯ ಎಲ್ಲಿದೆ, ವಾಸ್ತವಾಂಶ ಎಲ್ಲಿದೆ, ಅದರ ಬಗ್ಗೆ ಬೆಳಕು ಚೆಲ್ಲುವಂಥ ಕೆಲಸ ಮಾಡಬೇಕು. ಬೆಲೆ ಏರಿಕೆಯಿಂದ ಎಲ್ಲರಿಗೂ ತೊಂದರೆಯಾಗುತ್ತಿದೆ. ಇವತ್ತಿನ ದಿವಸ ಮಧ್ಯಮ ವರ್ಗದ ಜನ ಬದುಕುವುದಕ್ಕೆ ಕಷ್ಟ ಆಗಿದೆ. ಇನ್ನು ಬಡವರು ಯಾವ ರೀತಿ ಬದುಕಬೇಕು ಎಂದು ಯೋಚನೆ ಮಾಡಬೇಕು. ಇದು ನಮ್ಮ ಕಾಳಜಿ ಆಗಿರತಕ್ಕಂಥದ್ದು. ಆಡಳಿತ ಪಕ್ಷದವರಿಗೆ ಒಂದು ರೀತಿ ಕೋಪ ಬರಬಹುದು. ಆದರೆ ಅವರೇ ಆತ್ಮಾವಲೋಕನ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೆ ಬಿ.ಜೆ.ಪಿ ನಾಯಕರುಗಳೆಲ್ಲರೂ ಸ್ವರ್ಗವನ್ನೇ ಧರೆಗೆ ಇಳಿಸುತ್ತೇವೆಂದು ಮಾತನಾಡಿದರು. ನಾವು ರಾಮ ರಾಜ್ಯವನ್ನು ತರುತ್ತೇವೆ, ನಮ್ಮ ದೇಶ ರಾಮ ರಾಜ್ಯವಾಗುತ್ತದೆ. “ಭಾರತ್ ಮಾತಾಕಿ ಜೈ, ಜೈ ಶ್ರೀರಾಮ್” ಎಂದು ಹೇಳಿ ಅಧಿಕಾರಕ್ಕೆ ಬಂದಿದ್ದಾರೆ. ಈ ರಾಮ ರಾಜ್ಯದಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ 100 ರೂಪಾಯಿಗಳು ಇದೆ. ರಾವಣ ರಾಜ್ಯದಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ 50 ರೂಪಾಯಿಗಳು ಇದೆ. ಸೀತೆಯ ನಾಡಿನಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ 60 ರೂಪಾಯಿಗಳು ಇದೆ. ಇದೇನಾ ರಾಮ ರಾಜ್ಯ. ರಾಮ ರಾಜ್ಯ ಎಲ್ಲಿ? “ಅಚ್ಛೇ ದಿನ್ ಆಯೇಗ”ಎಂದು ಹೇಳಿದರು. ಆದರೆ ಯಾರಿಗೆ ಅಚ್ಛೇ ದಿನ್ ಬಂತು. ಜನಸಾಮಾನ್ಯರಿಗೆ ಏನು ಅಚ್ಛೇ ದಿನ್ ಬಂತೇ? ಈ ರಾಷ್ಟ್ರದ ‘ಬೆರಳೆಣಿಕೆ ಜನಕ್ಕೆ ಮಾತ್ರ ಅಚ್ಛೇ ದಿನ್’ ಬಂತು. ಈ ದೇಶದ 130 ಜನರಿಗೆ ಇನ್ನೂ ಯಾರಿಗೂ ‘ಅಚ್ಛೇ ದಿನ್’ ಬರಲೇ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಈಗ ಪೆಟ್ರೋಲ್ ಬೆಲೆ ಜಾಸ್ತಿ ಇದೆಯಲ್ಲವೇ? ನಮ್ಮ ಕರ್ನಾಟಕ ರಾಜ್ಯವೊಂದರಿಂದ ವರ್ಷಕ್ಕೆ 1,500 ಕೋಟಿ ರೂಪಾಯಿಗಳಷ್ಟು ತೆರಿಗೆ ಹಣವನ್ನು ಕೇಂದ್ರ ಸರ್ಕಾರಕ್ಕೆ ತುಂಬುತ್ತಿದ್ದೇವೆ. ಅದರಿಂದ ಇಂತಿಷ್ಟು ಪರ್ಸಂಟೇಜ್ ತೆರಿಗೆ ಹಣ ನಮ್ಮ ರಾಜ್ಯಕ್ಕೆ ವಾಪಸ್ಸು ಬರಬೇಕಲ್ಲವೇ? ಬರೀ 730 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ನಮ್ಮ ಕರ್ನಾಟಕದಿಂದ ಒಟ್ಟು 25 ಜನ ಸಂಸದರು ಮತ್ತು

ಕೇಂದ್ರ ಸಚಿವರು ಆಯ್ಕೆಯಾಗಿದ್ದಾರೆ ಅವರ್‍ಯಾರು ಇದರ ಬಗ್ಗೆ ಏಕೆ ಮಾತಾಡುತ್ತಿಲ್ಲ? ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬರಬೇಕಾಗಿಲ್ಲ. ಆದರೆ ನಮ್ಮಿಂದ ಟ್ಯಾಕ್ಸ್ ಏನು ಕಲೆಕ್ಟ್ ಆಗಿ ಹೋಗಿದೆ, ಅದರ ಪಾಲು ನಮಗೇನು ಬರಬೇಕಿದೆ, ಅದನ್ನೂ ಕೂಡ ಕೇಳುವುದಕ್ಕೆ ಧೈರ್ಯವಿಲ್ಲವೆಂದರೆ ನಾವು ಇನ್ನೇನು ಮಾಡುವುದು. ಅವರು ಕೇಳುವುದಕ್ಕೆ ಆಗುತ್ತಿಲ್ಲ. Bharat Petroleum Corporation Limited, Indian Oil Corporation Limited, Private Sectors, Public Sectors, Petroleum Products, ವಿದ್ಯುಚ್ಛಕ್ತಿ ಉತ್ಪಾದನೆ ಕೇಂದ್ರಗಳು, Railways, Airports, Ports ಇವೆಲ್ಲಾ ಈ ಭಾರತ ರಾಷ್ಟ್ರದ ಸಂಪತ್ತು. ಇವೆಲ್ಲಾ ಭಾರತ ದೇಶದ ಆಸ್ತಿ. ಇದು ನಮ್ಮ ಭಾರತ ದೇಶದ asset. ಕಾಂಗ್ರೆಸ್ ಸರ್ಕಾರ ಸ್ವತಂತ್ರ ಬಂದಾಗಿನಿಂದ ಇವೆಲ್ಲವನ್ನೂ ಕಾಪಾಡಿಕೊಂಡು ಬಂದಿತ್ತು. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರ ಕೂಡ ಅಧಿಕಾರಕ್ಕೆ ಬಂದಿತ್ತು. ಕಲ್ಲಿದ್ದಲು ಗಣಿಗಳು ಇರಬಹುದು, ಇನ್ನಿತರ ಸಂಪತ್ತು ಇರಬಹುದು, ಈ ಸಂಪತ್ತುಗಳೆಲ್ಲವನ್ನೂ ನಾವು ಕಾಪಾಡಿಕೊಂಡು ಬಂದಿದ್ದೆವು. ಆದರೆ ನಿಮ್ಮ ಸರ್ಕಾರ 6 ವರ್ಷಗಳಲ್ಲಿ ಒಂದೊಂದಾಗಿ, privatize ಮಾಡುವುದಕ್ಕೆ ಹೊರಟಿದೆ. ಇವತ್ತಿನ ದಿವಸ ಸಂಪತ್ಭರಿತವಾದಂಥ ಭಾರತ ದೇಶವನ್ನು ಕೇಂದ್ರ ಸರ್ಕಾರ ಶೂನ್ಯ ಮಾಡುವುದಕ್ಕೆ ಹೊರಟಿದೆ.

ಇವತ್ತಿನ ದಿವಸ Railways privatize ಮಾಡಲು ಹೊರಟಿದ್ದಾರೆ, Public Sectors privatize ಮಾಡುತ್ತಿದ್ದಾರೆ, Airports privatize ಮಾಡುತ್ತಿದ್ದಾರೆ, ನಾಳೆ ದಿವಸ ಕಲ್ಲಿನ ಗಣಿಗಳನ್ನೂ ಕೂಡ ಪ್ರೈವೆಟೈಜ್ ಮಾಡುತ್ತಾರೆ; petroleum products privatize ಮಾಡಲು ಹೊರಟಿದ್ದಾರೆ. ಅವರು ಇದನ್ನೆಲ್ಲಾ ಮಾಡಿ ಯಾರನ್ನು ಉದ್ಧಾರ ಮಾಡಲು ಹೊರಟಿದ್ದಾರೆ? ಅವರು ನಮ್ಮ ಸಂಪತ್ತನ್ನು privatize ಮಾಡುತ್ತಿದ್ದಾರೆ. ನಮ್ಮ ಪಕ್ಷದ ನಾಯಕರಾದಂಥ ಸನ್ಮಾನ್ಯ ರಾಹುಲ್ ಗಾಂಧಿಯವರು 'ಹಂ ದೋ ಹಮಾರಿ ದೋ' ಎಂದು ಹೇಳಿದರು. ಹಂ ದೋ ಎಂದರೆ, "ನಾವಿಬ್ಬರು ನಮಗಿಬ್ಬರು". ಅವರಿಗೆ ನಾವಿಬ್ಬರು ಎಂದರೆ, ಸನ್ಮಾನ್ಯ ನರೇಂದ್ರ ಮೋದಿ ಹಾಗೂ ಅಮಿತ್‌ಷಾರವರು. ಹಮಾರಿ ದೋ ಎಂದರೆ, ಮಾನ್ಯ ಅಂಬಾನಿ ಹಾಗೂ ಅದಾನಿ ಯವರು. ಇವತ್ತಿನ ದಿವಸ ಬೇರೆಯವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರವಾಗಿ, ನಮ್ಮ ಇಡೀ ರಾಷ್ಟ್ರದ 130 ಕೋಟಿ ಜನರನ್ನು ಸಾಲದ ಸುಳಿಗೆ ಸಿಲುಕಿಸಿ ಭಾರತದ ಸಂಪತ್ತನ್ನು ಬೇರೆಯವರಿಗೆ privatize ಮಾಡಲು ಹೊರಟಿದ್ದಾರೆ. ಕಾಂಗ್ರೆಸ್ ಸರ್ಕಾರ ಸ್ವಾತಂತ್ರ್ಯ ಬಂದಾಗಿನಿಂದಲೂ ಈ ರಾಷ್ಟ್ರದ ಸಂಪತ್ತನ್ನು ಉಳಿಸಿಕೊಂಡು ಬಂದಿತ್ತು. ಆದರೆ

ಇವತ್ತಿನ ದಿವಸ ಕೇವಲ 6 ವರ್ಷಗಳಲ್ಲಿ ನಮ್ಮ ದೇಶದ ಸಂಪತ್ತನ್ನು ಪ್ರೈವೆಟೈಜ್ ಮಾಡಿದರೆ, ನಾಳೆ ದಿವಸ ನಮ್ಮ ಭಾರತ ದೇಶದ ಜನರು ಬಿಕ್ಷೆ ಎತ್ತಬೇಕೇ. ನಾವೇನು ಮಾನ್ಯ ಅಂಬಾನಿ ಮತ್ತು ಮಾನ್ಯ ಅದಾನಿಯವರ ಮನೆ ಮುಂದೆ ಹೋಗಿ ನಿಲ್ಲಬೇಕೆ? ನಾಳೆ ದಿವಸ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾನ್ಯ ಅಂಬಾನಿ ಮತ್ತು ಮಾನ್ಯ ಅದಾನಿಯವರು ಈ ರಾಷ್ಟ್ರಕ್ಕೆ ಪ್ರಧಾನ ಮಂತ್ರಿಗಳು ಆಗುತ್ತಾರೆ. ಇವತ್ತಿನ ದಿವಸ ನಮ್ಮ ದೇಶ ಈ ಮಟ್ಟಕ್ಕೆ ಹೋಗುತ್ತಿದೆ. ಹೀಗಾದರೆ, ಈಗ ನಾವು ಯಾರನ್ನು ಕೇಳುವುದು? ಈ ದೇಶದಲ್ಲಿ ಅರಾಜ್ಜಕತೆ ಆಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಸನ್ಮಾನ್ಯ ಮನಮೋಹನ್ ಸಿಂಗ್‌ರವರು ಇಡೀ ವಿಶ್ವವೇ ಮೆಚ್ಚಿರತಕ್ಕಂಥ ಆರ್ಥಿಕ ತಜ್ಞರು. ಒಂದು ಬಾರಿ ಅಮೆರಿಕಾದಲ್ಲಿ ಈ ರೀತಿ ಆರ್ಥಿಕವಾದ ತೊಂದರೆಗೆ ಸಿಕ್ಕಿಹಾಕಿಕೊಂಡಾಗ, ಸನ್ಮಾನ್ಯ ಬರಾಕ್ ಒಬಾಮ ರವರು President of America ಆಗಿದ್ದರು. ಅವರು ಅವೊತ್ತು ಸನ್ಮಾನ್ಯ ಮನಮೋಹನ್ ಸಿಂಗ್‌ರವರ ಸಲಹೆಯನ್ನು ಕೇಳಿದರು. ಅವರೇನು ಸಲಹೆಯನ್ನು ಕೊಟ್ಟಿದ್ದರೊ ಅದನ್ನು ಅಳವಡಿಕೊಂಡು ಅಮೆರಿಕಾ ರಾಷ್ಟ್ರದ ಆರ್ಥಿಕ ಸಂಕಷ್ಟದಿಂದ ಮೇಲಕ್ಕೆ ತಂದರು. ಇವತ್ತಿನ ದಿವಸ ನಮ್ಮ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಮನಮೋಹನ್ ಸಿಂಗ್‌ರವರ ಸಲಹೆ ಕೇಳಲು ನಿಮಗೆ ಅವಮಾನವೇ? ಅವರನ್ನು ಇವರ್ಯಾರು ಕೇಳುವುದಿಲ್ಲ. ಅವರು ಹಾಡಿದ್ದೇ ಆಟ ಆಗಿದೆ.

ಇವತ್ತಿನ ದಿವಸ ಯಾವುದೇ ವಸ್ತುಗಳ ಬೆಲೆಗಳು ಏರಿಕೆಯಾದರೂ ಕೂಡ ಯಾರೂ ಕೂಡ ಮಾತನಾಡದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಇಂತಹ ದುಸ್ಥಿತಿಗೆ ಬಂದಿದ್ದೇವೆ. ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ದಯಮಾಡಿ ಬೆಲೆಗಳ ಏರಿಕೆ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಾಮಾನ್ಯ ಪ್ರಜೆಗಳನ್ನು ಗಮನದಲ್ಲಿಟ್ಟುಕೊಂಡು ಬೆಲೆಗಳನ್ನು ಇಳಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ದಿನನಿತ್ಯ ಅಗತ್ಯ ವಸ್ತುಗಳ ಬೆಲೆಗಳು ಏರಿಕೆಯಾಗುತ್ತಿವೆ. ನಾವು ನೀವು ಯಾವುದಾದರೂ ಒಂದು ವಸ್ತುವನ್ನು ಕೊಂಡುಕೊಳ್ಳಲು ಯಾವುದಾದರೊಂದು ಶೋರೂಂಗೆ ಹೋಗಬೇಕಾಗುತ್ತದೆ. ಇವತ್ತು ನಾವು ಒಂದು ಶೋರೂಂನಲ್ಲಿ ಒಂದು ವಸ್ತು ನೋಡಿಕೊಂಡು ಬಂದು ನಾಳೆ ಅಥವಾ ನಾಡಿದ್ದು ಅದನ್ನು ತೆಗೆದುಕೊಳ್ಳೋಣವೆಂದು ವಾಪಸ್ಸು ಬಂದರೆ, ನಾಳೆ ಮತ್ತೆ ಅದೇ ಶೋರೂಂಗೆ ಅದೇ ವಸ್ತುವನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಆ ವಸ್ತುವಿನ ಬೆಲೆ ಜಾಸ್ತಿಯಾಗಿರುತ್ತದೆ. ಇವತ್ತಿನ ದಿವಸ ನಮ್ಮ ರಾಷ್ಟ್ರ ಇಂತಹ ಪರಿಸ್ಥಿತಿ ಮತ್ತು ದುಸ್ಥಿತಿಗೆ ಬಂದಿದೆ. ಅದಕ್ಕೆ ದಯಮಾಡಿ ನಾನು ತಮ್ಮ ಮುಖಾಂತರವಾಗಿ ಈ ಸರ್ಕಾರಕ್ಕೆ ಗಮನವನ್ನು ಸೆಳೆಯುವುದೇನೆಂದರೆ, ಈ ಬೆಲೆ ಏರಿಕೆಯಿಂದ ಸಾಮಾನ್ಯ ಜನರು ಕೋವಿಡ್ ಎನ್ನತಕ್ಕಂಥ ಮಾರಕ ರೋಗದ ಸಂದರ್ಭದಲ್ಲಿ ತಮ್ಮ ಕೆಲಸ ಕಾರ್ಯಗಳನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಳೆದುಕೊಂಡಿದ್ದಾರೆ. ಅವರಿಗೆ ಉದ್ಯೋಗಗಳು ಇಲ್ಲ. ಕೂಲಿ ಮಾಡುವುದಕ್ಕೆ ಕೂಲಿ ಸಿಗುತ್ತಿಲ್ಲ. ಜನ ಊರಿಂದ ತಮ್ಮ ಸ್ವಂತ ಊರಿಗೆ ವಲಸೆ ಹೋಗಿದ್ದಾರೆ. ಆದರೆ ಅವರಿಗೆ ಕೆಲಸವಿಲ್ಲ. ಅವರ ಸಹಾಯಕ್ಕೆ ಸರ್ಕಾರ ಬರಬೇಕು. ಒಂದು ಕಡೆ ಒಬ್ಬ ಹೆಣ್ಣು ಮಗಳು ಏನೆಂದು ಹೇಳಿದರೆಂದರೆ, ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅನ್ನ ಭಾಗ್ಯ ಕಾರ್ಯಕ್ರಮ ಕೊಟ್ಟಿದ್ದಕ್ಕೋಸ್ಕರವಾಗಿ ನಾವು ಇವತ್ತು ಜೀವಂತವಾಗಿ ಬದುಕಿದ್ದೇವೆಂದು ಹೇಳಿದರು. ಅವರು ಇಲ್ಲದೇ ಹೋಗಿದ್ದರೆ ನಾವು ಫುಟ್‌ಬಾತ್‌ಗೆ ಬರಬೇಕಾಗಿತ್ತು ಎಂದು ಆ ಹೆಣ್ಣುಮಗಳು ಹೇಳಿದರು. ಈ ರೀತಿ ಜನರಿಗೆ ಅನುಕೂಲವಾಗಬೇಕೇ ವಿನಃ, ನಮ್ಮ ಸರ್ಕಾರದಲ್ಲಿ ಒಬ್ಬ ವ್ಯಕ್ತಿಗೆ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ಕೊಡುತ್ತಿದ್ದೆವು. ಅದನ್ನೂ ಕೂಡ ಇವರು 5 ಕೆ.ಜಿಗೆ ಇಳಿಸಿದ್ದಾರೆ. ಇವರ ಸರ್ಕಾರ ಇನ್ನೇನು ಮಾಡುತ್ತಿದೆ? ಮಾನ್ಯ ಸಭಾಪತಿಯವರೇ, ನಾನು ದಯಮಾಡಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಈ ನಾಡಿನ ಜನತೆ ಕಷ್ಟದಲ್ಲಿರತಕ್ಕಂಥವರಿಗೆ ಸರ್ಕಾರದ ವತಿಯಿಂದ ಸಹಾಯಕ್ಕೆ ಬರಬೇಕು. ನಾನು ಬಜೆಟ್ ಬಗ್ಗೆ ಮಾತನಾಡುವಾಗ ಇನ್ನೂ ಹೇಳುತ್ತೇನೆ ಎಂದು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕೇವಲ 2-3 ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಸುಮಾರು 25-30 ವರ್ಷಗಳ ಹಿಂದೆ ಶ್ರೀ ಮನೋಜ್ ಕುಮಾರ್ ರವರದ್ದು " ರೋಟಿ ಕಪ್ಡಾ ಮಖಾನ್ " ಒಂದು ಫಿಲಂ ಬಂದಿತ್ತು. ಇವತ್ತು ಆ ಒಂದು ಫಿಲಂ ಜ್ಞಾಪಕ ಬರುತ್ತಿದೆ. ಅದಕ್ಕೆ ಕಾರಣ, ಈ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಅಲ್ಲಿರತಕ್ಕಂಥ ಬಡಜನರ ಸಮಸ್ಯೆಗಳೇನಿವೆ ಅದನ್ನು ನಿವಾರಣೆ ಮಾಡುವುದಕ್ಕಾಗಿ ನಾವೆಲ್ಲಾ ಯೋಚನೆ ಮಾಡುತ್ತೇವೆ. ಇವತ್ತು ಮೂಲಭೂತವಾಗಿ ನಮ್ಮ ಮುಂದೆ ಇರತಕ್ಕಂಥ ಸಮಸ್ಯೆ "ರೋಟಿ ಕಪ್ಡಾ ಮಖಾನ್" ರೀತಿ ಆಗಿದೆ. ರೋಟಿ ಎಂದರೆ, ನಾವು ದಿನನಿತ್ಯ ತಿನ್ನುವಂಥ ಆಹಾರ. ಇವತ್ತಿನ ದಿವಸ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ ಎಂದು ಮಾನ್ಯ ಎಂ.ನಾರಾಯಣಸ್ವಾಮಿಯವರು ಈಗಾಗಲೇ ಹೇಳಿದರು. ಕಾಂಗ್ರೆಸ್ ಸರ್ಕಾರ ಅಧಿಕಾರ ಇದ್ದಾಗ ಬಡವರಿಗೆ ಒಬ್ಬರಿಗೆ 7 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಕೊಡುತ್ತಿದ್ದರು. ಈಗ ಅವರು ಇಳಿಕೆ ಮಾಡಿ ಒಬ್ಬರಿಗೆ 5 ಕೆ.ಜಿ ಅಕ್ಕಿ ಕೊಡುವುದು ಮಾಡಿದ್ದಾರೆ. ಅದರ ಜೊತೆಗೆ ಇವತ್ತಿನ ದಿವಸ ಯಾವುದೇ ಒಂದು tur dal ಆಗಿರಬಹುದು, moong dal ಆಗಿರಬಹುದು, edible oils rate ಏನಿದೆ ಎಂದು ಪ್ರತಿಯೊಬ್ಬರಿಗೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೊತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ವಸ್ತುಗಳ ಬೆಲೆ ಎಷ್ಟು ಹೆಚ್ಚಳವಾಗಿದೆ ಎಂದು ಪ್ರತಿಯೊಬ್ಬರಿಗೂ ಗೊತ್ತಿದೆ. ರೋಟಿ ನಾವು ಮತ್ತು ನಮ್ಮ ಇಡೀ ರಾಜ್ಯದಲ್ಲಿರತಕ್ಕಂಥ ಬಡಜನರು ತಿನ್ನತಕ್ಕಂಥ ಆಹಾರವಾಗಿದೆ.

**(ಮುಂದು)**

**(607)23.3.2021/6.50/ಎಂ.ಎಂ-ಎ.ಕೆ**

**ಶ್ರೀ ನಸೀರ್ ಅಹಮ್ಮದ್ (ಮುಂದು):-**

ಅದರ ಬಗ್ಗೆ ಇವತ್ತಿನವರೆಗೂ ರಾಜ್ಯ ಸರ್ಕಾರದ ಗಮನ ಆ ಕಡೆ ಸೆಳೆಯುತ್ತಾ ಇಲ್ಲ. ಅದರ ಜೊತೆಯಲ್ಲಿ 'ಕಪಡಾ' ಅಂದರೆ ನಾವು ಹಾಕಿಕೊಳ್ಳುವ ಬಟ್ಟೆಗಳು. ಇವತ್ತು ಕಾಟನ್ ಬೆಲೆ ಏನಾಗಿದೆ? ರೂ. 36,000/- ಇದ್ದದ್ದು ಇವತ್ತು ರೂ. 58,000/- ಆಗಿದೆ. Yarn prices ಏನಿದೆ ಅದಕ್ಕೆ 20s, 30s, 40s, 60s, 100s ಎಂದು ಹೇಳುತ್ತಾರೆ. 40s ಬೆಲೆ ರೂ. 220/- ಇದ್ದದ್ದು ಇವತ್ತು ಒಂದು ಕೆ.ಜಿ.ಗೆ ರೂ. 360/- ಆಗಿದೆ. ಅದರಲ್ಲಿ ಬಡಜನರು ಹಾಕಿಕೊಳ್ಳುವ ಕಾಟನ್ ಬಟ್ಟೆಗಳು yarn prices ಮತ್ತು processing costs ಎಲ್ಲಾ ಸೇರಿದರೆ, ಮೊದಲೆಲ್ಲಾ 50-60 ರೂಪಾಯಿ ಕೊಟ್ಟರೆ ಒಂದು ಮೀಟರ್ ಬಟ್ಟೆ ಸಿಗುತ್ತಿತ್ತು. ಇವತ್ತು ರೂ. 110/- ಕೊಟ್ಟರೂ ಒಂದು ಮೀಟರ್ ಬಟ್ಟೆ ಸಿಕ್ಕುವುದಿಲ್ಲ. ಅದರ ಬಗ್ಗೆಯೂ ಸಹ ನಮ್ಮ ಸರ್ಕಾರದ ಗಮನ ಆ ಕಡೆ ಹೋಗುತ್ತಿಲ್ಲ. ಅದರ ಜೊತೆಯಲ್ಲಿ 'ಮಖಾನ್' ಅಂದರೆ ವಾಸ ಮಾಡುವಂತಹ ಜಾಗ ಅದರಲ್ಲಿ ಉಪಯೋಗ ಮಾಡುವಂತಹ ವಸ್ತುಗಳು; ಇವತ್ತಿನ ದಿವಸ ಸಿಮೆಂಟ್‌ನ ರೇಟ್ ಎಷ್ಟಾಗಿದೆ, ಕಬ್ಬಿಣದ ರೇಟ್, ಮರಳಿನ ರೇಟ್, ಇಟ್ಟಿಗೆ, ಕಲ್ಲು ಇದರ ಬೆಲೆಗಳು ಎಷ್ಟಾಗಿದೆ, ಅದರ ಬಗ್ಗೆ ನಮ್ಮ ಸರ್ಕಾರದ ಗಮನ ಆ ಕಡೆ ಸೆಳೆಯುತ್ತಿಲ್ಲ. ಇವರು ಮಾಡುವುದೇನೆಂದರೆ, 'ಲವ್ ಜಿಹಾದ್' ಬಗ್ಗೆ ಮಾತನಾಡುತ್ತಾರೆ, ಸಿ.ಎ.ಎ., ಮತ್ತು ಎನ್.ಆರ್.ಸಿ., ಬಗ್ಗೆ ಮಾತನಾಡುತ್ತಾರೆ, cow slaughter ಬಗ್ಗೆ ಮಾತನಾಡುತ್ತಾರೆ. ಇದರಿಂದ ಏನಾದರೂ ಉಪಯೋಗವಾಗಿದೆಯೇ? ಈಗ ನಮ್ಮ ನಾಯಕರು ನಿಮ್ಮ ಗಮನ ಸೆಳೆಯಲು ಇಚ್ಛೆ ಪಡುತ್ತಿದ್ದಾರೆ. The Karnataka Prevention of Slaughter and Preservation of Cattle Bill ಬಂತು, ಜಾರಿಗೂ ಬಂತು. ಎಷ್ಟು ಕೇಸ್ ಆಗಿದೆ? ಕೇವಲ ಸಾವಿರಾರು ಜನ ಲಕ್ಷಾಂತರ ಜನರು ನಿರುದ್ಯೋಗಿಗಳಾಗಿದ್ದಾರೆಯೇ ಹೊರತು ಅದರಿಂದ ಯಾರಿಗೂ ಹೆಚ್ಚಾಗಿ ಕೇಸ್ ಆಗಿಲ್ಲ. ಇವತ್ತಿನ ದಿವಸ ಸಾವಿರಾರು ಜನರು, ಲಕ್ಷಾಂತರ ಜನರು ನಿರುದ್ಯೋಗಿಗಳಾಗಿದ್ದಾರೆ. ಮೊದಲೇ ಬಡತನವಿದೆ, ಇನ್ನೂ ಹೆಚ್ಚಾಗಿ ಬಡತನ ಬರುವುದಕ್ಕೆ ಏನೇನು ಮಾಡಬೇಕು ಅದನ್ನು ಸರ್ಕಾರ ಮಾಡುತ್ತಿದೆ. ನೀವು ಬಜೆಟ್‌ನಲ್ಲಿ ನೋಡಿದ್ದೀರಿ. Housing Sector

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ತಾವು ಮಾತನಾಡುತ್ತೀರಿ 'ಮಖಾನ್'; ಬಡ ಜನರಿಗೆ ಮನೆಗಳನ್ನು ಮಾಡಿಕೊಡುವ ಕಾರ್ಯಕ್ರಮಕ್ಕೆ ತಾವು ಬಜೆಟ್‌ನಲ್ಲಿ ಎಷ್ಟು ಸಮಯ ಕೊಟ್ಟಿದ್ದೀರಿ? ಎಷ್ಟು ಘೋಷಣೆ ಮಾಡಿದ್ದೀರಿ? ಪ್ರತಿ ವರ್ಷ ಮೂರು ಲಕ್ಷ ಮನೆಗಳನ್ನು ಮಾಡುತ್ತೇವೆಂದು ತಾವು ಘೋಷಣೆ ಮಾಡಿದ್ದಿರಿ. ಈ ಮೂರು ಲಕ್ಷ ಮನೆಗಳನ್ನು ಮಾಡುವುದಕ್ಕೆ ಎಷ್ಟು ಅಂದಾಜು ಆಗುತ್ತದೆ, ಬಜೆಟ್‌ನಲ್ಲಿ ಎಷ್ಟು ಇಡಬೇಕಾಗುತ್ತದೆ ಅಷ್ಟು ಇಟ್ಟಿದ್ದೀರಾ? ಹಿಂದಿನ ವರ್ಷದ ಲೆಕ್ಕ ಹಾಕಿ ಕೊಡುತ್ತಿದ್ದೀರಿ. ಈ ವರ್ಷ ರೂ. 9,000/- ಕೋಟಿ ಹಣವನ್ನು ಹಿಂದಿನ ವರ್ಷ ಮಾಡಿರುವ ಮನೆಗಳಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದು ಬಡ ಜನರಿಗೆ ಹೌಸಿಂಗ್‌ಗಾಗಿ ಕೊಡುವುದಾಗಿದೆ. ಇವತ್ತಿನ ದಿವಸ ನೋಡಿದರೆ ನಿಜವಾಗಲೂ ನೋವಾಗುತ್ತದೆ. ಒಂದು ಕಡೆ ಬಡತನ, ಇನ್ನೊಂದು ಕಡೆ ಕೋವಿಡ್‌ನಿಂದಾಗಿ ಇಡೀ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಜನರು ತತ್ತರಿಸಿ ಹೋಗಿದ್ದಾರೆ. ಅದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಹೊರದೇಶಕ್ಕೆ ಹೋಗುವುದಕ್ಕಾಗಿ ಏರೋಪ್ಲೇನ್ ಅನ್ನು ತರಿಸಿದ್ದಾರೆ. ಅದರ ಬೆಲೆ 8,000/- ಕೋಟಿ ರೂಪಾಯಿಗಳು. ಈ ಸಂದರ್ಭದಲ್ಲಿ 8,000/- ಕೋಟಿ ರೂಪಾಯಿಗಳನ್ನು ಕೊಟ್ಟು ಏರೋಪ್ಲೇನ್ ಅನ್ನು ತರಿಸಿಕೊಳ್ಳುವುದು ಬೇಕಾಗಿತ್ತಾ? ನಮ್ಮಲ್ಲಿ ಇಲ್ಲವೇ? ಇಷ್ಟು ವರ್ಷ ನೀವು ಓಡಾಡಿರಲಿಲ್ಲವೇ? ಇಡೀ ರಾಷ್ಟ್ರದಲ್ಲಿ ಕೋವಿಡ್ ಸಂದರ್ಭದಲ್ಲಿ ಜನರು ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಕೊಡಬಹುದು ಎಂದು ಅಪೇಕ್ಷೆ ಮಾಡುತ್ತಿದ್ದರು. ವಲಸೆ ಹೋದ ಕಾರ್ಮಿಕರು ಯಾವ ರೀತಿ ಹೋದರು, ಏನೇನು ನಡೆಯಿತು ಎಲ್ಲವೂ ಗೊತ್ತಿದೆ. ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿಯವರು ಏನಾದರೂ ಮಾಡುತ್ತಾರೆಂದು ಇಡೀ ರಾಷ್ಟ್ರ ಅಪೇಕ್ಷೆ ಮಾಡಿಕೊಂಡಿತ್ತು. ತಾವು, ನಾವು ಸೇರಿ ನೋಡಿದಾಗ ಮನೆಯಲ್ಲಿ ಕುಳಿತುಕೊಂಡು ನವಿಲಿನ ಜೊತೆ ವಾಕಿಂಗ್ ಮಾಡುವುದು, ನವಿಲಿಗೆ ಅನ್ನ ತಿನ್ನಿಸುವುದು, ನಮಗೆ ಅಷ್ಟೇ ನೋಡುವುದಕ್ಕೆ ಆಯಿತು. ಏತಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ ಎಂದರೆ, ನಾವೆಲ್ಲಾ 15 ಲಕ್ಷ ರೂಪಾಯಿ ಬರುವುದನ್ನು ಕೇಳಿದ್ದೇವೆ. ಯಾವ ಯಾವ ರೀತಿ ಅದರ ಬಗ್ಗೆ ಎಲ್ಲಾ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ರಾಜ್ಯ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರಂತಹ ಮುಖ್ಯಮಂತ್ರಿಗಳು ದಯವಿಟ್ಟು ಬೆಲೆ ಏರಿಕೆ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನ ಕೊಡಬೇಕು.

ಮಾನ್ಯ ನಾರಾಯಣಸ್ವಾಮಿಯವರು ಗ್ಯಾಸ್ ಬೆಲೆ ಬಗ್ಗೆ ಮಾತನಾಡಿದರು. 'ಉಜ್ವಲ' ಯೋಜನೆಯಲ್ಲಿ ಸುಮಾರು 45,000 ಗ್ಯಾಸ್ ಸಂಪರ್ಕಗಳನ್ನು ಈ ರಾಜ್ಯದಲ್ಲಿ ಕೊಟ್ಟಿದ್ದೀರಿ. ಅದನ್ನು ಕೊಟ್ಟಾಗ ಒಂದು ಸಿಲಿಂಡರ್ ಕೊಟ್ಟಿದ್ದೀರಿ. ಇವತ್ತಿನ ದಿವಸ ಬಡ ಜನರಿಗೆ 900 ರೂಪಾಯಿಗಳನ್ನು ಕೊಟ್ಟು ಸಿಲಿಂಡರ್ ತೆಗೆದುಕೊಳ್ಳುವ ತಾಕತ್ತು ಅವರಲ್ಲಿಲ್ಲ. ಹೀಗಾಗಿ ಅವರು ಅದೇ ರೀತಿ ವಾಪಸ್ ಹೋಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳಗ್ಗೆ 2–3 ಗಂಟೆಗೆ ಅಥವಾ 6 ಗಂಟೆಗೆ ಎದ್ದು ಜಂಗಲ್‌ಗೆ ಹೋಗಿ ಒಂದಷ್ಟು ಕಟ್ಟಿಗೆಗಳನ್ನು ತೆಗೆದುಕೊಂಡು ಬಂದು ಮನೆ ನಡೆಸುವ ರೀತಿ ಇವತ್ತು ನಡೆಯುತ್ತಿದೆ. ಇದರ ಬಗ್ಗೆ ತಾವು ಗಮನ ಹರಿಸಿ. ರಾಜ್ಯದಿಂದ ಏನಾದರೂ ಸಬ್ಸಿಡಿ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡು ಏನಾದರೂ ಕೊಟ್ಟರೆ ಸುಮಾರು 45,000 ಕುಟುಂಬಗಳಿಗೆ ಸಹಾಯವಾಗುತ್ತದೆ. ನೀವೇ ಏನಾದರೂ ಸಬ್ಸಿಡಿ ಘೋಷಣೆ ಮಾಡಿ. ಕೇಂದ್ರ ಸರ್ಕಾರದಿಂದ ಬರುತ್ತಿಲ್ಲ. ನೀವೇ ಏನಾದರೂ ಒಂದು ಸಿಲಿಂಡರ್‌ಗೆ 500 ರೂಪಾಯಿಗಳ ಸಬ್ಸಿಡಿಯನ್ನು ಘೋಷಣೆ ಮಾಡಿದರೆ 45,000 ಕುಟುಂಬದ ಮಹಿಳೆಯರಿಗೆ ಎಷ್ಟೋ ಉಪಕಾರವಾಗುತ್ತದೆ ಎಂಬುದು ನನ್ನ ಭಾವನೆಯಾಗಿದೆ.

ಇವತ್ತಿನ ದಿವಸ ಎಲ್ಲಾ ಸರಕು ಸಾಗಾಣಿಕೆಗಳು ಪೆಟ್ರೋಲ್, ಡೀಸೆಲ್‌ಗಳ ಮೇಲೆ ಅವಲಂಬಿತವಾಗಿದೆ. ಅದೇ ರೀತಿ ತರಕಾರಿ, ಹಣ್ಣುಗಳು, ಯಾವುದೇ ರೀತಿಯ pulses ಆಗಿರಬಹುದು, ಏನಿದ್ದರೂ ಸಹ ಸಾರಿಗೆ ಮುಖಾಂತರವೇ ಬರಬೇಕಾಗಿದೆ. ಅದು ರೈಲಿನಲ್ಲಿ ಬರಬೇಕು ಅಥವಾ ರಸ್ತೆ ಸಾರಿಗೆ ಮೂಲಕ ಬರಬೇಕು. ನಮ್ಮಲ್ಲಿ water transport ಹೆಚ್ಚಾಗಿ ಇಲ್ಲ. ಹಾಗಾಗಿ ಯಾವಾಗ ಡೀಸೆಲ್ ಬೆಲೆಗಳು ಆ ಮಟ್ಟಕ್ಕೆ ಹೋಗುತ್ತದೆ ಆಗ ಎಲ್ಲಾ ಬೆಲೆಗಳು ಏರಿಕೆಯಾಗುತ್ತದೆ. ಆದ್ದರಿಂದ ದಯವಿಟ್ಟು ಡೀಸೆಲ್ ಮತ್ತು ಪೆಟ್ರೋಲ್ ಬೆಲೆಗಳ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳುವ ಅವಕಾಶ ನಮ್ಮ ರಾಜ್ಯದಿಂದ ಪ್ರಾರಂಭವಾಗಲಿ ಎಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲ್, ವಿರೋಧ ಪಕ್ಷದ ನಾಯಕರು, ಮಾನ್ಯ ಎಂ. ನಾರಾಯಣಸ್ವಾಮಿ ಮತ್ತು ಮಾನ್ಯ ನಸೀರ್ ಅಹಮ್ಮದ್‌ರವರು ನಿಯಮ 68ರಡಿ ಮಹತ್ವದ ವಿಚಾರದ ಬಗ್ಗೆ ಚರ್ಚೆ ಮಾಡಿದ್ದಾರೆ. ಡೀಸೆಲ್ ಮತ್ತು ಪೆಟ್ರೋಲ್ ಮತ್ತು ಗ್ಯಾಸ್ ಇತ್ಯಾದಿ ದಿನಬಳಕೆಯ ವಸ್ತುಗಳ ಬೆಲೆ ದುಬಾರಿಯಾಗಿರುವ ಕಾರಣ ಸಾಮಾನ್ಯ ಜನರ ಪರಿಸ್ಥಿತಿ ಚಿಂತಾಜನಕವಾಗಿರುವ ಕುರಿತು ನಡೆದ ಚರ್ಚೆಗೆ ಸಂಬಂಧಿಸಿದ ಸಚಿವರಿಂದ ನಾಳೆಗೆ ಉತ್ತರ ಕೊಡಿಸುತ್ತೇನೆ.

**ಸಭಾಪತಿಯವರು:–** ಉತ್ತರ ಬಂದಿದೆ. ನಾಳೆ ಸಚಿವರ ಕಡೆಯಿಂದ ಉತ್ತರ ಕೊಡಿಸುವುದು ಸೂಕ್ತ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದೇ ವಿಷಯಕ್ಕೆ ಸಮಯ ಹೋಗುತ್ತಿದೆ. ಬಜೆಟ್ ಮೇಲೆ ಮಾತನಾಡುವುದಕ್ಕೂ ನಮಗೆ ಅವಕಾಶ ಸಿಗಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವು ನಿಯಮ 68ಕ್ಕೆ ಕನ್ವರ್ಟ್ ಮಾಡಿರುವ ವಿಷಯವೊಂದಿದೆ, ತಾವು ನಾಳೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದು ಸಿ.ಡಿ., ವಿಚಾರ. ಏಕೆಂದರೆ, ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಆ ವಿಷಯವನ್ನು ನಾಳೆಗೆ ತೆಗೆದುಕೊಳ್ಳಬೇಕಾಗಿರುವುದರಿಂದ ಇದೇ ರೀತಿ ಸಮಯ ಹಾಳಾಗುತ್ತಿದ್ದರೆ ನಾವು ಯಾವಾಗ ಇದನ್ನು ಯಾವಾಗ ತೆಗೆದುಕೊಳ್ಳಬೇಕೆಂದು ಅರ್ಥವಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಡಬೇಕೆಂದರೆ ಕೊಡುತ್ತೇನೆ.

**ಸಭಾಪತಿಯವರು:-** ಆಯಿತು ಉತ್ತರವನ್ನು ಹೇಳಿ. ಅವರಿಗೆ ಉತ್ತರದ ಪ್ರತಿಗಳನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದ ನಾಯಕರು ನಿಯಮ 59ರಡಿ ತಂದಿರುವ ಉಲ್ಲೇಖವನ್ನು ತಾವು ನಿಯಮ 68ಕ್ಕೆ ಕನ್ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ತಮಗೆ ಧನ್ಯವಾದಗಳು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಉತ್ತರವನ್ನು ಒಂದು ಸಲ ಓದಿ ಹೇಳುತ್ತೇನೆ, ಅನಂತರ ಮಾನ್ಯ ಸದಸ್ಯರು ಮಾಹಿತಿ ಕೇಳಲಿ.

ಪೆಟ್ರೋಲ್ ಡೀಸೆಲ್‌ಗಳ ಬೆಲೆಯನ್ನು ಮಾರುಕಟ್ಟೆ ಆಧಾರಿತ ಮಾಡಿದಾಗಿನಿಂದ ಅವುಗಳ ಮಾರಾಟದ ಬೆಲೆಯಲ್ಲಿ ದಿನೇದಿನೇ ಬದಲಾವಣೆಗಳಾಗುತ್ತಿದೆ. ಮೂಲ ಬೆಲೆಯಲ್ಲಿ ಹೆಚ್ಚಳವಾದಾಗ ಅವುಗಳ ಮಾರಾಟದಿಂದ ಸಂಗ್ರಹವಾಗುವ ತೆರಿಗೆಯಲ್ಲಿಯೂ ಕೂಡ ಹೆಚ್ಚಳ ಉಂಟಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ದಿನಾಂಕ 01.04.2015 ರಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಇರುವ ತೆರಿಗೆ ದರಗಳು ಈ ಕೆಳಗಿನಂತೆ ಇರುತ್ತವೆ.

ದಿನಾಂಕ 01.04.2015ರಿಂದ 31.3.2016ವರೆಗೆ ಪೆಟ್ರೋಲ್ ತೆರಿಗೆ ದರ ಶೇ.26 ಇದ್ದು, ಡೀಸೆಲ್‌ಗೆ ಶೇ.16.65ರಷ್ಟು ತೆರಿಗೆ ದರ ಇದೆ. ದಿನಾಂಕ 01.04.2016ರಿಂದ 12.07.2018ವರೆಗೆ ಪೆಟ್ರೋಲ್ ತೆರಿಗೆ ದರ ಶೇ.30 ಇದ್ದು, ಡೀಸೆಲ್‌ಗೆ ಶೇ.19ರಷ್ಟು ತೆರಿಗೆ ದರ ಇದೆ. ದಿನಾಂಕ 13.7.2018 ರಿಂದ 16.9.2018ವರೆಗೆ ಪೆಟ್ರೋಲ್ ತೆರಿಗೆ ದರ ಶೇ.32 ಇದ್ದು, ಡೀಸೆಲ್ ತೆರಿಗೆ ದರ ಶೇ. 21ರಷ್ಟಿದೆ. ದಿನಾಂಕ 17.9.2018 ರಿಂದ 14.01.2019ವರೆಗೆ ಪೆಟ್ರೋಲ್ ತೆರಿಗೆ ದರ ಶೇ.28.75 ರಷ್ಟಿದ್ದು, ಡೀಸೆಲ್ ತೆರಿಗೆ ದರ ಶೇ.17.73ರಷ್ಟಿದೆ. ದಿನಾಂಕ 05.01.2019 ರಿಂದ 31.03.2020ವರೆಗೆ ಪೆಟ್ರೋಲ್ ತೆರಿಗೆ ದರ ಶೇ.32 ಇದ್ದು, ಡೀಸೆಲ್ ತೆರಿಗೆ ದರ ಶೇ.21ರಷ್ಟಿದೆ. ದಿನಾಂಕ 01.04.2020 ರಿಂದ ಇಲ್ಲಿಯವರೆಗೆ ಪೆಟ್ರೋಲ್ ತೆರಿಗೆ ದರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶೇ.35 ಇದ್ದು, ಡೀಸೆಲ್ ತೆರಿಗೆ ದರ ಶೇ.24ರಷ್ಟಿದೆ. ದಿನಾಂಕ 01.03.2021 ರಂದು ಇರುವಂತೆ ದಕ್ಷಿಣದ ರಾಜ್ಯಗಳಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ತೆರಿಗೆ ದರಗಳು ಈ ಕೆಳಗಿನಂತಿದೆ. ಕರ್ನಾಟಕದಲ್ಲಿ ಪೆಟ್ರೋಲ್‌ಗೆ ತೆರಿಗೆ ದರ ಶೇ.35 ರಷ್ಟು ಇದೆ.

**(ಮುಂದು)**

**(608) 23–03–2021/ 07–00/ ಕೆಹೆಚ್–ಎಕೆ**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಮಗೆ ಕೊಟ್ಟಿರುವ ಲಿಖಿತ ಉತ್ತರ ಬೇರೆ, ಅವರು ಈಗ ಮೌಖಿಕವಾಗಿ ಹೇಳುತ್ತಿರುವುದು ಬೇರೆ. ನಾವು ಯಾವುದನ್ನು ನೋಡಬೇಕೆಂಬುದು ಗೊತ್ತಾಗುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿರುವುದರ ಮೇಲೆ ಆ ವಿಚಾರ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಮಗೆ ಉತ್ತರ ಕೊಟ್ಟಿರುವುದನ್ನೇ ನಾನು ಓದುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಕ್ಕೂ–ಇದಕ್ಕೂ ಯಾವುದೇ ಸಂಬಂಧ ಇಲ್ಲ. ನಮಗೆ ಕೊಟ್ಟಿರುವಂತಹ ಉತ್ತರವನ್ನು ನೋಡಿ. ಇದು ಸಾರಿಗೆ ಸಚಿವರು ಕೊಟ್ಟಿರುವಂತಹ ಉತ್ತರ ಎಂದು ನಮ್ಮ ಕೈಗೆ ಕೊಟ್ಟಿದ್ದಾರೆ.

**ಸಭಾಪತಿಯವರು:–** ಹೌದು, ಸಾರಿಗೆ ಸಚಿವರ ಪರವಾಗಿ ಸಭಾನಾಯಕರು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರು ಬೇರೆ ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆ ಸಾರಿಗೆ ಸಚಿವರ ಕಡೆಯಿಂದ ಉತ್ತರವನ್ನು ಕೊಡಿಸುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಇದು ಸಾರಿಗೆ ಸಚಿವರು ಸಿದ್ಧಪಡಿಸಿರುವಂತಹ ಉತ್ತರವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಭಾನಾಯಕರು ನಾಳೆ ಸಾರಿಗೆ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ ಎಂದು ಹೇಳಿದರು. ಆದರೆ, ಕೆಲವು ಮಾನ್ಯ ಸದಸ್ಯರು ಇವತ್ತೇ ಉತ್ತರವನ್ನು ಕೊಡಬೇಕೆಂದು ಹೇಳಿದ್ದಾರೆ. ಹಾಗಾಗಿ ಮಾನ್ಯ ಸಭಾನಾಯಕರೇ, ತಾವು ಹೇಳುವುದನ್ನು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಸಿದ್ಧಪಡಿಸಿರುವಂತಹ ಉತ್ತರ ಇದೆ. ನಾಳೆ ಮಾನ್ಯ ಸಾರಿಗೆ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾನಾಯಕರೇ ತಾವು ಕೊಡುತ್ತಿರುವ ಉತ್ತರದ ಪ್ರತಿಯನ್ನು ಕೊಟ್ಟಿದ್ದರೆ ನಾವು ನೋಡಿಕೊಳ್ಳುವುದಕ್ಕಾದರೂ ಆಗುತ್ತದೆಯಲ್ಲವೇ?

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಹೇಳುತ್ತಿರುವುದು ಬೇರೆ. ಅವರು ಮಾಹಿತಿಗಾಗಿ ಉತ್ತರವನ್ನು ಓದುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆ ತಮ್ಮ ಕೈಗೆ ಉತ್ತರ ಬರುತ್ತದೆ. 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಉತ್ತಮ, ಮಿತವ್ಯಯಕರ ಹಾಗೂ ನಂಬಲರ್ಹವಾದ ಸಾರಿಗೆ ಸೌಲಭ್ಯವನ್ನು ಒದಗಿಸಿ ದೇಶದಲ್ಲಿಯೇ ಅತ್ಯುತ್ತಮ ಸಾರಿಗೆ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಪ್ರಯಾಣಿಕರಿಗೆ ಉತ್ತಮ ದರ್ಜೆಯ ಸಾರಿಗೆ ಸೌಕರ್ಯವನ್ನು ಒದಗಿಸುತ್ತಿದ್ದು, ನಿಗಮದ ಒಟ್ಟು ಕಾರ್ಯಾಚರಣೆಯ ಮೂರನೇ ಒಂದು ಭಾಗದಷ್ಟು ಸೇವೆಗಳು ಸಾಮಾನ್ಯ ಸೇವೆಗಳಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿರುತ್ತವೆ. ಇದಲ್ಲದೆ ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ಅಂಧರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಗೂ ಹಿರಿಯ ನಾಗರಿಕರಿಗೆ . . .

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಮ್ಮ ನಾಯಕರು ಕೇಳಿರುವಂತಹದ್ದು ಏನು, ತಾವು ಉತ್ತರವನ್ನು ಕೊಡುತ್ತಿರುವಂತಹದ್ದು ಏನು? ನಾವು ಬಿ.ಎಂ.ಟಿ.ಸಿ. ಬಗ್ಗೆ ಕೇಳಿಲ್ಲ.

**ಸಭಾಪತಿಯವರು:–** ಸರಿ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಓದಿ ಹೇಳುತ್ತಿದ್ದೇನೆ. ಅವರು ಏನು ಮಾಹಿತಿ ಬೇಕಾದರೂ ಕೇಳಬಹುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರು ಕೆ.ಎಸ್.ಆರ್.ಟಿ.ಸಿ., ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಪೆಟ್ರೋಲ್, ಡೀಸೆಲ್ ಕೆ.ಎಸ್.ಆರ್.ಟಿ.ಸಿ., ಗೆ ಬರುತ್ತದೆ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾಮಾನ್ಯ ಜನರಿಗೆ . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ. ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಒಬ್ಬೊಬ್ಬರೇ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದಾದರೂ ಒಂದು ಇಲಾಖೆಯ ಬಗ್ಗೆ ಉಲ್ಲೇಖ ಮಾಡುವಾಗ ಅದರಲ್ಲಿ ಹೆಚ್ಚು ಅಂಶಗಳು ಯಾವ ಇಲಾಖೆಯನ್ನು ಅವಲಂಬಿಸಿರುತ್ತದೋ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಂತಹದ್ದು ರೂಢಿಯಲ್ಲಿದೆ. ತಾವು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಾರಿಗೆ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಒಂದು ನಿಮಿಷ. ಅವರು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಇವತ್ತಿನ ದಿವಸವೇ ಉತ್ತರವನ್ನು ಕೊಡಬೇಕೆಂದರೆ, ಸಾರಿಗೆ ಸಚಿವರು ಡೀಸೆಲ್ ಮತ್ತು ಪೆಟ್ರೋಲ್ ವಿಚಾರವಾಗಿ

ಕೊಟ್ಟಿರುವಂತಹ ಉತ್ತರವನ್ನು ಓದಿ ಹೇಳುತ್ತೇನೆ. ಅನಂತರ ತಾವು ಅನೇಕ ಪ್ರಶ್ನೆಗಳನ್ನು ಕೇಳಿದ್ದೀರಿ. ಮಾನ್ಯ ನಸೀರ್ ಅಹ್ಮದ್‌ರವರು ಗೋ–ಹತ್ಯೆ ನಿಷೇಧದ ಬಗ್ಗೆಯೂ ಪ್ರಶ್ನೆಯನ್ನು ಕೇಳಿದ್ದಾರೆ. ಅದನ್ನು ಬಿಟ್ಟು ಬೇರೆ ಏನಾದರೂ ಕೇಳಿದ್ದರೆ ನಾನು ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತೇನೆ ಹಾಗೂ ಉತ್ತರವನ್ನು ಮಂಡಿಸಬೇಕಾದರೆ ಮಂಡಿಸೋಣ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಒಬ್ಬೊಬ್ಬರೇ ಮಾತನಾಡಿ. ಮೂರು–ಮೂರು ಜನ ಏಕೆ ಮಾತನಾಡುತ್ತೀರಿ? ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ಕುಳಿತುಕೊಳ್ಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೂಲ ಪ್ರಶ್ನೆ ಇರುವಂತಹದ್ದು petroleum products ದರಗಳು ಹೆಚ್ಚಾಗಿದೆ ಎನ್ನುವುದಾಗಿದೆ. ಮೂಲತಃ Central Government ಹಾಕುವಂತಹ Excise Duty ಮತ್ತು ರಾಜ್ಯ ಸರ್ಕಾರ ಹಾಕುವಂತಹ ಜಿ.ಎಸ್.ಟಿ., Dealer Commission ಏನು ಇದೆ, ಅದರಿಂದ ಇದು ಜಾಸ್ತಿಯಾಗಿದೆ ಹಾಗೂ ಸಾಗಾಣಿಕೆ ದರಗಳು ಜಾಸ್ತಿಯಾಗಿವೆ. ಈ ದೃಷ್ಟಿಯಲ್ಲಿ ತಾವು ದಯವಿಟ್ಟು ಮಾಡಿ petroleum products ಮೇಲೆ ಇರುವಂತಹ Central Excise Duty ಆಗಿರಬಹುದು, ರಾಜ್ಯ ಸರ್ಕಾರ ಹಾಕುವಂತಹ ತೆರಿಗೆ ಆಗಿರಬಹುದು, ಅದನ್ನು ಕಡಿಮೆ ಮಾಡುವಂತಹ ಒಂದು ಪ್ರಶ್ನೆ ಇದೆ. ಇದನ್ನು ಕಡಿಮೆ ಮಾಡಿದರೆ, ತನ್ನಷ್ಟಕ್ಕೆ ತಾನೇ ಬಾಕಿ ಇರುವುದೆಲ್ಲಾ ಕಡಿಮೆ ಆಗುತ್ತದೆ. ಮೂಲತಃ ಈ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

**ಸಭಾಪತಿಯವರು:–** ಈಗ ಒಂದು ಕೆಲಸವನ್ನು ಮಾಡೋಣ. ಮಾನ್ಯ ಸಭಾನಾಯಕರೇ, ನಾಳೆ ಉತ್ತರವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ. ನನ್ನ ತಿಳುವಳಿಕೆಯ ಪ್ರಕಾರ ಎಲ್ಲಾ Transport Department ಮೇಲೆ base ಇರುತ್ತದೆ. ಇದರಲ್ಲಿ ಟ್ಯಾಕ್ಸಿ, ಟ್ರಕ್ ಬರುತ್ತದೆ. ಸಿಲಿಂಡರ್ ಅನ್ನು ಬಿಟ್ಟು ಬೇರೆ ಎಲ್ಲಾ ಬರುತ್ತದೆ ಎನ್ನುವುದು ಅವರ ಭಾವನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ತಮಗೆ ಕೊಟ್ಟಿರುವ ಉತ್ತರದ ಬಗ್ಗೆ ನೀವು ಮತ್ತೇನಾದರೂ ಮಾಹಿತಿಯನ್ನು ಕೇಳಿದರೆ ಅವರು ಸ್ಪಷ್ಟೀಕರಣವನ್ನು ಹೇಳುತ್ತಾರೆ. ಇಲ್ಲದಿದ್ದರೆ ನಾಳೆ ಸರಿಯಾದಂತಹ ಉತ್ತರವನ್ನು ಕೊಡುತ್ತಾರೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾನಾಯಕರೇ, ನಾಳೆ ಸರಿಯಾದ ಉತ್ತರವನ್ನು ಕೊಡಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾಳೆ ಉತ್ತರವನ್ನು ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರೇ, . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ದಿನನಿತ್ಯ . . .

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಆಯಿತು. ನಾನು ಹೇಳಿದ್ದೇನೆಯಲ್ಲವೇ, ಅವರು ತಿದ್ದುಪಡಿ ಮಾಡಿ, ನಾಳೆ ಸರಿಯಾದ ಉತ್ತರವನ್ನು ಕೊಡುತ್ತಾರೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ಅವಕಾಶವನ್ನು ಕೊಡಬೇಕು.

**ಸಭಾಪತಿಯವರು:-** ಈ ರೀತಿ ಕೇಳಿದರೆ ಹೇಗೆ?

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಮ್ಮ ನಾಯಕರಾದ ಎಸ್.ಆರ್.ಪಾಟೀಲ್‌ರವರು ಏನಾದರೂ ಪ್ರಸ್ತಾಪ ಮಾಡಬಹುದೆನಿಸುತ್ತಿದೆ.

**ಸಭಾಪತಿಯವರು:-** ಇಷ್ಟು ಹೊತ್ತು ಮಾತನಾಡಿದ್ದೀರಲ್ಲವೇ? ಮತ್ತೇನು ಮಾತನಾಡುವುದು. ಇಲ್ಲಾ, ನಾನು allow ಮಾಡುವುದಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾಳೆ ಸಿ.ಡಿ., ವಿಚಾರದ ಬಗ್ಗೆ ಪ್ರಸ್ತಾಪ ಮಾಡಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ನೋಡಿ, ಇದರ ಬಗ್ಗೆ ಮಾತ್ರ ಮಾತನಾಡಿ. ಇದನ್ನು ಬಿಟ್ಟು ಬೇರೆ ವಿಚಾರಕ್ಕೆ ನಾನು allow ಮಾಡುವುದಿಲ್ಲ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ಈ ವಿಷಯದ ಬಗ್ಗೆ ಮಾತನಾಡುವ ಹಾಗಿದ್ದರೆ ಮಾತನಾಡಿ. ಸ್ಪಷ್ಟೀಕರಣವನ್ನು ಕೇಳಿ. ಅದು-ಇದು ಊರು ಉಸಾಬರಿಯನ್ನು ನಾನು ಕೇಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮೊದಲು ಇದು ಮುಗಿಯಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಕೂಡ ಬೇಡ ಎಂದು ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು withdraw ಮಾಡಿ, ಅದನ್ನು ಸರಿ ಮಾಡಿ, ನಾಳೆ ಸರಿಯಾದ ಉತ್ತರವನ್ನು ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆ ಉತ್ತರವನ್ನು ಮುಂದುವರೆಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನನ್ನ ಕಾಳಜಿ ಏನೆಂದರೆ, . . .

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗಲೇ ಉತ್ತರ ಬೇಕೆಂದರೆ, ನಾನು ಈಗಲೇ ಉತ್ತರವನ್ನು ಕೊಡುತ್ತೇನೆ. ನನ್ನ ಹತ್ತಿರ ಉತ್ತರ ಸಿದ್ಧವಾಗಿ ಇದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಸಮಯವನ್ನು ಕೊಡಿ.

**ಸಭಾಪತಿಯವರು:–** ಎಷ್ಟು ಮಂದಿ ಮಾತನಾಡುತ್ತೀರಿ? ಒಬ್ಬೊಬ್ಬರು ಮಾತನಾಡುವುದಕ್ಕೆ ಆಗುವುದಿಲ್ಲವೇ, ತಮಗೆ ಏನಾದರೂ ಪದ್ಧತಿ ಇದೆಯೇ, ಇಲ್ಲವೇ?

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇದನ್ನು ನಾವು ಇವತ್ತೇ ಮುಗಿಸಬೇಕೆಂದು ನಮ್ಮ ಇಚ್ಛೆ ಇದೆ. ಏಕೆಂದರೆ, ನಿಯಮ 68 ರಡಿಯಲ್ಲಿ ಚರ್ಚೆ ಮಾಡುವಾಗ ಇನ್ನೊಂದು ವಿಷಯವನ್ನು ಮಾತನಾಡುವುದಕ್ಕೆ ತಾವು ಅವಕಾಶ ಕೊಡುವುದಿಲ್ಲ. ಅದಕ್ಕೆ ನಾಳೆ ನಾವು ಸಿ.ಡಿ., ವಿಚಾರವನ್ನು ತೆಗೆದುಕೊಳ್ಳುವುದು ಇದೆ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ತಾವು ಅದನ್ನು ಹೇಳಬೇಡಿ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಆಯಿತು. ತಾವು ಕುಳಿತುಕೊಳ್ಳಿ. ಅವರು ಹೇಳುವುದನ್ನು ಹೇಳಿ ಮುಗಿಸಲಿ. ಮಾನ್ಯ ಸಭಾನಾಯಕರೇ ತಾವು ಉತ್ತರವನ್ನು ಹೇಳಿ. ಮಾನ್ಯ ಸದಸ್ಯರೇ ತಾವು ಅದಕ್ಕೂ ಒಪ್ಪುವುದಿಲ್ಲ, ಇದಕ್ಕೂ ಒಪ್ಪುವುದಿಲ್ಲ ಎಂದರೆ ಹೇಗೆ? ಉತ್ತರವನ್ನಾದರೂ ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಉತ್ತರವನ್ನು ಹೇಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ ಕೇಳಿ. ನಾನು ಉತ್ತರವನ್ನು ಹೇಳಿದೆ. ಉತ್ತರದಲ್ಲಿ ಇನ್ನಷ್ಟು ಪರಿಷ್ಕರಿಸಿ ಸೇರಿಸಬೇಕೆಂದು ಹೇಳುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಮುಕ್ತ ಬಿಡಿ. ಅವರು ನಾಳೆ ಉತ್ತರವನ್ನು ಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ ಕೇಳಿ. ಮಾನ್ಯ ಸಭಾನಾಯಕರು ನಾಳೆ ಉತ್ತರವನ್ನು ಕೊಡುತ್ತೇನೆ ಎಂದರೂ ಅದಕ್ಕೂ ಮಾನ್ಯ ಸದಸ್ಯರು ಬೇಡ ಎಂದು ಹೇಳುತ್ತಾರೆ, ಇವತ್ತೇ ಉತ್ತರವನ್ನು ಕೊಡಿ ಎಂದು ಹೇಳುತ್ತಾರೆ. ಇವತ್ತೇ ಉತ್ತರವನ್ನು ಕೊಟ್ಟರೂ ಉತ್ತರ ಸರಿ ಇಲ್ಲ ಎಂದು ಹೇಳುತ್ತಾರೆ. ಇದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ ಹೇಳಿ ನೋಡೋಣ. ತಾವು ಏನು ಮಾಡುತ್ತೀರಿ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಜಿಜ್ಞಾಸೆ ಏನು ಇದೆ?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ. ನಾನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ.

**ಸಭಾಪತಿಯವರು:-** ತಾವು ಎಷ್ಟು ಬಾರಿ ಹೇಳುತ್ತೀರಿ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಅವರು ವಿರೋಧ ಪಕ್ಷದ ನಾಯಕರು. ಅವರನ್ನು ಕೇಳಿ, ತಾವು ಅವರನ್ನು overtake ಮಾಡುತ್ತೀರಾ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು, ಅವರು ವಿರೋಧ ಪಕ್ಷದ ನಾಯಕರು. ನಾವು ಮಾತನಾಡಬೇಕಾದರೆ ಎಲ್ಲಾ ಸಚಿವರು ಸದನದಲ್ಲಿ ಇರಬೇಕು. ನಾವು ಏನು ಮಾತನಾಡುತ್ತೇವೆಯೋ, ಅದನ್ನು ನೋಟ್ ಮಾಡಿಕೊಳ್ಳಿ ಎಂದು ಹೇಳಿದ್ದೆವು. ನಾವು ಗ್ಯಾಸ್ ಸಿಲಿಂಡರ್, ಡೀಸೆಲ್, ಪೆಟ್ರೋಲ್ ಬೆಲೆ ಏರಿಕೆಯಿಂದ ಬೇರೆ commodities ಬೆಲೆಗಳು ಕೂಡ ಜಾಸ್ತಿಯಾಗಿದೆ. ಹಣ್ಣು-ತರಕಾರಿಗಳ ಬೆಲೆಗಳು ಕೂಡ ಜಾಸ್ತಿಯಾಗಿದೆ. ಇದ್ದರಿಂದ, ಸಾಮಾನ್ಯ ಜನರು ಬದುಕುವುದಕ್ಕೆ ಕಷ್ಟವಾಗಿದೆ ಎಂದು ಹೇಳಿದಾಗ ಯಾರು ಕೂಡ ಅದನ್ನು ನೋಟ್ ಮಾಡಿಕೊಳ್ಳಲಿಲ್ಲ. ಈ ರೀತಿ ಇವರು ಉತ್ತರವನ್ನು ತಂದು ಕೊಟ್ಟರೆ ಅದಕ್ಕೆ ನಾವೇನು ಹೇಳಬೇಕು?

**ಸಭಾಪತಿಯವರು:-** ಅದಕ್ಕೆ ನಾನು ಹೇಳುವುದೇನೆಂದರೆ, ಮಾನ್ಯ ಸಭಾನಾಯಕರೇ, ಅವರು ಹೇಳುವುದು ಸರಿ ಇದೆ. ನಾನು ಮಾನ್ಯ ಸಚಿವರಾದ ಆರ್.ಶಂಕರ್‌ರವರಿಗೆ ಬರೆದುಕೊಳ್ಳುವುದಕ್ಕೆ ಹೇಳಿದ್ದೆ. ಏಕೆಂದರೆ, ಮಾನ್ಯ ಸದಸ್ಯರು ಬಹಳ ವಿಷಯವನ್ನು ಮಾತನಾಡಿದ್ದಾರೆ. ದಯಮಾಡಿ, ಇದಕ್ಕೆ ನಾಳೆ ಉತ್ತರವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ನಾಳೆ ಉತ್ತರವನ್ನು ಕೊಡಿ. ಈಗ ಸಭೆಯನ್ನು ನಾಳೆ ಬೆಳಿಗ್ಗೆ 10.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 7 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 24ನೇ ಮಾರ್ಚ್ ಮಾಹೆ 2021ರ ಬುಧವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"